ಮಂಗಳವಾರ, ಏಪ್ರಿಲ್ 27, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 117 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಕ್ಷೇಮ ಕುಶಲ**

ಭಯದಿಂದ ಬಳಲುತ್ತಿರುವವರು, ಒತ್ತಡ ಇರುವವರು ಅಶ್ವಗಂಧ ಬಳಸಬಹುದು. ಭಯದ ರೋಗಲಕ್ಷಣಗಳನ್ನು ನಿವಾರಿಸುವಲ್ಲಿ ಅಶ್ವಗಂಧ ಹೆಚ್ಚು ಪರಿಣಾಮಕಾರಿ

**ಆಳ-ಅಗಲ**

ಆಮ್ಲಜನಕ ತಯಾರಿಕಾ ಘಟಕ ಸ್ಥಾಪನೆ ಯೋಜನೆ ಜಾರಿಗೆ ನಿರ್ಲಕ್ಷ್ಯ: ಸಮಸ್ಯೆ ಉಲ್ಬಣ

ಬಸ್ ಪ್ರಯಾಣದರ ಮೂರು ಪಟ್ಟು ಏರಿಕೆ 4B

‘ರಾಜ್ಯಪಾಲರ ಹಸ್ತಕ್ಷೇಪ ಸಂವಿಧಾನಕ್ಕೆ ಅಪಚಾರ’ 4

| ಸೆನ್ಸೆಕ್ಸ್ | ನಿಫ್ಟಿ | ₹/$ |
|---|---|---|
| 48,386 ▲ | 14,485 ▲ | 74.73 ▲ |

ಬೆಳಿಗ್ಗೆ 4 ತಾಸು ಅಗತ್ಯ ವಸ್ತುಗಳ ಖರೀದಿಗೆ ಅವಕಾಶ • ಬಸ್, ಕಾರು, ಆಟೊ ಸಂಚಾರವೂ ಇಲ್ಲ

# 14 ದಿನ ಕರ್ನಾಟಕ ಲಾಕ್‌ಡೌನ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಕಾರಣ ಸಾರ್ವಜನಿಕರು ಮನೆ ಬಿಟ್ಟು ಹೊರಬರುವುದನ್ನು ತಡೆಯಲು ಮಂಗಳವಾರ (ಏ.27) ರಾತ್ರಿಯಿಂದಲೇ 14 ದಿನಗಳ ಕಾಲ (ಮೇ 12ರವರೆಗೆ) ರಾಜ್ಯಾದ್ಯಂತ ಲಾಕ್‌ಡೌನ್ ಮಾಡಲು ಸರ್ಕಾರ ತೀರ್ಮಾನಿಸಿದೆ.

ಕೊರೊನಾ ಸೋಂಕಿನ ಸರಪಳಿ ತುಂಡರಿಸಿ, ಕೋವಿಡ್ ಪ್ರಕರಣಗಳನ್ನು ತಗ್ಗಿಸಲು ಸಾಧ್ಯ ಎಂಬುದಾಗಿ ತಜ್ಞರು ನೀಡಿದ ಸಲಹೆಯನ್ನು ಆಧರಿಸಿ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಮಂಗಳವಾರ ರಾತ್ರಿ 9ಗಂಟೆಯಿಂದ ಮೇ 12ರ ಬೆಳಗಿನ 6 ಗಂಟೆಯವರೆಗೆ ಬಿಗಿ ಕ್ರಮಗಳು ಜಾರಿಯಲ್ಲಿರುತ್ತವೆ. ಸಾರ್ವಜನಿಕರು ಪ್ರತಿ ದಿನ ಬೆಳಿಗ್ಗೆ 6 ರಿಂದ ಬೆಳಿಗ್ಗೆ 10 ಒಳಗೆ ಅಗತ್ಯ ವಸ್ತುಗಳನ್ನು ಖರೀದಿಸಬಹುದು. ಆ ಬಳಿಕ ಎಲ್ಲ ವ್ಯಾಪಾರಸ್ಥರು ಅಂಗಡಿಗಳ ಬಾಗಿಲು ಹಾಕಿಕೊಂಡು ಹೋಗಬೇಕು. ಪೊಲೀಸರ ಮಧ್ಯಪ್ರವೇಶಕ್ಕೆ ಅವಕಾಶ ನೀಡಬಾರದು’ ಎಂದು ಅವರು ಮನವಿ ಮಾಡಿದರು.

ರಾತ್ರಿ ವೇಳೆ ಎಂದಿನಂತೆ ರಾತ್ರಿ ಕರ್ಫ್ಯೂ ಮುಂದುವರಿಯುತ್ತದೆ. ಎರಡು ವಾರಗಳ ಪರಿಸ್ಥಿತಿ ನೋಡಿಕೊಂಡು ನಿರ್ಬಂಧಗಳನ್ನು ಮುಂದುವರಿಸಬೇಕೆ– ಬೇಡವೇ ಎಂಬುದನ್ನು ತೀರ್ಮಾನಿಸಲಾಗುವುದು. ಅನಿವಾರ್ಯ ಆದರೆ ‘ಲಾಕ್‌ಡೌನ್’ ಮುಂದುವರಿಸಲಾಗುವುದು ಎಂದೂ ಅವರು ಹೇಳಿದರು.

ಬೆಂಗಳೂರಿನ ಪರಿಸ್ಥಿತಿ ಮಹಾರಾಷ್ಟ್ರವನ್ನೂ ಮೀರಿಸುತ್ತಿದೆ. ಕೋವಿಡ್ ಹರಡುವುದನ್ನು ತಡೆಯುವುದು ತುರ್ತು ಅಗತ್ಯವಾಗಿದೆ. ಬಿಗಿ ಕ್ರಮಕ್ಕೆ ಜನರು ಸಹಕಾರ ನೀಡಬೇಕು ಎಂದೂ ಮನವಿ ಮಾಡಿದರು.

**ಉತ್ಪಾದನಾ ವಲಯಕ್ಕೆ ರಿಯಾಯ್ತಿ:** ಗಾರ್ಮೆಂಟ್ ಉದ್ಯಮ ಹೊರತುಪಡಿಸಿ ಉಳಿದ ಎಲ್ಲ ಉತ್ಪಾದನಾ ಘಟಕಗಳ ಚಟುವಟಿಕೆಗಳನ್ನು ಮುಂದುವರಿಸಲು ಅವಕಾಶ ನೀಡಲಾಗುವುದು. ಗಾರ್ಮೆಂಟ್ಸ್‌ಗಳಲ್ಲಿ ಒಂದೇ ಸೂರಿನಡಿ ಸಾವಿರಾರು ಜನ ಕುಳಿತು ಕೆಲಸ ಮಾಡುತ್ತಾರೆ. ನಗರದಲ್ಲಿ 7 ರಿಂದ 8 ಲಕ್ಷ ಜನ ಕೆಲಸ ಮಾಡುತ್ತಿದ್ದಾರೆ.

4A ಪುಟ ನೋಡಿ

ಬೇರೆ ಜಿಲ್ಲೆಗಳಿಂದ ಬಂದವರಿಂದ ಕೋವಿಡ್ ಪರೀಕ್ಷೆಗಾಗಿ ಕಲಬುರ್ಗಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಸೋಮವಾರ ಮಾದರಿ ಸಂಗ್ರಹಿಸಲಾಯಿತು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

## ಯಾವುದೆಲ್ಲ ಇರಲಿದೆ

- ನಿರ್ಮಾಣ ವಲಯ
- ಕೃಷಿ ಚಟುವಟಿಕೆಗಳು
- ಉದ್ಯಮ, ದೂರಸಂಪರ್ಕ, ಇಂಟರ್‌ನೆಟ್
- ಆರೋಗ್ಯ ಸೇವೆಗಳು, ಕ್ಲಿನಿಕ್, ಮೆಡಿಕಲ್ ಶಾಪ್
- ಅಂತರ ರಾಜ್ಯ ಗೂಡ್ಸ್ ವಾಹನಗಳಿಗೆ ಅವಕಾಶ
- ಅಗತ್ಯ ಸೇವೆ ಒದಗಿಸುವ ಸರ್ಕಾರದ ವಿವಿಧ ಇಲಾಖೆಗಳ ನೌಕರರಿಗೆ ಅವಕಾಶ
- ಕೋವಿಡ್ ಸಂಬಂಧಿತ ಕರ್ತವ್ಯದಲ್ಲಿರುವ ಸಿಬ್ಬಂದಿ ಹಾಜರಿ
- 50 ಜನಕ್ಕೆ ಸೀಮಿತವಾಗಿ ಮದುವೆಗಳನ್ನು ನಡೆಸಬಹುದು.
- ವಿಮಾನ, ರೈಲು ಪ್ರಯಾಣದ ಟಿಕೆಟ್ ಇದ್ದರೆ ಬಸ್, ಆಟೊ, ಟ್ಯಾಕ್ಸಿಗಳಿಗೆ ಅವಕಾಶ
- ನರೇಗಾ ಕಾಮಗಾರಿಗಳು
- ಕಾರ್ಗೊ ಮತ್ತು ಇ–ಕಾಮರ್ಸ್
- ಆರೋಗ್ಯ ಸೇರಿದಂತೆ ತುರ್ತು ಸಂದರ್ಭಗಳಲ್ಲಿ ಆಟೊ ಮತ್ತು ಟ್ಯಾಕ್ಸಿ ಬಳಕೆ
- ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಆಟೊ– ಟ್ಯಾಕ್ಸಿ ಬಳಸಬಹುದು. ಗುರುತಿನ ಚೀಟಿ ಇರಬೇಕು

**ಬೆಳಿಗ್ಗೆ 6 ರಿಂದ 10 ರವರೆಗೆ:**

- ನ್ಯಾಯಬೆಲೆ ಅಂಗಡಿ, ಕಿರಾಣಿ ಅಂಗಡಿ, ದಿನಸಿ, ಹಣ್ಣು, ತರಕಾರಿ, ಹಾಲು, ಮಾಂಸ, ಮೀನು, ಪಶು ಆಹಾರ ಅಂಗಡಿಗೆ ಅವಕಾಶ
- ರೆಸ್ಟೋರೆಂಟ್, ಮದ್ಯದಂಗಡಿ, ಉಪಹಾರ ಗೃಹಗಳಿಂದ ಪಾರ್ಸೆಲ್ ಸೇವೆ ಮಾತ್ರ
- ಪೆಟ್ರೋಲ್ ಬಂಕ್, ಎಟಿಎಂಗಳಿಗೆ ಅವಕಾಶ

## ಏನೇನು ಇರುವುದಿಲ್ಲ

- ದೇವಸ್ಥಾನ, ಮಸೀದಿ, ಚರ್ಚ್‌ಗಳು
- ಶಾಲಾ– ಕಾಲೇಜುಗಳು
- ಸಿನಿಮಾ ಮಂದಿರ, ಶಾಪಿಂಗ್ ಮಾಲ್, ಜಿಮ್ನಾಷಿಯಂ, ಯೋಗ ಕೇಂದ್ರಗಳು, ಸ್ಪಾ, ಕ್ರೀಡಾಂಗಣ, ಈಜುಕೊಳ
- ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಸಮಾವೇಶಗಳು
- ಸರ್ಕಾರಿ ಮತ್ತು ಖಾಸಗಿ ಬಸ್, ತುರ್ತು ಸಂದರ್ಭ ಬಿಟ್ಟು ಆಟೊ, ಕಾರು ಯಾವುದೂ ಇಲ್ಲ

## ಎಲ್ಲರಿಗೂ ಉಚಿತ ಲಸಿಕೆ

ಸರ್ಕಾರಿ ಆಸ್ಪತ್ರೆಗಳಲ್ಲಿ 18 ರಿಂದ 44 ವರ್ಷ ವಯಸ್ಸಿನವರಿಗೆ ಉಚಿತ ಲಸಿಕೆ ನೀಡಲಾಗುವುದು ಎಂದು ಯಡಿಯೂರಪ್ಪ ತಿಳಿಸಿದರು.

45 ವರ್ಷ ಮೇಲ್ಪಟ್ಟವರಿಗೆ ಕೇಂದ್ರ ಸರ್ಕಾರ ಉಚಿತ ಲಸಿಕೆ ನೀಡುತ್ತಿದೆ ಎಂದ ಅವರು, ರಾಜ್ಯ ಸರ್ಕಾರ ಈಗಾಗಲೇ 1 ಕೋಟಿ ಡೋಸ್ ಲಸಿಕೆ ಖರೀದಿಗೆ ₹400 ಕೋಟಿ ಬಿಡುಗಡೆಗೆ ಒಪ್ಪಿಗೆ ನೀಡಿದೆ ಎಂದರು.

## ಮೆಟ್ರೊ ಮತ್ತು ಸಾರಿಗೆ ಇಲ್ಲ

ಅಂತರ್ ಜಿಲ್ಲೆ ಮತ್ತು ನೆರೆಯ ರಾಜ್ಯಗಳಿಗೆ ಹೋಗಲು ಸಾರಿಗೆ ಸಂಸ್ಥೆ ಮತ್ತು ಖಾಸಗಿ ಬಸ್‌ಗಳು ಇರುವುದಿಲ್ಲ. ತುರ್ತು ಸಂದರ್ಭದಲ್ಲಿ ಮಾತ್ರ ಬಸ್ ಅಥವಾ ಇತರ ವಾಹನಗಳಲ್ಲಿ ತೆರಳಲು ಅವಕಾಶ. ಬೆಂಗಳೂರಿನಲ್ಲಿ ಮೆಟ್ರೊ ಮತ್ತು ಬಿಎಂಟಿಸಿ ಬಸ್‌ಗಳು ಇರುವುದಿಲ್ಲ. ಉಳಿದ ನಗರಗಳಲ್ಲೂ ಸ್ಥಳೀಯ ಸಾರಿಗೆ ಬಸ್ಸುಗಳು ಇರುವುದಿಲ್ಲ. ಸಾರ್ವಜನಿಕರು ಮನೆ ಬಿಟ್ಟು ಹೊರಗೆ ಬರಬಾರದು ಎಂಬ ಕಾರಣಕ್ಕೆ ಆಟೊ ಸೇರಿದಂತೆ ಯಾವುದೇ ವಾಹನಗಳ ಸಂಚಾರಕ್ಕೂ ಅವಕಾಶ ಇರುವುದಿಲ್ಲ. ಆಸ್ಪತ್ರೆಗೆ ಹೋಗುವ ವಾಹನಗಳಿಗೆ ರಿಯಾಯ್ತಿ ಇದೆ. ಕೈಗಾರಿಕಾ ಘಟಕಗಳು ಕಾರ್ಮಿಕರನ್ನು ಒಯ್ಯಲು ತಮ್ಮದೇ ವಾಹನ ಮಾಡಿಕೊಳ್ಳಬೇಕು. ಅದಕ್ಕೆ ಪೂರ್ವಾನುಮತಿ ಪಡೆಯಬೇಕು ಮತ್ತು ವಾಹನಗಳಲ್ಲಿ ಕಾರ್ಖಾನೆ ಸಿಬ್ಬಂದಿ ಗುರುತಿನ ಚೀಟಿ ಹೊಂದಿರಬೇಕು.

ಇನ್ನಷ್ಟು ಸುದ್ದಿಗಳು 3, 3A,3B

## ಆಮ್ಲಜನಕ ನಿರ್ವಹಣೆಯಲ್ಲಿ ಎಡವಟ್ಟು: ಐವರು ಸೋಂಕಿತರ ಸಾವು

**ಕೋಲಾರ:** ಇಲ್ಲಿನ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಭಾನುವಾರ ರಾತ್ರಿ ವೈದ್ಯಕೀಯ ಆಮ್ಲಜನಕ ನಿರ್ವಹಣೆಯಲ್ಲಿ ಉಂಟಾದ ಲೋಪದಿಂದ ಐವರು ಕೊರೊನಾ ಸೋಂಕಿತರು ಮೃತಪಟ್ಟಿದ್ದಾರೆ. ಈ ದುರ್ಘಟನೆಗೆ ವೈದ್ಯರ ನಿರ್ಲಕ್ಷ್ಯವೇ ಕಾರಣವೆಂದು ಕುಟುಂಬದ ಸದಸ್ಯರು ಆರೋಪಿಸಿದ್ದಾರೆ.

ಆಸ್ಪತ್ರೆ ಆವರಣದಲ್ಲಿರುವ ವೈದ್ಯಕೀಯ ಆಮ್ಲಜನಕ ಘಟಕದಿಂದ ಐಸಿಯು ಬೆಡ್‌ಗಳಿಗೆ ಆಮ್ಲಜನಕ ಪೂರೈಕೆಗೆ ವ್ಯವಸ್ಥೆ ಮಾಡಲಾಗಿದೆ. ಆಸ್ಪತ್ರೆಯಲ್ಲಿ ಅಗತ್ಯ ಪ್ರಮಾಣದ ಆಮ್ಲಜನಕ ಲಭ್ಯವಿದ್ದರೂ ಅದರ ನಿರ್ವಹಣೆಯಲ್ಲಿ ವ್ಯತ್ಯಯವಾಗಿ ಸೋಂಕಿತರು ಮೃತಪಟ್ಟಿದ್ದಾರೆ ಎಂದು ಗೊತ್ತಾಗಿದೆ.

‘ವೈದ್ಯಕೀಯ ಆಮ್ಲಜನಕ ವ್ಯವಸ್ಥೆ ನಿರ್ವಹಣೆ ಮಾಡುತ್ತಿದ್ದ ಎಂಜಿನಿಯರ್ ಕೆಲ ತಿಂಗಳ ಹಿಂದೆ ಚಿಕ್ಕಬಳ್ಳಾಪುರ ಜಿಲ್ಲೆಗೆ ವರ್ಗಾವಣೆಯಾಗಿದ್ದರು. ಹೀಗಾಗಿ ಆಸ್ಪತ್ರೆಯ ವಿದ್ಯುತ್ ವ್ಯವಸ್ಥೆ ನಿರ್ವಹಣೆ ಮಾಡುವ ಎಲೆಕ್ಟ್ರಿಷಿಯನ್‌ಗೆ ಆಮ್ಲಜನಕ ಘಟಕದ ನಿರ್ವಹಣೆಯ ಜವಾಬ್ದಾರಿ ನೀಡಲಾಗಿತ್ತು’ ಎಂದು ಆಸ್ಪತ್ರೆಯ ಉನ್ನತ ಮೂಲಗಳು ತಿಳಿಸಿವೆ.

4A ಪುಟ ನೋಡಿ

## ಶಿಕ್ಷಕರ ವರ್ಗಕ್ಕೆ ಸುಗ್ರೀವಾಜ್ಞೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾಗಿ ತೊಂದರೆ ಅನುಭವಿಸುತ್ತಿರುವ ಶಿಕ್ಷಕರಿಗೆ ಕೌನ್ಸೆಲಿಂಗ್ ಮೂಲಕ ಒಂದು ಬಾರಿಗೆ ವರ್ಗಾವಣೆಗೆ ಅವಕಾಶ ಮಾಡಿಕೊಡುವ ಕಾಯ್ದೆ ತಿದ್ದುಪಡಿಗೆ ಸಚಿವ ಸಂಪುಟ ಸಭೆ ಸೋಮವಾರ ಒಪ್ಪಿಗೆ ನೀಡಿದೆ.

ಇದಕ್ಕಾಗಿ ಸುಗ್ರೀವಾಜ್ಞೆ ಮೂಲಕ ‘ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020’ಕ್ಕೆ ತಿದ್ದುಪಡಿ ಮಾಡಲು ಒಪ್ಪಿಗೆ ನೀಡಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಬಸವರಾಜ ಬೊಮ್ಮಾಯಿ ಅವರು ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಗ್ರೀವಾಜ್ಞೆಗೆ ರಾಜ್ಯಪಾಲರ ಒಪ್ಪಿಗೆ ಸಿಕ್ಕಿದ ಬಳಿಕ ವರ್ಗಾವಣೆ ಪ್ರಕ್ರಿಯೆ ಆರಂಭಿಸಲಾಗುವುದು. 2020–21ನೇ ಸಾಲಿನ ವರ್ಗಾವಣೆ ಪ್ರಕ್ರಿಯೆ ಸಂದರ್ಭದಲ್ಲಿ 70 ಸಾವಿರಕ್ಕೂ ಹೆಚ್ಚು ಶಿಕ್ಷಕರು ಅರ್ಜಿ ಸಲ್ಲಿಸಿದ್ದರು. ಅದಕ್ಕೂ ಹಿಂದಿನ ವರ್ಷಗಳಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆ ಶಿಕ್ಷೆಗೆ ಒಳಗಾದ ಶಿಕ್ಷಕರಿಗೆ ವಿಶೇಷ ಆದ್ಯತೆಯಡಿ ತಮಗೆ ಬೇಕಾದ ಸ್ಥಳಕ್ಕೆ ವರ್ಗಾವಣೆ ಪಡೆದುಕೊಳ್ಳುವ ಅವಕಾಶ ಕಾಯ್ದೆಯಲ್ಲಿ ಇರಲಿಲ್ಲ. ಇದನ್ನು ಪ್ರಶ್ನಿಸಿ ಕೆಲವರು ಕೋರ್ಟ್ ಮೊರೆ ಹೋಗಿದ್ದರು.

ವರ್ಗಾವಣೆ ಶಿಕ್ಷೆಗೆ ಒಳಗಾದವರಿಗೆ ಒಂದು ಬಾರಿ ಅನುಕೂಲ ಮಾಡಿಕೊಡಲು ಅವರಿಗೆ ಸೂಕ್ತವೆನಿಸುವ ಶಾಲೆಗಳಿಗೆ ವರ್ಗಾವಣೆ ಮಾಡಲು ಅವಕಾಶ ಕಲ್ಪಿಸುವುದಾಗಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಭರವಸೆ ನೀಡಿದ್ದರು. ಇದರ ಅನುಸಾರ, ಕಳೆದ ನವೆಂಬರ್ 11 ರಂದು ಹೊರಡಿಸಿದ್ದ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರ ಈ ರೀತಿಯ ಅವಕಾಶ ಕಲ್ಪಿಸಿತ್ತು. ಆದರೆ, ಅದಕ್ಕೆ ಕೆಎಟಿ ಮತ್ತು ಹೈಕೋರ್ಟ್ ತಡೆ ನೀಡಿತ್ತು. ಹೀಗಾಗಿ, ಸುಗ್ರೀವಾಜ್ಞೆ ಮೂಲಕ ತಿದ್ದುಪಡಿ ಅನುಷ್ಠಾನ ಮಾಡಲು ಸರ್ಕಾರ ಮುಂದಾಗಿದೆ.

4ನೇ ಪುಟ ನೋಡಿ

### ರಾಜ್ಯ ಕೋವಿಡ್ ಅಂಕಿ–ಅಂಶ

| | |
|---|---|
| 13,68,945 ▲ | ಒಟ್ಟು ಸೋಂಕಿತರು (13,39,201 ನಿನ್ನೆಯ ವಿವರ) |
| 2,81,042 ▲ | ಸಕ್ರಿಯ ಪ್ರಕರಣಗಳು |
| 10,73,257 ▲ | ಗುಣಮುಖರಾದವರು |
| 14,627 ▲ | ಒಟ್ಟು ಸಾವು |

ದಿನದ ಏರಿಕೆ

| | | |
|---|---|---|
| ಹೊಸ ಪ್ರಕರಣ | 29,744 | ▼ |
| ಗುಣಮುಖ | 10,663 | ▲ |
| ಸಾವು | 201 | ▲ |
| 1,815 ಐಸಿಯುನಲ್ಲಿ ಇರುವವರು | | ▲ |

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ತಡೆಗೆ ‘ಎಂಐಟಿ ಮಾದರಿ’ 4A

## ಜಿಂದಾಲ್‌ಗೆ 3,677 ಎಕರೆ ಜಮೀನು ಮಾರಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಳ್ಳಾರಿ ಜಿಲ್ಲೆ ತೋರಣಗಲ್‌ನಲ್ಲಿ ಜಿಂದಾಲ್ ಉಕ್ಕು ಕಂಪನಿಗೆ ಲೀಸ್ ಕಂ ಸೇಲ್ ಆಧಾರದಲ್ಲಿ ನೀಡಿದ್ದ 3,677 ಎಕರೆ ಜಮೀನನ್ನು ಅದೇ ಕಂಪನಿಗೆ ಮಾರಾಟ ಮಾಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ಸೋಮವಾರ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2019ರಲ್ಲಿ ಆಗಿನ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಮುಂದೆಯೂ ಈ ಪ್ರಸ್ತಾವ ಇತ್ತು.

4A ಪುಟ ನೋಡಿ

**ಒಳ ಪುಟಗಳು**

7ನೇ ಹಂತದ ಮತದಾನ: ಕೆಲವೆಡೆ ಹಿಂಸೆ 8

ಕೋವಿಡ್: ವಿವಿಧ ದೇಶಗಳ ನೆರವಿನ ಭರವಸೆ 8

**ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ**

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

**ಇಂದಿನ ಪಾಡ್‌ಕಾಸ್ಟ್ ವಿಶೇಷ**

ಸುದ್ದಿ ಸ್ವಾರಸ್ಯ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಎರಡನೇ ಡೋಸ್‌ಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ

# ಈಗ ಲಸಿಕೆಗೂ ಪರದಾಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಮೇ 1ರಿಂದ ಕೋವಿಡ್ ಲಸಿಕೆ ನೀಡಲು ರಾಜ್ಯ ಸರ್ಕಾರ ಸಿದ್ಧತೆಗಳನ್ನು ಆರಂಭಿಸಿದೆ. ಆದರೆ, ಈಗಲೇ ಕೋವಿಡ್ ಲಸಿಕೆಯ ಕೊರತೆ ರಾಜ್ಯವನ್ನು ಕಾಡಲಾರಂಭಿಸಿದೆ. ಮೊದಲ ಡೋಸ್ ಪಡೆದವರು ಎರಡನೇ ಡೋಸ್‌ಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಡುವ ಸ್ಥಿತಿ ನಿರ್ಮಾಣವಾಗಿದೆ.

ಕೋವಿಡ್ ಲಸಿಕೆಯ ಕೊರತೆ ಇಲ್ಲ ಎಂದು ರಾಜ್ಯ ಸರ್ಕಾರ ಪದೇ ಪದೇ ಹೇಳುತ್ತಿದೆ. ಆದರೆ, ರಾಜ್ಯ ರಾಜಧಾನಿಯಲ್ಲೇ ಲಸಿಕೆಗಾಗಿ ಒಂದು ಕೇಂದ್ರದಿಂದ ಮತ್ತೊಂದು ಕೇಂದ್ರಕ್ಕೆ ಅಲೆದಾಡುತ್ತಿರುವವರ ಸಂಖ್ಯೆ ಹೆಚ್ಚುತ್ತಿದೆ. ಲಸಿಕೆಯ ಕೊರತೆಯಿಂದ ಸಮಸ್ಯೆ ಎದುರಿಸುತ್ತಿರುವ ಕುರಿತು ನೂರಾರು ಮಂದಿ ನಿತ್ಯವೂ ಸಾಮಾಜಿಕ ಮಾಧ್ಯಮಗಳಲ್ಲಿ ಅಳಲು ತೋಡಿಕೊಳ್ಳುತ್ತಿರುವುದು ಕಾಣುತ್ತಿದೆ.

ತೀವ್ರ ಸ್ವರೂಪದ ಅನ್ಯ ಕಾಯಿಲೆಗಳಿಂದ ಬಳಲುತ್ತಿರುವವರು (ಕೋಮಾರ್ಬಿಡಿಟಿ) ಮತ್ತು ಹಿರಿಯ ನಾಗರಿಕರಿಗೆ ಆದ್ಯತೆಯ ಮೇಲೆ ಲಸಿಕೆ ವಿತರಣೆ ಆರಂಭಿಸಲಾಗಿತ್ತು. ಪ್ರಾರಂಭದ ದಿನಗಳಲ್ಲಿ ಕೋವಿಡ್ ಲಸಿಕೆಗೆ ಹೆಚ್ಚಿನ ಬೇಡಿಕೆ ಇರಲಿಲ್ಲ. ನಂತರ 45 ವರ್ಷ ಆದವರನ್ನೂ ಆದ್ಯತಾ ಪಟ್ಟಿಗೆ ಸೇರಿಸಲಾಯಿತು. ಎರಡನೇ ಅಲೆಯಲ್ಲಿ ತೀವ್ರವಾಗಿ ಅಸ್ವಸ್ಥರಾಗುತ್ತಿರುವವರು ಮತ್ತು ಪ್ರಾಣ ಕಳೆದುಕೊಳ್ಳುತ್ತಿರುವವರ ಸಂಖ್ಯೆ ಏರುತ್ತಿದ್ದಂತೆ ಲಸಿಕೆಗೆ ಬೇಡಿಕೆ ಹೆಚ್ಚಲಾರಂಭಿಸಿದೆ.

4A ಪುಟ ನೋಡಿ

## ‘ಲಸಿಕೆಗಾಗಿ ಅರ್ಧ ದಿನ ಓಡಾಟ’

‘ನಾನು ಮತ್ತು ನನ್ನ ಪತ್ನಿ ಆರು ವಾರಗಳ ಹಿಂದೆ ಕೋವಿಶೀಲ್ಡ್ ಲಸಿಕೆಯ ಮೊದಲ ಡೋಸ್ ಪಡೆದಿದ್ದೆವು. ನಿಗದಿಯಂತೆ ಸೋಮವಾರ ಎರಡನೇ ಡೋಸ್ ಪಡೆಯಬೇಕಿತ್ತು. ಬೆಳಿಗ್ಗೆಯಿಂದ ಲಸಿಕೆಗಾಗಿ ಆರು ಕೇಂದ್ರಗಳಿಗೆ ಅಲೆದಾಡಿದೆವು. ಏಳನೇ ಸ್ಥಳದಲ್ಲಿ ಪರಿಚಿತರೊಬ್ಬರ ನೆರವಿನಿಂದಾಗಿ ಲಸಿಕೆ ದೊರಕಿತು’ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಉಂಟಾಗಿರುವ ಕೋವಿಡ್ ಲಸಿಕೆಯ ಕೊರತೆಯ ಕುರಿತು ‘ಪ್ರಜಾವಾಣಿ’ಗೆ ವಿವರಿಸಿದರು.

‘ಲಸಿಕೆಯ ಲಭ್ಯತೆ ಕುರಿತು ಸರ್ಕಾರ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ಆರೋಗ್ಯ ಇಲಾಖೆ ಹೇಳುವ ಪ್ರಕಾರ ರಾಜ್ಯದಲ್ಲಿ ಕೋವಿಡ್ ಲಸಿಕೆಯ ಕೊರತೆಯೇ ಇಲ್ಲ. ಆದರೆ, ನಾನು ಸೋಮವಾರ ಭೇಟಿ ನೀಡಿದ ಎಲ್ಲ ಕೇಂದ್ರಗಳಲ್ಲೂ ಲಸಿಕೆಗಾಗಿ ಬಂದ ನೂರಾರು ಮಂದಿ ಹಾಗೆಯೇ ವಾಪಸ್ಸಾಗಿದ್ದಾರೆ’ ಎಂದರು.

### ಅಂಕಿ–ಅಂಶಗಳು

**88.83** ಲಕ್ಷ ಡೋಸ್ ಈವರೆಗೆ ನೀಡಲಾದ ಕೋವಿಡ್ ಲಸಿಕೆ

**76.26** ಲಕ್ಷ ಮಂದಿ ಮೊದಲ ಡೋಸ್ ಪಡೆದವರು

**12.57** ಲಕ್ಷ ಜನ ಎರಡನೇ ಡೋಸ್ ಪಡೆದವರು

# 2ನೇ ಅಲೆಗೆ ಚುನಾವಣಾ ಆಯೋಗವೇ ಕಾರಣ: ಮದ್ರಾಸ್ ಹೈಕೋರ್ಟ್

**ಚೆನ್ನೈ (ಪಿಟಿಐ):** ದೇಶದಲ್ಲಿ ಕೋವಿಡ್–19 ಎರಡನೇ ಅಲೆಯು ಇಷ್ಟೊಂದು ವೇಗವಾಗಿ ಹಬ್ಬಲು ಚುನಾವಣಾ ಆಯೋಗವೇ ಏಕೈಕ ಕಾರಣ ಎಂದು ಮದ್ರಾಸ್ ಹೈಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿದೆ. ಚುನಾವಣಾ ಆಯೋಗವು ಇತ್ತೀಚೆಗೆ ‘ಅತ್ಯಂತ ಬೇಜವಾಬ್ದಾರಿ ಸಂಸ್ಥೆ’ಯಾಗಿದೆ. ಅದರ ಅಧಿಕಾರಿಗಳ ವಿರುದ್ಧ ಕೊಲೆ ಆರೋಪದಲ್ಲಿ ಪ್ರಕರಣ ದಾಖಲಿಸಿಕೊಳ್ಳಬಹುದು ಎಂದೂ ಹೇಳಿದೆ.

ರ‍್ಯಾಲಿ ಮತ್ತು ಸಭೆಗಳನ್ನು ನಡೆಸಲು ರಾಜಕೀಯ ಪಕ್ಷಗಳಿಗೆ ಅನುಮತಿ ನೀಡುವ ಮೂಲಕ ಸೋಂಕು ಹರಡಲು ಆಯೋಗವು ಕಾರಣವಾಗಿದೆ ಎಂದು ಮುಖ್ಯ ನ್ಯಾಯಮೂರ್ತಿ ಸಂಜೀವ್ ಬ್ಯಾನರ್ಜಿ ಅವರ ಪೀಠವು ಹೇಳಿದೆ. ಮೇ 2ರಂದು ಮತ ಎಣಿಕೆ ನಡೆಸುವಾಗ ಕೋವಿಡ್ ತಡೆ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಿರ್ದೇಶನ ನೀಡಬೇಕು ಎಂದು ಕೋರಿ ತಮಿಳುನಾಡಿನ ಸಾರಿಗೆ ಸಚಿವ ಮತ್ತು ಕರೂರ್ ಕ್ಷೇತ್ರದ ಎಐಎಡಿಎಂಕೆ ಅಭ್ಯರ್ಥಿ ಎಂ.ಆರ್. ವಿಜಯಭಾಸ್ಕರ್ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು.

ಎಣಿಕೆ ಕೇಂದ್ರದಲ್ಲಿ ಎಲ್ಲ ಮುನ್ನೆಚ್ಚರಿಕೆಯನ್ನೂ ವಹಿಸಲಾಗುವುದು ಎಂದು ಆಯೋಗದ ವಕೀಲರು ಹೇಳಿದ್ದು ಮುಖ್ಯ ನ್ಯಾಯಮೂರ್ತಿಯವರ ಆಕ್ರೋಶಕ್ಕೆ ಕಾರಣವಾಯಿತು. ‘ರ‍್ಯಾಲಿ ಮತ್ತು ಸಭೆಗಳು ನಡೆಯುವಾಗ ನೀವು ಈ ಲೋಕದಲ್ಲಿ ಇರಲಿಲ್ಲವೇ? ಸಾರ್ವಜನಿಕ ಆರೋಗ್ಯವೇ ಅತ್ಯಂತ ಮುಖ್ಯ. ಪ್ರಜಾಪ್ರಭುತ್ವವು ಖಾತರಿಪಡಿಸುವ ಹಕ್ಕುಗಳನ್ನು ಚಲಾಯಿಸಲು ವ್ಯಕ್ತಿಯು ಬದುಕಿದ್ದರೆ ಮಾತ್ರ ಸಾಧ್ಯ’ ಎಂದು ಪೀಠ ಹೇಳಿದೆ.

ಕೋವಿಡ್ ತಡೆ ಮಾರ್ಗಸೂಚಿ ಪಾಲನೆಗೆ ಸಂಬಂಧಿಸಿ ಕಲ್ಕತ್ತಾ ಹೈಕೋರ್ಟ್ ಕೂಡ ಆಯೋಗದ ನಡೆಯ ಬಗ್ಗೆ ಈ ಹಿಂದೆ ಅಸಮಾಧಾನ ವ್ಯಕ್ತಪಡಿಸಿತ್ತು. ಕೋವಿಡ್ ತಡೆಗೆ ಸುತ್ತೋಲೆ ಹೊರಡಿಸಿ, ಸಭೆಗಳನ್ನು ನಡೆಸಿದರೆ ಸಾಲದು ಎಂದು ಮುಖ್ಯನ್ಯಾಯಮೂರ್ತಿ ಟಿ.ಬಿ.ಎನ್. ರಾಧಾಕೃಷ್ಣನ್ ಹೇಳಿದ್ದರು.

## ‘ಎಣಿಕೆ ತಡೆಗೆ ಹಿಂಜರಿಯುವುದಿಲ್ಲ’

ಮತ ಎಣಿಕೆ ಕೇಂದ್ರಗಳಲ್ಲಿ ಕೋವಿಡ್ ತಡೆ ಮಾರ್ಗಸೂಚಿ ಪಾಲನೆಗೆ ಯಾವ ಯೋಜನೆ ರೂಪಿಸಲಾಗಿದೆ ಎಂಬುದನ್ನು ಶುಕ್ರವಾರದ ಒಳಗೆ ಕೋರ್ಟ್‌ಗೆ ತಿಳಿಸಬೇಕು. ಇಂತಹ ಯೋಜನೆ ಸಿದ್ಧವಾಗದೇ ಇದ್ದರೆ, ಮೇ 2ರಂದು ನಡೆಯಲಿರುವ ಮತ ಎಣಿಕೆಗೆ ತಡೆ ನೀಡಲು ಹಿಂಜರಿಯುವುದಿಲ್ಲ ಎಂದೂ ಕೋರ್ಟ್ ಮೌಖಿಕ ಎಚ್ಚರಿಕೆ ನೀಡಿದೆ.

> **ಮದ್ರಾಸ್ ಹೈಕೋರ್ಟ್ ಹೇಳಿದ್ದನ್ನು ಸ್ವಾಗತಿಸುವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಚುನಾವಣಾ ಆಯೋಗ ಈಗಿನ ಪರಿಸ್ಥಿತಿಗೆ ಹೊಣೆ**
>
> **ಮಮತಾ ಬ್ಯಾನರ್ಜಿ**
> ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಎಲ್ಲಕ್ಕಿಂತ ಮೊದಲು ಲೈಫ್ ಇನ್ಶೂರೆನ್ಸ್

**ಎಲ್‌ಐಸಿಯ ಆನ್‌ಲೈನ್ ಸರ್ವಿಸ್‌ಗಳೊಂದಿಗೆ ಡಿಜಿಟಲ್ ಆಗಿರಿ**

ಒಂದೇ ಕ್ಲಿಕ್‌ನಲ್ಲಿ ಪ್ರೀಮಿಯಮ್ ನೀಡಿ, ಸಾಲ ಮರುಪಾವತಿಸಿ ಮತ್ತು ಸಾಲದ ಬಡ್ಡಿ ಸಲ್ಲಿಸಿರಿ

ಎಲ್‌ಐಸಿಯ ಯಾವುದೇ ಬ್ರಾಂಚ್‌ನಲ್ಲಿ ನಿಮ್ಮ ಎನ್‌ಇಎಫ್‌ಟಿ ವಿವರಗಳನ್ನು ಅಪ್‌ಡೇಟ್ ಮಾಡಿರಿ

**ಮೂಲಭೂತ ಸೇವೆಗಳು* :**

- ಪ್ರೀಮಿಯಮ್/ಸಾಲದ ಬಡ್ಡಿ ಸಂದಾಯ/ಸಾಲ ಮರುಪಾವತಿ#
- ಮುಂದಾಗಿ ಪ್ರೀಮಿಯಮ್‌ನ ಸಂದಾಯ#
- ಪ್ರೀಮಿಯಮ್ ಸಂದಾಯದ ಸರ್ಟಿಫಿಕೇಟ್
- ಪಾಲಿಸಿ ಪರಿಸ್ಥಿತಿ/ಸಾಲದ ಪರಿಸ್ಥಿತಿ/ದಾವೆಯ ಪರಿಸ್ಥಿತಿ
- ಪುನರುತ್ಥಾನಕ್ಕಾಗಿ ಕೊಟೇಶನ್
- ಆನ್‌ಲೈನ್ ರಸೀದಿ ಮುದ್ರಣ
- ಪ್ರೀಮಿಯಮ್ ಕೆಲೆಂಡರ್/ಪಾಲಿಸಿ ಶೆಡ್ಯೂಲ್ ಅವಲೋಕನೆ
- ಪ್ಯಾನ್ ರಿಜಿಸ್ಟ್ರೇಶನ್‌ಗಾಗಿ ಕೋರಿಕೆ ದಾಖಲು
- ಎನ್‌ಇಎಫ್‌ಟಿ ರಿಜಿಸ್ಟ್ರೇಶನ್‌ಗಾಗಿ ಕೋರಿಕೆ ದಾಖಲು

*ರಿಜಿಸ್ಟರ್ಡ್ ಕಸ್ಟಮರ್ ಪೋರ್ಟಲ್ ಬಳಕೆದಾರರಿಗೆ ಲಭ್ಯ

**ಪ್ರೀಮಿಯರ್ ಸೇವೆಗಳು** (ಶುಲ್ಕ ರಹಿತ) :**

- ಪಾಲಿಸಿ ಮತ್ತು ಪ್ರಪೋಸಲ್ ಇಮೇಜ್‌ಗಳ ಅವಲೋಕನೆ
- ದಾವೆಯ ಇತಿಹಾಸದ ಅವಲೋಕನೆ
- ಆನ್‌ಲೈನ್ ಸಾಲಕ್ಕಾಗಿ ಕೋರಿಕೆ ದಾಖಲಾತಿ
- ಆನ್‌ಲೈನ್ ವಿಳಾಸ ಬದಲಾವಣೆಗಾಗಿ ಕೋರಿಕೆ ದಾಖಲಾತಿ
- ಯುಎಲ್‌ಐಪಿ ಪ್ಲಾನ್‌ಗಳಿಗಾಗಿ ಆನ್‌ಲೈನ್ ಫಂಡ್ ಸ್ವಿಚ್ಚಿಂಗ್
- ಆನ್‌ಲೈನ್‌ನಲ್ಲಿ ಮೋಡ್ ಪರಿವರ್ತನೆ

** ಪ್ರೀಮಿಯರ್ ಸರ್ವಿಸ್ ಬಳಕೆದಾರರಿಗೆ ಲಭ್ಯ
#ಡೈರೆಕ್ಟ್ ಪೇ ಆಪ್ಶನ್ ಮೂಲಕವೂ ಲಭ್ಯ

ಈ ಕೆಳಗಿನ ಯಾವುದೇ ಡಿಜಿಟಲ್ ಪೇಮೆಂಟ್ ಆಪ್ಶನ್ ಬಳಸಿರಿ ಮತ್ತು ತಕ್ಷಣವೇ ಅಧಿಕೃತ ರಸೀದಿ ಪಡೆಯಿರಿ

ಶುಲ್ಕ ರಹಿತ UPI UNIFIED PAYMENTS INTERFACE Net Banking Cards amazon pay e-wallet PhonePe G Pay Paytm Powered By BillDesk

ಇಂಗ್ಲಿಷ್ ಮತ್ತು ಹಿಂದಿಯ ಹೊರತಾಗಿ 8 ಕ್ಷೇತ್ರೀಯ ಭಾಷೆಗಳಲ್ಲಿ 24*7 ಕಾಲ್ ಸೆಂಟರ್ ಸಪೋರ್ಟ್ ಸೌಲಭ್ಯ ಲಭ್ಯ

ಕಾಲ್ ಸೆಂಟರ್ ಸರ್ವಿಸ್ (022) 6827 6827 | ಡೌನ್‌ಲೋಡ್ ಮಾಡಿರಿ ಎಲ್‌ಐಸಿ ಮೊಬೈಲ್ ಆ್ಯಪ್ “MyLIC” | LIC MITRA Chatbot

ಸಂದರ್ಶಿಸಿರಿ: www.licindia.in ನಮ್ಮನ್ನು ಫಾಲೋ ಮಾಡಿರಿ : LIC India Forever

IRDAI Regn. No. 512

LIC ಲೈಫ್ ಇನ್ಶೂರನ್ಸ್ ಕಾರ್ಪೊರೇಶನ್ ಆಫ್ ಇಂಡಿಯಾ LIFE INSURANCE CORPORATION OF INDIA

ಪ್ರತಿ ಕ್ಷಣವೂ ನಿಮ್ಮೊಂದಿಗೆ

LIC/AR/2021-22/01/Kan

ಚೇತರಿಕೆ ಹಾದಿಯಲ್ಲಿದ್ದ ಉದ್ಯಮಕ್ಕೆ ಮರ್ಮಾಘಾತ • ಸರ್ಕಾರದ ನಿರ್ಧಾರದಿಂದ ಕಾರ್ಮಿಕರಲ್ಲೂ ಆತಂಕ

# ಗಾರ್ಮೆಂಟ್ಸ್ ಉದ್ಯಮ: ಮತ್ತೆ ಕಾರ್ಮೋಡ

• ವಿಜಯಕುಮಾರ್ ಎಸ್.ಕೆ.

**ಬೆಂಗಳೂರು:** ಕಳೆದ ವರ್ಷದ ಲಾಕ್‌ಡೌನ್‌ನಿಂದ ತತ್ತರಿಸಿ ಹೋಗಿದ್ದ ಗಾರ್ಮೆಂಟ್ (ಸಿದ್ಧ ಉಡುಪು) ಕಾರ್ಖಾನೆಗಳ ಉದ್ಯಮಕ್ಕೆ 14 ದಿನಗಳ ಕರ್ಫ್ಯೂ ಮರ್ಮಾಘಾತ ನೀಡಿದೆ. ಪುಟಿದೇಳುವ ಹಂತದಲ್ಲಿದ್ದ ಇಡೀ ಉದ್ಯಮದ ಮೇಲೆ ಈಗ ಕಾರ್ಮೋಡವೇ ಚಾಚಿಕೊಂಡಂತಾಗಿದೆ.

ಲಾಕ್‌ಡೌನ್ ಸಂದರ್ಭದಲ್ಲಿ ಬಂದ್ ಆಗಿದ್ದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಶೇ 30ರಷ್ಟು ಕಾರ್ಖಾನೆಗಳು ಬಾಗಿಲನ್ನೇ ತೆರೆಯದೆ ಮುಚ್ಚಿಕೊಂಡಿದ್ದವು. ಅದರಲ್ಲೂ ಸಣ್ಣ ಮತ್ತು ಅತೀ ಸಣ್ಣ ಗಾರ್ಮೆಂಟ್ಸ್ ಕಾರ್ಖಾನೆಗಳು ಚೇತರಿಸಿಕೊಳ್ಳಲು ಸಾಧ್ಯವಾಗದೆ ನಿರ್ನಾಮವೇ ಆಗಿದ್ದವು.

ಬೆಂಗಳೂರಿನ ಗಾರ್ಮೆಂಟ್ ಕಾರ್ಖಾನೆಯೊಂದರಲ್ಲಿ ಕೋವಿಡ್ ಹರಡದಂತೆ ಮಾಡಿರುವ ವ್ಯವಸ್ಥೆ

ಪ್ರಜಾವಾಣಿ ವಿಶೇಷ

ಹಲವು ಸಾಹಸ ಮತ್ತು ಸವಾಲುಗಳನ್ನು ಎದುರಿಸಿಕೊಂಡು ಉದ್ಯಮ ಕಳೆದ ಮೂರ್ನಾಲ್ಕು ತಿಂಗಳಿಂದ ಚೇತರಿಕೆಯ ಕನವರಿಕೆಯಲ್ಲಿತ್ತು. ಸಿದ್ಧ ಉಡುಪು ತಯಾರಿಕೆಗೆ ಬೇಡಿಕೆ ಬರಲಾರಂಭಿಸಿತ್ತು. ರಾಜ್ಯದಲ್ಲಿ 950 ಗಾರ್ಮೆಂಟ್ ಕಾರ್ಖಾನೆಗಳಿದ್ದು, ಎಲ್ಲ ಕಾರ್ಖಾನೆಗಳಲ್ಲೂ ಉಡುಪು ಸಿದ್ಧಪಡಿಸಲು ಕಚ್ಚಾವಸ್ತು ಟನ್‌ಗಟ್ಟಲೆ ದಾಸ್ತಾನು ಬಿದ್ದಿವೆ.

ಈಗ ಪಡೆದಿರುವ ಆರ್ಡರ್ (ಬೇಡಿಕೆ) ಮುಗಿಸಲು ಕನಿಷ್ಠ ನಾಲ್ಕರಿಂದ ಐದು ತಿಂಗಳು ಬೇಕಾಗುತ್ತದೆ. ಎಲ್ಲ ಕೈಗಾರಿಕೆಗಳಿಗೂ ಕಾರ್ಯ ನಿರ್ವಹಿಸಲು ಅವಕಾಶ ನೀಡಿ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಮಾತ್ರ ಮುಚ್ಚಲು ಸರ್ಕಾರ ಮುಂದಾಗಿರುವುದು ಇಡೀ ಉದ್ಯಮದ ಮೇಲೆ ಕಾರ್ಗತ್ತಲು ಆವರಿಸಿದಂತೆ ಆಗಿದೆ ಎಂದು ಉದ್ಯಮಿಗಳ ಹೇಳುತ್ತಾರೆ.

'ಗಾರ್ಮೆಂಟ್ಸ್‌ಗಳಲ್ಲಿ ಸೋಂಕು ಹರಡದಂತೆ ತಡೆಗಟ್ಟಲು ನಿಯಮಗಳನ್ನು ಈಗಾಗಲೇ ಪಾಲಿಸಲಾಗುತ್ತಿದೆ. ನಿಗಮಗಳನ್ನು ಇನ್ನಷ್ಟು ಕಠಿಣಗೊಳಿಸಿ ಕನಿಷ್ಠ ಶೇ 50ರಷ್ಟು ಕಾರ್ಮಿಕರೊಂದಿಗೆ ಕಾರ್ಖಾನೆ ನಡೆಸಲು ಅವಕಾಶ ನೀಡಿದರೂ ಉದ್ಯಮ ಉಳಿಯುತ್ತಿತ್ತು. ಸರ್ಕಾರ ಏಕಾಏಕಿ ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಮಾತ್ರ ಮುಚ್ಚಿಸಲು ಹೊರಟಿರುವುದು ಅನ್ಯಾಯ. ಸಣ್ಣ ಸಣ್ಣ ಕಾರ್ಖಾನೆಗಳು ಸರ್ವನಾಶ ಆಗಲಿವೆ' ಎಂದು ಅವರು ಆತಂಕ ವ್ಯಕ್ತಪಡಿಸುತ್ತಾರೆ.

'14 ದಿನಗಳ ಕರ್ಫ್ಯೂ ಸುದ್ದಿ ಕೇಳಿ ಮಧ್ಯಾಹ್ನದಿಂದ ತಲೆ ಮೇಲೆ ಚಪ್ಪಡಿ ಬಿದ್ದ ಅನುಭವ ಆಗುತ್ತಿದೆ. ಕೆಲಸ ಅರ್ಧಕ್ಕೆ ನಿಲ್ಲಿಸಿ ಕಾರ್ಮಿಕರು ಊರಿನ ಬಸ್ ಹತ್ತುತ್ತಿದ್ದಾರೆ. ಲಕ್ಷಗಟ್ಟಲೆ ಸಾಲ ಮಾಡಿ ಮತ್ತೊಮ್ಮೆ ಕಾರ್ಖಾನೆ ಆರಂಭಿಸಿದ್ದೇವೆ. ಉಡುಪು ಸಿದ್ಧಪಡಿಸಿಕೊಡಲು ಬರುತ್ತಿರುವ ಬೇಡಿಕೆ ನೋಡಿ ಖುಷಿ ಆಗಿತ್ತು. ಸರ್ಕಾರದ ಈ ನಿರ್ಧಾರ ನಮ್ಮನ್ನು ಮತ್ತೊಮ್ಮೆ ಬೀದಿಗೆ ತಂದು ನಿಲ್ಲಿಸಲಿದೆ' ಎಂದು ಗಾರ್ಮೆಂಟ್ಸ್ ಕಾರ್ಖಾನೆ ಮಾಲೀಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಗುರುಲಿಂಗಪ್ಪ(ರಾಜು) ಹೇಳಿದರು.

'ಸರ್ಕಾರ ತನ್ನ ನಿರ್ಧಾರವನ್ನು ಮರುಪರಿಶೀಲಿಸಬೇಕು. ಕನಿಷ್ಠ ಶೇ 50ರಷ್ಟು ಕಾರ್ಮಿಕರನ್ನಾದರೂ ಉಳಿಸಿಕೊಂಡು ಕೆಲಸ ಮಾಡಲು ಅನುಮತಿ ನೀಡಬೇಕು' ಎಂದು ಅವರು ಒತ್ತಾಯಿಸಿದರು.

### ಅಂಕಿ-ಅಂಶಗಳು

**950** ರಾಜ್ಯದಲ್ಲಿರುವ ಗಾರ್ಮೆಂಟ್ಸ್ ಕಾರ್ಖಾನೆಗಳ ಸಂಖ್ಯೆ

**776** ಬೆಂಗಳೂರಿನಲ್ಲಿ ಇರುವ ಗಾರ್ಮೆಂಟ್ಸ್ ಕಾರ್ಖಾನೆಗಳು

**4 ಲಕ್ಷ** ರಾಜ್ಯದ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಇರುವ ಒಟ್ಟು ಕಾರ್ಮಿಕರ ಸಂಖ್ಯೆ

**3 ಲಕ್ಷ** ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿರುವ ನೌಕರರು

### 'ಕೆಲಸ ಕೊಡಿ, ಇಲ್ಲವೇ ವೇತನ ಕೊಡಿ'

'ಮತ್ತೆ ಬೆಂಗಳೂರಿಗೆ ಬಂದು ಮನೆಗಳನ್ನು ಬಾಡಿಗೆಗೆ ಪಡೆದು ಹೊಸ ಬದುಕು ಆರಂಭಿಸಿದ್ದೇವೆ. 14 ದಿನ ಮನೆಯಲ್ಲೇ ಇರಬೇಕೆಂದರೆ ಅದಕ್ಕೆ ಸಂಬಳ ಕೊಡುವವರು ಯಾರು' ಎಂದು ಗಾರ್ಮೆಂಟ್ಸ್ ನೌಕರರು ಪ್ರಶ್ನಿಸಿದ್ದಾರೆ.

'ಗಾರ್ಮೆಂಟ್ಸ್ ಕಾರ್ಖಾನೆಗಳಲ್ಲಿ ಒಟ್ಟಿಗೇ ಕುಳಿತು ಯಾರೂ ಕೆಲಸ ಮಾಡುವುದಿಲ್ಲ. ಅಂತರ ಕಾಪಾಡಿಕೊಂಡು ಕೆಲಸ ಮಾಡಿಸಲು ಕಾರ್ಮಿಕರ ನಡುವೆ ಪ್ಲಾಸ್ಟಿಕ್ ತಡೆಗಳನ್ನು ಕೆಲ ಕಾರ್ಖಾನೆಗಳಲ್ಲಿ ಹಾಕಲಾಗಿದೆ. ಈ ಉದ್ಯಮ ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬ ಅರಿವಿಲ್ಲದವರು ಈ ನಿರ್ಧಾರ ಕೈಗೊಂಡಿದ್ದಾರೆ' ಎಂದು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ಅಧ್ಯಕ್ಷೆ ಆರ್. ಪ್ರತಿಭಾ ಹೇಳಿದರು. 'ಗಾರ್ಮೆಂಟ್ಸ್‌ಗಳ ಮಾಲೀಕರು ಕೂಡ ಸಂಕಷ್ಟದಿಂದ ಈಗ ಮೇಲೆ ಬರುತ್ತಿದ್ದಾರೆ. ಕಾರ್ಮಿಕರನ್ನು ಮನೆಯಲ್ಲಿರಿಸಿ ವೇತನ ಕೊಡುವ ಸ್ಥಿತಿಯಲ್ಲೂ ಉದ್ಯಮ ಇಲ್ಲ. ಕಾರ್ಮಿಕರಿಗೆ ವೇತನ ಕೊಡುವ ಜವಾಬ್ದಾರಿಯನ್ನು ಸರ್ಕಾರವೇ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ನೌಕರರೊಂದಿಗೆ ಬೀದಿಗಿಳಿದು ಹೋರಾಟ ನಡೆಸಬೇಕಾಗುತ್ತದೆ' ಎಂದು ಅವರು ಎಚ್ಚರಿಸಿದರು.


IN THE COURT OF THE XXXIX ADDL. CITY CIVIL & SESSIONS JUDGE AT BANGALORE (CCH-40)

**O.S. No. 82/2021**

**BETWEEN : 1. SUHAS .C.P.** S/o C.N. Prabhakar, aged about 37 years, **2. JOTHSNA RAO**, W/o C.P. Suhas, aged about 33 years, Both are Residing at No.433, 2nd Main Road, Channammanakere Achhukattu Layout, Banashankari 3rd Stage, Blengaluru-560085. **...Plaintiffs**

**AND**

**S. Manjula** **...Defendant**

**SUMMONS TO DEFENDANT UNDER ORDER V RULE 20 R/W SECTION 151 OF THE CODE OF CIVIL PROCEDURE**

**Smt. S. Manjula**, Late Varadaraju, aged about 35 years, Residing No.100, 2nd Cross, Pragathipura, Near Masjid, Banashankari, Kanakapura Main Road, BANGALORE-560 070.

WHEREAS the Plaintiff has instituted a suit against the Defendant for specific performance directing the defendant to execute the Sale Deed by registering the suit schedule property in favor of plaintiffs/his nominees, or his legal representatives and other reliefs.

You are hereby summoned to appear before this Hon'ble Court in person/s or by your pleader/s duly instructed **on 18th day of June 2021 at 11 'O' Clock** in the forenoon to answer the claim. Take notice that in default of your appearance on the day before mentioned above, the suit will be heard and determined in your absence.

**SCHEDULE**

All the piece and parcel of the property bearing No.35/3-43, BBMP PID No. 51-60-35/3-43, BBMP Ward No.154, Site No.43, situated at Bhovi Colony, 5th Main Road, 3rd Block, Tyagarajanagar, Bangalore-560 028 measuring to an extent of 31x31 feet, in total of 961 Sq.ft. which is more fully described in the Schedule hereunder and bounded on:

**East by:** Road, **West by:** Site No.42, **North by:** Site No.44, **South by:** Road.

Given under my hand and seal of the court on this 19th day of April 2021.

**By Order of the Court, Assistant Registrar, City Civil Court, Bangalore.**

Advocate for Plaintiffs: **KUMARA .B**
No. 197, 1st Floor, Cubbonpet Main Road, Bangalore-560002.



ಕರ್ನಾಟಕ ಸರ್ಕಾರ
**(ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್)**
ಉಪನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು ಗ್ರಾಮಾಂತರ ಜಿಲ್ಲೆ ಕೊಠಡಿ ಸಂಖ್ಯೆ: 126, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲ್ಲೂಕು–562110

ಸಿ4(ಸಿ2)/ ಪ್ರೌ.ಶಾ.ಶಿ ದೂರು–48/2018–19 ದಿನಾಂಕ: 15.04.2021

**ಪ್ರಕಟಣೆ**

ಶ್ರೀಮತಿ ಚಂಪಾ ಹಿರೇಮಠ ಸಹಶಿಕ್ಷಕಿ ಸರ್ಕಾರಿ ಪ್ರೌಢಶಾಲೆ ಹಣಬೆ ದೊಡ್ಡಬಳ್ಳಾಪುರ ತಾಲ್ಲೂಕು ಆದ ನೀವು **ದಿನಾಂಕ: 08.11.2016** ರಿಂದ ಈವರೆವಿಗೂ ಶಾಲಾ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾಗಿರುತ್ತೀರಿ, ನಿಮಗೆ ಶಾಲಾ ಕರ್ತವ್ಯಕ್ಕೆ ಹಾಜರಾಗಲು ತಿಳಿಸಿ ನಿಮ್ಮ ಸ್ವಂತ ವಿಳಾಸಕ್ಕೆ ಪತ್ರಗಳನ್ನು ಬರೆಯಲಾಗಿದೆ, ಸದರಿ ಪತ್ರಗಳು ಸ್ವೀಕಾರಗೊಳ್ಳದೇ ವಾಪಸ್ಸಾಗಿರುತ್ತದೆ. ಈ ವರದಿ ಪ್ರಕಟಣೆಯಾದ 15 ದಿನಗಳ ಒಳಗಾಗಿ ಕೂಡಲೇ ಶಾಲಾ ಕರ್ತವ್ಯಕ್ಕೆ ಹಾಜರಾಗಿ, ಅನಧಿಕೃತ ಗೈರು ಹಾಜರಿ ಬಗ್ಗೆ ನಿಮ್ಮ ವಿವರಣೆಯನ್ನು ಸಲ್ಲಿಸಲು ಅಂತಿಮ ಅವಕಾಶ ನೀಡಲಾಗಿದೆ, ತಪ್ಪಿದಲ್ಲಿ ಕ.ನಾ.ಸೇ.ನಿ 1957 ನಿಯಮ 14(ii) ರಡಿ ತಾವು ನೀವು ತಲೆಮರೆಸಿಕೊಂಡಿರುತ್ತೀರಿ ಎಂದು ಭಾವಿಸಿ ಸೇವೆಯಿಂದ ವಜಾಗೊಳಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದೆ.

ಸಹಿ/–
ಉಪನಿರ್ದೇಶಕರು (ಆಡಳಿತ)
ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಉನಿಕ/ಬೆಂಗ್ರಾಜಿ/ಶಿರಡಿ ಸಾಯಿ/35/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ


## 'ಮಹಿಳಾ ರೈತರ ಕಡೆಗಣನೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೇಂದ್ರ ಸರ್ಕಾರದ ಕೃಷಿ ಕಾಯ್ದೆಗಳಿಂದ ದೇಶದ ಮಹಿಳಾ ರೈತರು ಮತ್ತಷ್ಟು ಕಡೆಗಣಿಸಲ್ಪಟ್ಟಿದ್ದಾರೆ' ಎಂದು ಮಹಿಳಾ ರೈತ ಹಕ್ಕುಗಳ ವೇದಿಕೆಯ (ಮಕಾಮ್) ರಾಜ್ಯ ಸಂಯೋಜಕಿ ಕವಿತಾ ಶ್ರೀನಿವಾಸನ್ ತಿಳಿಸಿದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಆನ್‌ಲೈನ್ ಮೂಲಕ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಕೃಷಿ ಕಾನೂನುಗಳ ಅಪಾಯಗಳು ಮತ್ತು ಪರಿಹಾರಗಳು' ಕುರಿತು ಉಪನ್ಯಾಸ ನೀಡಿದರು.

'ದೇಶವೇ ಕೊರೊನಾ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಮಾರಕವಾದ ಕೃಷಿ ಕಾಯ್ದೆಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ಹುನ್ನಾರ ನಡೆಸಿತು. ಇದನ್ನು ವಿರೋಧಿಸಿ ರೈತರೂ ನಿರಂತರ ಹೋರಾಟ ನಡೆಸಿದ್ದಾರೆ. ಈ ಕಾಯ್ದೆಗಳಿಂದ ಭವಿಷ್ಯದಲ್ಲಿ ಕೃಷಿ ಕ್ಷೇತ್ರ ಸಂಕಷ್ಟದ ಕೂಪದಲ್ಲಿ ಸಿಲುಕಲಿದೆ' ಎಂದು ಎಚ್ಚರಿಸಿದರು.

'ಎಪಿಎಂಸಿ ಕಾಯ್ದೆ, ಅಗತ್ಯ ವಸ್ತುಗಳ ಕಾಯ್ದೆಗಳು ಮಹಿಳಾ ರೈತರನ್ನು ದೂರ ಸರಿಸಲಿವೆ. ರೈತರು ದುರಾಸೆ ಪಟ್ಟರೆ, ದೇಶದ ಜನರಿಗೆ ಆಹಾರಕ್ಕೆ ಸಮಸ್ಯೆಯಾಗಲಿದೆ. ಪರೋಕ್ಷವಾಗಿ ಪಡಿತರ ವ್ಯವಸ್ಥೆಯ ಮೇಲೂ ಪರಿಣಾಮ ಬೀರಲಿದ್ದು, ಜನರನ್ನು ಗ್ರಾಹಕರನ್ನಾಗಿ ಮಾಡುವ ತಂತ್ರ ರೂಪಿಸಿದೆ' ಎಂದು ದೂರಿದರು.

ಜನವಾದಿ ಕರ್ನಾಟಕ ಸಮಿತಿ ಅಧ್ಯಕ್ಷೆ ದೇವಿ, 'ಆಹಾರ ಸಂರಕ್ಷಣೆ ಹಾಗೂ ಕುಟುಂಬ ನಿರ್ವಹಣೆಯಲ್ಲಿ ಮಹಿಳಾ ರೈತರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಈ ರೈತವಿರೋಧಿ ಕಾಯ್ದೆಗಳು ಮಹಿಳೆಯರ ಮೇಲೂ ಪರಿಣಾಮ ಬೀರಲಿದೆ. ಹಾಗಾಗಿ, ಇವುಗಳನ್ನು ಒಮ್ಮತದಿಂದ ವಿರೋಧಿಸಬೇಕು' ಎಂದರು.

'ಕೊರೊನಾ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಅತಿ ಕಡಿಮೆ ಪಡಿತರ ನೀಡುವ ಮೂಲಕ ಜನವಿರೋಧಿ ನಡೆ ಪ್ರದರ್ಶಿಸಿದೆ. ಈ ಸಂದರ್ಭದಲ್ಲಿ ಪ್ರತಿಯೊಬ್ಬರಿಗೆ ಕನಿಷ್ಠ 10 ಕೆ.ಜಿ ಪಡಿತರ ವಿತರಿಸಬೇಕು. ಎಲ್ಲರಿಗೂ ಆಹಾರ ಭದ್ರತೆಯ ಖಾತ್ರಿ ನೀಡಬೇಕು' ಎಂದರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ವಿಮಲಾ, ಬೆಂಗಳೂರು ದಕ್ಷಿಣ ಸಂಚಾಲಕಿ ಬಸಮ್ಮ ಹಾಗೂ ಇತರರು ಭಾಗವಹಿಸಿದ್ದರು.

## ಸುದ್ದಿ 2 ನಿಮಿಷ

### ಉದ್ಯಮಿ ಬಿ.ಆರ್.ಶೆಟ್ಟಿ ಆಸ್ತಿ ಪರಭಾರೆಗೆ ನಿರ್ಬಂಧ

**ಬೆಂಗಳೂರು:** ಉದ್ಯಮಿ ಬಿ.ಆರ್. ಶೆಟ್ಟಿ ಮತ್ತು ಅವರ ಪತ್ನಿ ಚಂದ್ರಕುಮಾರಿ ರಘುರಾಮಶೆಟ್ಟಿ ಅವರಿಗೆ ಸೇರಿದ ಆಸ್ತಿಗಳ ಪರಭಾರೆಗೆ ಹೈಕೋರ್ಟ್ ತಾತ್ಕಾಲಿಕ ತಡೆ ನೀಡಿದೆ.

ಬ್ಯಾಂಕ್ ಆಫ್ ಬರೋಡಾದಿಂದ ಬಿ.ಆರ್.ಶೆಟ್ಟಿ ಅವರು ₹1,921 ಕೋಟಿ ಸಾಲ ಪಡೆದಿದ್ದು, ಅದಕ್ಕೆ 16 ಆಸ್ತಿಗಳನ್ನು ಅಡಮಾನ ಇಟ್ಟಿದ್ದರು. ಆದರೆ, ಅವುಗಳನ್ನು ಬ್ಯಾಂಕ್‌ಗೆ ನೋಂದಣಿ ಮಾಡಿಸಿರಲಿಲ್ಲ. ಹೀಗಾಗಿ, ಬ್ಯಾಂಕ್ ವಾಣಿಜ್ಯ ವ್ಯವಹಾರಗಳ ನ್ಯಾಯಾಲಯದಲ್ಲಿ ದಾವೆ ಹೂಡಿತ್ತು.

ಆಸ್ತಿ ಪರಭಾರೆ ಮಾಡದಂತೆ ನಿರ್ದೇಶನ ನೀಡಲು ಕೋರಿ ಮಧ್ಯಂತರ ಅರ್ಜಿಯನ್ನೂ ಸಲ್ಲಿಸಿತ್ತು. 'ಈ ಆಸ್ತಿಗಳನ್ನು ಪರಭಾರೆ ಮಾಡಬಾರದು ಮತ್ತು ಮೂರನೇ ವ್ಯಕ್ತಿಗಳ್ಯಾರೂ ಈ ಆಸ್ತಿಯಲ್ಲಿ ಹಕ್ಕು ಪ್ರತಿಪಾದಿಸಬಾರದು' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಆದೇಶಿಸಿತು.

### 'ಪುಸ್ತಕ ಮಳಿಗೆ ತೆರೆಯಲು ಅವಕಾಶ ನೀಡಿ'

**ಬೆಂಗಳೂರು:** 'ಕೊರೊನಾ ಪರಿಸ್ಥಿತಿಯಲ್ಲಿ ಸರ್ಕಾರ ಬಾರ್‌ಗಳನ್ನು ತೆರೆಯಲು ಅನುಮತಿ ನೀಡುವ ಬದಲಿಗೆ ಪುಸ್ತಕ ಮಳಿಗೆಗಳನ್ನು ತೆರೆಯಲು ಅವಕಾಶ ನೀಡಬೇಕು. ಪುಸ್ತಕ ಓದಿನಿಂದ ಆತ್ಮವಿಶ್ವಾಸ, ಸಕಾರಾತ್ಮಕ ಭಾವನೆ ಮೂಡಲಿದೆ' ಎಂದು ಕರ್ನಾಟಕ ಬರಹಗಾರರು ಮತ್ತು ಪ್ರಕಾಶಕರ ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ ಮನವಿ ಮಾಡಿದ್ದಾರೆ.

'ಕೊರೊನಾ ತಂದೊಡ್ಡಿರುವ ಸಂಕಷ್ಟದಿಂದ ಮನೆಯಲ್ಲೇ ಕುಳಿತು ಒಂಟಿತನ ಕಾಡಬಹುದು. ಈ ವೇಳೆ ಬದುಕು ಕಟ್ಟಿಕೊಳ್ಳುವಲ್ಲಿ ಜನರು ಕಂಗಾಲಾಗಿದ್ದಾರೆ. ಇದರಿಂದ ಬದುಕು ನಿರಾಸೆಯತ್ತ ಸಾಗುವುದನ್ನು ತಡೆಯಲು ಇರುವ ಅಸ್ತ್ರವೆಂದರೆ ಪುಸ್ತಕಗಳು ಮಾತ್ರ' ಎಂದೂ ಹೇಳಿದ್ದಾರೆ.

## ಆಹಾರ–ಆರೋಗ್ಯ ಭದ್ರತೆ ಖಾತ್ರಿಪಡಿಸಿ:ಡಿವೈಎಫ್‌ಐ

**ಬೆಂಗಳೂರು:** 'ಕೊರೊನಾ ನಿಯಂತ್ರಣಕ್ಕಾಗಿ ಎರಡು ವಾರದ ಲಾಕ್‌ಡೌನ್ ಜಾರಿ ಮಾಡಿರುವ ರಾಜ್ಯ ಸರ್ಕಾರ ಜನರ ಆರೋಗ್ಯ ಹಾಗೂ ಆಹಾರ ಭದ್ರತೆಯನ್ನು ಖಾತ್ರಿಪಡಿಸಬೇಕು' ಎಂದು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ (ಡಿವೈಎಫ್‌ಐ) ರಾಜ್ಯ ಸಮಿತಿ ಒತ್ತಾಯಿಸಿದೆ.

'ಸೋಂಕು ನಿಯಂತ್ರಿಸಲು ಆಸ್ಪತ್ರೆಯ ಸೌಲಭ್ಯಗಳನ್ನು ಹೆಚ್ಚಿಸಿ, ಹಾಸಿಗೆ, ಆಮ್ಲಜನಕ ಕೊರತೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ವಹಿಸದ ರಾಜ್ಯ ಸರ್ಕಾರ, ತನ್ನ ಹೊಣೆಗೇಡಿತನ ಮರೆಮಾಚಲು ತರಾತುರಿಯಲ್ಲಿ ಲಾಕ್‌ಡೌನ್ ಜಾರಿ ಮಾಡಿರುವುದು ಖಂಡನೀಯ. ಈ ನಿರ್ಧಾರದ ಬದಲಿಗೆ ಕಠಿಣ ಸುರಕ್ಷಾ ಕ್ರಮಗಳು ಹಾಗೂ ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕು' ಎಂದು ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಒತ್ತಾಯಿಸಿದ್ದಾರೆ.

'ಕಳೆದ ವರ್ಷದ ಕೊರೊನಾ ಪರಿಸ್ಥಿತಿಯಿಂದಲೇ ಸರ್ಕಾರ ಎಚ್ಚೆತ್ತುಕೊಳ್ಳಬೇಕಿತ್ತು. ತಜ್ಞರ ಸಲಹೆಗಳನ್ನು ಕಡೆಗಣಿಸಿದ ಸರ್ಕಾರದ ಉದಾಸೀನವೇ ಸೋಂಕು ತೀವ್ರಗೊಳ್ಳಲು ಕಾರಣ. ಖಾಸಗಿ ಆಸ್ಪತ್ರೆಗಳನ್ನು ನಿಯಂತ್ರಣದಲ್ಲಿಟ್ಟು, ಸೋಂಕಿತರಿಗೆ ಉಚಿತ ಚಿಕಿತ್ಸೆ, ಹಾಸಿಗೆ ಹಾಗೂ ಆಮ್ಲಜನಕ ಒದಗಿಸಲು ತುರ್ತು ಕ್ರಮ ಕೈಗೊಳ್ಳಬೇಕು' ಎಂದು ಹೇಳಿದ್ದಾರೆ.

## 12 ಸಾವಿರ ಬಸ್ ವ್ಯವಸ್ಥೆ: ಲಕ್ಷ್ಮಣ ಸವದಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 14 ದಿನಗಳ ಕರ್ಫ್ಯೂ ಕಾರಣದಿಂದ ಊರುಗಳಿಗೆ ತೆರಳಲು ಹೊರಟಿರುವ ಜನರಿಗೆ ಅನುಕೂಲ ಆಗುವಂತೆ 12 ಸಾವಿರ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ ಎಂದು ಸಾರಿಗೆ ಸಚಿವ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

ಬೆಂಗಳೂರಿನಿಂದ ಹೊರ ಜಿಲ್ಲೆಗಳಿಗೆ ಮತ್ತು ಇತರ ಪ್ರದೇಶಗಳಿಗೆ ಈ ಬಸ್‌ಗಳು ಸಂಚರಿಸಲಿವೆ. ಮಂಗಳವಾರ ರಾತ್ರಿ ಕರ್ಫ್ಯೂ ಆರಂಭ ಆಗುವುದರೊಳಗೆ ಈ ಬಸ್‌ಗಳ ಕಾರ್ಯಾಚರಣೆ ಮುಕ್ತಾಯಗೊಳ್ಳಲಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ಪ್ರಯಾಣ ಮಾಡುವಂತೆ ಅವರು ಮನವಿ ಮಾಡಿದ್ದಾರೆ.

## 'ಮಳೆಗೂ ಮೊದಲು ರಸ್ತೆ ಗುಂಡಿ ಮುಚ್ಚಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಮುಂಗಾರು ಮಳೆ ಆರಂಭಕ್ಕೂ ಮೊದಲೇ ರಸ್ತೆಗಳ ಗುಂಡಿ ಮುಚ್ಚುವ ಕಾಮಗಾರಿ ಪೂರ್ಣಗೊಳಿಸಬೇಕು ಮತ್ತು ರಸ್ತೆ ಬದಿಯಲ್ಲಿರುವ ಗಿಡಗಂಟಿಗಳನ್ನು ತೆರವುಗೊಳಿಸಬೇಕು' ಎಂದು ಇಲಾಖೆಯ ಅಧಿಕಾರಿಗಳಿಗೆ ಲೋಕೋಪಯೋಗಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ ಸೂಚಿಸಿದರು.

ಅಧಿಕಾರಿಗಳ ಜೊತೆ ವರ್ಚುವಲ್ ಸಭೆಯ ಮೂಲಕ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, 'ಪ್ರಸಕ್ತ ಸಾಲಿನಲ್ಲಿ ಒದಗಿಸಿದ ಅನುದಾನದಲ್ಲಿ ಶೇ 50ರಷ್ಟು ಮೊತ್ತವನ್ನು ಮುಂದುವರಿದ ಕಾಮಗಾರಿಗಳಿಗೆ ಬಳಸಬೇಕು. ಉಳಿದ ಮೊತ್ತವನ್ನು ಹೊಸ ಕಾಮಗಾರಿಗಳಿಗೆ ಮೀಸಲಿರಿಸಿ ಯೋಜನೆಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸಬೇಕು' ಎಂದು ಸಲಹೆ ನೀಡಿದರು.

'ಇಲಾಖೆಯ ಕಾಮಗಾರಿಗಳಿಗೆ ಕೋವಿಡ್ ನಿಯಮಗಳು ಅಡ್ಡಿಯಾಗುವುದಿಲ್ಲ. ಕೋವಿಡ್ ನಿಯಂತ್ರಣದ ಉದ್ದೇಶಕ್ಕೆ ನಿರ್ಮಿಸುವ ಕಟ್ಟಡ, ಮೂಲಸೌಕರ್ಯ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಜಿಲ್ಲಾಡಳಿತಕ್ಕೆ ಹಸ್ತಾಂತರಿಸಬೇಕು. ಇದಕ್ಕೆ ಪೂರಕವಾದ ಪ್ರಸ್ತಾವನೆಗಳಿದ್ದರೆ ತಕ್ಷಣ ಸರ್ಕಾರಕ್ಕೆ ಸಲ್ಲಿಸಿದರೆ ಮಂಜೂರಾತಿ ನೀಡಲಾಗುವುದು' ಎಂದರು.

'ಅನುಷ್ಠಾನದಲ್ಲಿರುವ ಕಾಮಗಾರಿಗಳನ್ನು ಗುಣಮಟ್ಟ ಕಾಯ್ದುಕೊಂಡು ಶೀಘ್ರವಾಗಿ ಪೂರ್ಣಗೊಳಿಸಬೇಕು. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳುವ ಹಂತ 4ರ 2ನೇ ಹಂತದ ಕಾಮಗಾರಿಗಳಿಗೆ ಮೂರು ತಿಂಗಳ ಒಳಗೆ ಟೆಂಡರ್ ಕರೆದು ಕಾಮಗಾರಿಗಳನ್ನು ಆರಂಭಿಸಬೇಕು. ಕಳೆದ ಸೆಪ್ಟೆಂಬರ್‌ನಲ್ಲಿ ಮೇಲ್ದರ್ಜೆಗೇರಿಸಿದ ರಸ್ತೆಗಳ ನಿರ್ವಹಣೆಯನ್ನೂ ತ್ವರಿತವಾಗಿ ಅನುಷ್ಠಾನಗೊಳಿಸಬೇಕು' ಎಂದೂ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## ಮಾರುತಿ ಸುಜುಕಿ ಮಾಜಿ ಎಂ.ಡಿ. ಜಗದೀಶ ಖಟ್ಟರ್ ನಿಧನ

**ನವದೆಹಲಿ (ಪಿಟಿಐ):** ಮಾರುತಿ ಸುಜುಕಿ ಇಂಡಿಯಾದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಜಗದೀಶ ಖಟ್ಟರ್ (79) ಅವರು ಹೃದಯಾಘಾತದಿಂದ ಸೋಮವಾರ ನಿಧನರಾದರು ಎಂದು ಅವರ ನಿಕಟವರ್ತಿಗಳು ತಿಳಿಸಿದ್ದಾರೆ.

2002ರಲ್ಲಿ ಸರ್ಕಾರವು ಕಂಪನಿಯಲ್ಲಿ ತಾನು ಹೊಂದಿದ್ದ ಷೇರುಗಳನ್ನು ಮಾರಾಟ ಮಾಡಲು ಆರಂಭಿಸಿದ ನಂತರ 'ಮಾರುತಿ'ಯ ಬೆಳವಣಿಗೆಗೆ ಅಡಿಪಾಯ ಹಾಕಿದವರಲ್ಲಿ ಒಬ್ಬರೆಂದು ಕಟ್ಟರ್ ಅವರನ್ನು ಪರಿಗಣಿಸಲಾಗಿದೆ.

ಅವರು 1993ರ ಜುಲೈನಲ್ಲಿ ಮಾರುಕಟ್ಟೆ ವಿಭಾಗದ ನಿರ್ದೇಶಕರಾಗಿ ಮಾರುತಿ ಉದ್ಯೋಗ್ ಲಿಮಿಟೆಡ್ ಸೇರಿದರು. ಬಳಿಕ ಆರು ವರ್ಷಗಳಲ್ಲಿ ಮಾರುಕಟ್ಟೆ ವಿಭಾಗದ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗೆ ಏರಿದರು. 1999ರಲ್ಲಿ ಜಂಟಿ ವ್ಯವಸ್ಥಾಪಕ ನಿರ್ದೇಶಕರಾಗಿ ಅವರಿಗೆ ಬಡ್ತಿ ನೀಡಲಾಯಿತು. 2002ರಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಮರುನೇಮಕ ಆದರು. 2007ರಲ್ಲಿ ನಿವೃತ್ತಿ ಹೊಂದಿದರು. ಮಾರುತಿ ಕಂಪನಿಯಲ್ಲಿನ ಹುದ್ದೆಗೂ ಮುನ್ನ ಐಎಎಸ್ ಅಧಿಕಾರಿಯಾಗಿ 37 ವರ್ಷಗಳ ಕರ್ತವ್ಯ ನಿಭಾಯಿಸಿದ್ದರು.

ಮಾರುತಿಯಿಂದ ಹೊರಬಂದ ಬಳಿಕ ಪ್ರೇಮ್‌ಜಿ ಇನ್‌ವೆಸ್ಟ್ ಮತ್ತು ಗಜ ಕ್ಯಾಪಿಟಲ್‌ನಂತಹ ಹೂಡಿಕೆದಾರರ ಜೊತೆಗೂಡಿ ಕಾರ್ನೇಷನ್ ಆಟೊ ಎನ್ನುವ ಕಾರು ಸೇವಾ ಸಂಸ್ಥೆ ಸ್ಥಾಪಿಸಿದ್ದರು.

## ಇಂಗ್ಲಿಷ್‌ನಲ್ಲಿ ಮಾರ್ಗಸೂಚಿ: ಖಂಡನೆ

**ಬೆಂಗಳೂರು:** ರಾಜ್ಯ ಸರ್ಕಾರ ಕೋವಿಡ್ ಮಾರ್ಗಸೂಚಿಗಳನ್ನು ಕನ್ನಡದ ಬದಲು ಇಂಗ್ಲಿಷ್‌ನಲ್ಲಿ ಪ್ರಕಟಿಸಿರುವುದಕ್ಕೆ ಸಾಮಾಜಿಕ ಜಾಲತಾಣದಲ್ಲಿ ಖಂಡನೆ ವ್ಯಕ್ತವಾಗಿದೆ.

ಈ ನಿಯಮಾವಳಿ ಜನ ವಿರೋಧಿ ಮತ್ತು ಕನ್ನಡ ವಿರೋಧಿ ಎನ್ನುವುದಕ್ಕೆ ಬೇರೆ ಉದಾಹರಣೆಯೇ ಬೇಕಿಲ್ಲ. ಕನ್ನಡ ಮಾತ್ರ ಬಲ್ಲ ಕನ್ನಡಿಗರಿಗೆ ಸರ್ಕಾರದ ನಿಯಮಗಳು ತಿಳಿಯುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ.


ಕರ್ನಾಟಕ ಸರ್ಕಾರ
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ**
ಕೆ.ಎನ್. ಸ್ಯಾನಿಟೋರಿಯಂ ಆವರಣ, ಬಂಗಾರಪೇಟೆ ರಸ್ತೆ, ಕೋಲಾರ–563102

ಸಂಖ್ಯೆ: ಜಿಆಕುಕ/ಕೋ/ಹೊ.ಗು/01/2021–22 ದಿನಾಂಕ: 23–04–2021

**ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ**

2021–22ನೇ ಸಾಲಿಗೆ ಒಂದು ವರ್ಷದ ಅವಧಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು/ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ಗ್ರೂಪ್–ಡಿ ನೌಕರರನ್ನು ವಾಹನ ಚಾಲಕರನ್ನು ಡಿಇಓ, ಶುಶ್ರೂಷಕರನ್ನು, ಫಾರ್ಮಾಸಿಸ್ಟ್, ಕಿರಿಯ ಪ್ರಯೋಗ ಶಾಲಾ ತಂತ್ರಜ್ಞರು ಹೊರಗುತ್ತಿಗೆ ಆಧಾರದ ಮೇಲೆ ಆಸ್ಪತ್ರೆಯ ಸೇವೆಗಳ ನಿರ್ವಹಣೆಗಾಗಿ ಇ–ಟೆಂಡರ್ ಕರೆಯಲಾಗಿದೆ ಹಾಗೂ **ದಿನಾಂಕ: 23.04.2021** ರಂದು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಪ್ರಕಟಿಸಲಾಗಿದೆ. ಟೆಂಡರ್ ಸಂಖ್ಯೆ : **DHO/KOL/0S/01/2021-22** ಮುದ್ರಿತ ಫಾರಂಗಳಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ದಿನಾಂಕ 23.04.2021 ರಿಂದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ರಲ್ಲಿ ಇ–ಪೋರ್ಟಲ್ ನಿಗದಿಪಡಿಸಿದ ಶುಲ್ಕದೊಂದಿಗೆ ಪಡೆಯಬಹುದು. ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು **ದಿನಾಂಕ: 15.05.2021** ರ ವರೆಗೆ ಭರ್ತಿ ಮಾಡಬಹುದು ಹಾಗೂ **ದಿನಾಂಕ: 17.05.2021** ರಂದು ಬೆಳಿಗ್ಗೆ **11.00 ಗಂಟೆಗೆ** ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ಈ ಬಗ್ಗೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಕೋಲಾರ ಇಲ್ಲಿ ಕೆಲಸದ ದಿನಗಳಂದು ಹಾಗೂ **www.eproc.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದು ಅಂದಾಜು ಮೊತ್ತ **ರೂ.2,10,00,000/–** (ಎರಡು ಕೋಟಿ ಹತ್ತು ಲಕ್ಷಗಳು)

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಕೋಲಾರ

ವಾಸಾಸಂಇ/ಕೋಲಾರ/ಶಿರಡಿ ಸಾಯಿ/34/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



ಕರ್ನಾಟಕ ಸರ್ಕಾರ
**ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ**
ರಾಷ್ಟ್ರೀಯ ಆರೋಗ್ಯ ಅಭಿಯಾನ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ
ಇ–ಮೇಲ್: dhobangalorerural@gmail.com / dpmbangalorerural2@gmail.com

ಸಂಖ್ಯೆ: ಎನ್.ಹೆಚ್.ಎಂ/ಆರ್.ಸಿ.ಹೆಚ್/ಬೆಂ.ಗ್ರಾ/ವಾ.ಸೇ.ಜಿ/ಪಪ್ರ/01/2021–22 ದಿನಾಂಕ: 23.04.2021

**ಟೆಂಡರ್ ಆಹ್ವಾನ**

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ 2021–22ನೇ ಸಾಲಿಗೆ ಈ ಕೆಳಕಂಡ ಕಾರ್ಯಕ್ರಮಗಳಿಗೆ ವಾಹನ ಸಹಿತ ಚಾಲಕರ ಸೇವೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (eproc.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ಈ ಕೆಳಕಂಡಂತಿದೆ.

| ಕ್ರ. ಸಂ. | ಕಾರ್ಯಕ್ರಮ | ವಾಹನಗಳ ಸಂಖ್ಯೆ | ಇ.ಎಂ.ಡಿ. ಮೊತ್ತ |
|---|---|---|---|
| 1 | ಆರ್.ಬಿ.ಎಸ್.ಕೆ | 8 | ರೂ.1,39,200/– |
| 2 | ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು | 01 | ರೂ.69,000/– |
| 3 | ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ | 01 | |
| 4 | ಜಿಲ್ಲಾ ಸಲಹೆಗಾರರು – ಕ್ವಾಲಿಟಿ ಅಶ್ಯೂರೆನ್ಸ್ | 01 | |
| 5 | ಜಿಲ್ಲಾ ಸಲಹೆಗಾರರು–ತಂಬಾಕು ನಿಯಂತ್ರಣ | 01 | |

**ವಿವರಗಳು:** 1) ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಯಲ್ಲಿರುವುದು. **ದಿನಾಂಕ: 26.04.2021** (2) ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ **ದಿನಾಂಕ: 25.05.2021 ಸಮಯ ಸಂಜೆ 5.30 ಗಂಟೆ** (3) ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್): **28.05.2021, ಮಧ್ಯಾಹ್ನ 12.00 ಗಂಟೆ** (4) ಟೆಂಡರ್ ತೆರೆಯುವ ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, (5) ಟೆಂಡರ್ ತೆರೆಯುವ ಪ್ರಾಧಿಕಾರಿಗಳು: ಜಿಲ್ಲಾ ಆರೋಗ್ಯ ಸಂಘ, ಬೆಂಗಳೂರು ಗ್ರಾಮಾಂತರ ಜಿಲ್ಲೆ (6) ಟೆಂಡರ್ ಮೊತ್ತ: **ರೂ. 13.80 ಲಕ್ಷಗಳು ಮತ್ತು ರೂ. 27.84 ಲಕ್ಷಗಳು** ಅಂದಾಜು ಮೊತ್ತ. (7) ಹೆಚ್ಚಿನ ಮಾಹಿತಿಗಾಗಿ: **eproc.karnataka.gov.in** ವೆಬ್‌ಸೈಟ್‌ನಲ್ಲಿ ವಿವರಗಳನ್ನು ಪಡೆಯಬಹುದು. [illegible]

ಸಹಿ/–
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಬೆಂಗಳೂರು ಗ್ರಾಮಾಂತರ ಜಿಲ್ಲೆ

ವಾಸಾಸಂಇ/ಬೆಂಗ್ರಾಜಿ/ಶಿರಡಿ ಸಾಯಿ/33/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ



SOBHA
PASSION AT WORK

**SOBHA LIMITED**
**CIN : L45201KA1995PLC018475**
**Regd. Office: 'SOBHA', Sarjapur – Marathahalli Outer Ring Road (ORR), Devarabisanahalli, Bellandur Post, Bangalore - 560 103.**
**Ph: +91-80-49320000, Fax: +91-80-49320444**
**email: investors@sobha.com | website: www.sobha.com**

**ಷೇರುದಾರರಿಗೆ ಸೂಚನೆ:**

**(ಕಂಪನಿಯ ಈಕ್ವಿಟಿ ಷೇರುದಾರರ ಗಮನಕ್ಕಾಗಿ)**
**ಕಂಪನಿಯ ಈಕ್ವಿಟಿ ಷೇರುಗಳನ್ನು ಇನ್ವೆಸ್ಟರ್ ಎಜುಕೇಷನ್ ಆಂಡ್ ಪ್ರೊಟೆಕ್ಷನ್ ಫಂಡ್ (ಐಇಪಿಎಫ್)ಗೆ ವರ್ಗಾಯಿಸುವ ಬಗ್ಗೆ**

ಈ ಸೂಚನೆಯನ್ನು ಸೆಕ್ಷನ್ 124 (6) ರ ಕಂಪನಿ ಕಾಯಿದೆ, 2013 ಯನ್ನು ಇನ್ವೆಸ್ಟರ್ ಎಜುಕೇಷನ್ ಆಂಡ್ ಪ್ರೊಟೆಕ್ಷನ್ ಫಂಡ್ ಅಥಾರಿಟಿ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ ಮತ್ತು ರಿಫಂಡ್) ನಿಯಮಗಳು 2016 (ನಿಯಮಗಳು) ಅನುಸಾರವಾಗಿ ಓದಿಕೊಂಡಂತೆ ಹಾಗೂ ಈ ದಿನದವರೆಗೂ ಆದ ತಿದ್ದುಪಡಿಯು ಸೇರಿದ ಅನ್ವಯ ನೀಡಲಾಗಿದೆ.

ಈ ನಿಯಮಗಳ ಅನ್ವಯ ಆರ್ಥಿಕ ವರ್ಷ 2013–14ರಲ್ಲಿ ಘೋಷಿಸಲ್ಪಟ್ಟ ಡಿವಿಡೆಂಡ್ ಯಾವುದು ನಿರಂತರವಾಗಿ ಏಳು ವರ್ಷಗಳು ಕ್ಲೈಮು ಆಗದೇ ಉಳಿದಿರುವುದೋ ಅಂತಹ ಡಿವಿಡೆಂಡ್ ಮೊತ್ತವನ್ನು ಏಳು ವರ್ಷದ ಕೊನೆಗೆ ಅಂದರೆ ಆಗಸ್ಟ್ 09, 2021 ರ ನಂತರ ಐಇಪಿಎಫ್‌ಗೆ ವರ್ಗಾಯಿಸಲಾಗುವುದು. ಯಾವ ಷೇರುದಾರರು 2013–14 ರಿಂದ ನಿರಂತರವಾಗಿ ಏಳು ವರ್ಷದವರೆಗೆ ಡಿವಿಡೆಂಡ್ ಮೊತ್ತವನ್ನು ಕ್ಲೈಮು ಮಾಡಿರುವುದಿಲ್ಲವೋ ಅವರ ಷೇರುಗಳನ್ನು ಸಹ ಡಿವಿಡೆಂಡ್‌ನ ವರ್ಗಾವಣೆಯ ನಂತರ ಐಇಪಿಎಫ್‌ಗೆ [illegible]

[illegible] sobha.com [illegible]

[illegible] iepf.shares@linktime.co.in [illegible]

ದಿನಾಂಕ: ಏಪ್ರಿಲ್ 26, 2021
ಸ್ಥಳ: ಬೆಂಗಳೂರು

[illegible]



ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**OTHERS**

**For Sale**

**IMMEDIATE SALE** Leather Sofa Diwan Teak Dining Dressing Curtains kids Bike Boxcot 9845414482 7019263843

**PERSONAL**

**Change of Name**

**I, KSHITIJ** ABHISHEK, aged about 35 years, S/o Ashok Kumar Mishra residing at #91, Hollywood Town, Sadahalli Post, Devanahalli Taluk, Bengaluru Rural District-562110 here by declare that I want to add my Surname of MISHRA, So in future I shall be called as KSHITIJ ABHISHEK MISHRA only, vide affidavit dated:22.04.2021 sworn before notary S.P.Gandhi, Bengaluru-562110.

**MITLESH KUMARI,** W/o JC-682149-H, NB/SUB, GOPAL SINGH SOLANKI, Vill-MAHOOIBRAHIMPUR, HINDAUN CITY, KARAULI, RAJASTHAN, changed my name from MITLESH KUMARI to MITHLESH SOLANKI, 26/04/2021, Notary K.V.Mani, Bangalore

**I,KEERTHANA BRABHAKAR** have changed my-name-from KEERTHANA to KEERTHANA PRABHAKAR vide-affidavit dated:23.04.2021 sworn before-notary C.N.Balasubramanyam,Bangalore

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

**Lost**

**I, NIKITHA** Kishore D/o.Kishore Kumar R/o No.16, 1B Cross Ramdev Garden, Kacharakanahalli, Bangalore-84, Roll No-4056592, have lost my 10th standard marksheet issued by CBSE. Finders contact:- 9535031118

**RENTAL PROPERTIES**

**Accommodation Available**

**Commercial**

**UPPER GROUND** floor 1500sqft and 3000sqft, TOTAL 4500 SQFT. WITH 6000SQFT VACANT LAND, R.V. MAIN ROAD, NEAR LALBAGH WEST GATE, 45 FEET GLASS FRONTAGE WITH HORIZONTAL SAFETY GRILLS SUITABLE FOR DEPARTMENTAL STORES CONSUMER GOODS SHOW ROOMS OFFICES.RESTAURANTS.RESERVED PARKING PRESENT. CONTACT OWNER 9740854176

**REAL ESTATE BUYING**

**Sites**

**Marathahalli**

**1840 SQFT** North-east facing corner plot for sale in Munnekolala, Marathahalli. 5 min from Marathahalli bridge, Kundalahalli gate. Rs. 13000/ sqft. Ph: 9886268187, 9880493190

**REAL ESTATE SELLING**

**Sites**

**Bangalore North**

**FOR SALE.** Plot in Jade Garden Phase 1. 6875 Square Feet. East Facing and Excellent Location. Contact 9810211883

**HEALTH SPECIAL**

**ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್**
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ
Before / After
ಲೈಂಗಿಕ ರೋಗಗಳು | ಉದ್ರೇಕದ ಸಮಸ್ಯೆ | ಲೈಂಗಿಕ ನಿರಾಸಕ್ತಿ | ನಿದ್ರಾ ಸ್ಖಲನ | ಶೀಘ್ರ ಸ್ಖಲನ | ಲಿಂಗ ಚಿಕ್ಕದಾಗುವುದು | ನರ ದೌರ್ಬಲ್ಯ | ಅವಧಿಗೆ ಮೊದಲೇ ಸ್ಖಲನ | ಆತಂಕ, ದೌರ್ಬಲ್ಯ | ಕಡಿಮೆ ವೀರ್ಯಾಣು | ಮುಷ್ಠಿ ಮೈಥುನದ ಅಡ್ಡಪರಿಣಾಮ
100% NO SIDE EFFECTS
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259



ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಸರ್ಕಾರ ಹೇರಿರುವ ವಾರಾಂತ್ಯದ ಕರ್ಫ್ಯೂ ಮುಗಿದ ಬಳಿಕ ಸೋಮವಾರ ಬೆಂಗಳೂರಿನ ಅವೆನ್ಯೂ ರಸ್ತೆಯಲ್ಲಿ ಮಳಿಗೆಗಳು ಮುಚ್ಚಿದ್ದವು (ಎಡಚಿತ್ರ), ಸರ್ಕಾರ ಘೋಷಿಸಿರುವ ಲಾಕ್‌ಡೌನ್‌ನಿಂದಾಗಿ ಹೆಚ್ಚಿನ ಜನರು ತಮ್ಮ ಊರಿಗೆ ಮರಳಲು ಸೋಮವಾರ ಬೆಂಗಳೂರಿನ ಮೆಜೆಸ್ಟಿಕ್ ಬಸ್‌ನಿಲ್ದಾಣಕ್ಕೆ ಬಂದರು –ಪ್ರಜಾವಾಣಿ ಚಿತ್ರಗಳು

### ಕೆಎಸ್‌ಆರ್‌ಟಿಸಿಯಿಂದ ಹೆಚ್ಚುವರಿ ಬಸ್ ವ್ಯವಸ್ಥೆ • ಗಂಟುಮೂಟೆ ಹೊತ್ತು ಕುಟುಂಬ ಸಮೇತ ಹೊರಟ ಮಂದಿ

# ಕರ್ಫ್ಯೂ; ಬೆಂಗಳೂರಿನಿಂದ ಗುಳೆ ಹೊರಟ ಜನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎರಡನೇ ಅಲೆಯಲ್ಲಿ ಹೆಚ್ಚುತ್ತಿರುವ ಕೊರೊನಾ ಸೋಂಕು ತಡೆಗಾಗಿ ರಾಜ್ಯದಾದ್ಯಂತ ಕರ್ಫ್ಯೂ ಜಾರಿ ಮಾಡಲಾಗುತ್ತಿದ್ದು, ಬೆಂಗಳೂರಿನಲ್ಲಿ ವಾಸವಿದ್ದ ಸಾವಿರಾರು ಮಂದಿ ಸೋಮವಾರ ತಮ್ಮೂರಿನತ್ತ ಹೊರಟರು.

ರಾಜ್ಯ ಹಾಗೂ ಹೊರ ರಾಜ್ಯಗಳಿಂದ ಉದ್ಯೋಗ, ವಿದ್ಯಾಭ್ಯಾಸ, ಕೂಲಿ ಕೆಲಸ ನಂಬಿ ಲಕ್ಷಾಂತರ ಮಂದಿ ಬೆಂಗಳೂರಿಗೆ ಬಂದಿದ್ದಾರೆ. ಇದೀಗ ಕರ್ಫ್ಯೂ ಜಾರಿಯಾಗುತ್ತಿರುವುದರಿಂದ ಬಹುಪಾಲು ಮಂದಿಗೆ ಕೆಲಸವೇ ಇಲ್ಲದಂತಾಗುತ್ತದೆ. ಅಂಥ ಜನರೆಲ್ಲರೂ ಗಂಟುಮೂಟೆ ಕಟ್ಟಿಕೊಂಡು ಕುಟುಂಬ ಸಮೇತವಾಗಿ ತಮ್ಮೂರಿನ ಬಸ್ ಹಾಗೂ ರೈಲು ಹತ್ತಿದರು.

ಮಂಗಳವಾರ ರಾತ್ರಿಯಿಂದಲೇ ಗೂಡ್ಸ್ ಹೊರತುಪಡಿಸಿ ಎಲ್ಲ ವಾಹನಗಳ ಸಂಚಾರ ಬಂದ್ ಆಗಲಿದೆ. ವ್ಯಾಪಾರ–ವಹಿವಾಟು ಸ್ಥಗಿತವಾಗಲಿದೆ. ಈ ಬಗ್ಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಾಹಿತಿ ನೀಡುತ್ತಿದ್ದಂತೆ, ಬಹುತೇಕರು ಬೆಂಗಳೂರು ತೊರೆಯಲು ತೀರ್ಮಾನಿಸಿದರು. ಮೆಜೆಸ್ಟಿಕ್ ಬಸ್ ನಿಲ್ದಾಣಗಳಲ್ಲಿ ಜನರು ಗುಂಪು ಗುಂಪಾಗಿ ನಿಂತುಕೊಂಡು ಬಸ್ ಹತ್ತಿದ್ದು ಕಂಡುಬಂತು. ರೈಲು ಮೂಲಕವೂ ಸಾವಿರಾರು ಮಂದಿ ಪ್ರಯಾಣಿಸಿದರು.

ತುಮಕೂರು ರಸ್ತೆಯ ನೆಲಮಂಗಲ ಟೋಲ್‌ನಲ್ಲೂ ವಾಹನಗಳ ಓಡಾಟ ಹೆಚ್ಚಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳ ಜೊತೆಯಲ್ಲಿ ಖಾಸಗಿ ವಾಹನಗಳಲ್ಲೂ ಜನರು ಕಂಡುಬಂದರು.

ಯಶವಂತಪುರ, ಪೀಣ್ಯ, ಜಾಲಹಳ್ಳಿ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲೂ ವಾಹನಗಳ ದಟ್ಟಣೆ ಕಂಡುಬಂತು. ಬೈಕ್, ಕಾರು ಸೇರಿದಂತೆ ಹಲವು ವಾಹನಗಳು ರಾತ್ರಿ 9 ಗಂಟೆಯೂ ಮುನ್ನವೇ ಬೆಂಗಳೂರಿನಿಂದ ಹೊರಟವು.

ಇತ್ತೀಚೆಗೆ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿದ ಸಂದರ್ಭದಲ್ಲೇ ಬಹುಪಾಲು ಮಂದಿ ಬೆಂಗಳೂರು ತೊರೆದಿದ್ದರು. ಇದೀಗ ಮತ್ತಷ್ಟು ಮಂದಿ ನಗರ ಬಿಟ್ಟು ಹೋದರು.

**500 ಹೆಚ್ಚುವರಿ ಬಸ್:** ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದರಿಂದ 500 ಬಸ್‌ಗಳನ್ನು ಹೆಚ್ಚುವರಿಯಾಗಿ ಸೇವೆಗೆ ಕಳುಹಿಸಲಾಯಿತು. ಉತ್ತರ ಕರ್ನಾಟಕದ ಜಿಲ್ಲೆಗಳತ್ತ ಬಸ್‌ಗಳು ಹೋದವು.

### ‘ಕೊರೊನಾಗೆ ಹೆದರಲಿಲ್ಲ, ಕರ್ಫ್ಯೂಗೆ ಹೆದರಬೇಕಾಯ್ತು’

‘ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಳವಾದರೂ ನಗರದಲ್ಲೇ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದೆವು. ಆದರೆ, ಕರ್ಫ್ಯೂನಿಂದಾಗಿ 14 ದಿನ ಕೆಲಸವಿಲ್ಲವೆಂದು ಮಾಲೀಕರು ಹೇಳುತ್ತಿದ್ದಾರೆ. ಹೀಗಾಗಿ, ಊರಿಗೆ ಹೊರಟಿದ್ದೇವೆ’ ಎಂದು ಯಾದಗಿರಿಯ ಲಕ್ಷ್ಮಣ ಹೇಳಿದರು.

‘ಕೊರೊನಾಗೆ ಹೆದರಲಿಲ್ಲ. ಆದರೆ, ಈಗ ಕರ್ಫ್ಯೂ ನಮ್ಮ ಕೆಲಸ ಕಿತ್ತುಕೊಂಡಿದೆ. ಇದರಿಂದ ಹೆದರಿ ಊರು ತೊರೆಯುತ್ತಿದ್ದೇವೆ’ ಎಂದು ಅವರು ತಿಳಿಸಿದರು.

### ‘ತಪ್ಪು ಮುಚ್ಚಿಕೊಳ್ಳಲು ಕರ್ಫ್ಯೂ; ಬಡವರ ಶಾಪ ತಟ್ಟಲಿದೆ’

‘ಮೊದಲೇ ಎಚ್ಚೆತ್ತುಕೊಳ್ಳಬೇಕಾದ ಸರ್ಕಾರದ ಮುಖ್ಯಮಂತ್ರಿ ಹಾಗೂ ಸಚಿವರು, ಚುನಾವಣೆ ಪ್ರಚಾರದಲ್ಲೇ ಕಾಲಹರಣ ಮಾಡಿದರು. ಇದರಿಂದಲೇ ಸೋಂಕು ಹೆಚ್ಚಾಯಿತು. ತಮ್ಮ ತಪ್ಪು ಮುಚ್ಚಿಕೊಳ್ಳಲು ಇದೀಗ ಕರ್ಫ್ಯೂ ಜಾರಿ ಮಾಡಿದ್ದು, ಅವರಿಗೆ ನಮ್ಮಂಥ ಬಡವರ ಶಾಪ ತಟ್ಟುತ್ತದೆ’ ಎಂದು ಬೀದರ್‌ನ ರಾಮಪ್ಪ ಕಣ್ಣೀರಿಟ್ಟರು.

‘ಊರಿನಲ್ಲಿ ಜಮೀನು ಇಲ್ಲದಿದ್ದರಿಂದ ದುಡಿಯಲು ಬೆಂಗಳೂರಿಗೆ ಬಂದಿದ್ದೆ. ಈಗ ಕೆಲಸವೇ ಇಲ್ಲ. ಪತ್ನಿ ಹಾಗೂ ಇಬ್ಬರು ಮಕ್ಕಳನ್ನು ಸಾಕುವುದು ಹೇಗೆ ಎಂಬ ಚಿಂತೆ ಶುರುವಾಗಿದೆ. ವಾಪಸು ಊರಿಗೆ ಹೋಗಿ ಅಲ್ಲಿಯೇ ಕೂಲಿ ಕೆಲಸ ಮಾಡುವೆ’ ಎಂದೂ ಅವರು ಹೇಳಿದರು.

### ‘ಸಾಮಾನ್ಯ ಜನರ ಜೀವಕ್ಕೆ ಬೆಲೆ ಇಲ್ಲ’

‘ಅನ್ನಕ್ಕಾಗಿ ನಗರಕ್ಕೆ ಬಂದಿದ್ದೆ. ಕೊರೊನಾದಿಂದಾಗಿ ಕೆಲಸ ಹೋಗಿದ್ದು, ಊರಿನತ್ತ ತೆರಳುತ್ತಿದ್ದೇವೆ’ ಎಂದು ಬಳ್ಳಾರಿಯ ದೇವರಾಜ್ ಹೇಳಿದರು.

‘ಆಕ್ಸಿಜನ್ ಹಾಗೂ ಬೆಡ್‌ಗಾಗಿ ಜನ ಪರದಾಡುತ್ತಿದ್ದಾರೆ. ಮುಖ್ಯಮಂತ್ರಿ ಹಾಗೂ ಇತರೆ ದೊಡ್ಡ ವ್ಯಕ್ತಿಗಳು, ದೊಡ್ಡ ದೊಡ್ಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು ಬರುತ್ತಿದ್ದಾರೆ. ಇದನ್ನು ನೋಡಿದರೆ, ಸಾಮಾನ್ಯ ಜನರ ಜೀವಕ್ಕೆ ಬೆಲೆ ಇಲ್ಲದಂತಾಗಿದೆ’ ಎಂದೂ ಆಕ್ರೋಶ ವ್ಯಕ್ತಪಡಿಸಿದರು.

### ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ವಿಶ್ವಾಸ

# ‘11 ಸಾವಿರ ಹಾಸಿಗೆ ಶೀಘ್ರವೇ ಕೋವಿಡ್ ಚಿಕಿತ್ಸೆಗೆ’

ಪ್ರಜಾವಾಣಿ ವಾರ್ತೆ

ಗೌರವ್ ಗುಪ್ತ

**ಬೆಂಗಳೂರು:** ‘ನಗರದ ಆಸ್ಪತ್ರೆಗಳಲ್ಲಿ ಕನಿಷ್ಠಪಕ್ಷ 11 ಸಾವಿರ ಹಾಸಿಗೆಗಳು ಕೋವಿಡ್ ಚಿಕಿತ್ಸೆ ಸಲುವಾಗಿ ಬಿಬಿಎಂಪಿಗೆ ಲಭ್ಯವಾಗಬೇಕಿದೆ. ಇದುವರೆಗೆ 9 ಸಾವಿರ ಹಾಸಿಗೆಗಳು ಲಭ್ಯ ಇವೆ. ಎರಡು ದಿನಗಳಲ್ಲಿ 11 ಸಾವಿರಕ್ಕೂ ಅಧಿಕ ಹಾಸಿಗೆಗಳು ಲಭ್ಯವಾಗಲಿವೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ ಗುಪ್ತ ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ಈ ಬಾರಿ ಸೋಂಕು ತ್ವರಿತವಾಗಿ ಹರಡಿದೆ. ಹಾಗಾಗಿ ಸಮಸ್ಯೆಯಾಗಿದೆ’ ಎಂದರು.

‘ದೇಶದ ಬೇರೆ ಮಹಾನಗರಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ವೈದ್ಯಕೀಯ ಮೂಲಸೌಕರ್ಯ ಚೆನ್ನಾಗಿಯೇ ಇದೆ. ಸೋಂಕಿತರ ಸಂಖ್ಯೆಯಲ್ಲಿ ಏಕಾಏಕಿ ತೀವ್ರ ಹೆಚ್ಚಳ ಆದಾಗ ವೈದ್ಯಕೀಯ ಮೂಲಸೌಕರ್ಯದ ಮೇಲೆ ಒತ್ತಡ ಸೃಷ್ಟಿಯಾಗುವುದು ಸಹಜ. ತೀವ್ರ ಗತಿಯಲ್ಲಿ ಹೆಚ್ಚುತ್ತಿರುವ ಸೋಂಕು ಈ ಮೂಲಸೌಕರ್ಯಕ್ಕೂ ಸವಾಲು ತಂದೊಡ್ಡಿದೆ. ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ಹಾಸಿಗೆಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು, ಕೋವಿಡ್ ಆರೈಕೆ ಕೇಂದ್ರಗಳ ಮೂಲಕ ಹೆಚ್ಚುವರಿ ಹಾಸಿಗೆಗಳನ್ನು ಒದಗಿಸುವುದು ಹಾಗೂ ತೀವ್ರ ನಿಗಾ ಘಟಕ (ಐಸಿಯು) ಹಾಸಿಗೆಗಳ ಸಂಖ್ಯೆ ಹೆಚ್ಚಳ ಮಾಡುವ ಬಗ್ಗೆ ಸರ್ಕಾರದ ಮಟ್ಟದಲ್ಲಿ ಚಿಂತನೆ ನಡೆದಿದೆ’ ಎಂದರು.

‘ವೈದ್ಯಕೀಯ ಸಿಬ್ಬಂದಿ ಸಂಖ್ಯೆ ಹೆಚ್ಚಳಕ್ಕೂ ಕ್ರಮ ಕೈಗೊಳ್ಳಲಾಗುತ್ತಿದೆ. ಬೇರೆ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು ಹಾಗೂ ಕಾರ್ಪೊರೇಟ್ ಸಂಸ್ಥೆಗಳ ಜೊತೆ ಸೇರಿ ಕೆಲಸ ಮಾಡಲಿದ್ದೇವೆ. ಆರೋಗ್ಯ ಸೇವೆಯಲ್ಲಿ ಪರಿಣತಿ ಇರುವವರು ದಯವಿಟ್ಟು ಬಿಬಿಎಂಪಿಯನ್ನು ಸಂಪರ್ಕಿಸಿ. ಕೋವಿಡ್ ಸಂಗ್ರಾಮದಲ್ಲಿ ಕೈಜೋಡಿಸಿ’ ಎಂದು ಮನವಿ ಮಾಡಿದರು.

‘ಕೋವಿಡ್ ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂತಹ ಕಾಯಿಲೆ. ಜನರು ಓಡಾಟ ಹಾಗೂ ಒಡನಾಟ ಕಡಿಮೆ ಮಾಡಿದರೆ ಮಾತ್ರ ಕೊರೊನಾ ಸೋಂಕು ಹರಡುವುದನ್ನು ನಿಯಂತ್ರಿಸಬಹುದು’ ಎಂದರು.

‘ಸೋಂಕು ನಿಯಂತ್ರಣಕ್ಕೆ ಕೋವಿಡ್ ಕರ್ಫ್ಯೂ ಪರಿಣಾಮಕಾರಿಯಾಗಬಲ್ಲುದು. ಜನರೂ ಸಹಕರಿಸಬೇಕು. ಸೋಂಕು ಲಕ್ಷಣಗಳಿದ್ದರೆ ತಕ್ಷಣವೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು’ ಎಂದು ಮನವಿ ಮಾಡಿದರು.

| ಕೋವಿಡ್ ಚಿಕಿತ್ಸೆ: ಹಾಸಿಗೆ ಲಭ್ಯತೆ | | | |
|---|---|---|---|
| ಆಸ್ಪತ್ರೆ ವಿಧ | ಬಿಬಿಎಂಪಿಗೆ ಹಂಚಿಕೆ ಆಗಿರುವುದು | ಭರ್ತಿಯಾಗಿರುವುದು | ಲಭ್ಯ ಇರುವುದು |
| ಸರ್ಕಾರಿ ವೈದ್ಯಕೀಯ ಕಾಲೇಜು | 790 | 770 | 20 |
| ಸರ್ಕಾರಿ ಆಸ್ಪತ್ರೆ | 861 | 812 | 49 |
| ಖಾಸಗಿ ವೈದ್ಯಕೀಯ ಕಾಲೇಜುಗಳು | 4,587 | 3,368 | 1,219 |
| ಖಾಸಗಿ ಆಸ್ಪತ್ರೆಗಳು | 3,276 | 2,673 | 603 |
| ಒಟ್ಟು | 9,514 | 7,623 | 1,891 |

### ಕೋವಿಡ್ ಆರೈಕೆ ಕೇಂದ್ರ: ಸಾವಿರ ಹಾಸಿಗೆ ಲಭ್ಯ

ಬಿಬಿಎಂಪಿಯು ಕೋವಿಡ್ ಆರೈಕೆ ಕೇಂದ್ರಗಳಲ್ಲಿನ ಹಾಸಿಗೆ ಸಾಮರ್ಥ್ಯವನ್ನು 1661ಕ್ಕೆ ಹೆಚ್ಚಳ ಮಾಡಿದೆ. ಇವುಗಳಲ್ಲಿ 546 ಹಾಸಿಗೆಗಳು ಭರ್ತಿಯಾಗಿವೆ. ಸೋಂಕು ಲಕ್ಷಣ ಇಲ್ಲದ ರೋಗಿಗಳ ಆರೈಕೆಗೆ 1115 ಹಾಸಿಗೆಗಳು ಲಭ್ಯ ಇವೆ.

## ಕೋವಿಡ್ ಹೋರಾಟಕ್ಕೆ ಸೇನಾ ನೆರವು: ಟ್ವೀಟ್ ಅಭಿಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ಇಡೀ ಬೆಂಗಳೂರು ಕೋವಿಡ್‌ನಿಂದ ತತ್ತರಿಸುತ್ತಿದ್ದು, ಈ ಪರಿಸ್ಥಿತಿಯಲ್ಲಿ ವಾಯುಪಡೆ ಹಾಗೂ ಸೇನೆಯ ಆಸ್ಪತ್ರೆಗಳು, ಆರೋಗ್ಯ ಕೇಂದ್ರಗಳನ್ನು ಬಳಸಿಕೊಂಡು, ನಗರದಾದ್ಯಂತ ಟ್ರಯಾಜ್ ಕೇಂದ್ರಗಳನ್ನು ತೆರೆಯಬೇಕು’ ಎಂಬ ಹಕ್ಕೊತ್ತಾಯದ ಅಭಿಯಾನ ಟ್ವಿಟರ್‌ನಲ್ಲಿ ಶುರುವಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ‘ವೈಟ್‌ಫೀಲ್ಡ್ ರೈಸಿಂಗ್’ ಸಂಘಟನೆ, ‘ಸೇನೆಯ ‘ಟ್ರಯಾಜ್ ಸೆಂಟರ್’ಗಳನ್ನು (ರೋಗದ ತೀವ್ರತೆಯ ಆಧಾರದಲ್ಲಿ ಯಾರಿಗೆ ಆದ್ಯತೆ ನೀಡಬೇಕು ಎಂದು ನಿರ್ಧರಿಸಿ ಚಿಕಿತ್ಸೆ ನೀಡುವ ಕೇಂದ್ರಗಳು) ಈ ಆರೋಗ್ಯ ಬಿಕ್ಕಟ್ಟಿನ ಸಮಯದಲ್ಲಿ ಬಳಸಿಕೊಳ್ಳುವ ಕುರಿತು ರಾಜ್ಯ ಸರ್ಕಾರ ಮನವಿ ಮಾಡಬಹುದಲ್ಲವೇ’ ಎಂದು ಆರೋಗ್ಯ ಸಚಿವ ಕೆ.ಸುಧಾಕರ್ ಹಾಗೂ ಪಾಲಿಕೆ ಮುಖ್ಯ ಆಯುಕ್ತರನ್ನು ಟ್ಯಾಗ್ ಮೂಲಕ ಸಲಹೆ ನೀಡಿದೆ.

‘ಬೆಂಗಳೂರಿನ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹಾಸಿಗೆಗಳು ಹಾಗೂ ಆಮ್ಲಜನಕದ ಕೊರತೆ ಇದ್ದು, ಪರಿಸ್ಥಿತಿ ಕೈಮೀರಿದೆ. ಕೋವಿಡೇತರ ರೋಗಿಗಳಿಗೂ ಸೂಕ್ತ ಚಿಕಿತ್ಸೆ ಸಿಗು ತ್ತಿಲ್ಲ. ತುರ್ತು ಆರೋಗ್ಯ ಸೇವೆಗೆ ಸೇನೆಯ ಟ್ರಯಾಜ್ ಕೇಂದ್ರಗಳೇ ಸೂಕ್ತ. ಅಲ್ಲಿ ರೋಗಿಯ ಸ್ಥಿತಿಗತಿ ತುರ್ತಾಗಿ ಪತ್ತೆಯಾಗುತ್ತದೆ. ಇಂತಹ ಕೇಂದ್ರಗಳನ್ನು ನಗರದಾದ್ಯಂತ ತೆರೆಯುವುದರಿಂದ ರೋಗಿಗಳ ಪರದಾಟ ಕಡಿಮೆಯಾಗಲಿದೆ. ಇದಕ್ಕೆ ನುರಿತ ವೈದ್ಯಕೀಯ ಸಿಬ್ಬಂದಿಯನ್ನು ಹೊಂದಿರುವ ವಾಯುಪಡೆ ಹಾಗೂ ಸೇನೆಗೆ ಸರ್ಕಾರ ಮನವಿ ಮಾಡಬೇಕು’ ಎಂದು ವೈಟ್‌ಫೀಲ್ಡ್ ರೈಸಿಂಗ್‌ನ ಸದಸ್ಯರೊಬ್ಬರು ವಿವರಿಸಿದರು.

ಟ್ವಿಟರ್‌ನಲ್ಲಿ ಈ ಅಭಿಯಾನಕ್ಕೆ ದನಿಗೂಡಿಸಿರುವ ಹಲವರು, ‘ಕೋವಿಡ್ ಸಹ ಒಂದು ಯುದ್ಧ. ದೇಶ ವನ್ನು ಹೊರದಾಳಿಯಿಂದ ರಕ್ಷಿಸುವ ಸೇನೆ, ಈ ಕೊರೊನಾ ಯುದ್ಧದಲ್ಲಿ ಹೋರಾಡಲು ಜನರ ಸಹಾಯಕ್ಕೆ ಧಾವಿಸಬೇಕು’ ಎಂದು ಮನವಿ ಮಾಡಿದ್ದಾರೆ.

## ಜಿಲ್ಲಾ ಕಾರಾಗೃಹ; 39 ಮಂದಿಗೆ ಕೋವಿಡ್ ಸೋಂಕು ದೃಢ

**ಬಾಗಲಕೋಟೆ:** ಇಲ್ಲಿನ ನವನಗರದ ಜಿಲ್ಲಾ ಕೇಂದ್ರ ಕಾರಾಗೃಹದಲ್ಲಿ 39 ಕೈದಿಗಳಿಗೆ ಹಾಗೂ ಸಿಬ್ಬಂದಿಯೊಬ್ಬರಿಗೆ ಸೋಮವಾರ ಕೋವಿಡ್ ಸೋಂಕು ದೃಢಪಟ್ಟಿದೆ.

ಕಾರಾಗೃಹದಲ್ಲಿ 9 ಮಹಿಳೆಯರು ಸೇರಿದಂತೆ 164 ಮಂದಿ ಕೈದಿಗಳು ಇದ್ದಾರೆ. ಅವರಲ್ಲಿ ಪುರುಷರ ಬ್ಯಾರಕ್‌ನಲ್ಲಿ ಇರುವ ವರಿಗೆ ಕೋವಿಡ್ ಸೋಂಕು ಕಾಣಿಸಿಕೊಂಡಿದೆ.

‘ಕಾರಾಗೃಹದಲ್ಲಿ ಇದ್ದ ಕೈದಿಯೊಬ್ಬರನ್ನು ಏ. 19ರಂದು ಅಮೀನಗಡ ಪೊಲೀಸರು ಕಸ್ಟಡಿಗೆ ಪಡೆದಿದ್ದರು. ವಿಚಾರಣೆ ನಂತರ ಕೈದಿಯನ್ನು ಏ.24ರಂದು ವಾಪಸ್ ಜೈಲಿಗೆ ಕರೆತಂದು ಬಿಟ್ಟಿದ್ದರು. ಈ ವೇಳೆ ಕೋವಿಡ್ ರ‍್ಯಾಪಿಡ್ ಪರೀಕ್ಷೆ ಮಾಡಿಸಲಾಗಿದ್ದು, ವರದಿ ನೆಗೆಟಿವ್ ಬಂದಿತ್ತು. ಹೀಗಾಗಿ ಜೈಲಿನೊಳಗೆ ಪ್ರವೇಶ ಕಲ್ಪಿಸಿದ್ದೆವು. ಆದರೆ ಆರ್‌ಟಿಪಿಸಿಆರ್ ವರದಿಯಲ್ಲಿ ಪಾಸಿಟಿವ್ ಬಂದಿದೆ. ಹೀಗಾಗಿ ಕಾರಾಗೃಹದಲ್ಲಿದ್ದ ಎಲ್ಲ ಕೈದಿಗಳು ಹಾಗೂ ಸಿಬ್ಬಂದಿಯನ್ನು ಕೋವಿಡ್ ತಪಾಸಣೆಗೆ ಒಳಪಡಿಸಲಾಯಿತು. ಈ ವೇಳೆ ಇನ್ನಷ್ಟು ಮಂದಿಗೆ ಸೋಂಕು ದೃಢಪಟ್ಟಿದೆ’ ಎಂದು ಕಾರಾಗೃಹದ ಸೂಪರಿಟೆಂಡೆಂಟ್ ದತ್ತಾತ್ರೀ ಆರ್. ಮೇಧಾ ’ಪ್ರಜಾವಾಣಿ‘ಗೆ ತಿಳಿಸಿದರು.

‘ಕೋವಿಡ್ ದೃಢಪಟ್ಟ ಯಾವುದೇ ಕೈದಿಗೂ ರೋಗ ಲಕ್ಷ ಣಗಳು ಇಲ್ಲ. ಎಲ್ಲರೂ ಆರೋಗ್ಯವಾಗಿದ್ದಾರೆ. ಅವರಿಗೆ ಅಲ್ಲಿಯೇ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗಿದೆ. ಸೋಂಕು ದೃಢಪಡದ ಕೈದಿಗಳನ್ನು ಪ್ರತ್ಯೇಕವಾಗಿ ಇಡಲಾಗಿದೆ’ ಎಂದರು.

‘ಜೀವಾನಿಲ’ ಕಸ್ತೂರ ಬಾ ನಗರ ಬಳಿಯ ಕರಿತಿಮ್ಮ ಹಳ್ಳಿಯಲ್ಲಿರುವ ಯೂನಿಟಿ ಗ್ಯಾಸ್ ಕಂಪನಿಯಲ್ಲಿ ಸೋಮವಾರ ಆಮ್ಲಜನಕವನ್ನು ಮರುಪೂರಣ ಮಾಡುವಲ್ಲಿ ನಿರತನಾಗಿದ್ದ ಸಿಬ್ಬಂದಿ –ಪ್ರಜಾವಾಣಿ ಚಿತ್ರ

### ‘ಋತುಸ್ರಾವದ ಅವಧಿಯಲ್ಲೂ ಲಸಿಕೆ ಪಡೆಯಬಹುದು’

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಮಾಸಿಕ ಋತುಸ್ರಾವದ ಸಂದರ್ಭದಲ್ಲೂ ಮಹಿಳೆಯರು ಕೋವಿಡ್–19 ಲಸಿಕೆ ತೆಗೆದುಕೊಳ್ಳಬಹುದು. ಇದು ಸುರಕ್ಷಿತ’ ಎಂದು ಕೇಂದ್ರ ಸರ್ಕಾರದ ಹಿರಿಯ ಆರೋಗ್ಯ ಸಲಹೆಗಾರರು ತಿಳಿಸಿದ್ದಾರೆ.

’ಮಾಸಿಕ ಋತುಸ್ರಾವದ ಸಂದರ್ಭದಲ್ಲೂ ಲಸಿಕೆ ಪಡೆಯಬಹುದು. ಇದನ್ನು ಮುಂದೂಡುವುದಕ್ಕೆ ಕಾರಣಗಳು ಇಲ್ಲ’ ಎಂದು ನೀತಿ ಆಯೋಗದ ಸದಸ್ಯ(ಆರೋಗ್ಯ) ವಿ.ಕೆ. ಪೌಲ್ ಹೇಳಿದ್ದಾರೆ. ಈ ಬಗ್ಗೆ ತಪ್ಪು ಮಾಹಿತಿಗೆ ಕಿವಿಗೊಡಬಾರದು ಎಂದೂ ಅವರು ಕೋರಿದ್ದಾರೆ.

### ಕೊರೊನಾ ಸ್ಪಂದನ

## ನಿಮ್ಮ ನೋವಿಗೆ ನಮ್ಮ ಧ್ವನಿ

ಕೊರೊನಾ ಕಾಲದಲ್ಲಿ ನೀವು ಅನುಭವಿಸುತ್ತಿರುವ ಸಂಕಷ್ಟ, ನೋವುಗಳಿಗೆ ನಿಮ್ಮೆಲ್ಲರ ‘ಪ್ರಜಾವಾಣಿ’ ಧ್ವನಿಯಾಗಲಿದೆ.

ಕೋವಿಡ್ ಕಾಲದಲ್ಲಿ ನೀವು ಅಥವಾ ನಿಮ್ಮ ಸಂಬಂಧಿಗಳು, ಸ್ನೇಹಿತರು ಹಾಸಿಗೆ ಸಿಗದೇ, ಆಕ್ಸಿಜನ್ ಸಿಗದೇ ಪರದಾಡಿದ್ದರೆ, ಆಂಬುಲೆನ್ಸ್‌ಗಾಗಿ ಗೋಳಾಡಿದ್ದರೆ, ಆಸ್ಪತ್ರೆಗೆ ದಾಖಲಾಗಿಯೂ ಚಿಕಿತ್ಸೆ, ಊಟ–ನೀರು ಸಿಗದೇ ಇದ್ದರೆ ನೋವಿನ ಕಥನವನ್ನು ನಮಗೆ ಬರೆದು ಕಳುಹಿಸಿ. ನೀವು ಉಂಡ ನೋವನ್ನು ಕಂಡಾದರೂ ಸರ್ಕಾರ ಉಳಿದವರಿಗೆ ಸೂಕ್ತ ವ್ಯವಸ್ಥೆ ಮಾಡಬಹುದು. ಆಸ್ಪತ್ರೆಗಳು ತಮ್ಮ ಕಾಯಕವೇ ಆಗಿರುವ ಕರುಣೆ–ಅನುಕಂಪ, ಚಿಕಿತ್ಸಕ ಸೇವೆಯನ್ನು ಒದಗಿಸಬಹುದು ಎಂಬ ವಿಶ್ವಾಸ ನಮ್ಮದು.

### ನೀವು ಮಾಡಬೇಕಾಗಿರುವುದು ಇಷ್ಟೇ

ನಿಮ್ಮ ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ನಿಮ್ಮದೊಂದು ಭಾವಚಿತ್ರವನ್ನು ಕಳುಹಿಸಿ. ನಿಮ್ಮ ಬರಹ ಸ್ಪಷ್ಟ, ನಿಖರವಾಗಿ ಇರಲಿ. ಗರಿಷ್ಠ ಮಿತಿ 150 ಪದಗಳು. ದುರುದ್ದೇಶ ಅಥವಾ ಕಲ್ಪಿತ–ಕೇಳಿಸಿಕೊಂಡ ಆರೋಪಗಳು ಬೇಡ. ನಿಮ್ಮದೇ ಸ್ವಂತ ಅನುಭವ ಆಗಿದ್ದರೆ ಮಾತ್ರ ಬರೆದು ಕಳಿಸಿ.

**ವಾಟ್ಸ್ ಆ್ಯಪ್ ಸಂಖ್ಯೆ: 9606038256**

## ಮೋದಿ–ಬೈಡನ್ ದೂರವಾಣಿ ಕರೆ: ಲಸಿಕೆ ಕಚ್ಚಾ ಸಾಮಗ್ರಿ ಪೂರೈಕೆ ಭರವಸೆ

**ನವದೆಹಲಿ (ಪಿಟಿಐ):** ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದು, ಕೋವಿಶೀಲ್ಡ್ ಲಸಿಕೆ ತಯಾರಿಕೆಗೆ ಅಗತ್ಯವಾದ ಕಚ್ಚಾ ಸಾಮಗ್ರಿ ಪೂರೈಸುವ ಭರವಸೆ ನೀಡಿದ್ದಾರೆ.

ವೆಂಟಿಲೇಟರ್‌ಗಳು, ಥೆರೊಪೆಟಿಕ್ಸ್‌ನಂತಹ ಸಾಮಗ್ರಿಗಳನ್ನೂ ತ್ವರಿತವಾಗಿ ಪೂರೈಸುವುದಾಗಿ ಬೈಡನ್ ಭರವಸೆ ನೀಡಿದರು ಎಂದು ಪ್ರಧಾನಿ ಕಚೇರಿಯ ಪ್ರಕಟಣೆ ತಿಳಿಸಿದೆ.

ಭಾರತದಲ್ಲಿ ಎದುರಾಗಿರುವ ಎರಡನೇ ಅಲೆಯ ಕೋವಿಡ್ ಪರಿಸ್ಥಿತಿಯನ್ನು ನಿಭಾಯಿಸುವ ನಿಟ್ಟಿನಲ್ಲಿ ಉಭಯ ನಾಯಕರು ಚರ್ಚಿಸಿದರು. ಈ ನಿಟ್ಟಿನಲ್ಲಿ ಲಸಿಕೆ ಮಾತ್ರವಲ್ಲದೆ, ಇತರ ಔಷಧಗಳು, ವೈದ್ಯಕೀಯ ಉಪಕರಣಗಳನ್ನು ತ್ವರಿತವಾಗಿ ಭಾರತಕ್ಕೆ ರವಾನಿಸಬೇಕಾದ ಅಗತ್ಯವನ್ನು ಮೋದಿ ಅವರು ವಿವರಿಸಿದರು.

ವಿಶ್ವ ವ್ಯಾಪಾರ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಬೌದ್ಧಿಕ ಹಕ್ಕುಸ್ವಾಮ್ಯ ಸಂಬಂಧಿತ ವ್ಯಾಪಾರ ವಿಷಯಗಳ (ಟಿಆರ್‌ಐಪಿಎಸ್) ನಿಯಮಗಳನ್ನು ಸಡಿಲಗೊಳಿಸಿ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ತ್ವರಿತವಾಗಿ ಲಸಿಕೆಗಳು ಮತ್ತು ಔಷಧಗಳು ಲಭಿಸುವಂತೆ ಮಾಡುವ ನಿಟ್ಟಿನಲ್ಲಿ ಭಾರತ ಕೈಗೊಂಡಿರುವ ಪ್ರಯತ್ನಗಳನ್ನು ಮೋದಿ ಅವರು ಬೈಡನ್ ಅವರಿಗೆ ಮನವರಿಕೆ ಮಾಡಿದರು.

ಈ ಸಂಕಷ್ಟದ ಕಾಲದಲ್ಲಿ ಭಾರತಕ್ಕೆ ತ್ವರಿತವಾಗಿ ನೆರವು ನೀಡಲು ಮುಂದಾಗಿರುವ ಅಮೆರಿಕಕ್ಕೆ ಪ್ರಧಾನಿ ಅವರು ಧನ್ಯವಾದ ಹೇಳಿದರು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಅಂತ್ಯಕ್ರಿಯೆಗೆ ಬಿಬಿಎಂಪಿಯಲ್ಲಿ ನೋಂದಣಿ ಕಡ್ಡಾಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕೆ ಮೃತದೇಹಗಳನ್ನು ವಿದ್ಯುತ್ ಚಿತಾಗಾರಗಳಿಗೆ ತರುವ ಮುನ್ನ ಬಿಬಿಎಂಪಿಯಲ್ಲಿ ನೋಂದಣಿ ಮಾಡಿಸಬೇಕಿದೆ. ನೋಂದಣಿ ಮಾಡಿಸಲು ಹಾಗೂ ಕೋವಿಡ್‌ನಿಂದ ಸತ್ತವರ ಮೃತದೇಹ ಸಾಗಣೆ ವಾಹನದ ಸೌಕರ್ಯ ಕಲ್ಪಿಸಲು ಸಹಾಯವಾಣಿಯನ್ನು ಬಿಬಿಎಂಪಿ ಆರಂಭಿಸಿದೆ.

‘ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಗೆ ಬರುವ ಸುಮನಹಳ್ಳಿ, ಕೆಂಗೇರಿ ಮತ್ತು ಪೀಣ್ಯ ವಿದ್ಯುತ್ ಚಿತಾಗಾರಗಳನ್ನು ಕೋವಿಡ್ ಸೋಂಕಿನಿಂದ ಮೃತರಾದವರ ಅಂತ್ಯಕ್ರಿಯೆ ಮಾಡಲು ಮೀಸಲಿಡಲಾಗಿದೆ. ಸಹಾಯವಾಣಿಗೆ ಕರೆ ಮಾಡಿ ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಹೆಸರು ನೋಂದಣಿ ಮಾಡುವುದು ಕಡ್ಡಾಯ. ಹೆಸರು ನೋಂದಣಿ ಮಾಡದೆಯೇ ಮೃತದೇಹಗಳ ಅಂತ್ಯಕ್ರಿಯೆಗೆ ಅವಕಾಶ ಇರುವುದಿಲ್ಲ’ ಎಂದು ಆರ್.ಆರ್.ನಗರ ವಲಯದ ಜಂಟಿ ಆಯುಕ್ತ ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಬಿಬಿಎಂಪಿಯಲ್ಲಿ ನೋಂದಣಿ ಮಾಡಿಕೊಳ್ಳದೆಯೇ ಕೆಲವರು ಮೃತದೇಹಗಳನ್ನು ಚಿತಾಗಾರಕ್ಕೆ ತರುತ್ತಿದ್ದಾರೆ. ಇದರಿಂದ ನೋಂದಣಿ ಮಾಡಿಸಿದ ಮೃತದೇಹಗಳ ಅಂತ್ಯಕ್ರಿಯೆಯೂ ವಿಳಂಬವಾಗುತ್ತಿದೆ. ಜನರು ಸಹಕರಿಸಬೇಕು’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಸಹಾಯವಾಣಿ:** 080–22493202, 080–22493203, 8792162736

### ಕೋವಿಡ್ ಚಿಕಿತ್ಸೆಗೆ ಗುರುತಿಸಿರುವ ಆಸ್ಪತ್ರೆಗಳು–ನೋಡಲ್ ಅಧಿಕಾರಿಗಳು

| ಆಸ್ಪತ್ರೆ ಹೆಸರು | ನೋಡಲ್ ಅಧಿಕಾರಿ | ಸಂಪರ್ಕ ಸಂಖ್ಯೆ |
|---|---|---|
| **ಪೂರ್ವ ವಲಯ–1** | | |
| ಮಣಿಪಾಲ್, ಎಚ್.ಎ.ಎಲ್. ಏರ್‌ಪೋರ್ಟ್ ರಸ್ತೆ | ರವೀಂದ್ರ | 9845444054 |
| ಡಾ.ಬಿ.ಆರ್.ಅಂಬೇಡ್ಕರ್ ವೈದ್ಯಕೀಯ ಕಾಲೇಜು, ಕಾಡುಗೊಂಡನಹಳ್ಳಿ | ವಿ.ಶಿವಕುಮಾರ್ | 9449844607 |
| ಸೇಂಟ್ ಫಿಲೋಮಿನಾ, ವಿವೇಕನಗರ | ರವೀಂದ್ರ | 9845444054 |
| ಚಿನ್ಮಯ ಮಿಷನ್, ಸಿ.ಎಂ.ಎಚ್.ರಸ್ತೆ, ಇಂದಿರಾನಗರ | ವಿ.ಶಿವಕುಮಾರ್ | 9449844607 |
| ಮೆಡಿಹೋಪ್ ಆಸ್ಪತ್ರೆ, ಮಲ್ಲೇಶ್‌ಪಾಳ್ಯ ರಸ್ತೆ, ಹೊಸ ತಿಪ್ಪಸಂದ್ರ | ವಿ.ಶಿವಕುಮಾರ್ | 9449844607 |
| ನ್ಯೂ ಜನಪ್ರಿಯ ಓ.ಎಂ.ಬಿ.ಆರ್. ಲೇಔಟ್, ಬಾಣಸವಾಡಿ | ವಿ.ಶಿವಕುಮಾರ್ | 9449844607 |
| ಸ್ಪೆಷಲಿಸ್ಟ್ ಹೆಲ್ತ್ ಸಿಸ್ಟಂ, ಎಚ್.ಬಿ.ಆರ್. ಲೇಔಟ್, ಕಲ್ಯಾಣನಗರ | ರವೀಂದ್ರ | 9845444054 |
| ದಿ ಬೆಂಗಳೂರು ಬ್ಯಾಪಿಸ್ಟ್, ಬಳ್ಳಾರಿ ರಸ್ತೆ, ವಿನಾಯಕನಗರ | ಪುರುಷೋತ್ತಮ್ | 9845444013 |
| **ಪೂರ್ವವಲಯ–2** | | |
| ಫೋರ್ಟಿಸ್, ವಸಂತನಗರ | ಹರಿನಾಥ್ | 9845444078 |
| ವಿಕ್ರಂ, ಮಿಲ್ಲರ್ಸ್ ರಸ್ತೆ, | ಹರಿನಾಥ್ | 9845444078 |
| ಭಗವಾನ್ ಮಹಾವೀರ್ ಜೈನ್, ವಸಂತನಗರ | ಹರಿನಾಥ್ | 9845444078 |
| ಸೇಂಟ್ ಮಾರ್ಥಾಸ್, ನೃಪತುಂಗ ರಸ್ತೆ | ಹರಿನಾಥ್ | 9845444078 |
| ಶೀಫಾ, ಕ್ವೀನ್ಸ್ ರಸ್ತೆ | ಹರಿನಾಥ್ | 9845444078 |
| ಎಚ್.ಬಿ.ಎಸ್.ಆಸ್ಪತ್ರೆ ಟ್ರಸ್ಟ್, ಶಿವಾಜಿನಗರ | ಕೃಷ್ಣ ಪ್ರಸಾದ್ | 9449844606 |
| ರೇಗಲ್, ತಣಿಸಂದ್ರ ಮುಖ್ಯರಸ್ತೆ, ಚೊಕ್ಕನಹಳ್ಳಿ | ಸುಹಾಸ್ | 9740984166 |
| ಸಂತೋಷ್, ಪುಲಕೇಶಿನಗರ | ಲಕ್ಷ್ಮಿಕಾಮತ್ | 8277893904 |
| **ಮಹದೇವಪುರ ವಲಯ** | | |
| ಸಕ್ರಾ, ದೇವರಬೀಸನಹಳ್ಳಿ | ಎಚ್.ಡಿ.ಚನ್ನಕೇಶವ | 8277893904 |
| ಯಶೋಮತಿ, ವರ್ತೂರು ರಸ್ತೆ | ಮಿರ್ಜಾ ಅನ್ವರ್ | 9741969945 |
| ವೈದೇಹಿ, ಇಪಿಐಪಿ ಕೈಗಾರಿಕಾ ಪ್ರದೇಶ | ಮಿರ್ಜಾ ಅನ್ವರ್ | 9741969945 |
| ಕೊಲಂಬಿಯಾ ಏಷ್ಯಾ, ವರ್ತೂರು ಕೋಡಿ | ಮಿರ್ಜಾ ಅನ್ವರ್ | 9741969945 |
| ಕೊಲಂಬಿಯಾ ಏಷ್ಯಾ, ಸರ್ಜಾಪುರ ರಸ್ತೆ | ಮಿರ್ಜಾ ಅನ್ವರ್ | 9741969945 |
| ಎಂ.ವಿ.ಜೆ. ವೈದ್ಯಕೀಯ ಕಾಲೇಜು, ಹೊಸಕೋಟೆ | ಶಾಂತಮಲ್ಲಪ್ಪ | 9449844825 |
| ರೈನ್ ಬೋ ಮಕ್ಕಳ ಆಸ್ಪತ್ರೆ, ಮಾರತಹಳ್ಳಿ | ಎಚ್.ಡಿ.ಚನ್ನಕೇಶವ | 8277893904 |
| ಮಣಿಪಾಲ್, ಇಪಿಐಪಿ ಕೈಗಾರಿಕಾ ಪ್ರದೇಶ, ವೈಟ್‌ಫೀಲ್ಡ್ | ಶಾಂತಮಲ್ಲಪ್ಪ | 9449844825 |
| ಈಸ್ಟ್ ಪಾಯಿಂಟ್ ವೈದ್ಯಕೀಯ ವಿಜ್ಞಾನ ಕಾಲೇಜು, ಬಿದರಹಳ್ಳಿ | ಶಾಂತಮಲ್ಲಪ್ಪ | 9449844825 |
| **ಪಶ್ಚಿಮ ವಲಯ** | | |
| ಅಪೊಲೊ, ಶೇಷಾದ್ರಿಪುರ | ಕೃಷ್ಣ ಪ್ರಸಾದ್ | 9449844606 |
| ಕೊಲಂಬಿಯಾ ಏಷ್ಯಾ ರೆಫರಲ್, ಬ್ರಿಗೇಡ್ ಗೇಟ್ ವೇ, ಮಲ್ಲೇಶ್ವರ | ಕೃಷ್ಣ ಪ್ರಸಾದ್ | 9449844606 |
| ನಂದನ ಹೆಲ್ತ್ ಕೇರ್ (ಕಾಡೆ), ಮೋದಿ ಆಸ್ಪತ್ರೆ ಹತ್ತಿರ | ಕೃಷ್ಣ ಪ್ರಸಾದ್ | 9449844606 |
| ಎನ್.ಯು ಆಸ್ಪತ್ರೆ, ಇಸ್ಕಾನ್ ಹತ್ತಿರ, ರಾಜಾಜಿನಗರ | ಕೃಷ್ಣ ಪ್ರಸಾದ್ | 9449844606 |
| ಸೇಂಟ್ ಥೆರೇಸಾ, ನಾಗಪುರ ಎರಡನೇ ಹಂತ, 10ನೇ ಅಡ್ಡ ರಸ್ತೆ | ಎಚ್.ಎಸ್.ರವೀಂದ್ರ | 7760993676 |
| ಮಲ್ಲಿಗೆ, ಕ್ರೆಸೆಂಟ್ ರಸ್ತೆ | ಎಚ್.ಎಸ್.ರವೀಂದ್ರ | 7760993676 |
| **ದಕ್ಷಿಣ ವಲಯ** | | |
| ಕಿಮ್ಸ್, ಕೆ.ಆರ್. ರಸ್ತೆ, ವಿಶ್ವೇಶ್ವರಪುರ | ರಾಜೀವ್ | 9945518971 |
| ರಂಗದೊರೆ ಆಸ್ಪತ್ರೆ, 1ನೇ ಅಡ್ಡ ರಸ್ತೆ, ಶಂಕರಪುರ | ಎಚ್.ಎಸ್.ರವೀಂದ್ರ | 7760993676 |
| ಸಾಗರ್ (ಬನಶಂಕರಿ), ಕುಮಾರಸ್ವಾಮಿ ಲೇಔಟ್ | ರಾಜೀವ್ | 9945518971 |
| ಸಾಗರ್ (ಜಯನಗರ), ತಿಲಕ್‌ನಗರ | ಎಚ್.ಎಸ್.ರವೀಂದ್ರ | 7760993676 |
| ಅಪೊಲೊ (ಜಯನಗರ), ಮಾಧವನ್ ಪಾರ್ಕ್ ಸರ್ಕಲ್ ಹತ್ತಿರ | ಎಚ್.ಎಸ್.ರವೀಂದ್ರ | 7760993676 |
| ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜು, ಸರ್ಜಾಪುರ ರಸ್ತೆ, ಜಾನ್ ನಗರ | ಎಚ್.ಎಸ್.ರವೀಂದ್ರ | 7760993676 |
| **ರಾಜರಾಜೇಶ್ವರಿ (ಆರ್.ಆರ್) ನಗರ ವಲಯ** | | |
| ಬಿಜಿಎಸ್ ವೈದ್ಯಕೀಯ ಕಾಲೇಜು, ಉತ್ತರಹಳ್ಳಿ ಮುಖ್ಯರಸ್ತೆ, ಕೆಂಗೇರಿ | ಅಶೋಕ್ ಗೌಡ | 9591987962 |
| ರಾಜರಾಜೇಶ್ವರಿ ವೈದ್ಯಕೀಯ ಕಾಲೇಜು, ಕಂಬಿಪುರ, ಮೈಸೂರು ರಸ್ತೆ | ಅಶೋಕ್ ಗೌಡ | 9591987962 |
| ಎಸ್.ಎಸ್.ಎನ್.ಎಂ.ಸಿ ಆಸ್ಪತ್ರೆ, ಎಚ್‌ಬಿಸಿಎಸ್ ಲೇಔಟ್, ಆರ್.ಆರ್. ನಗರ | ಅಶೋಕ್ ಗೌಡ | 9591987962 |
| **ಬೊಮ್ಮನಹಳ್ಳಿ ವಲಯ** | | |
| ಆಕ್ಸ್‌ಫರ್ಡ್ ವೈದ್ಯಕೀಯ ಕಾಲೇಜು, ಹೊಸೂರು ಮುಖ್ಯರಸ್ತೆ | ತಿಮ್ಮೇಗೌಡ | 9448279027 |
| ನಾರಾಯಣ ಹೃದಯಾಲಯ, ಬೊಮ್ಮಸಂದ್ರ | ನಾಗೇಂದ್ರ | 9535158887 |
| ಅಪೊಲೊ, ಬನ್ನೇರುಘಟ್ಟ | ನಾಗೇಂದ್ರ | 9535158887 |
| ಫೋರ್ಟಿಸ್, ಬನ್ನೇರುಘಟ್ಟ ರಸ್ತೆ | ನಾಗೇಂದ್ರ | 9535158887 |
| **ಯಲಹಂಕ ವಲಯ** | | |
| ಕೊಲಂಬಿಯಾ ಏಷ್ಯಾ, ಬಳ್ಳಾರಿ ರಸ್ತೆ | ದೀಪಕ್ | 9845444139 |
| ಆಸ್ಟರ್ ಸಿ.ಎಂ.ಐ. ಆಸ್ಪತ್ರೆ, ಸಹಕಾರನಗರ | ದೀಪಕ್ | 9845444139 |
| ಆಕಾಶ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ದೇವನಹಳ್ಳಿ | ದೀಪಕ್ | 9845444139 |
| **ದಾಸರಹಳ್ಳಿ ವಲಯ** | | |
| ಪೀಪಲ್ ಟ್ರೀ, ಗೊರಗುಂಟೆ ಪಾಳ್ಯ | ಸುಹಾಸ್ | 9740984166 |
| ಸಪ್ತಗಿರಿ, ಹೆಸರಘಟ್ಟ ರಸ್ತೆ | ಲಕ್ಷ್ಮೀಶ | 8277893904 |
| ಎಂ.ಎಸ್.ರಾಮಯ್ಯ, ಮತ್ತಿಕೆರೆ | ಪುರುಷೋತ್ತಮ್ | 9845444013 |

### ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ



ಮಂಗಳವಾರ • ಏಪ್ರಿಲ್ 27, 2021 ಪ್ರಜಾವಾಣಿ

ರಾಜಾಜಿನಗರ, ವಿಜಯನಗರ, ಯಶವಂತಪುರದಲ್ಲಿ ಸಾಮಾನ್ಯ • ವ್ಯಾಪಾರಿ, ನಿವಾಸಿಗಳಿಂದ ಸೋಂಕಿತರಿಗೆ ತಿಳಿವಳಿಕೆ

# ಮಾರುಕಟ್ಟೆಗೆ ಸೋಂಕಿತರು: ಸೋಂಕು ಹೆಚ್ಚಳ?

• ಸಂತೋಷ ಜಿಗಳಿಕೊಪ್ಪ

**ಬೆಂಗಳೂರು:** ಕೊರೊನಾ ಸೋಂಕು ತಗುಲಿದ್ದರಿಂದಾಗಿ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವ ಕೆಲವರು, ಅಗತ್ಯ ವಸ್ತುಗಳ ಖರೀದಿಗಾಗಿ ಮಾರುಕಟ್ಟೆಗೆ ಬರುತ್ತಿದ್ದಾರೆ. ಇದರಿಂದಾಗಿ ಬೇರೆಯವರಿಗೂ ಸೋಂಕು ತಗುಲುವ ಸಾಧ್ಯತೆ ಇರುವುದಾಗಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ದೂರುತ್ತಿದ್ದಾರೆ.

ರಾಜಾಜಿನಗರ, ವಿಜಯನಗರ, ಯಶವಂತಪುರ ಹಾಗೂ ಇತರೆ ಪ್ರದೇಶದ ಮಾರುಕಟ್ಟೆಗಳಲ್ಲಿ ಸೋಂಕಿತರು ಕಾಣಿಸುತ್ತಿದ್ದಾರೆ. ಕೆಲವರು, 'ನಮಗೆ ಸೋಂಕು ತಗುಲಿದೆ. ಬೇಗನೇ ವಸ್ತುಗಳನ್ನು ಕೊಡಿ. ಹೋಗುತ್ತೇವೆ' ಎಂದು ನೇರವಾಗಿ ಹೇಳಿಯೇ ವ್ಯಾಪಾರ ಮಾಡುತ್ತಿದ್ದಾರೆ.

'ಸೋಂಕು ಇದ್ದರೆ ಮನೆಯಲ್ಲೇ ಇರಿ. ಏನಾದರೂ ಬೇಕಾದರೆ ಮೊಬೈಲ್‌ಗೆ ಕರೆ ಮಾಡಿ. ಅಗತ್ಯ ವಸ್ತುಗಳನ್ನು ನಾವೇ ಮನೆಗೆ ತಂದುಕೊಡುತ್ತೇವೆ' ಎಂದು ಕೆಲ ವ್ಯಾಪಾರಿಗಳು ಸೋಂಕಿತರಿಗೆ ತಿಳಿವಳಿಕೆ ಹೇಳಿ ಕಳುಹಿಸುತ್ತಿದ್ದಾರೆ. ಕೆಲ ಸಾರ್ವಜನಿಕರು ಸೋಂಕಿತರನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ.

'ರಾಜಾಜಿನಗರ ಪಶ್ಚಿಮ ಕಾರ್ಡ್ ರಸ್ತೆಗೆ ಹೊಂದಿಕೊಂಡಿರುವ ಮಾರುಕಟ್ಟೆಯೊಂದರಲ್ಲಿ ಭಾನುವಾರ ಬೆಳಿಗ್ಗೆ ಸೋಂಕಿತರೊಬ್ಬರು ಅಗತ್ಯವಸ್ತುಗಳ ಖರೀದಿಗೆ ಬಂದಿದ್ದರು. ಅವರಿಗೆ ಕೆಮ್ಮು ಇತ್ತು. ಅದನ್ನು ನೋಡಿದ್ದ ವ್ಯಾಪಾರಿ, 'ಏಕೆ ಬಹಳ ಕೆಮ್ಮುತ್ತಿದ್ದೀರಾ. ಆಸ್ಪತ್ರೆಗೆ ತೋರಿಸಿ' ಎಂದಿದ್ದರು. ಆಗ ಸೋಂಕಿತ, 'ನನಗೆ ಹಾಗೂ ನಮ್ಮ ಮನೆಯಲ್ಲಿ ಮೂವರಿಗೆ ಕೊರೊನಾ ಇದೆ. ಅಗತ್ಯ ವಸ್ತುಗಳನ್ನು ತಂದುಕೊಡುವವರು ಯಾರೂ ಇಲ್ಲ. ಹೀಗಾಗಿ, ಮಾರುಕಟ್ಟೆಗೆ ಬಂದಿದ್ದೇನೆ' ಎಂದಿದ್ದರು. ಅದರಿಂದ ಸಿಟ್ಟಾದ ವ್ಯಾಪಾರಿ, ಅವರನ್ನು ದೂರ ನಿಲ್ಲಿಸಿ ಅಗತ್ಯ ವಸ್ತುಗಳನ್ನು ಕೊಟ್ಟು ಕಳುಹಿಸಿದ್ದಾರೆ' ಎಂದು ಪ್ರತ್ಯಕ್ಷದರ್ಶಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಮೇಲೆ ಬಿಬಿಎಂಪಿ ಅಧಿಕಾರಿಗಳು ನಿಗಾ ವಹಿಸಿದ್ದಾರೆ. ಅಷ್ಟಾದರೂ ಕೆಲವರು, ಅಗತ್ಯ ವಸ್ತುಗಳನ್ನು ಖರೀದಿಸಲು ಮಾರುಕಟ್ಟೆಗೆ ಬರುತ್ತಿದ್ದಾರೆ. ಇದರಿಂದಾಗಿ ಸ್ಥಳೀಯರಿಗೆ ಸೋಂಕು ಹರಡುವ ಸಾಧ್ಯತೆ ಹೆಚ್ಚಾಗಿದೆ' ಎಂದೂ ಅಭಿಪ್ರಾಯಪಟ್ಟರು.

**ಅಡುಗೆ ಮಾಡಲೇಬೇಕು:** ಒಂಟಿಯಾಗಿ ಹಾಗೂ ಇಬ್ಬರಷ್ಟೇ ವಾಸಿಸುತ್ತಿರುವವರು ನಗರದಲ್ಲಿ ಹೆಚ್ಚಾಗಿದ್ದಾರೆ. ಅವರಿಗೆ ಕೊರೊನಾ ಸೋಂಕು ತಗುಲಿದರೆ, ಅಡುಗೆ ಮಾಡಿಕೊಳ್ಳುವುದು ಹಾಗೂ ಅಗತ್ಯ ವಸ್ತುಗಳನ್ನು ತರುವುದು ಕಷ್ಟವಾಗುತ್ತಿದೆ. ಅಂಥವರು ಸಹ ಇದೀಗ ಮಾರುಕಟ್ಟೆಗೆ ಬರುತ್ತಿದ್ದಾರೆ.

ಯಶವಂತಪುರ ಮಾರುಕಟ್ಟೆಗೂ ಸೋಂಕಿತರು ಬಂದು ಹೋಗುತ್ತಿರುವುದಾಗಿ ಅಲ್ಲಿಯ ವ್ಯಾಪಾರಿಗಳು ಹೇಳುತ್ತಾರೆ. ವಸ್ತುಗಳ ಖರೀದಿಗೆ ಬರುವ ಸಾರ್ವಜನಿಕರು ಭಯವಾಗುತ್ತಾರೆಂಬ ಕಾರಣ ವ್ಯಾಪಾರಿಗಳು ಸೋಂಕಿತರಿಗೆ ಬುದ್ಧಿವಾದ ಹೇಳಿ ವಾಪಸು ಕಳುಹಿಸುತ್ತಿದ್ದಾರೆ.

'ವಿಜಯನಗರದ ಮಾರುಕಟ್ಟೆಗೆ ಮೊನ್ನೆಯಷ್ಟೇ ಸೋಂಕಿತ ಯುವಕರೊಬ್ಬರು ಬಂದಿದ್ದರು. ವಿದ್ಯಾಭ್ಯಾಸಕ್ಕೆ ಬಂದಿದ್ದ ಅವರಿಗೆ ಸೋಂಕು ತಗುಲಿತ್ತು. ವಾಪಸು ಊರಿಗೆ ಹೋಗದೇ ಕೊಠಡಿಯಲ್ಲೇ ಇದ್ದುಕೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಮೊಬೈಲ್ ಆ್ಯಪ್ ಮೂಲಕ ಊಟ ತರಿಸಿಕೊಳ್ಳುತ್ತಿದ್ದಾರೆ. ಆದರೆ, ಇತರೆ ಅಗತ್ಯ ವಸ್ತುಗಳ ಖರೀದಿಗಾಗಿ ಆಗಾಗ ಮಾರುಕಟ್ಟೆಗೆ ಬಂದು ಹೋಗುತ್ತಿದ್ದಾರೆ' ಎಂದು ಸ್ಥಳೀಯ ವ್ಯಾಪಾರಿಯೊಬ್ಬರು ಹೇಳಿದರು.

'ಕಳೆದ ವರ್ಷದ ಸೋಂಕಿತರ ಕೈಗೆ ಮುದ್ರೆ ಹಾಕುತ್ತಿದ್ದರು. ಆದರೆ, ಈ ವರ್ಷ ಅಂಥ ಯಾವುದೇ ಕೆಲಸ ಮಾಡುತ್ತಿಲ್ಲ. ಹೀಗಾಗಿ, ಸೋಂಕಿತರನ್ನು ಗುರುತಿಸುವುದು ಕಷ್ಟವಾಗುತ್ತಿದೆ. ಸೋಂಕಿತರ ಮನೆಗಳಿಗೆ ಅಗತ್ಯ ವಸ್ತುಗಳನ್ನು ಪೂರೈಸಲು ವ್ಯಾಪಾರಸ್ಥರು ಸಿದ್ಧರಿದ್ದಾರೆ. ಆಯಾ ಪ್ರದೇಶಗಳಲ್ಲಿರುವ ವ್ಯಾಪಾರಿಗಳ ಮೂಲಕ ಸೋಂಕಿತರ ಮನೆ ಬಾಗಿಲಿಗೆ ಅಗತ್ಯವಸ್ತುಗಳ ಪೂರೈಸಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದೂ ಅವರು ಒತ್ತಾಯಿಸಿದರು.

**ವರದಿ ಬರುವ ಮುಂಚೆಯೇ ಓಡಾಟ:** ಸೋಂಕಿತರ ಸಂಪರ್ಕದಲ್ಲಿದ್ದ ಕೆಲವರು, ಕೊರೊನಾ ಪರೀಕ್ಷೆ ಮಾಡಿಸಿದ್ದಾರೆ. ಮನೆಯಲ್ಲೇ ಕ್ವಾರಂಟೈನ್ ಇರುವಂತೆ ಆರೋಗ್ಯ ಇಲಾಖೆ ಸಿಬ್ಬಂದಿ ಸೂಚಿಸಿದ್ದಾರೆ. ಅಷ್ಟಾದರೂ ಅವರೆಲ್ಲ ವರದಿ ಬರುವುದಕ್ಕೂ ಮುನ್ನವೇ ಹೊರಗಡೆ ಓಡಾಡುತ್ತಿದ್ದಾರೆ.

**ಬೆಂಗಳೂರಿನಲ್ಲಿ ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ**

| ವಲಯ | ಸೋಂಕಿತರ ಸಂಖ್ಯೆ |
|---|---|
| ಪೂರ್ವ ವಲಯ | 17,062 |
| ಪಶ್ಚಿಮ ವಲಯ | 12,839 |
| ದಕ್ಷಿಣ ವಲಯ | 17,110 |
| ಆರ್‌ಆರ್ ನಗರ | 9,851 |
| ಬೊಮ್ಮನಹಳ್ಳಿ ವಲಯ | 16,425 |
| ಯಲಹಂಕ ವಲಯ | 9,289 |
| ಮಹದೇವಪುರ ವಲಯ | 14,010 |

**ಸೋಂಕಿತರು ಹೊರಗೆ ಓಡಾಡುವಂತಿಲ್ಲ. ಅಂಥವರು ಕಂಡುಬಂದರೆ ಠಾಣೆಗೆ ಮಾಹಿತಿ ನೀಡಬೇಕು. ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು**
**ಪೊಲೀಸ್ ಅಧಿಕಾರಿ**

ವಾರಾಂತ್ಯದ ಕರ್ಫ್ಯೂ ಮುಗಿದ ಬಳಿಕ ಸೋಮವಾರ ಬೆಂಗಳೂರಿನ ಕೆ ಆರ್ ಮಾರುಕಟ್ಟೆಯಲ್ಲಿ ಸೊಪ್ಪು ಕೊಳ್ಳಲು ಮುಗಿಬಿದ್ದ ಜನರು —ಪ್ರಜಾವಾಣಿ ಚಿತ್ರ

## ಆರೈಕೆ ಇಲ್ಲದೆ ಪ್ರಾಣಬಿಟ್ಟ ಒಂಟಿ ವೃದ್ಧೆ

ಶಂಕರಪುರ ವಾರ್ಡ್‌ನ ಜೆ.ಸಿ.ನಗರದಲ್ಲಿ ಒಂಟಿಯಾಗಿ ವಾಸವಿದ್ದ ಕೊರೊನಾ ಸೋಂಕಿತ ವೃದ್ಧೆಯೊಬ್ಬರು ಸೂಕ್ತ ಆರೈಕೆ ಇಲ್ಲದೇ ಪ್ರಾಣ ಬಿಟ್ಟಿದ್ದಾರೆ.

'70 ವರ್ಷದ ವೃದ್ಧೆ ಒಂಟಿಯಾಗಿ ವಾಸವಿದ್ದರು. ಮನೆ ಕೆಲಸ ಹಾಗೂ ಅಡುಗೆ ಎಲ್ಲವನ್ನೂ ಒಬ್ಬರೇ ಮಾಡಿಕೊಳ್ಳುತ್ತಿದ್ದರು. ಇತ್ತೀಚೆಗೆ ಅವರಿಗೆ ಕೊರೊನಾ ಸೋಂಕು ತಗುಲಿತ್ತು. ಅಂದಿನಿಂದಲೇ ಅವರು ಹಾಸಿಗೆ ಹಿಡಿದಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವೃದ್ಧೆಯನ್ನು ಆರೈಕೆ ಮಾಡಲು ಹಾಗೂ ಚಿಕಿತ್ಸೆ ಕೊಡಲು ಯಾರೂ ಇರಲಿಲ್ಲ. ತೀವ್ರ ಅನಾರೋಗ್ಯರಿಂದ ನರಳಿ ಮನೆಯಲ್ಲೇ ಪ್ರಾಣ ಬಿಟ್ಟಿದ್ದಾರೆ. ವೃದ್ಧೆ ಹೊರಗೆ ಬಾರದಿದ್ದರಿಂದ ಅನುಮಾನಗೊಂಡಿದ್ದ ಸ್ಥಳೀಯರು, ವಾರ್ಡ್ ಮುಖಂಡರಿಗೆ ಸೋಮವಾರ ವಿಷಯ ತಿಳಿಸಿದ್ದರು. ನಂತರ, ಮನೆಯೊಳಗೆ ಹೋಗಿ ನೋಡಿದಾಗ ವೃದ್ಧೆ ಮೃತಪಟ್ಟಿದ್ದು ಗೊತ್ತಾಗಿದೆ' ಎಂದೂ ತಿಳಿಸಿವೆ.

'ಸ್ಥಳೀಯ ಸ್ವಯಂಸೇವಕರೇ ಮೃತದೇಹವನ್ನು ಆಂಬುಲೆನ್ಸ್‌ನಲ್ಲಿ ಸಾಗಿಸಿ ಅಂತ್ಯ ಸಂಸ್ಕಾರ ಮಾಡಿದ್ದಾರೆ' ಎಂದೂ ಪೊಲೀಸ್ ಮೂಲಗಳು ಹೇಳಿವೆ.

## ಸುದ್ದಿ 2 ನಿಮಿಷ

### 'ಆರ್ಥಿಕ ಪ್ಯಾಕೇಜ್ ಘೋಷಿಸಿ'

**ಬೆಂಗಳೂರು:** 'ಜನರ ಆರೋಗ್ಯ ಕಾಪಾಡಲು ಯಾವುದೇ ಕ್ರಮಗಳನ್ನು ತೆಗೆದುಕೊಂಡರೂ ನಮ್ಮ ಅಭ್ಯಂತರ ಇಲ್ಲ. ಆದರೆ, ಈ ನಿರ್ಬಂಧದಿಂದ ತೊಂದರೆ ಎದುರಿಸುವವರಿಗೆ ಸರ್ಕಾರ ಆರ್ಥಿಕ ಪ್ಯಾಕೇಜ್ ಘೋಷಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಕೈಗಾರಿಕಾ ಸಂಘಟನೆಗಳ ಪ್ರತಿನಿಧಿಗಳು, ವ್ಯಾಪಾರಿಗಳು ಮತ್ತು ಕಾರ್ಮಿಕರ ಜೊತೆ ಪಕ್ಷದ ಕಚೇರಿಯಲ್ಲಿ ಸೋಮವಾರ ಸಭೆ ನಡೆಸಿದ ಬಳಿಕ ಮಾತನಾಡಿದ ಅವರು, 'ಸರ್ಕಾರ ತೀರ್ಮಾನಗಳಿಂದ ಎಲ್ಲ ವರ್ಗದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಉದ್ಯೋಗ ಸೃಷ್ಟಿಸಿ, ಸರ್ಕಾರಕ್ಕೆ ತೆರಿಗೆ ಕಟ್ಟಿ, ಸಮಾಜ ರಕ್ಷಿಸುತ್ತಿರುವ ವರ್ತಕರು ಬೇಸರಗೊಂಡಿದ್ದಾರೆ. ಈ ಸರ್ಕಾರ ತಮ್ಮ ಕೊನೆ ದಿನಗಳನ್ನು ಕಾಣುತ್ತಿರುವುದಕ್ಕೆ ಇದು ಸಾಕ್ಷಿ' ಎಂದರು.

'ವಾಣಿಜ್ಯ ಆಸ್ತಿ ತೆರಿಗೆಯನ್ನು ಎರಡು ವರ್ಷಗಳ ಅವಧಿಗೆ ಮನ್ನಾ ಮಾಡಬೇಕು. ಎಲ್ಲ ಸಾಲಗಳ ಅವಧಿ 2 ವರ್ಷ ಮುಂದೂಡಬೇಕು. ₹ 10 ಲಕ್ಷದಿಂದ ₹ 20 ಲಕ್ಷವರೆಗಿನ ಸಾಲದ ಬಡ್ಡಿಯನ್ನು ಸರ್ಕಾರವೇ ಕಟ್ಟಿಕೊಡಬೇಕು. ಸಾರಿಗೆ, ಹೋಟೆಲ್, ಉದ್ಯಮ ಕ್ಷೇತ್ರಗಳನ್ನು ಅಗತ್ಯ ಸೇವೆ ಎಂದು ಪರಿಗಣಿಸಬೇಕು ಎಂದು ಸಭೆಯಲ್ಲಿ ಬೇಡಿಕೆ ಇಟ್ಟಿದ್ದಾರೆ. ವಿರೋಧ ಪಕ್ಷವಾಗಿ ನಾವು ಅವರ ಪರ ನಿಲ್ಲುತ್ತೇವೆ' ಎಂದರು.

'ಲಾಕ್ ಡೌನ್ ಎಂಬ ಪದ ಬಳಸದೆ, ಸರ್ಕಾರ ಎಲ್ಲವನ್ನೂ ಬಂದ್ ಮಾಡುತ್ತಿದೆ. ಇದರಿಂದ ಎಲ್ಲ ವರ್ಗದ ಜನರಿಗೆ ಕಷ್ಟವಾಗಲಿದೆ. ಲಾಕ್‌ಡೌನ್ ಮಾದರಿಯ ಕ್ರಮದ ಹೊರತಾಗಿ ಬೇರೆ ಮಾರ್ಗಗಳನ್ನು ಸರ್ಕಾರ ಅನುಸರಿಸಲಿ' ಎಂದೂ ಸಲಹೆ ನೀಡಿದರು.

## ಇಂದಿರಾ ಕ್ಯಾಂಟೀನ್‌ನಲ್ಲಿ ಉಚಿತ ಆಹಾರ ನೀಡಿ: ಸಿಪಿಎಂ ಒತ್ತಾಯ

**ಬೆಂಗಳೂರು:** 'ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಲಾಕ್‌ಡೌನ್ ಘೋಷಿಸಿದರೆ, ಇಂದಿರಾ ಕ್ಯಾಂಟೀನ್ ಮೂಲಕ ಬಡವರಿಗೆ ಉಚಿತವಾಗಿ ಆಹಾರ ಪೂರೈಸಲು ಸರ್ಕಾರ ಕ್ರಮ ಕೈಗೊಳ್ಳಬೇಕು' ಎಂದು ಸಿಪಿಎಂ ಒತ್ತಾಯಿಸಿದೆ.

'ಕರ್ಫ್ಯೂ, ಲಾಕ್‌ಡೌನ್‌ನಂತಹ ಕ್ರಮಗಳಿಂದ ಸಾವಿರಾರು ಅಸಂಘಟಿತ ಕಾರ್ಮಿಕರು ಕೆಲಸ ಮತ್ತು ಗಳಿಕೆ ಕಳೆದುಕೊಳ್ಳುತ್ತಿದ್ದಾರೆ. ಅವರಿಗೆ ಪ್ರತಿದಿನ ಮೂರು ಹೊತ್ತು ಉಚಿತ ಆಹಾರ ಪೂರೈಸಬೇಕು' ಎಂದು ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಎನ್. ಉಮೇಶ್ ಆಗ್ರಹಿಸಿದ್ದಾರೆ.

'ಆಹಾರ ಪೂರೈಸುವುದರ ಜೊತೆಗೆ ಪ್ರತಿ ಕುಟುಂಬಕ್ಕೆ ₹10 ಸಾವಿರ ನೇರ ನಗದು ವರ್ಗಾವಣೆ ಮಾಡುವ ಮೂಲಕ ಪರಿಹಾರ ನೀಡಬೇಕು' ಎಂದೂ ಅವರು ಹೇಳಿದ್ದಾರೆ.

'ರಾಜ್ಯದಲ್ಲಿ 2011ರ ಜನಗಣತಿ ಪ್ರಕಾರ 1.34 ಕೋಟಿ ಕುಟುಂಬಗಳಿವೆ. ಪ್ರತಿ ಕುಟುಂಬಕ್ಕೆ ಮಾಸಿಕ ₹10 ಸಾವಿರ ನೆರವು ನೀಡಲು ತಿಂಗಳಿಗೆ ₹13,400 ಕೋಟಿ ಅವಶ್ಯಕತೆ ಇದೆ. 2 ಲಕ್ಷ ಕೋಟಿ ರೂಪಾಯಿಗಳ ವಾರ್ಷಿಕ ಬಜೆಟ್ ಸಾಮರ್ಥ್ಯದ ಆರ್ಥಿಕತೆಗೆ ಇದು ದೊಡ್ಡ ಹೊರೆಯಾಗಲಾರದು' ಎಂದೂ ಅವರು ಹೇಳಿದ್ದಾರೆ.

## 'ಕೃಷಿ ಕ್ಷೇತ್ರಕ್ಕೂ 5ಜಿ ಸಹಕಾರಿ'

**ಬೆಂಗಳೂರು:** 'ಜಗತ್ತು ಈಗ 5ಜಿ ಯುಗದಲ್ಲಿದೆ. ಈ ತಂತ್ರಜ್ಞಾನ ತಾಂತ್ರಿಕ ಜಗತ್ತನ್ನು ಮುಂದುವರಿಸುವುದು ಮಾತ್ರ ವಲ್ಲದೆ, ಕೃಷಿ ಕ್ಷೇತ್ರಕ್ಕೂ ಸಹಕಾರಿಯಾಗಲಿದೆ' ಎಂದು ಐಐಟಿ ಕಾನ್ಪುರದ ನಿರ್ದೇಶಕ ಅಭಯ್ ಕರಂಡಿಕರ್ ತಿಳಿಸಿದರು.

ಅನಂತಕುಮಾರ್ ಪ್ರತಿಷ್ಠಾನ ಹಮ್ಮಿಕೊಂಡಿರುವ 'ದೇಶ ಮೊದಲು ಸಂವಾದಗಳು' ಕಾರ್ಯಕ್ರಮದಡಿ ಈಚೆಗೆ ಅವರು 'ಆತ್ಮನಿರ್ಭರ್ ಭಾರತ:5ಜಿ-ಅವಕಾಶಗಳು ಮತ್ತು ಸಿದ್ಧತೆ' ಕುರಿತು ಮಾತನಾಡಿದರು.

'ಗ್ರಾಮೀಣ ಪ್ರದೇಶಗಳಿಗೆ ತಂತ್ರಜ್ಞಾನಗಳ ವಿಸ್ತರಣೆಯಾಗಲಿದೆ. 5ಜಿ ತಂತ್ರಜ್ಞಾನ ನಿಖರ ಕೃಷಿಯಲ್ಲಿ ಹೆಚ್ಚು ಬಳಕೆಯಾಗಲಿದೆ. ಕೃಷಿಯ ಆಧುನಿಕ ತಾಂತ್ರಿಕತೆ, ಸಂವೇದಕಗಳ ಬಳಕೆ ಸೇರಿದಂತೆ ಹಲವು ಉದ್ದೇಶಗಳಿಗೆ ಈ ತಂತ್ರಜ್ಞಾನ ನೆರವಾಗಲಿದೆ' ಎಂದರು.

'ಭವಿಷ್ಯದಲ್ಲಿ ತಂತ್ರಜ್ಞಾನವೇ ಜಗತ್ತನ್ನು ಆಳಲಿದೆ. ಅದಕ್ಕೆ ಅನುಗುಣವಾಗಿ ನಾವು ಹೆಜ್ಜೆ ಹಾಕಬೇಕಿದೆ. ವಿದೇಶಿ ತಂತ್ರಜ್ಞಾನಗಳಿಗೆ ಮೊರೆ ಹೋಗುವ ಬದಲು ಸ್ವದೇಶಿ ತಂತ್ರಜ್ಞಾನಗಳನ್ನು ಬಳಸಬೇಕು. ತಂತ್ರಜ್ಞಾನದ ವೇಗದಲ್ಲಿ ಸೈಬರ್ ರಕ್ಷಣೆ ಬಗ್ಗೆಯೂ ಜಾಗೃತರಾಗಿರಬೇಕು' ಎಂದು ಹೇಳಿದರು.

ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್, '5ಜಿ ತಂತ್ರಜ್ಞಾನ ಇಂಟರ್‌ನೆಟ್‌ನ ಭವಿಷ್ಯ ಎನ್ನಬಹುದು. ಇದು, 5ನೇ ಪೀಳಿಗೆಯನ್ನು ಪ್ರತಿನಿಧಿಸುತ್ತದೆ. ಈ ವೇಳೆ ತಂತ್ರಜ್ಞಾನ ಪ್ರಾಬಲ್ಯ, ಸ್ಮಾರ್ಟ್ ಆಯ್ಕೆಗಳು ಮತ್ತು ವೇಗವನ್ನು ಇದರಲ್ಲಿ ಕಾಣಬಹುದು' ಎಂದರು.

ಅದಮ್ಯ ಚೇತನ ಸಂಸ್ಥೆಯ ತೇಜಸ್ವಿನಿ ಅನಂತಕುಮಾರ್ ಹಾಗೂ ಇತರರು ಭಾಗವಹಿಸಿದ್ದರು.

## ಎರಡು ಲ್ಯಾಬ್‌ಗಳ ಮುಚ್ಚಿಸಿದ ಬಿಬಿಎಂಪಿ

### ಕೋವಿಡ್ ಪರೀಕ್ಷಾ ಫಲಿತಾಂಶ ವಿಳಂಬ: 4 ಪ್ರಯೋಗಾಲಯಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪರೀಕ್ಷೆಯ ಫಲಿತಾಂಶವನ್ನು ತ್ವರಿತವಾಗಿ ನೀಡಬೇಕು ಎಂಬ ಸರ್ಕಾರದ ಸೂಚನೆಯನ್ನು ಪಾಲಿಸದ ಕಾರಣಕ್ಕೆ ಪಶ್ಚಿಮ ವಲಯದ ಮೆಡಲ್ ಲ್ಯಾಬ್ ಹಾಗೂ ಆರತಿ ಲ್ಯಾಬ್‌ಗಳನ್ನು ಬಿಬಿಎಂಪಿ ಮುಚ್ಚಿಸಿದೆ.

ಕೋವಿಡ್ ಪರೀಕ್ಷೆ ನಡೆಸುವ ಪ್ರಯೋಗಾಲಯಗಳು ಫಲಿತಾಂಶವನ್ನು 24 ಗಂಟೆಯೊಳಗಾಗಿ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ (ಐಸಿಎಂಆರ್) ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು ಎಂದು ಸರ್ಕಾರ ಸೂಚನೆ ನೀಡಿತ್ತು. ಆದರೂ ಕೆಲವು ಲ್ಯಾಬ್‌ಗಳು ಈ ಸೂಚನೆ ಪಾಲಿಸಿರಲಿಲ್ಲ. ಪರೀಕ್ಷೆಗೆ ಒಳಗಾದವರು ಕೋವಿಡ್ ಹೊಂದಿರುವುದು ದೃಢಪಟ್ಟರೂ ಫಲಿತಾಂಶ ನೀಡುವಾಗ ಎರಡು ದಿನಗಳಿಗಿಂತ ಹೆಚ್ಚು ಸಮಯ ತಗುಲಿದ ಬಗ್ಗೆ ಬಿಬಿಎಂಪಿಗೆ ಅನೇಕ ದೂರುಗಳು ಬಂದಿದ್ದವು. ಈ ವಿಳಂಬದಿಂದಾಗಿ ಸೋಂಕಿತರು ತಕ್ಷಣ ಚಿಕಿತ್ಸೆ ಪಡೆಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಕೋವಿಡ್ ಪರೀಕ್ಷೆಯ ಫಲಿತಾಂಶ ಬರುವ ಮುನ್ನವೇ ಉಸಿರಾಟ ತೊಂದರೆ ಕಾಣಿಸಿಕೊಂಡು ಸಮಸ್ಯೆ ಎದುರಿಸಿದ ಬಗ್ಗೆ ಕೆಲವರು ವಿಡಿಯೊ ಮಾಡಿ ಸಾಮಾಜಿಕ ಜಾಲತಾಣಗಳಲ್ಲೂ ಹಂಚಿಕೊಂಡಿದ್ದರು.

ಈ ಕುರಿತ ದೂರುಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಬಿಬಿಎಂಪಿಯು, ಕೋವಿಡ್ ಪರೀಕ್ಷಾ ಫಲಿತಾಂಶವನ್ನು ತ್ವರಿತವಾಗಿ ನೀಡದಿದ್ದರೆ ಕ್ರಮ ಕೈಗೊಳ್ಳುವುದಾಗಿ ಪ್ರಯೋಗಾಲಯಗಳಿಗೆ ಎಚ್ಚರಿಕೆ ನೀಡಿತ್ತು. ಆ ಬಳಿಕವೂ ನಿಗದಿತ ಸಮಯದೊಳಗೆ ಕೋವಿಡ್ ಪರೀಕ್ಷೆ ಫಲಿತಾಂಶಗಳನ್ನು ಐಸಿಎಂಆರ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡದ ಕಾರಣಕ್ಕೆ ಬಿಬಿಎಂಪಿ ಆರೋಗ್ಯಾಧಿಕಾರಿಗಳ ತಂಡವು ಪಶ್ಚಿಮ ವಲಯದ ವ್ಯಾಪ್ತಿಯ ಮೆಡಲ್ ಲ್ಯಾಬ್, ಆರತಿ ಲ್ಯಾಬ್, ಆರ್.ವಿ ಮೆಟ್ರೊಪೊಲಿಸ್ ಲ್ಯಾಬ್ ಹಾಗೂ ರಾಜರಾಜೇಶ್ವರಿ ನಗರ ವಲಯದ ಬಿಜಿಎಸ್ ಗ್ಲೋಬಲ್ ಮೆಡಿಕಲ್ ಕಾಲೇಜು ಲ್ಯಾಬ್ ಸಹಿತ ನಾಲ್ಕು ಪ್ರಯೋಗಾಲಯಗಳಗೆ ಕಾರಣ ಕೇಳಿ ನೋಟಿಸ್ ನೀಡಿತ್ತು.

'ನಿಗದಿತ ಅವಧಿಯೊಳಗೆ ಪರೀಕ್ಷೆ ಫಲಿತಾಂಶ ನೀಡದ ಪ್ರಯೋಗಾಲಯಗಳ ವಿರುದ್ಧ ಶಿಸ್ತು ಕ್ರಮ ಮುಂದುವರಿಯಲಿದೆ. ಕೋವಿಡ್ ಪರೀಕ್ಷೆಯಲ್ಲಿ ಸೋಂಕು ದೃಢಪಟ್ಟವರಿಗೆ 24 ಗಂಟೆಗಳ ಒಳಗೆ ಬಿ.ಯು.ನಂಬರ್ ನೀಡುವ ವ್ಯವಸ್ಥೆ ಮಾಡಲಿದ್ದೇವೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ತಿಳಿಸಿದರು.

## ಆನ್‌ಲೈನ್ ವಾರ್ಡ್ ಸಮಿತಿ ಸಭೆಗೆ ಬಿಎನ್‌ಪಿ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಪರಿಸ್ಥಿತಿಯ ನಿರ್ವಹಣೆಗಾಗಿ ಎಲ್ಲ ವಾರ್ಡ್‌ಗಳಲ್ಲಿ ವಾರಕ್ಕೊಮ್ಮೆ ಆನ್‌ಲೈನ್ ವಾರ್ಡ್ ಸಮಿತಿ ಸಭೆ ನಡೆಸಬೇಕು ಎಂದು ಬೆಂಗಳೂರು ನವನಿರ್ಮಾಣ ಪಕ್ಷ (ಬಿಎನ್‌ಪಿ) ಆಗ್ರಹಿಸಿದೆ.

ಬಿಎನ್‌ಪಿ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನರಸಿಂಹನ್,'ನಾಗರಿಕರ ಭಾಗವಹಿಸುವಿಕೆ ಹಾಗೂ ವಿಕೇಂದ್ರೀಕೃತ ಆಡಳಿತವು ಕೋವಿಡ್ ಪರಿಸ್ಥಿತಿ ನಿಯಂತ್ರಿಸುವ ಹಾಗೂ ಜನರ ಸಮಸ್ಯೆ ಪರಿಹರಿಸಲು ಈಗಿರುವ ಏಕೈಕ ಮಾರ್ಗ. ವಾರ್ಡ್ ಮಟ್ಟದಲ್ಲಿ ನಾಗರಿಕರು ಹಾಗೂ ಅಧಿಕಾರಿಗಳು ಜಂಟಿಯಾಗಿ ಕೆಲಸ ಮಾಡಬೇಕು. ಇದರಲ್ಲಿ ವಾರ್ಡ್ ಸಮಿತಿಗಳು ನಿರ್ಣಾಯಕ ಪಾತ್ರ ವಹಿಸುತ್ತವೆ' ಎಂದರು.

ಪ್ರಮುಖ ಕಾರ್ಯಕಾರಿ ಸಮಿತಿ ಸದಸ್ಯೆ ಬಿ.ವಿ.ಲಲಿತಾಂಬಾ,'ಎರಡು ವಾರಗಳಿಗೊಮ್ಮೆ ಭೌತಿಕವಾಗಿ ವಾರ್ಡ್ ಸಮಿತಿ ಸಭೆ ನಡೆಸಲಾಗುತ್ತಿದೆ. ಪ್ರತಿ ಶನಿವಾರ ಬೆಳಿಗ್ಗೆ 10 ಗಂಟೆಗೆ ಆನ್‌ಲೈನ್ ಮೂಲಕ ಸಭೆ ನಡೆಸುವುದು ಸೂಕ್ತ. ಇದು, ಅಧಿಕಾರಿಗಳ ಸಂಪರ್ಕ ಹಾಗೂ ವಿಚಾರ ವಿನಿಮಯಕ್ಕೂ ವೇದಿಕೆಯಾಗಲಿದೆ' ಎಂದು ಸಲಹೆ ನೀಡಿದರು.

ಬಿಎನ್‌ಪಿ ಯುವ ವಿಭಾಗದ ಮುಖ್ಯಸ್ಥ ರಿಶ್ವಂಜಸ್ ರಾಘವನ್,'ನಾಗರಿಕರು ವಾರ್ಡ್ ಸಮಿತಿಗಳ ಮೂಲಕ ಲಸಿಕೆ ಶಿಬಿರ ಹಾಗೂ ಅಪಾರ್ಟ್‌ಮೆಂಟ್ ಸಮುಚ್ಛಯಗಳಲ್ಲಿ ಚಿಕಿತ್ಸಾ ಶಿಬಿರ ನಡೆಸಲು ಸಹಾಯ ಮಾಡಬಹುದು. ವಾರ್ಡ್ ಮಟ್ಟದಲ್ಲಿ ಹಾಸಿಗೆ ಸಮಸ್ಯೆ ಹಾಗೂ ಆಮ್ಲಜನಕದ ಕೊರತೆ ಎದುರಾದವರಿಗೆ ಸ್ಥಳೀಯವಾಗಿ ಸಮನ್ವಯ ಸಾಧಿಸಬಹುದು' ಎಂದರು.

'ನಮ್ಮ ಮುತ್ತುನಮ್ಮ ರಾಜ್' ಇಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ನಿರ್ದೇಶಕ ಕೆ. ಜಿ.ಸಂಪತ್ ಕುಮಾರ್, ರುಡ್ ಸೆಟ್ ಅಕಾಡೆಮಿಯ ಸತೀಯ ಮೂರ್ತಿ, ಟಿ.ಗಜೇಂದ್ರ, ಜಗದೀಶ್ ಮೂರ್ತಿ, ವೆಂಕಟೇಶ ಶೇಷಾದ್ರಿ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ಇದ್ದರು

## 'ನಮ್ಮ ಮುತ್ತು-ನಮ್ಮ ರಾಜ್' ಇ-ಪುಸ್ತಕ ಬಿಡುಗಡೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಟ ಡಾ.ರಾಜಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಮಲ್ಲೇಶ್ವರದ ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯ ಪ್ರಗತಿ ವಿದ್ಯಾರ್ಥಿಗಳ ಒಕ್ಕೂಟ ಹೊರ ತಂದಿರುವ 'ನಮ್ಮ ಮುತ್ತು-ನಮ್ಮ ರಾಜ್' ಇ-ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ರಾಷ್ಟ್ರೀಯ ರುಡ್ ಸೆಟ್ ಅಕಾಡೆಮಿಯ ಮಹಾ ನಿರ್ದೇಶಕ ಸತೀಯ ಮೂರ್ತಿ ಅವರು ಇ-ಪುಸ್ತಕವನ್ನು ಲೋಕಾರ್ಪಣೆ ಮಾಡಿದರು.

'ರಾಜಕುಮಾರ್ ಭಾರತೀಯ ಚಿತ್ರರಂಗದ ಧೀಮಂತ ನಟ. ಕನ್ನಡ ಚಿತ್ರರಂಗಕ್ಕೆ ಜಗತ್ತಿನಾದ್ಯಂತ ಮನ್ನಣೆ ಸಿಗಲು ಅವರೂ ಕಾರಣ. ಕನ್ನಡ ಚಿತ್ರಗಳಲ್ಲಿ ಮಾತ್ರ ಅಭಿನಯಿಸುತ್ತೇನೆಂದು ಅವರು ನಿರ್ಧಾರ ಮಾಡದಿದ್ದರೆ, ಇಂದು ಕನ್ನಡ ಚಿತ್ರರಂಗವೆಂಬ ಪ್ರತ್ಯೇಕ ಅಸ್ತಿತ್ವವೇ ಇರುತ್ತಿರಲಿಲ್ಲ' ಎಂದು ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆಯ ನಿರ್ದೇಶಕ ಎಂ. ವೆಂಕಟೇಶ ಶೇಷಾದ್ರಿ ಅಭಿಪ್ರಾಯಪಟ್ಟರು.

'ರಾಜಕುಮಾರ್ ಅವರ ಮಾಹಿತಿ ಕಲೆ ಹಾಕುವ ಕೆಲಸವನ್ನು ವಿದ್ಯಾರ್ಥಿಗಳಿಗೆ ವಹಿಸಿದ್ದೆವು. ಅದೇ ಇಂದು ಇ-ಪುಸ್ತಕದ ರೂಪ ಪಡೆದುಕೊಂಡಿದೆ. ಸರ್ಕಾರವು ರಾಜಕುಮಾರ್ ಅವರ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿ, ಕೈಗೆಟಗುವ ದರದಲ್ಲಿ ಓದುಗರಿಗೆ ತಲುಪಿಸಬೇಕು' ಎಂದೂ ಒತ್ತಾಯಿಸಿದರು.

## ಅಪಘಾತ: ಎಂಜಿನಿಯರ್ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಸೋಮವಾರ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಮಹದೇವ್ (28) ಹಾಗೂ ನಾಗೇಶ್ (30) ಮೃತರು. ಎರಡೂ ಅಪಘಾತಗಳ ಬಗ್ಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ವಿಲ್ಸನ್ ಗಾರ್ಡನ್ ಸಂಚಾರ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಆಂಧ್ರಪ್ರದೇಶ ಮಹದೇವ್, ಮಾರತ್ತಹಳ್ಳಿಯಲ್ಲಿ ನೆಲೆಸಿದ್ದರು. ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ಬೆಳಿಗ್ಗೆ 4 ಗಂಟೆ ಸುಮಾರಿಗೆ ಇಬ್ಬರು ಸ್ನೇಹಿತರ ಜತೆ ಕಾರಿನಲ್ಲಿ ಎಚ್‌ಎಎಲ್ ಕಡೆಗೆ ಜಾಲಿ ರೈಡ್ ಹೊರಟಿದ್ದರು. ಮಹದೇವ್ ಅವರೇ ಕಾರು ಚಲಾಯಿಸುತ್ತಿದ್ದರು. ನಿಯಂತ್ರಣ ತಪ್ಪಿ ಕಾರು, ಜಿಎಲ್‌ಎಂ ಉದ್ಯಾನದ ಕಾಂಪೌಂಡ್‌ಗೆ ಡಿಕ್ಕಿ ಹೊಡೆದಿತ್ತು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹದೇವ್ ಸ್ಥಳದಲ್ಲೇ ಮೃಪಟ್ಟಿದ್ದಾರೆ. ಸ್ನೇಹಿತರಿಬ್ಬರಿಗೆ ಗಾಯವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದೂ ತಿಳಿಸಿವೆ.

**ಬೈಕ್ ಹಿಂಬದಿ ಸವಾರ ಸಾವು:** ಲಾಲ್‌ಬಾಗ್ ಬಳಿ ಖಾಸಗಿ ಬಸ್ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿದ್ದು, ಬೈಕ್‌ನ ಹಿಂಬದಿ ಸವಾರ ನಾಗೇಶ್ (30) ಮೃತಪಟ್ಟಿದ್ದಾರೆ.

'ಕೆ.ಪಿ. ಅಗ್ರಹಾರ ನಿವಾಸಿ ನಾಗೇಶ್, ಸ್ನೇಹಿತನ ಬೈಕ್‌ನಲ್ಲಿ ಸೋಮವಾರ ಬೆಳಿಗ್ಗೆ ಹೊರಟಿದ್ದಾಗಲೇ ಈ ಅವಘಡ ಸಂಭವಿಸಿದೆ. ಬೈಕ್ ಸವಾರ ಗಾಯಗೊಂಡಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅಪಘಾತ ಸಂಬಂಧ ಖಾಸಗಿ ಬಸ್ ಚಾಲಕ ಗಣೇಶ್ ಎಂಬಾತನನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

## ಬಾವಿಯಲ್ಲಿ ಮುಳುಗಿ ಇಬ್ಬರು ಬಾಲಕರ ಸಾವು

**ಮುದ್ದೇಬಿಹಾಳ:** ಬಟ್ಟೆ ಒಗೆಯಲೆಂದು ಪಟ್ಟಣದ ಆಶ್ರಯ ಬಡಾವಣೆಯ ಹಳೆಯ ಬಾವಿಗೆ ಇಳಿದಿದ್ದ ಇಬ್ಬರು ಬಾಲಕರು ಕಾಲು ಜಾರಿ ಬಿದ್ದು ಸೋಮವಾರ ಮೃತಪಟ್ಟಿದ್ದಾರೆ.

ಪ್ರೇಮ್ ಸುನೀಲ ಹಡಪದ (14) (ತೇಲಂಗಿ) ಹಾಗೂ ಪುನೀತ್ ಸುನೀಲ ಹಡಪದ (10) (ತೇಲಂಗಿ) ಮೃತರು. ಸ್ಥಳೀಯ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಹಾವೀರ ಜಯಂತಿ ಅಂಗವಾಗಿ ಬಿಬಿಎಂಪಿ ಸಹಯೋಗದಲ್ಲಿ ಜೈನ್ ಭವನದಲ್ಲಿ ಜೈನ್ ಅಸೋಸಿಯೇಶನ್ ಸೋಮವಾರ ಆಯೋಜಿಸಿದ್ದ ಕೋವಿಡ್ ಲಸಿಕೆ ವಿತರಣೆ ಶಿಬಿರದಲ್ಲಿ ಮಹಿಳೆಯೊಬ್ಬರು ಲಸಿಕೆ ಪಡೆದರು

## ಜೈಲಿನಿಂದ ಹೊರಬಂದು ಮೊಬೈಲ್ ಕಳವು: ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಅಪರಾಧ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ಮೊಬೈಲ್‌ಗಳನ್ನು ಕಳವು ಮಾಡುತ್ತಿದ್ದ ಆರೋಪದಡಿ ಇಬ್ಬರನ್ನು ಎಲೆಕ್ಟ್ರಾನಿಕ್ ಸಿಟಿ ಪೊಲೀಸರು ಬಂಧಿಸಿದ್ದಾರೆ.

'ಆರ್.ಟಿ. ನಗರ ಸುಲ್ತಾನ್‌ಪಾಳ್ಯದ ವಿನೋದ್ ಅಲಿಯಾಸ್ ಬಬ್ಲೂ (19) ಹಾಗೂ ಆನೇಕಲ್ ಬೊಮ್ಮಸಂದ್ರದ ಸತೀಶಕುಮಾರ್ ಮಹಾನ್ (19) ಬಂಧಿತರು. ಇವರಿಂದ ₹ 2.60 ಲಕ್ಷ ಮೌಲ್ಯದ 26 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಹೆಬ್ಬಗೋಡಿ ಠಾಣೆ ವ್ಯಾಪ್ತಿಯಲ್ಲಿ ಅಪರಾಧ ಕೃತ್ಯ ಎಸಗಿದ್ದ ಆರೋಪಿ ವಿನೋದ್, ಜೈಲುಪಾಲಾಗಿದ್ದ. ಜಾಮೀನು ಮೇಲೆ ಹೊರ ಬಂದು ಸತೀಶಕುಮಾರ್ ಜೊತೆ ಸೇರಿಕೊಂಡು ಮೊಬೈಲ್ ಕಳವು ಮಾರಲಾರಂಭಿಸಿದ್ದ. ಕೋನಪ್ಪನ ಅಗ್ರಹಾರ, ಚಂದಾಪುರ, ಬೊಮ್ಮಸಂದ್ರ, ಪರಪ್ಪನ ಅಗ್ರಹಾರ, ದೊಡ್ಡನಾಗಮಂಗಲ ಸೇರಿದಂತೆ ಹಲವೆಡೆ ಆರೋಪಿಗಳು ಕೃತ್ಯ ಎಸಗಿದ್ದರು' ಎಂದೂ ತಿಳಿಸಿದರು.

## ಸಂಕ್ಷಿಪ್ತ ಸುದ್ದಿ

### ಕಲ್ಲು ತೂರಾಟ ಪ್ರಕರಣ: ಬಂಧಿತರಲ್ಲಿ ಒಬ್ಬ ಸೋಂಕಿತ

**ಚಿತ್ರದುರ್ಗ:** ತಾಲ್ಲೂಕಿನ ಬ್ಯಾಲಹಾಳು ಗ್ರಾಮದಲ್ಲಿ ಪೊಲೀಸ್ ವಾಹನದ ಮೇಲೆ ಕಲ್ಲು ತೂರಾಟ ನಡೆಸಿದ ಆರೋಪದಡಿ ಬಂಧಿತರಾದ ಹತ್ತು ಆರೋಪಿಗಳಲ್ಲಿ ಒಬ್ಬರಿಗೆ ಕೊರೊನಾ ಸೋಂಕು ಇರುವುದು ಖಚಿತವಾಗಿದೆ. ಚಿಕಿತ್ಸೆಗಾಗಿ ಅವರನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೋವಿಡ್ ಮಾರ್ಗಸೂಚಿ ಉಲ್ಲಂಘಿಸಿ ನಡೆಯುತ್ತಿದ್ದ ಮದುವೆ ಮನೆಗೆ ತೆರಳಿದ್ದ ಪೊಲೀಸರ ವಾಹನದ ಮೇಲೆ ಶನಿವಾರ ರಾತ್ರಿ ಕಲ್ಲುತೂರಾಟ ನಡೆದಿತ್ತು. ಈ ಸಂಬಂಧ ಭರಮಸಾಗರ ಠಾಣೆಯ ಪೊಲೀಸರು ವರನ ಸಹೋದರ ಸೇರಿ ಹತ್ತು ಜನರನ್ನು ಭಾನುವಾರ ಬಂಧಿಸಿದ್ದರು.

'ಬಂಧಿತರನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸುವುದುಕ್ಕೂ ಮೊದಲು ಕೋವಿಡ್ ಪರೀಕ್ಷೆ ನಡೆಸುವುದು ಕಡ್ಡಾಯ. ಪರೀಕ್ಷೆಯಲ್ಲಿ ಒಬ್ಬ ಆರೋಪಿಗೆ ಕೋವಿಡ್ ಇರುವುದು ಖಚಿತವಾಗಿದೆ. ಉಳಿದ 9 ಆರೋಪಿಗಳ ವರದಿಗಳು ನೆಗೆಟಿವ್ ಬಂದಿದ್ದು, ಇವರನ್ನು ಮಾತ್ರ ಜೈಲಿಗೆ ಕಳುಹಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

### ನ್ಯಾ. ಎನ್‌.ವಿ.ರಮಣ ಹೆಸರಲ್ಲಿ ನಕಲಿ ಖಾತೆ– ಸ್ಥಗಿತಗೊಳಿಸಿದ ಟ್ವಿಟರ್

**ನವದೆಹಲಿ (ಪಿಟಿಐ):** ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಶನಿವಾರವಷ್ಟೇ ಅಧಿಕಾರ ಸ್ವೀಕರಿಸಿದ ನ್ಯಾಯಮೂರ್ತಿ ಎನ್. ವಿ.ರಮಣ ಹೆಸರಲ್ಲಿ ಆರಂಭಿಸಲಾಗಿದ್ದ ನಕಲಿ ಖಾತೆಯೊಂದನ್ನು ಟ್ವಿಟರ್ ಸೋಮವಾರ ಸ್ಥಗಿತಗೊಳಿಸಿದೆ.

ರಮಣ ಅವರು ಯಾವುದೇ ಸಾಮಾಜಿಕ ಮಾಧ್ಯಮದಲ್ಲಿ ಇಲ್ಲ. ಆದರೂ ಅವರ ಹೆಸರಲ್ಲಿ ಟ್ವಿಟರ್ ಖಾತೆ ತೆರೆದಿರುವುದನ್ನು ಗಮನಿಸಿದ ಸುಪ್ರೀಂ ಕೋರ್ಟ್‌ನ ರಿಜಿಸ್ಟ್ರಿ, ಈ ಬಗ್ಗೆ ತನಿಖೆ ನಡೆಸಲು ದೆಹಲಿ ಪೊಲೀಸರಿಗೆ ಸೂಚಿಸಿತ್ತು. ಈ ದೂರನ್ನು ಗಮನಿಸಿದ ಟ್ವಿಟರ್ ಸಂಸ್ಥೆ, ಸೋಮವಾರ ಈ ನಕಲಿ ಖಾತೆಯನ್ನು ರದ್ದುಪಡಿಸಿತು.

### ಶ್ರದ್ಧಾಂಜಲಿ: ಸುಪ್ರೀಂ ಕೋರ್ಟ್ ಕಲಾಪ ಸ್ಥಗಿತ

**ನವದೆಹಲಿ (ಪಿಟಿಐ):** ಕಳೆದ ಶನಿವಾರ ನಿಧನರಾದ ನ್ಯಾಯಮೂರ್ತಿ ಮೋಹನ ಶಾಂತನಗೌಡರ ಅವರ ಗೌರವಾರ್ಥ ಸೋಮವಾರ ಸುಪ್ರೀಂ ಕೋರ್ಟ್ ಆವರಣದಲ್ಲಿ ಸಂತಾಪ ಸೂಚಕ ಸಭೆ ನಡೆಸಿ, ಬಳಿಕ ದಿನದ ಕಲಾಪವನ್ನು ಸ್ಥಗಿತಗೊಳಿಸಲಾಯಿತು.

ನೂತನ ಮುಖ್ಯ ನ್ಯಾಯಮೂರ್ತಿಯಾಗಿ ಅಧಿಕಾರ ಸ್ವೀಕರಿಸಿರುವ ಎನ್. ವಿ.ರಮಣ ಅವರ ನೇತೃತ್ವದಲ್ಲಿ ಸುಪ್ರೀಂ ಕೋರ್ಟ್ ಆವರಣದಲ್ಲಿ ಸಂತಾಪ ಸೂಚಕ ಸಭೆ ನಡೆಯಿತು.

ಶಾಂತನಗೌಡರ ಅವರ ಹಠಾತ್ ನಿಧನದಿಂದ ತೀವ್ರ ನೋವಾಗಿದೆ ಎಂದು ರಮಣ ಅವರು ಹೇಳಿದರು. ನಂತರ ಎರಡು ನಿಮಿಷ ಮೌನ ಆಚರಿಸುವ ಮೂಲಕ ಅಗಲಿದ ನ್ಯಾಯಮೂರ್ತಿಯವರಿಗೆ ಗೌರವ ಸಲ್ಲಿಸಲಾಯಿತು.

ಕೆ.ಆರ್.ಪುರದ ಟಿ.ಸಿ.ಪಾಳ್ಯದ ಸಿಗ್ನಲ್ ಬಳಿ ಬೆಳೆದಿದ್ದ ಗಿಡ

## ಗಿಡ ಕಡಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೆ.ಆರ್.ಪುರ ಬಳಿಯ ಟಿ.ಸಿ.ಪಾಳ್ಯದ ಸಿಗ್ನಲ್ ಬಳಿ ಬೆಳೆಸಲಾಗಿದ್ದ ಗಿಡವೊಂದನ್ನು ಅಂಗಡಿಯ ಹೆಸರು ಕಾಣುವುದಿಲ್ಲ ಎಂಬ ಕಾರಣಕ್ಕೆ ಪಕ್ಕದ ಮಳಿಗೆಯವರು ಕಡಿದು ಹಾಕಿದ್ದಾರೆ ಎಂದು 'ಸಿಟಿಜನ್ ಫಾರ್ ಕೆ.ಆರ್.ಪುರ' ಆರೋಪಿಸಿದೆ. ಇಂತಹ ಕೆಲಸ ಮಾಡಿದರವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದೂ ಆಗ್ರಹಿಸಿದೆ.

'ಸಿಟಿಜನ್ ಫಾರ್ ಕೆ.ಆರ್.ಪುರ ವತಿಯಿಂದ 'ಹಸಿರು ಭಟ್ರಹಳ್ಳಿ' ಕಾರ್ಯಕ್ರಮದಡಿ ಎರಡು ವರ್ಷದ ಹಿಂದೆ ಮೇಡಹಳ್ಳಿಯಿಂದ ಕೆ.ಆರ್. ಪುರದವರೆಗೆ ಸುಮಾರು 380 ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತಿದೆ. ಟಿ.ಸಿ.ಪಾಳ್ಯದ ಸಿಗ್ನಲ್ ಬಳಿಯ ಸಸಿ, ಹುಲುಸಾಗಿ ಬೆಳೆದಿತ್ತು. ಅದನ್ನು ದುಷ್ಕರ್ಮಿಗಳು ಕಡಿದಿದ್ದಾರೆ' ಎಂದು ಸಿಟಿಜನ್ ಫಾರ್ ಕೆ.ಆರ್. ಪುರದ ಸ್ವಯಂಸೇವಕ ಬಾಲಾಜಿ ರಘೋತ್ತಮ್ ಬೇಸರ ವ್ಯಕ್ತಪಡಿಸಿದರು.

'ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿದಾಗ ಸ್ಥಳೀಯ ಮಳಿಗೆಯವರೇ ಕಡಿದಿದ್ದು ಮನದಟ್ಟಾಗಿದೆ. ಮಳಿಗೆಗಳ ಹೆಸರು ಕಾಣುತ್ತಿಲ್ಲ ಎಂಬ ಕಾರಣಕ್ಕೆ ಅವರು ಗಿಡನ್ನು ಕಡಿದಿದ್ದಾರೆ. ಕೊಂಬೆಗಳನ್ನು ತೆರವುಗೊಳಿಸಿದ್ದರೆ, ಅದು ಎತ್ತರಕ್ಕೆ ಬೆಳೆಯುತ್ತಿತ್ತು. ಆಗ ಮಳಿಗೆಗಳಿಗೆ ಯಾವುದೇ ಸಮಸ್ಯೆ ಆಗುತ್ತಿರಲಿಲ್ಲ. ಸಸಿಯ ಬುಡವನ್ನೇ ಕಡಿಯುವುದು ಸರಿಯಲ್ಲ. ಈ ಬಗ್ಗೆ ಪಾಲಿಕೆ ಅರಣ್ಯಾಧಿಕಾರಿಗಳಿಗೆ ದೂರು ನೀಡಿದ್ದೇವೆ' ಎಂದರು.

'ಪ್ರತಿನಿತ್ಯ ಮರಗಳನ್ನು ನೋಡುತ್ತಾ ರಸ್ತೆಯಲ್ಲಿ ಸಂಚರಿಸುತ್ತಿದ್ದೆ. ಎರಡು ವರ್ಷಗಳಿಂದ ಪೋಷಿಸಿದ್ದ ಸಸಿಯನ್ನು ಕಡಿದಿರುವುದು ಕಂಡು ಮನಸ್ಸಿಗೆ ನೋವಾಯಿತು' ಎಂದು ಸ್ಥಳೀಯರೊಬ್ಬರು ತಿಳಿಸಿದರು.

ಟಿ.ಸಿ.ಪಾಳ್ಯ ಸಿಗ್ನಲ್‌ನ ಬಳಿ ಮಳಿಗೆಯೊಂದರ ಎದುರಿನ ಸಸಿಯನ್ನು ಕಡಿದಿರುವುದು

### 'ಗಿಡ ಕಡಿದವರಿಗೆ ದಂಡ ವಿಧಿಸುತ್ತೇವೆ'

'ಮರ ಕಡಿದಿರುವ ಬಗ್ಗೆ ದೂರು ಬಂದಿದೆ. ಅಲ್ಲಿನ ಮಳಿಗೆ ಮಾಲೀಕರೇ ಈ ಕೃತ್ಯ ಎಸಗಿದ್ದಾರೆ ಎಂದು ತಿಳಿದುಬಂದಿದೆ. ಸ್ಥಳಕ್ಕೆ ಸೋಮವಾರ ಭೇಟಿ, ಮರ ಕಡಿದವರಿಗೆ ನೋಟಿಸ್ ನೀಡಿ, ದಂಡ ವಿಧಿಸುತ್ತೇವೆ' ಎಂದು ಬಿಬಿಎಂಪಿ ಉಪ ವಲಯ ಅರಣ್ಯಾಧಿಕಾರಿ ತಾರಾನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

### ಲೈಂಗಿಕ ದೌರ್ಜನ್ಯ ಆರೋಪದ ಅರ್ಜಿ ವಜಾ

'ಅಡ್ಮಿನ್‌ಗೆ ಹೊಸ ಸದಸ್ಯರನ್ನು ಸೇರಿಸುವ ಅಧಿಕಾರವಷ್ಟೇ ಇರುತ್ತದೆ. ಪೋಸ್ಟ್‌ಗಳನ್ನು ನಿಯಂತ್ರಿಸುವ ಅಧಿಕಾರವಲ್ಲ' ಎಂದ ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ

## ವಾಟ್ಸ್‌ಆ್ಯಪ್ ಗ್ರೂಪ್: 'ಸದಸ್ಯನ ಪೋಸ್ಟ್‌ಗೆ ಅಡ್ಮಿನ್ ಹೊಣೆಯಲ್ಲ'

**ಮುಂಬೈ:** ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸದಸ್ಯ ಆಕ್ಷೇಪಾರ್ಹ ಅಂಶಗಳನ್ನು ಪೋಸ್ಟ್ ಮಾಡಿದ್ದಲ್ಲಿ, ಅದಕ್ಕೆ ಆಯಾ ಗುಂಪು ಸೃಷ್ಟಿಸಿದವರು (ಅಡ್ಮಿನ್) ಹೊಣೆಯಲ್ಲ ಎಂದು ಬಾಂಬೆ ಹೈಕೋರ್ಟ್‌ನ ನಾಗಪುರ ಪೀಠ ಅಭಿಪ್ರಾಯಪಟ್ಟಿದೆ. ಅಲ್ಲದೆ, 33 ವರ್ಷದ ವ್ಯಕ್ತಿ ಮೇಲೆ ಹೂಡಿದ್ದ ಲೈಂಗಿಕ ದೌರ್ಜನ್ಯ ಆರೋಪದ ಅರ್ಜಿಯನ್ನು ವಜಾ ಮಾಡಿದೆ.

ಈ ಕುರಿತ ಆದೇಶ ಕಳೆದ ತಿಂಗಳೇ ಹೊರಬಿದ್ದಿದ್ದು, ಆದೇಶ ಪ್ರತಿ ಈಗ ಏ. 22ರಂದು ಲಭ್ಯವಾಗಿದೆ. ನ್ಯಾಯಮೂರ್ತಿ ಝಡ್.ಎ.ಹಕ್ ಮತ್ತು ಎ.ಬಿ.ಬೋರ್ಕರ್ ಅವರಿದ್ದ ವಿಭಾಗೀಯ ಪೀಠವು ಈ ಆದೇಶ ನೀಡಿದೆ. 'ಅಡ್ಮಿನ್‌ಗೆ ಹೊಸ ಸದಸ್ಯರನ್ನು ಸೇರಿಸುವ ಅಧಿಕಾರವಷ್ಟೇ ಇರುತ್ತದೆ. ಪೋಸ್ಟ್‌ಗಳನ್ನು ನಿಯಂತ್ರಿಸುವ ಅಧಿಕಾರವಲ್ಲ' ಎಂದಿದೆ.

ವಾಟ್ಸ್‌ಆ್ಯಪ್ ಗ್ರೂಪ್‌ವೊಂದರ ಅಡ್ಮಿನ್ ಆಗಿದ್ದ ಕಿಶೋರ್ ತರೋಣೆ (33) ಅವರ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್ ಈ ಅಭಿಪ್ರಾಯ ವ್ಯಕ್ತಪಡಿಸಿದೆ. ತಮ್ಮ ವಿರುದ್ಧ ಗೊಂಡಾ ಜಿಲ್ಲೆಯಲ್ಲಿ ಮಹಿಳೆಗೆ ಅಗೌರವ ಸೇರಿದಂತೆ ವಿವಿಧ ಸೆಕ್ಷನ್ ಅನ್ವಯ ಹೂಡಿದ್ದ ಮೊಕದ್ದಮೆ ವಜಾ ಕೋರಿ ಅರ್ಜಿ ಸಲ್ಲಿಸಿದ್ದರು.

ಗ್ರೂಪ್ ಸದಸ್ಯೆಯೊಬ್ಬರನ್ನು ಉಲ್ಲೇಖಿಸಿ ಸದಸ್ಯರೊಬ್ಬರು ಆಕ್ಷೇಪಾರ್ಹ ಪದ ಬಳಕೆ ವಿರುದ್ಧ ಕ್ರಮವಹಿಸಲು ಅಡ್ಮಿನ್ ವಿಫಲರಾಗಿದ್ದಾರೆ. ಹೀಗೆ ಆಕ್ಷೇಪಾರ್ಹ ಅಂಶ ದಾಖಲಿಸಿದ್ದ ಸದಸ್ಯನನ್ನು ಗ್ರೂಪ್‌ನಿಂದ ಕೈಬಿಡಲು ಅವರು ವಿಫಲರಾಗಿದ್ದರು. ಇದಕ್ಕಾಗಿ ಕ್ಷಮೆಯನ್ನು ಕೇಳಿರಲಿಲ್ಲ ಎಂದು ದೂರಲಾಗಿತ್ತು.

### ಪಾಸಿಟಿವ್ ಪ್ರಕರಣಗಳ ಸಂಖ್ಯೆ ಹೆಚ್ಚಳ • ಪಿಎಚ್‌ಸಿಗಳಲ್ಲಿ ಸಿಬ್ಬಂದಿ ಕೊರತೆ

# ಫಲಿತಾಂಶ ವಿಳಂಬ– ಆತಂಕ ನಿರಂತರ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವ ನಡುವೆಯೇ, ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿಕೊಳ್ಳಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ (ಪಿಎಚ್‌ಸಿ) ಎದುರು ಜನ ಸಾಲುಗಟ್ಟಿ ನಿಲ್ಲುವ ಪರಿಸ್ಥಿತಿ ಎದುರಾಗಿದೆ.

'ಪರೀಕ್ಷೆ ಮಾಡಿಸಿಕೊಳ್ಳಲೂ ಈಗ ಗಂಟೆಗಟ್ಟಲೇ ಕಾಯಬೇಕಾಗಿದೆ. ನನ್ನ ಅಣ್ಣನಿಗೆ ಕೋವಿಡ್ ಪಾಸಿಟಿವ್ ಬಂದಿದೆ. ಮನೆಯಲ್ಲಿ ಇರುವ ಎಲ್ಲರೂ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ವೈದ್ಯರು ಹೇಳಿದ್ದರು. ನಿನ್ನೆ (ಭಾನುವಾರ) ಬಂದು ಜನ ನೋಡಿ ವಾಪಸ್ ಹೋಗಿದ್ದೆ. ಇವತ್ತು ಮತ್ತೆ ಸರದಿಯಲ್ಲಿ ನಿಲ್ಲಬೇಕಾಗಿದೆ' ಎಂದು ಶಿವಾಜಿನಗರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದಿದ್ದ ಸೈಯದ್ ಹೇಳಿದರು.

'ಮೂರು ದಿನಗಳ ಹಿಂದೆಯೇ ಪರೀಕ್ಷೆ ಮಾಡಿಸಿದ್ದೆ. ಈವರೆಗೆ ಫಲಿತಾಂಶ ಬಂದಿಲ್ಲ. ಕೆಮ್ಮು ಮತ್ತು ಸುಸ್ತು ಇದೆ. ಮನೆಯವರೂ ಆತಂಕದಲ್ಲಿದ್ದಾರೆ. ನೆಗೆಟಿವ್ ಅಥವಾ ಪಾಸಿಟಿವ್ ಯಾವುದೇ ಆದರೂ ವರದಿ ಬೇಗ ಬಂದರೆ ಸಮಾಧಾನ' ಎಂದು ಗಂಗಾನಗರದ ಗೋವಿಂದ್ ಹೇಳಿದರು.

ಕೆಂಗೇರಿ ಉಪನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಸೋಮವಾರ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಲು ಬಂದಿದ್ದ ಜನ ಪ್ರಜಾವಾಣಿ ಚಿತ್ರ/ ರಂಜು ಪಿ

'ಉದ್ದೇಶಪೂರ್ವಕವಾಗಿ ವಿಳಂಬ ಮಾಡುತ್ತಿಲ್ಲ. ಮೊದಲು 50ರಿಂದ 80 ಜನರ ಗಂಟಲು ದ್ರವದ ಮಾದರಿ ಸಂಗ್ರಹಿಸಲಾಗುತ್ತಿತ್ತು. ಈಗ 300ಕ್ಕೂ ಹೆಚ್ಚು ಜನ ಬರುತ್ತಿದ್ದಾರೆ. ವೈಜ್ಞಾನಿಕ ಮಾನದಂಡಗಳ ಪ್ರಕಾರ, ಒಂದು ಮಾದರಿಯನ್ನು ಸಂಗ್ರಹಿಸಿ, ವಿವರ ದಾಖಲಿಸಿ, ಅದನ್ನು ಪರೀಕ್ಷೆ ಮಾಡಲು 8ರಿಂದ 10 ತಾಸು ಬೇಕಾಗುತ್ತದೆ. ಸಾವಿರಾರು ಸಂಖ್ಯೆಯಲ್ಲಿ ಮಾದರಿ ಸಂಗ್ರಹಿಸುವಾಗ ಸಹಜವಾಗಿ ವಿಳಂಬವಾಗುತ್ತದೆ' ಎಂದು ಶುಶ್ರೂಷಕರೊಬ್ಬರು ಹೇಳಿದರು.

'ಕೊನೆಯ ಫಲಿತಾಂಶ ನೆಗೆಟಿವ್ ಇದ್ದರೆ ಅದರ ವಿವರವನ್ನು ಐಸಿಎಂಆರ್ ಪೋರ್ಟಲ್‌ಗೆ ದಾಖಲಿಸುವ ಅಗತ್ಯವಿರುವುದಿಲ್ಲ. ರೋಗಿಯ ಮೊಬೈಲ್ ಸಂಖ್ಯೆಗೆ ನೆಗೆಟಿವ್ ಎಂಬ ಮಾಹಿತಿಯನ್ನು ನೇರವಾಗಿ ರವಾನಿಸಲಾಗುತ್ತದೆ. ಆದರೆ, ಪಾಸಿಟಿವ್ ಬಂದರೆ ಎಸ್‌ಆರ್‌ಎಫ್ ಐಡಿಯನ್ನು ಐಸಿಎಂಆರ್‌ಗೆ ರವಾನಿಸಬೇಕು. ಅಲ್ಲಿಂದ ಸ್ವಯಂಚಾಲಿತವಾಗಿ ಬಿಬಿಎಂಪಿ ಪೋರ್ಟಲ್‌ಗೆ ಆ ವಿವರ ಹೋಗಿ ಬಿಯು ಸಂಖ್ಯೆ ಸೃಷ್ಟಿಯಾಗುತ್ತದೆ. ಮೊದಲು ಪಾಸಿಟಿವ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿರಲಿಲ್ಲ. ಈಗ ಬಹುತೇಕರಲ್ಲಿ ಕೋವಿಡ್ ದೃಢಪಡುತ್ತಿರುವುದರಿಂದ ಫಲಿತಾಂಶ ಬರುವುದು ವಿಳಂಬವಾಗುತ್ತಿದೆ' ಎಂದು ಪಿಎಚ್‌ಸಿಯ ಸಿಬ್ಬಂದಿಯೊಬ್ಬರು ಹೇಳಿದರು.

'ಕಳೆದ ಬಾರಿ ಲಸಿಕೆ ವಿತರಣೆಯ ಕೆಲಸ ಇರಲಿಲ್ಲ. ಈಗ ಒಂದೇ ಕೇಂದ್ರದಲ್ಲಿ ಲಸಿಕೆ ವಿತರಣೆ ಮತ್ತು ಗಂಟಲು ದ್ರವ ಸಂಗ್ರಹ ಕಾರ್ಯ ಎರಡೂ ನಡೆಯುತ್ತಿದೆ. ಸಿಬ್ಬಂದಿ ಕೊರತೆಯೂ ಉಂಟಾಗಿದೆ. ಫಲಿತಾಂಶ ವಿಳಂಬವಾಗಲು ಇದೂ ಕಾರಣ' ಎಂದು ಅವರು ಹೇಳಿದರು.

### 'ಆರೋಗ್ಯ ಅವ್ಯವಸ್ಥೆ: ಪ್ರಕ್ಷುಬ್ಧ ಸ್ಥಿತಿ'

**ಬೆಂಗಳೂರು:** 'ಚುನಾವಣೆಗೆ ಕೋಟ್ಯಂತರ ಹಣ ಖರ್ಚು ಮಾಡುತ್ತಿರುವ ಸರ್ಕಾರಗಳಿಗೆ ಕೊರೊನಾದಿಂದ ಜನರನ್ನು ರಕ್ಷಿಸಬೇಕು ಎಂಬ ಹೊಣೆ ಇಲ್ಲ. ಈಗಿನ ಪ್ರಕ್ಷುಬ್ಧ ಪರಿಸ್ಥಿತಿಗೆ ನಮ್ಮ ಆರೋಗ್ಯ ಅವ್ಯವಸ್ಥೆಯೇ ಕಾರಣ' ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ಖಂಡಿಸಿದೆ.

'ಕೊರೊನಾದಿಂದ ಸಾವಿರಾರು ಜನ ಸಾಯುತ್ತಿದ್ದಾರೆ. ಚಿತಾಗಾರಗಳು ಭರ್ತಿಯಾಗಿ ಸಿಕ್ಕ ಜಾಗದಲ್ಲಿ ಶವಗಳ ಅಂತ್ಯಕ್ರಿಯೆ ನಡೆಯುತ್ತಿದೆ. ಈ ನಡುವೆಯೇ ಪ್ರಧಾನಿ ಮೋದಿ ಅವರು 'ಚುನಾವಣಾ ರೋಡ್‌ಶೋ ಹಾಗೂ ರ‍್ಯಾಲಿಗಳಲ್ಲಿ ಇಷ್ಟು ಜನರನ್ನು ನೋಡಿರಲಿಲ್ಲ' ಎಂದು ಭಾಷಣ ಮಾಡಿರುವುದು ನಾಚಿಕೆಗೇಡಿನ ಸಂಗತಿ' ಎಂದು ಎಐಡಿಎಸ್‌ಒ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಕಲ್ಯಾಣ್ ದೂರಿದ್ದಾರೆ.

'ಆರೋಗ್ಯ ವ್ಯವಸ್ಥೆ ಬಲಪಡಿಸುವುದು ಹಾಗೂ ಎಲ್ಲರಿಗೂ ಉಚಿತ ಆರೋಗ್ಯ ಸೇವೆ, ಲಸಿಕೆ ನೀಡುವಂತೆ ಒತ್ತಾಯಿಸಿ ಮೇ 1ರವರೆಗೆ ಸಂಘಟನೆಯು ಅಖಿಲ ಭಾರತ ಸಪ್ತಾಹ ದಿನಕ್ಕೆ ಕರೆ ನೀಡಿದೆ. ಜಿಲ್ಲಾವಾರು ಆನ್‌ಲೈನ್ ಚಳವಳಿ ನಡೆಸಲಿದ್ದೇವೆ' ಎಂದು ಹೇಳಿದ್ದಾರೆ.

### ಯಲಹಂಕ: ಕೋವಿಡ್ ನಿಯಂತ್ರಣ ಕೊಠಡಿ ಆರಂಭ

**ಬೆಂಗಳೂರು:** ಬಿಬಿಎಂಪಿಯು ಯಲಹಂಕ ವಲಯದಲ್ಲಿ ಕೋವಿಡ್ ನಿಯಂತ್ರಣ ಕೊಠಡಿ ಆರಂಭಿಸಿದೆ. ಎನ್.ಇ.ಎಸ್ ವೃತ್ತದ ಮಿನಿ ವಿಧಾನಸೌಧದ ಮೂರನೇ ಮಹಡಿಯಲ್ಲಿ ಈ ನಿಯಂತ್ರಣ ಕೊಠಡಿ ಕಾರ್ಯ ನಿರ್ವಹಿಸಲಿದೆ.

ಕೋವಿಡ್ ಕುರಿತ ಸೇವೆಗಳಿಗಾಗಿ ಸಾರ್ವಜನಿಕರು ಈ ನಿಯಂತ್ರಣ ಕೊಠಡಿಯನ್ನು (ಸಹಾಯವಾಣಿ: 080-61972844 ಅಥವಾ 1912) ಸಂಪರ್ಕಿಸಬಹುದು.

'ಕೊರೊನಾ ಸೋಂಕಿತರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸುವ ಬಗ್ಗೆ, ಸೋಂಕಿತರು ಮನೆಯಲ್ಲೇ ಪ್ರತ್ಯೇಕವಾಸಕ್ಕೆ ಒಳಗಾಗುವುದಾದರೆ ಮಾಡಿಕೊಳ್ಳಬೇಕಾದ ವ್ಯವಸ್ಥೆಗಳ ಬಗ್ಗೆ, ಔಷಧಿಯ ಕುರಿತು, ಆಸ್ಪತ್ರೆಗೆ ಕೋವಿಡ್ -19 ಸೋಂಕಿತರನ್ನು ದಾಖಲಿಸಲು ಅಂಬ್ಯುಲೆನ್ಸ್ ವ್ಯವಸ್ಥೆ, ಕೋವಿಡ್‌ನಿಂದ ಸತ್ತವರ ಮೃತದೇಹ ಸಾಗಿಸುವ ವಾಹನ ವ್ಯವಸ್ಥೆ ಹಾಗೂ ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಇತರ ವಿಷಯಗಳ ಕುರಿತು ನೆರವು ಪಡೆಯಲು ಈ ನಿಯಂತ್ರಣ ಕೊಠಡಿ ಬಳಸಿಕೊಳ್ಳಬಹುದು' ಎಂದು ವಲಯ ಆಯುಕ್ತ ಡಿ.ರಂದೀಪ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

## ಹಾಸಿಗೆ 'ಬ್ಲಾಕ್': ಅಪೋಲೊ ವಿರುದ್ಧ ಎಫ್‌ಐಆರ್

### ಬಿಡುಗಡೆ ನಂತರವೂ ರೋಗಿಯ ಹೆಸರಲ್ಲಿ ಹಾಸಿಗೆ ಮೀಸಲು

ಪ್ರಜಾವಾಣಿ ವಾರ್ತೆ

**ಬೊಮ್ಮನಹಳ್ಳಿ:** ಕೋವಿಡ್ ರೋಗಿಗಳ ಚಿಕಿತ್ಸೆಗೆ ಹಾಸಿಗೆಯನ್ನು ಮೀಸಲಿಡಲು ಮೊದಲಿನಿಂದಲೂ ಅಸಹಕಾರ ತೋರುತ್ತಿರುವ ನಗರದ ಕೆಲವು ಖಾಸಗಿ ಆಸ್ಪತ್ರೆಗಳು, ಈಗ ಈ ವಿಷಯದಲ್ಲಿ 'ಕಳ್ಳಾಟ' ಮುಂದುವರಿಸಿವೆ.

ರೋಗಿಯು ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ ನಂತರವೂ ಅವರ ಹೆಸರಿನಲ್ಲಿ 'ಕಾಯ್ದಿರಿಸುವ' ಮೂಲಕ ದುರುಪಯೋಗ ಮಾಡಿಕೊಂಡಿರುವ ಆರೋಪದ ಮೇಲೆ ಬನ್ನೇರುಘಟ್ಟದಲ್ಲಿರುವ ಅಪೋಲೊ ಆಸ್ಪತ್ರೆಯ ಮುಖ್ಯಸ್ಥರು, ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ಈ ಆಸ್ಪತ್ರೆಗೆ ಏಪ್ರಿಲ್ 14 ರಂದು ಸೂರ್ಯನಾರಾಯಣ ಶೆಟ್ಟಿ ಎಂಬುವವರನ್ನು ಸರ್ಕಾರಿ ಕೋಟಾದಡಿ ಒಳರೋಗಿಯಾಗಿ ದಾಖಲು ಮಾಡಿಕೊಳ್ಳಲಾಗಿತ್ತು. ಅವರು ಗುಣಮುಖರಾದ ಕಾರಣ ಏಪ್ರಿಲ್ 20 ರಂದು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ. ಆದರೆ ರೋಗಿ ಬಿಡುಗಡೆ ಆಗಿಲ್ಲ, ಆಸ್ಪತ್ರೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಪ್ಪು ಮಾಹಿತಿಯನ್ನು ಆಸ್ಪತ್ರೆ ನೀಡಿದೆ. ಈ ಸಂಬಂಧ ಅಧಿಕಾರಿಗಳ ತಂಡ ದಿಢೀರ್ ಭೇಟಿ ನೀಡಿ ಪರಿಶೀಲಿಸಿದಾಗ, ರೋಗಿ ಬಿಡುಗಡೆಗೊಂಡಿರುವುದು ಬಯಲಾಗಿದೆ.

ಬನ್ನೇರುಘಟ್ಟ ರಸ್ತೆಯಲ್ಲಿರುವ ಅಪೊಲೊ ಆಸ್ಪತ್ರೆಯ ಹೊರನೋಟ

ರಾಜಾರಾಂ ಎಂಬ ವ್ಯಕ್ತಿ ಏಪ್ರಿಲ್ 16 ರಂದು ಸರ್ಕಾರಿ ಕೋಟಾದಡಿ ಅಪೋಲೋ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಚಿಕಿತ್ಸೆ ಫಲಕಾರಿಯಾಗದೇ ಏಪ್ರಿಲ್ 20 ರಂದು ಮೃತಪಟ್ಟಿದ್ದಾರೆ. ಮೃತರ ಕಡೆಯವರಿಂದ ₹ 2.49 ಲಕ್ಷ ಪಾವತಿ ಮಾಡಿಕೊಂಡಿರುವುದು ಮಾತ್ರವಲ್ಲದೆ, ಏಪ್ರಿಲ್ 25ರವರೆಗೆ ರೋಗಿ ದಾಖಲಾಗಿದ್ದರು ಎಂದು ಸುಳ್ಳು ಮಾಹಿತಿ ನೀಡಿ ವಂಚಿಸಲಾಗಿದೆ.

ಅದೇ ರೀತಿಯಲ್ಲಿ ಕಾಶಿನಾಥ್ ಎಂಬ ರೋಗಿಯು ಏಪ್ರಿಲ್ 17 ರಂದು ದಾಖಲಾಗಿ ಏಪ್ರಿಲ್ 22 ರಂದು ಬಿಡುಗಡೆಗೊಂಡಿದ್ದರೂ ಪೋರ್ಟಲ್‌ನಲ್ಲಿ ಏಪ್ರಿಲ್ 25ರವರೆಗೆ ಒಳರೋಗಿಯಾಗಿದ್ದರೆಂದು ನಮೂದಿಸಿ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಈ ಸಂಬಂಧ ಆಸ್ಪತ್ರೆಯ ಮುಖ್ಯ-ಕಾರ್ಯನಿರ್ವಹಣಾಧಿಕಾರಿ ಡೇವಿಡ್, ಶಸ್ತ್ರಚಿಕಿತ್ಸೆ ವಿಭಾಗದ ಮುಖ್ಯಸ್ಥೆ ಕಲ್ಪನಾ, ವೈದ್ಯಕೀಯ ಅಧೀಕ್ಷಕರಾದ ಶಾಂತಾ, ಸಹನಾ, ಆರ್.ಚಂದನಾ ಹಾಗೂ ಮಂಜುಳ ಸೇರಿ ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಮೂವರಿಗೆ ನೋಟಿಸ್ ನೀಡಿದ್ದು, ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ ಎಂದು ದಕ್ಷಿಣ ವಿಭಾಗದ ಡಿಸಿಪಿ ಹರೀಶ್‌ಪಾಂಡೆ ಹೇಳಿದ್ದಾರೆ.

ಬಿಬಿಎಂಪಿ ಬೊಮ್ಮನಹಳ್ಳಿ ವಲಯದ ಆರೋಗ್ಯಾಧಿಕಾರಿ ಡಾ.ನಾಗೇಂದ್ರಕುಮಾರ್ ದೂರು ನೀಡಿದ್ದರು.

'ಸಮಾಜದಲ್ಲಿ ಪ್ರತಿಷ್ಠಿತ ಆಸ್ಪತ್ರೆ ಎಂದು ಕರೆಯಿಸಿಕೊಂಡ ಇಂಥವರು, ಅಮಾನವೀಯವಾಗಿ ನಡೆದುಕೊಳ್ಳುತ್ತಿರುವುದು ನೋವಿನ ಸಂಗತಿ. ಎಷ್ಟೇ ಪ್ರಭಾವಿಗಳಾಗಿದ್ದರೂ ಗಂಭೀರ ಕ್ರಮ ಕೈಗೊಳ್ಳುವುದು ಅನಿವಾರ್ಯ' ಎಂದು ಬಿಬಿಎಂಪಿ ಬೊಮ್ಮನಹಳ್ಳಿ ಜಂಟಿ ಆಯುಕ್ತ ಎಂ.ರಾಮಕೃಷ್ಣ ಹೇಳಿದರು.

## 'ಹೆಚ್ಚು ಕಡಿಮೆ ಆದರೆ ನಾವು ಹೊಣೆಯಲ್ಲ'

### ಬಿ.ಯು.ನಂಬರ್ ಪಡೆದು ಬರುವ ರೋಗಿಗಳನ್ನು ದಾಖಲಿಸಲು ಹಿಂದೇಟು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಮ್ಮ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆ ಇದೆ. ಉಸಿರಾಟದ ಸಮಸ್ಯೆ ಕಾಣಿಸಿಕೊಂಡು ಏನಾದರೂ ಹೆಚ್ಚು ಕಡಿಮೆ ಆದರೆ, ನಮ್ಮನ್ನು ದೂರದಿರಿ. ಆಸ್ಪತ್ರೆಗೆ ದಾಖಲಾಗುವ ಮುನ್ನವೇ ಯೋಚಿಸಿ....'

ಬಿ.ಯು.ನಂಬರ್ ಪಡೆದು ಚಿಕಿತ್ಸೆಗೆ ದಾಖಲಾಗಲು ಬರುವ ಕೋವಿಡ್ ರೋಗಿಗಳು ಹಾಗೂ ಅವರ ಬಂಧುಗಳ ಜೊತೆ ಆಸ್ಪತ್ರೆ ಸಿಬ್ಬಂದಿ ವರ್ತಿಸುವ ಪರಿ ಇದು.

ಲಗ್ಗೆರೆಯ ಕೋವಿಡ್ ರೋಗಿಯೊಬ್ಬರ ಚಿಕಿತ್ಸೆಗೆ ಬಿಬಿಎಂಪಿಯು ಕೇಂದ್ರೀಕೃತ ಹಾಸಿಗೆ ಹಂಚಿಕೆ ವ್ಯವಸ್ಥೆಯ ಮೂಲಕ ಸಪ್ತಗಿರಿ ಆಸ್ಪತ್ರೆಯ ಎಚ್‌ಡಿಯು ಹಾಸಿಗೆಯನ್ನು ಶನಿವಾರ ಕಾಯ್ದಿರಿಸಿತ್ತು. ಬಿಬಿಎಂಪಿ ವಾರ್ ರೂಂ ಸಿಬ್ಬಂದಿ ರೋಗಿಯ ಬಂಧುಗಳಿಗೆ ಕರೆ ಮಾಡಿ ಸಪ್ತಗಿರಿ ಆಸ್ಪತ್ರೆಗೆ ರೋಗಿಯನ್ನು ದಾಖಲಿಸುವಂತೆ ಹೇಳಿದ್ದರು.

'ಬಿಬಿಎಂಪಿಯಿಂದ ಕರೆ ಬಂದ ಬಳಿಕ ನಾವು ತಂದೆಯನ್ನು (72 ವರ್ಷ) ಕರೆದುಕೊಂಡು ಸಪ್ತಗಿರಿ ಆಸ್ಪತ್ರೆಗೆ ಹೋದೆವು. ಬಿಬಿಎಂಪಿಯವರು ನಿಮಗೆ ಹಾಸಿಗೆಯನ್ನೇ ಹಂಚಿಕೆ ಮಾಡಿಲ್ಲ. ಯಾರೋ ನಿಮ್ಮ ದಾರಿ ತಪ್ಪಿಸಿದ್ದಾರೆ ಎಂದು ಅಲ್ಲಿನ ಸಿಬ್ಬಂದಿ ಹೇಳಿದರು. ಈ ಬಗ್ಗೆ ಬಿಬಿಎಂಪಿಯವರನ್ನು ಸಂಪರ್ಕಿಸಿದಾಗ, ಅದೇ ಆಸ್ಪತ್ರೆಯಲ್ಲಿ ಹಾಸಿಗೆ ಕಾಯ್ದಿರಿಸಿದ್ದನ್ನು ಖಚಿತಪಡಿಸಿದರು. ಈ ಬಗ್ಗೆ ಆಸ್ಪತ್ರೆ ಸಿಬ್ಬಂದಿ ಗಮನಕ್ಕೆ ತಂದರೂ ಅವರು ನಮ್ಮ ತಂದೆಯನ್ನು ದಾಖಲಿಸಿಕೊಳ್ಳಲು ಒಪ್ಪಲಿಲ್ಲ' ಎಂದು ರೋಗಿಯ ಪುತ್ರ 'ಪ್ರಜಾವಾಣಿ'ಗೆ ತಿಳಿಸಿದರು.

**ಮುಖ್ಯಾಂಶಗಳು**

- ಬಿಬಿಎಂಪಿ ವತಿಯಿಂದ ದಾಖಲಾಗುವ ರೋಗಿಗಳ ಆರೈಕೆಗೆ ಅಸಡ್ಡೆ
- ಆಮ್ಲಜನಕ ಸಿಗುವ ಖಾತರಿ ಇಲ್ಲ ಎಂದು ಸಬೂಬು ಹೇಳುವ ಆಸ್ಪತ್ರೆಗಳು
- ರೋಗಿಗಳನ್ನು ಸಾಗಹಾಕಲು ನಾನಾ ನೆಪ, ರೋಗಿಗಳ ಬಂಧುಗಳು ಕಂಗಾಲು

'ನಮ್ಮ ಕಡೆಯವರು ಬಿಬಿಎಂಪಿ ಹಿರಿಯ ಅಧಿಕಾರಿಗಳ ಜೊತೆ ಹಾಗೂ ನೋಡಲ್ ಅಧಿಕಾರಿ ಜೊತೆ ಮಾತನಾಡಿ, ಅವರು ಸೂಚನೆ ನೀಡಿದ ಬಳಿಕ ಆಸ್ಪತ್ರೆ ಸಿಬ್ಬಂದಿ ತಂದೆಯವರನ್ನು ದಾಖಲಿಸಲು ಒಪ್ಪಿದರು. ಆದರೆ, ರೋಗಿಗೆ ಎಚ್‌ಡಿಯು ಹಾಸಿಗೆ ಒದಗಿಸಲು ಸಾಧ್ಯವಿಲ್ಲ. ಉಸಿರಾಟದಲ್ಲಿ ಏರುಪೇರಾಗಿ ಆಮ್ಲಜನಕ ಬೇಕೆಂದರೆ ನಮ್ಮಲ್ಲಿ ಸಿಗುವುದಿಲ್ಲ. ಇದೆಲ್ಲ ತಿಳಿದೂ ರೋಗಿಯನ್ನು ಇಲ್ಲೇ ದಾಖಲಿಸುವುದು ನಿಮ್ಮಿಷ್ಟ ಎಂದು ಆಸ್ಪತ್ರೆ ಸಿಬ್ಬಂದಿ ಹೇಳಿದರು.'

'ಆಸ್ಪತ್ರೆಯವರೇ ಹೀಗೆ ಹೇಳಿದ ಬಳಿಕ ಅಲ್ಲಿ ನಮ್ಮ ತಂದೆಯವರನ್ನು ದಾಖಲಿಸುವುದರಲ್ಲಿ ಅರ್ಥವಿಲ್ಲ ಎಂದೆನಿಸಿತು. ಬಳಿಕ ತಂದೆಯವರಿಗೆ ಮನೆಯಲ್ಲೇ ಆರೈಕೆ ಮಾಡಲು ನಿರ್ಧರಿಸಿದ್ದೇವೆ' ಎಂದರು.

ಈ ಬಗ್ಗೆ ಸಪ್ತಗಿರಿ ಆಸ್ಪತ್ರೆಯವರನ್ನು ಸಂಪರ್ಕಿಸಿದಾಗ, 'ಆಮ್ಲಜನಕ ಕೊರತೆ ಇರುವುದು ನಿಜ. ನಾವು ವಾಸ್ತವವನ್ನು ರೋಗಿಯ ಕಡೆಯವರಿಗೆ ತಿಳಿಸಿದ್ದೇವೆ. ಆಮ್ಲಜನಕ ಸಿಗದೆ ಸಮಸ್ಯೆ ಆದರೆ ನಮ್ಮನ್ನು ದೂರಬಾರದು ಎಂಬ ಕಾರಣಕ್ಕೆ ಮೊದಲೇ ವಸ್ತುಸ್ಥಿತಿ ವಿವರಿಸಿದ್ದೇವೆ' ಎಂದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಬಿಎಂಪಿ ಅಧಿಕಾರಿಯೊಬ್ಬರು, 'ಬಿ.ಯು.ನಂಬರ್ ಪಡೆದು ದಾಖಲಾಗುವ ರೋಗಿಗಳ ಚಿಕಿತ್ಸೆ ಬಗ್ಗೆ ಅನೇಕ ಆಸ್ಪತ್ರೆಗಳು ಕಾಳಜಿ ವಹಿಸದಿರುವುದು ನಮ್ಮ ಗಮನಕ್ಕೂ ಬಂದಿದೆ. ಹಿರಿಯ ಅಧಿಕಾರಿಗಳು ಹಾಗೂ ಸರ್ಕಾರ ಕೂಡಲೇ ಇಂತಹ ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

'ಬಿಬಿಎಂಪಿ ಕಳುಹಿಸಿಕೊಡುವ ರೋಗಿಗಳಲ್ಲಿ ಭಯ ಹುಟ್ಟಿಸಿ ಸಾಗ ಹಾಕುವ ಆಸ್ಪತ್ರೆಗಳು ಆ ರೋಗಿಗಳ ಚಿಕಿತ್ಸೆಗೆ ಹಂಚಿಕೆಯಾದ ಹಾಸಿಗೆಗಳನ್ನು ಖಾಸಗಿಯಾಗಿ ದಾಖಲಾಗುವ ರೋಗಿಗಳ ಆರೈಕೆಗೆ ಬಳಸಿಕೊಳ್ಳುತ್ತವೆ.' ಎಂದು ಹೆಸರು ಬಹಿರಂಗಪಡಿಸಲು ಬಯಸದ 'ಆರೋಗ್ಯಮಿತ್ರ' ಸಿಬ್ಬಂದಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

## 'ಅನವಶ್ಯಕವಾಗಿ ಹಾಸಿಗೆಗಳನ್ನು ಆಕ್ರಮಿಸಿಕೊಳ್ಳದಿರಿ'

**ಗದಗ:** 'ದೇಶದ ಉದ್ದಗಲಕ್ಕೂ ಕೋವಿಡ್-19 ಎರಡನೇ ಅಲೆ ಅತಿವೇಗದಿಂದ ಹರಡುತ್ತಿದೆ. ಇದೊಂದು ಸಾಂಕ್ರಾಮಿಕ ರೋಗವಾಗಿರುವುದರಿಂದ ಸ್ವಚ್ಛತೆಗೆ ಹೆಚ್ಚಿನ ಮಹತ್ವ ನೀಡಬೇಕು' ಎಂದು ಡಂಬಳ- ಗದಗ ತೋಂಟದಾರ್ಯ ಮಠದ ಸಿದ್ಧರಾಮ ಸ್ವಾಮೀಜಿ ತಿಳಿಸಿದ್ದಾರೆ.

'ಪ್ರತಿಯೊಬ್ಬರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಸುರಕ್ಷಿತ ಅಂತರ ಕಾಯ್ದುಕೊಳ್ಳಬೇಕು. ವೈದ್ಯಕೀಯ ಕ್ಷೇತ್ರದ ಸತತ ಸಂಶೋಧನೆಯ ಫಲವಾಗಿ ಲಸಿಕೆ ಸಿಕ್ಕಿದ್ದು, ಎಲ್ಲರೂ ತಪ್ಪದೇ ಹಾಕಿಸಿಕೊಳ್ಳಬೇಕು. ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಆಹಾರ ಮತ್ತು ಮನೆಮದ್ದನ್ನು ಸೇವಿಸಬೇಕು' ಎಂದಿದ್ದಾರೆ.

'ಮದ್ಯಪಾನ, ಧೂಮಪಾನ ಮೊದಲಾದ ವ್ಯಸನಗಳಿಂದ ದೂರವಿರಬೇಕು. ಸದಾ ಸ್ವಚ್ಛತೆಯ ಬಗ್ಗೆ ಗಮನಹರಿಸಬೇಕು. ಆಗಾಗ ಸಾಬೂನಿನಿಂದ ಕೈಕಾಲು-ಮುಖವನ್ನು ಸ್ವಚ್ಛವಾಗಿ ತೊಳೆದುಕೊಳ್ಳುತ್ತಿರಬೇಕು. ಅನವಶ್ಯಕವಾಗಿ ಮನೆಯಿಂದ ಹೊರಹೋಗಬಾರದು. ಈ ರೀತಿ ಎಲ್ಲರೂ ಕಾಳಜಿ ವಹಿಸಿದರೆ ಕೋವಿಡ್-19 ಅನ್ನು ನಿಯಂತ್ರಿಸಬಹುದು' ಎಂದು ಸಲಹೆ ನೀಡಿದ್ದಾರೆ.

'ಆರೋಗ್ಯದಲ್ಲಿ ಹೆಚ್ಚಿನ ತೊಂದರೆ ಇಲ್ಲದಿದ್ದರೆ ಆಸ್ಪತ್ರೆಯ ಹಾಸಿಗೆಗಳನ್ನು ಆಕ್ರಮಿಸಿಕೊಳ್ಳುವುದು ಬೇಡ. ಹೆಚ್ಚು ತೊಂದರೆ ಇರುವವರಿಗೆ ಅವಕಾಶ ಕಲ್ಪಿಸಿಕೊಡಬೇಕು. ಅನವಶ್ಯಕವಾಗಿ ಎಲ್ಲರೂ ಭಯದಿಂದ ಆಸ್ಪತ್ರೆಗಳತ್ತ ಮುಖ ಮಾಡಿದರೆ ಆಸ್ಪತ್ರೆಯಲ್ಲಿ ಹಾಸಿಗೆ, ಆಮ್ಲಜನಕ, ಜೀವರಕ್ಷಕ ಔಷಧಿ ಮುಂತಾದವುಗಳ ಕೊರತೆ ಉಂಟಾಗಿ ಗಂಭೀರ ಸಮಸ್ಯೆ ತಲೆದೋರಬಹುದು. ಆದ್ದರಿಂದ, ಸದ್ಯದ ತುರ್ತುಪರಿಸ್ಥಿತಿಯಲ್ಲಿ ಸಂಯಮದಿಂದ ಮತ್ತು ಜನಪರ ಕಾಳಜಿಯಿಂದ ವರ್ತಿಸುವುದು ಅತ್ಯವಶ್ಯವಾಗಿದೆ' ಎಂದು ತಿಳಿಸಿದ್ದಾರೆ.

'ಯಾವುದಕ್ಕೂ ಭಯಬೇಡ. ನಾವೆಲ್ಲರೂ ಸದಾ ಜಾಗೃತರಾಗುವ ಮೂಲಕ ಕೋವಿಡ್ ಮೆಟ್ಟಿ ನಿಲ್ಲೋಣ.' ಎಂದು ಶ್ರೀಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋವಿಡ್ ರೋಗಿಗಳಿಗೆ ತುರ್ತು ಆಮ್ಲಜನಕ ವ್ಯವಸ್ಥೆಗೆ ಅನುಕೂಲವಾಗುವಂತೆ ರಾಜ್ಯಸಭಾ ಸದಸ್ಯ ರಾಜೀವ್ ಚಂದ್ರಶೇಖರ್ ಅವರ 'ನಮ್ಮ ಬೆಂಗಳೂರು ಪ್ರತಿಷ್ಠಾನ'ದ (ಎನ್‌ಬಿಎಫ್) ವತಿಯಿಂದ ಆಮ್ಲಜನಕ ಸಾಂದ್ರಕ ಯಂತ್ರಗಳನ್ನು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕೊಬ್ ಅವರು ಸಂಸದ ತೇಜಸ್ವಿ ಸೂರ್ಯ ಅವರಿಗೆ ಸೋಮವಾರ ಹಸ್ತಾಂತರಿಸಿದರು.

## ಬಿಬಿಎಂಪಿ ಹೆಸರಲ್ಲಿ ಬರುತ್ತಿದೆ 'ಸುಳ್ಳು' ಕರೆ!

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ದೃಢಪಟ್ಟವರಿಗೆ ಹಾಸಿಗೆ, ಚಿಕಿತ್ಸೆ ನೀಡಲು ಸರ್ಕಾರ ಹರಸಾಹಸ ಪಡುತ್ತಿದ್ದರೆ, ಸೋಂಕು ತಗುಲಿರದವರಿಗೆ ಕರೆ ಮಾಡುತ್ತಿರುವ ಬಿಬಿಎಂಪಿ ಹೆಸರಿನಲ್ಲಿ ಕರೆ ಮಾಡುತ್ತಿರುವ ಕೆಲವರು, 'ನಿಮಗೆ ಕೋವಿಡ್ ಪಾಸಿಟಿವ್ ಬಂದಿದೆ, ಆಂಬುಲೆನ್ಸ್ ಕಳುಹಿಸುತ್ತೇವೆ, ಸಿದ್ಧವಾಗಿರಿ' ಎಂದು ಸಾರ್ವಜನಿಕರಿಗೆ ಕರೆ ಮಾಡುತ್ತಿದ್ದಾರೆ!

ಎಚ್‌ಎಸ್‌ಆರ್ ಬಡಾವಣೆಯ ರಾಮಕೃಷ್ಣ ರೆಡ್ಡಿ ಎಂಬುವರಿಗೆ ಇಂತಹ ಅನುಭವ ಆಗಿದೆ.

'ಮೂರು ತಿಂಗಳ ಹಿಂದೆ ನಾನು ಕೋವಿಡ್ ಪರೀಕ್ಷೆ ಮಾಡಿಸಿದ್ದೆ. ಅದಾದ ನಂತರ ನಾನು ಯಾವುದೇ ಪರೀಕ್ಷೆಗೆ ಒಳಗಾಗಿಲ್ಲ. ಆದರೆ, ಶನಿವಾರ (ಏ.24) ನನ್ನ ಮೊಬೈಲ್‌ಗೆ ಒಂದು ಸಂದೇಶ ಬಂತು. ಒಂದೆರಡು ನಿಮಿಷಗಳಲ್ಲಿಯೇ ಕರೆ ಬಂತು. ಬಿಬಿಎಂಪಿಯಿಂದ ಕರೆ ಮಾಡುತ್ತಿದ್ದೇವೆ ಎಂದ ಅವರು ನನ್ನ ಹೆಸರು ಸರಿಯಾಗಿ ಹೇಳಿದರು. ಆಂಬುಲೆನ್ಸ್ ಕೂಡ ಕಳುಹಿಸುವುದಾಗಿಯೂ ಹೇಳಿದರು' ಎಂದು ರಾಮಕೃಷ್ಣ ಹೇಳಿದರು.

'ನಾನು ಪರೀಕ್ಷೆ ಮಾಡಿಸಿಲ್ಲ, ವರದಿ ನನ್ನದಲ್ಲ ಎಂದು ಹೇಳಿದರೂ ಅವರು ಕೇಳಲಿಲ್ಲ. ನಿರಂತರವಾಗಿ ಎರಡು ದಿನ ಕರೆ ಮಾಡುತ್ತಿದ್ದರು. ಮಾಧ್ಯಮದವರ ಗಮನಕ್ಕೆ ತರುತ್ತೇನೆ ಎಂದು ಹೇಳಿದ ನಂತರವೇ ಕರೆ ಬರುವುದು ಬಂದ್ ಆಯಿತು' ಎಂದು ಅವರು ವಿವರಿಸಿದರು.

'ನನ್ನ ಹೆಸರಲ್ಲಿ ಬಿಯು ಸಂಖ್ಯೆ ಕೂಡ ಸೃಷ್ಟಿಯಾಗಿತ್ತು. ವಿಚಿತ್ರವೆಂದರೆ ಎಸ್‌ಆರ್‌ಎಫ್ ಐಡಿ 13 ಸಂಖ್ಯೆಗಳಿರಬೇಕು. ಆದರೆ, ನನ್ನ ಹೆಸರಿನಲ್ಲಿ ಸೃಷ್ಟಿಸಿದ್ದ ಸಂಖ್ಯೆ '0' ಎಂದಿತ್ತು' ಎಂದೂ ಅವರು ಆಶ್ಚರ್ಯ ವ್ಯಕ್ತಪಡಿಸಿದರು.

**ಪೊಲೀಸ್ ಕ್ರಮ:**

'ಬಿಬಿಎಂಪಿ ಸಿಬ್ಬಂದಿ ಎಂದು ಹೇಳಿಕೊಂಡು ಸಾರ್ವಜನಿಕರಿಗೆ ಮೋಸ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ. ಅಲ್ಲದೆ, ಬಿಬಿಎಂಪಿ ಹೆಸರು ದುರುಪಯೋಗ ಪಡಿಸಿಕೊಂಡು ಹೀಗೆ ವರ್ತಿಸಿದವರು ಯಾರೇ ಆಗಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ನಗರ ಪೊಲೀಸ್ ಕಮಿಷನರ್‌ಗೆ ತಿಳಿಸಲಾಗುವುದು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದರು.

'ಪರೀಕ್ಷೆ ಮಾಡಿಸದೆ ಪಾಸಿಟಿವ್ ಬಂದಿದೆ ಎಂದು ಹೇಳಿ ಕರೆ ಮಾಡುವುದು ಮುಂದುವರಿದರೆ ಆಯಾ ನಾಗರಿಕರು ಬಿಬಿಎಂಪಿಗೆ ದೂರು ನೀಡಬಹುದು. ಮಾಧ್ಯಮ ಅಥವಾ ಪೊಲೀಸರ ಮೂಲಕವೂ ದೂರು ದಾಖಲಿಸಬಹುದು' ಎಂದೂ ಅವರು ಹೇಳಿದರು.

### ಬೆಳಗಿದ 'ತ್ರಿವರ್ಣ' ಧ್ವಜ

ಭಾರತದಲ್ಲಿ ಕೋವಿಡ್ ಎರಡನೇ ಅಲೆಯಿಂದ ತೀವ್ರ ಗತಿಯಲ್ಲಿ ಸೋಂಕು ಹರಡುತ್ತಿದ್ದು, ಭಾರತದ ಕೋವಿಡ್ ನಿಯಂತ್ರಣ ಕ್ರಮಗಳಿಗೆ ಬೆಂಬಲ ಸೂಚಿಸಿ ದುಬೈಯಲ್ಲಿರುವ ವಿಶ್ವದ ಅತಿ ಎತ್ತರದ ಬುರ್ಜ್ ಖಲೀಫಾ ಕಟ್ಟಡಕ್ಕೆ ಭಾರತದ ತ್ರಿವರ್ಣ ಧ್ವಜದ ಬೆಳಕನ್ನು ಸೋಮವಾರ ಹಾಯಿಸಲಾಯಿತು.– ಪಿಟಿಐ ಚಿತ್ರ

### ಕೆಂಪು ಮಚ್ಚೆಯ ಕಪ್ಪೆ ಪತ್ತೆ

ಶಿಡ್ಲಘಟ್ಟ ತಾಲ್ಲೂಕಿನ ಕೊತ್ತನೂರಿನಲ್ಲಿ ಕೆಂಪು ಮಚ್ಚೆಯ ಕಪ್ಪೆ

ಪ್ರಜಾವಾಣಿ ವಾರ್ತೆ

**ಶಿಡ್ಲಘಟ್ಟ:** ತಾಲ್ಲೂಕಿನ ಕೊತ್ತನೂರಿನ ತೋಟವೊಂದರ ಒಣಗಿ ಬಿದ್ದುಹೋದ ತೆಂಗಿನ ಮರದ ಕಾಂಡದೊಳಗೆ ಅಪರೂಪದ ಕಪ್ಪೆಯೊಂದು ಕಾಣಿಸಿದೆ.

ಕಡು ಕಂದು ಬಣ್ಣದ ದೇಹದ ಮೇಲೆ ಕೆಂಬಣ್ಣದ ಮಚ್ಚೆಯಿದೆ. ನೀರಿನ ಸೆಲೆಗಳಿಗಿಂದ ಒಣ ಎಲೆ, ತೆಂಗಿನ ಪೊಟರೆಯೊಳಗೆ ವಾಸಿಸುವ ಈ ಕಪ್ಪೆಯನ್ನು ಇಂಗ್ಲಿಷ್‌ನಲ್ಲಿ ಪೇಯಿಂಟೆಡ್ ಬೆಲೂನ್ ಫ್ರಾಗ್, ಶ್ರೀಲಂಕನ್ ಬುಲ್ ಫ್ರಾಗ್ ಎಂದು ಕರೆಯುತ್ತಾರೆ. 'ಸಾಮಾನ್ಯವಾಗಿ ಪೂರ್ವ ಮತ್ತು ಪಶ್ಚಿಮ ಘಟ್ಟಗಳಲ್ಲಿ ವೈವಿಧ್ಯಮಯವಾದ ಕಪ್ಪೆಗಳು ಕಂಡುಬರುತ್ತವೆ. ಆದರೆ ಬಯಲು ಸೀಮೆಯಾದ ನಮ್ಮಲ್ಲಿ ವೈವಿಧ್ಯತೆ ಕಡಿಮೆ.

## ಶಾಹೀನ್ ಕಾಲೇಜಿನಿಂದ ಉಚಿತ ಆಹಾರ

**ಬೀದರ್:** ಕೋವಿಡ್ ಕಾರಣ ಕ್ವಾರಂಟೈನ್ ಆದವರಿಗೆ ಹಾಗೂ ಚಿಕಿತ್ಸೆ ಪಡೆಯುತ್ತಿರುವವರಿಗೆ ಉಚಿತ ಆಹಾರ ನೀಡಲು ಇಲ್ಲಿಯ ಶಾಹೀನ್ ಶಿಕ್ಷಣ ಸಂಸ್ಥೆ ಮುಂದಾಗಿದೆ.'ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ಅವರ ಮನೆ ಬಾಗಿಲಿಗೆ ಪೂರೈಸಲಿದ್ದೇವೆ. ಮಧ್ಯಾಹ್ನದ ಊಟ ಬೇಕಾದವರು ಬೆಳಿಗ್ಗೆ 10 ಗಂಟೆ ಹಾಗೂ ರಾತ್ರಿ ಊಟ ಬೇಕಾದವರು ಸಂಜೆ 4 ಗಂಟೆಯ ಒಳಗೆ ಮೊಬೈಲ್ ಸಂಖ್ಯೆ 8970973758 ಕರೆ ಮಾಡಿ ಮಾಹಿತಿ ನೀಡಬೇಕು' ಎಂದು ಸಂಸ್ಥೆಯ ಅಧ್ಯಕ್ಷ ಅಬ್ದುಲ್ ಖದೀರ್ ತಿಳಿಸಿದ್ದಾರೆ.

### ರಸ್ತೆಗಳಲ್ಲಿ ಓಡಾಡುವುದನ್ನು ನಿಲ್ಲಿಸಿ, ಮನೆಗಳಲ್ಲಿಯೇ ಇರಿ: ನೊಂದವರ ಮನವಿ

## ಕಣ್ಣೀರಿನ ಮಡು ಆಗುತ್ತಿರುವ ಚಿತಾಗಾರಗಳು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಕಾಲಕ್ಕೆ ಆಮ್ಲಜನಕ ಸಹಿತ ಹಾಸಿಗೆ ಸಿಗದೆ ಕೋವಿಡ್ ಸೋಂಕಿತರ ಸಾವಿನ ಸಂಖ್ಯೆ ಹೆಚ್ಚುತ್ತಿದ್ದರೆ, ನಗರದಲ್ಲಿರುವ ಚಿತಾಗಾರಗಳು ಕಣ್ಣೀರಿನ ಮಡುಗಳಾಗಿ ಮಾರ್ಪಟ್ಟಿವೆ.

ಕೊರೊನಾ ಸೋಂಕಿಗೆ ತುತ್ತಾಗಿದ್ದ ಒಂದೇ ಕುಟುಂಬದ ಎಂಟು ಜನರ ಪೈಕಿ ಚಿಕಿತ್ಸೆ ಫಲಿಸದೆ ವ್ಯಕ್ತಿಯೊಬ್ಬರು ಮೃತಪಟ್ಟರು. ಪೀಣ್ಯ ಚಿತಾಗಾರಕ್ಕೆ ಅಂತ್ಯಕ್ರಿಯೆಗೆ ಬಂದಿದ್ದ ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು.

'ನಮ್ಮ ಕುಟುಂಬದಲ್ಲಿ ಎಂಟು ಮಂದಿ ಸೋಂಕಿಗೆ ತುತ್ತಾಗಿದ್ದು, ಈ ಪೈಕಿ ಒಬ್ಬರು ಮೃತಪಟ್ಟಿದ್ದಾರೆ. ನಮಗೆ ಬಂದಿರುವ ನೋವು ಬೇರೆ ಯಾರಿಗೂ ಬಾರದಿರಲಿ. ದಯವಿಟ್ಟು ಜನರು ರಸ್ತೆಗಳಲ್ಲಿ ಓಡಾಡುವುದನ್ನು ನಿಲ್ಲಿಸಿ, ಮನೆಗಳಲ್ಲಿಯೇ ಇರಿ' ಎಂದು ಕೈಮುಗಿದು ಮನವಿ ಮಾಡಿದರು.

ಕುರುಬರಹಳ್ಳಿಯ ಚಿತಾಗಾರದಲ್ಲಿ ಕೋವಿಡ್ ಸೋಂಕಿನಿಂದ ಮೃತಪಟ್ಟವರ ಅಂತ್ಯಕ್ರಿಯೆ ಸೋಮವಾರ ನಡೆಯಿತು – ಪ್ರಜಾವಾಣಿ ಚಿತ್ರ

ಸಕಾಲಕ್ಕೆ ತೀವ್ರ ನಿಗಾ ಘಟಕದಲ್ಲಿ(ಐಸಿಯು) ಹಾಸಿಗೆ ಸಿಗದೇ ಇಡೀ ರಾತ್ರಿ ಒದ್ದಾಡಿ 69 ವರ್ಷದ ಸೋಂಕಿತರೊಬ್ಬರು ಒದ್ದಾಡಿ ಪ್ರಾಣ ಬಿಟ್ಟರು.

ಸೋಂಕಿತ ತಂದೆಯ ಜೀವ ಉಳಿಸಲು ಪುತ್ರಿ ಮಾಡಿದ ಎಲ್ಲ ಪ್ರಯತ್ನಗಳು ವಿಫಲವಾಗಿವೆ. ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಸೋಂಕಿತ ತಂದೆಯನ್ನು ಯಲಹಂಕ ಸಾರ್ವಜನಿಕ ಆಸ್ಪತ್ರೆಗೆ ಕರೆತಂದಿದ್ದರು. ಇಡೀ ರಾತ್ರಿ ಕಾದರೂ ಐಸಿಯು ಹಾಸಿಗೆ ಸಿಗಲಿಲ್ಲ. ಈ ಅವಧಿಯಲ್ಲಿ ಸೋಂಕಿತರನ್ನು ಕುರ್ಚಿ ಮೇಲೆ ಕೂರಿಸಿ ಆಮ್ಲಜನಕ ನೀಡಲಾಗಿತ್ತು.

ಬಳಿಕ ವಿಕ್ಟೋರಿಯಾ ಆಸ್ಪತ್ರೆಗೆ ಕರೆತಂದು ಆಮ್ಲಜನಕ ನೀಡಲಾಯಿತು. ಅಷ್ಟರಲ್ಲಿ ಅವರ ಆರೋಗ್ಯ ಸ್ಥಿತಿ ಬಿಗಡಾಯಿಸಿ ಮೃತಪಟ್ಟರು. 'ಸರಿಯಾದ ಸಮಯಕ್ಕೆ ಐಸಿಯುನಲ್ಲಿ ಹಾಸಿಗೆ ಸಿಕ್ಕಿದ್ದರೆ ಬದುಕುತ್ತಿದ್ದರು' ಎಂದು ಮೃತರ ಸಂಬಂಧಿಕರು ರೋದಿಸಿದರು.

ಸೋಂಕಿತರ ಮೃತದೇಹಕ್ಕೆ ಪೂಜೆ ಮಾಡಿ ವಿಧಿವಿಧಾನ ನೆರವೇರಿಸಲು ಸಾಧ್ಯವಾಗುತ್ತಿಲ್ಲ ಎಂದು ಮೃತರ ಕುಟುಂಬಸ್ಥರು ಸುಮನಹಳ್ಳಿ ಚಿತಾಗಾರದ ಬಳಿ ಕಣ್ಣೀರಿಟ್ಟರು. ಮೃತದೇಹ ಅಂತ್ಯಕ್ರಿಯೆಗೆ ಐದು ಮಂದಿಗೆ ಮಾತ್ರ ಅವಕಾಶ ನೀಡಿದ್ದರಿಂದ ಉಳಿದವರು ಚಿತಾಗಾರದ ಹೊರಗೆ ನಿಂತಿದ್ದರು.

### 'ಸಿದ್ದೀಕ್ ಕಾಪ್ಪನ್‌ಗೆ ಶೀಘ್ರ ಚಿಕಿತ್ಸೆ ನೀಡಿ'

**ನವದೆಹಲಿ:** ಕೋವಿಡ್ ಪೀಡಿತರಾಗಿರುವ ಬಂಧಿತ ಪತ್ರಕರ್ತ ಸಿದ್ದೀಕ್ ಕಾಪ್ಪನ್ ಅವರಿಗೆ ಶೀಘ್ರ ಸೂಕ್ತ ಮತ್ತು ಗೌರವಯುತವಾದ ಚಿಕಿತ್ಸೆ ಒದಗಿಸಬೇಕು ಎಂದು ಎಡಿಟರ್ಸ್ ಗಿಲ್ಡ್ ಆಗ್ರಹಿಸಿದೆ.

ಸಿದ್ದೀಕ್ ಅವರಿಗೆ ಅಮಾನವೀಯ ರೀತಿಯಲ್ಲಿ ಚಿಕಿತ್ಸೆ ನೀಡಲಾಗುತ್ತದೆ ಎಂಬ ವರದಿ ಕೇಳಿ ಕಳವಳ ಉಂಟಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಅವರ ಬಂಧನ ಪ್ರಶ್ನಿಸಿ ಅರ್ಜಿ ಸಲ್ಲಿಕೆಯಾಗಿದ್ದರೂ ಸುಪ್ರೀಂ ಮಧ್ಯಪ್ರವೇಶಿಸದಿರುವುದು ಕಳವಳಕಾರಿ ಎಂದೂ ಹೇಳಿದೆ.

ಮಥುರಾದ ಆಸ್ಪತ್ರೆಯಲ್ಲಿ ಸಿದ್ದೀಕ್ ಅವರಿಗೆ ಸರಪಳಿ ಬಿಗಿದು ಚಿಕಿತ್ಸೆ ನೀಡಲಾಗುತ್ತಿದೆ. ಅವರಿಗೆ ಆಹಾರ ತೆಗೆದುಕೊಳ್ಳಲು ಹಾಗೂ ಶೌಚಾಲಯಕ್ಕೆ ತೆರಳಲು ಸಾಧ್ಯವಾಗುತ್ತಿಲ್ಲ ಎಂದು ಅವರ ಪತ್ನಿ ದೂರಿದ್ದರು.

## ಬಿಎಂಸಿಆರ್‌ಐ: 63 ಮಂದಿಗೆ ಸೋಂಕು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಬೆಂಗಳೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) 38 ಸಿಬ್ಬಂದಿಗೆ ಕೊರೊನಾ ಸೋಂಕು ತಗುಲಿದೆ. 25 ಮಂದಿ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಲ್ಲೂ ಸೋಂಕು ದೃಢಪಟ್ಟಿದೆ. ಈ ವಿದ್ಯಾರ್ಥಿಗಳು ವಿಕ್ಟೋರಿಯಾ ಆಸ್ಪತ್ರೆಯ ವಿವಿಧ ಬ್ಲಾಕ್‌ಗಳಲ್ಲಿ ಕೊರೊನಾ ಸೇನಾನಿಗಳಾಗಿ ಕೆಲಸ ಮಾಡುತ್ತಿದ್ದರು.

ಸೋಂಕಿಗೊಳಗಾಗಿರುವ ಒಟ್ಟು 63 ಮಂದಿಯೂ ಚರಕ ಆಸ್ಪತ್ರೆಗೆ ದಾಖಲಾಗಿದ್ದಾರೆ. ರಾಜ್ಯಕ್ಕೆ ಕೋವಿಡ್ ಕಾಲಿಟ್ಟ ದಿನದಿಂದ ಇದುವರೆಗೂ ಬಿಎಂಸಿಆರ್‌ಐಯ ಒಟ್ಟು 350 ವಿದ್ಯಾರ್ಥಿಗಳು ಕೋವಿಡ್ ಪೀಡಿತರಾದಂತಾಗಿದೆ.

'ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ 60 ವಿದ್ಯಾರ್ಥಿಗಳಿಗೆ ಸೋಂಕು ತಗುಲಿದೆ. ಈ ಪೈಕಿ 25 ಸಕ್ರಿಯ ಪ್ರಕರಣಗಳಿವೆ. ಏಪ್ರಿಲ್ 23ರಂದು ನಾವು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಪತ್ರ ಬರೆದಿದ್ದೆವು. ಕೋವಿಡ್ ಕೆಲಸಕ್ಕೆ ನಿಯೋಜಿತರಾಗಿರುವವರ ಪ್ರತ್ಯೇಕ ವಾಸಕ್ಕೆ ಹೋಟೆಲ್ ಅಥವಾ ಇನ್ನಿತರ ಕಟ್ಟಡದಲ್ಲಿ ವ್ಯವಸ್ಥೆ ಮಾಡಿಕೊಡುವಂತೆ ಮನವಿ ಮಾಡಿದ್ದೆವು. ಈಗ ಪರಿಸ್ಥಿತಿ ಗಂಭೀರ ಸ್ವರೂಪ ಪಡೆದುಕೊಂಡಿದ್ದು, ವಾರದಲ್ಲಿ ಎಂಟರಿಂದ 10 ಮಂದಿ ವೈದ್ಯರಿಗೆ ಸೋಂಕು ತಗುಲುತ್ತಿದೆ ಎಂದೂ ಮನವರಿಕೆ ಮಾಡಿಕೊಡಲಾಗಿತ್ತು.

ಪರಿಸ್ಥಿತಿ ಹೀಗೆ ಮುಂದುವರಿದರೆ ಕೋವಿಡ್ ಕರ್ತವ್ಯಕ್ಕೆ ವೈದ್ಯರೇ ಸಿಗುವುದಿಲ್ಲ ಎಂಬುದನ್ನೂ ಗಮನಕ್ಕೆ ತಂದಿದ್ದೆವು. ಹೀಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಕರ್ನಾಟಕ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್‌ನ (ಕೆಎಆರ್‌ಡಿ) ಅಧ್ಯಕ್ಷ ಡಾ.ದಯಾನಂದ ಸಾಗರ್ 'ಪ್ರಜಾವಾಣಿ'ಗೆ ತಿಳಿಸಿದರು.

'ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿಗಳ ಪೈಕಿ ಐದು ಮಂದಿ ಒಂದೇ ಸ್ನಾನದ ಕೋಣೆ ಬಳಸುವ ಪರಿಸ್ಥಿತಿ ಇದೆ. ಹೆಚ್ಚಿನ ಸಂಖ್ಯೆಯಲ್ಲಿ ಕೋವಿಡ್ ಮಾದರಿಗಳನ್ನು ಬಿಎಂಸಿಆರ್‌ಐಗೆ ಕಳುಹಿಸಲಾಗುತ್ತಿರುವ ಕಾರಣ ಪ್ರಯೋಗಾಲಯದಲ್ಲಿ ಕೆಲಸ ಮಾಡುತ್ತಿರುವವರ ಪೈಕಿ ಆರು ಮಂದಿ ಸೋಂಕಿಗೊಳಪಟ್ಟಿದ್ದಾರೆ' ಎಂದು ಹೇಳಿದ್ದಾರೆ.

'ಪಿಪಿಇ ಕಿಟ್ ತೆಗೆದ ಬಳಿಕ ಸ್ನಾನ ಮಾಡಬೇಕು. ಆದರೆ ಅದಕ್ಕೆ ಯಾವ ವ್ಯವಸ್ಥೆಯೂ ಇಲ್ಲ. ಹೀಗಾಗಿ ನಾವು ನೇರವಾಗಿ ಮನೆಗೆ ಹೋಗಬೇಕಾದ ಪರಿಸ್ಥಿತಿ ಇದೆ. ನಮ್ಮಿಂದ ಕುಟುಂಬದ ಇತರ ಸದಸ್ಯರಿಗೂ ಸೋಂಕು ಪಸರಿಸುವ ಅಪಾಯವಿದೆ' ಎಂದು ಹೆಸರು ಹೇಳಲಿಚ್ಛಿಸದ ಸಿಬ್ಬಂದಿಯೊಬ್ಬರು ತಿಳಿಸಿದರು.

# 'ಹನುಮನ ಜನ್ಮಸ್ಥಳ: ತಿರುಪತಿಗೆ ನಾನೇ ಹೋಗಿ ಸ್ಪಷ್ಟನೆ ನೀಡುವೆ'

ಪ್ರಜಾವಾಣಿ ವಾರ್ತೆ



ಗಂಗಾವತಿ (ಕೊಪ್ಪಳ ಜಿಲ್ಲೆ): 'ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳ ಎಂದು ಸಾಬೀತುಪಡಿಸಲು ನಾವು ಸ್ವತಃ ತಿರುಪತಿಗೆ ಹೋಗಿ ಸ್ಪಷ್ಟನೆ ನೀಡುತ್ತೇವೆ' ಎಂದು ಹಂಪಿಯ ಹನುಮದ್ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಪೀಠಾಧಿಪತಿ ಗೋವಿಂದಾನಂದ ಸರಸ್ವತಿ ಮಹಾರಾಜ ಸ್ವಾಮೀಜಿ ಸೋಮವಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಅವರು, 'ಅಂಧ್ರದ ಅನ್ನದಾನ ಚಿದಂಬರ ಶಾಸ್ತ್ರಿ ಎಂಬುವವರು ಸುಳ್ಳುದಾಖಲೆ ಸೃಷ್ಟಿಸಿ ತಿರುಮಲದಲ್ಲಿ ಹನುಮಂತನ ಜನನವಾಗಿದೆ ಎಂದು ಟಿಟಿಡಿ ಮೂಲಕ ಹೇಳಿಸಿದ್ದಾರೆ. ನಮ್ಮ ರಾಜ್ಯ ಸರ್ಕಾರ ಅಥವಾ ಪೇಜಾವರ ಮತ್ತಿತರ ಪ್ರಮುಖ ಮಠಾಧೀಶರು ಈ ಕುರಿತು ಮಾತನಾಡುತ್ತಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ತಾಲ್ಲೂಕಿನ ಆನೆಗೊಂದಿ ಭಾಗದ ಕಿಷ್ಕಿಂದ ಪ್ರದೇಶವೇ ಹನುಮಂತನ ಜನ್ಮಸ್ಥಳ. ಈ ಕುರಿತು ತ್ರೇತಾಯುಗದ ವಾಲ್ಮೀಕಿ ರಾಮಾಯಣದಲ್ಲಿ ಉಲ್ಲೇಖಿಸಲಾಗಿದೆ. ಪ್ರಭು ಶ್ರೀರಾಮಚಂದ್ರನ ಜನ್ಮಭೂಮಿ ಅಯೋಧ್ಯೆ, ಹೇಗೆಯೋ ಅದೇ ರೀತಿ ಹನುಮಂತನ ಜನ್ಮಭೂಮಿ ಅಂಜನಾದ್ರಿಯೇ ಹೊರತು ಇನ್ನಾವ ಸ್ಥಳವಲ್ಲ' ಎಂದರು.

'ಟಿಟಿಡಿ ಈಗ ಹನುಮಂತನ ಜನ್ಮಭೂಮಿ ತಿರುಮಲ ಎಂದು ಹೇಳಿಕೆ ಬಿಡುಗಡೆ ಮಾಡಿದೆ. ರಾಮಚಂದ್ರಾಪುರ ಮಠದ ಸ್ವಾಮಿಗಳು ಗೋಕರ್ಣದಲ್ಲಿ ಹನುಮಂತನ ಜನನವಾಗಿದೆ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇವು ಶುದ್ಧ ಸುಳ್ಳಿನಿಂದ ಕೂಡಿವೆ' ಎಂದು ಹೇಳಿದರು.

'ಅಂಜನಾದ್ರಿ ಪರ್ವತದ ಗುಹೆಯಲ್ಲಿ ವಾಯುಪುತ್ರ ಹನುಮಂತನ ಜನನವಾಗಿರುವುದು ವಾಲ್ಮೀಕಿ ರಾಮಾಯಣ ಸೇರಿದಂತೆ ಇನ್ನಿತರ ಪುರಾಣ ಮತ್ತು ಸಾವಿರಾರು ವರ್ಷಗಳ ಸಂಸ್ಕೃತ ಇತಿಹಾಸ ಪುಸ್ತಕಗಳಲ್ಲಿ ಉಲ್ಲೇಖಗೊಂಡಿದೆ. ಇದಕ್ಕೆ ಎಲ್ಲಾ ದಾಖಲೆಗಳು ನಮ್ಮಲ್ಲಿ ಲಭ್ಯವಿವೆ' ಎಂದು ಸ್ವಾಮೀಜಿ ಸ್ಪಷ್ಟಪಡಿಸಿದರು.

## ಇದು ಕೆಟ್ಟ ಪರಂಪರೆಗೆ ನಾಂದಿ: ಪ್ರೊ. ರವಿವರ್ಮ ಕುಮಾರ್, ಎಲ್. ಹನುಮಂತಯ್ಯ ಪ್ರತಿಪಾದನೆ

# 'ರಾಜ್ಯಪಾಲರ ಹಸ್ತಕ್ಷೇಪ ಸಂವಿಧಾನಕ್ಕೆ ಅಪಚಾರ'

**ಬೆಂಗಳೂರು:** 'ಸರ್ವಪಕ್ಷ ಸಭೆ ಕರೆಯುವ ಸಂವಿಧಾನಾತ್ಮಕ ಅಧಿಕಾರ ರಾಜ್ಯಪಾಲರಿಗೆ ಇಲ್ಲ. ರಾಜ್ಯಪಾಲರ ಈ ನಡೆ, ಒಕ್ಕೂಟ ವ್ಯವಸ್ಥೆಗೇ ಧಕ್ಕೆ' ಎಂದು ರಾಜ್ಯ ಸರ್ಕಾರದ ಮಾಜಿ ಅಡ್ವೊಕೇಟ್ ಜನರಲ್ ಪ್ರೊ.ರವಿವರ್ಮ ಕುಮಾರ್ ಅಭಿಪ್ರಾಯಪಟ್ಟರೆ, 'ಇದು ಕೆಟ್ಟ ಪರಂಪರೆಗೆ ನಾಂದಿ' ಎನ್ನುತ್ತಾರೆ ರಾಜ್ಯಸಭೆ ಕಾಂಗ್ರೆಸ್ ಸದಸ್ಯ ಎಲ್. ಹನುಮಂತಯ್ಯ. 'ಸರ್ಕಾರದ ಮುಖ್ಯಸ್ಥರಾಗಿ, ಮುಖ್ಯಮಂತ್ರಿ ಸಲಹೆಯಂತೆ ರಾಜ್ಯಪಾಲರು ಸಭೆ ಕರೆದಿದ್ದಾರೆ. ಎಲ್ಲರನ್ನೂ ಆಹ್ವಾನಿಸಿ ಸಮಾಲೋಚಿಸಿದ್ದಾರೆಯೇ ಹೊರತು, ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ. ಸಭೆ ಕರೆಯಬಾರದೆಂದು ಸಂವಿಧಾನ ಎಲ್ಲಿ ಹೇಳಿದೆ' ಎನ್ನುವ ಪ್ರಶ್ನೆ ಬಿಜೆಪಿ ಪ್ರಧಾನ ಕಾರ್ಯದರ್ಶಿ, ವಿಧಾನಪರಿಷತ್ತಿನ ಸದಸ್ಯ ಎನ್. ರವಿಕುಮಾರ್ ಅವರದ್ದು. 'ಸರ್ಕಾರದ ಆಡಳಿತದಲ್ಲಿ ರಾಜ್ಯಪಾಲರ ನೇರ ಹಸ್ತಕ್ಷೇಪ ಎಷ್ಟು ಸರಿ?' ವಿಷಯದ ಕುರಿತು 'ಪ್ರಜಾವಾಣಿ'ಯ ಫೇಸ್‌ಬುಕ್ ನೇರ ಸಂವಾದದಲ್ಲಿ ಭಾಗವಹಿಸಿ ಈ ಮೂವರೂ ತಮ್ಮ ನಿಲುವುಗಳನ್ನು ಪ್ರತಿಪಾದಿಸಿದರು.

ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರದ ರಾಯಭಾರಿಯಾಗಿ ರಾಜ್ಯಪಾಲರು ಕೆಲಸ ಮಾಡುತ್ತಾರೆ. ಅವರಿಗೆ ಸಚಿವ ಸಂಪುಟ ಸಲಹೆ ಕೊಡಬೇಕೇ ಹೊರತು, ಸಚಿವ ಸಂಪುಟಕ್ಕೆ ಅವರು ಸಲಹೆ ಕೊಡಬಾರದು. ಸಂವಿಧಾನದಲ್ಲಿ ರಾಜ್ಯಪಾಲರಿಗೆ ಸ್ವಂತ ವಿವೇಚನಾ ಅಧಿಕಾರ ಇಲ್ಲ. ಚುನಾವಣಾ ಇಲ್ಲದೆ, ನೇರ ನೇಮಕವಾಗುವ ರಾಜ್ಯಪಾಲರ ಕಾರ್ಯವ್ಯಾಪ್ತಿ ಬಗ್ಗೆ ಸಂವಿಧಾನದಲ್ಲಿ ಸ್ಪಷ್ಟವಾಗಿದೆ. ಈ ಬಗ್ಗೆ ನ್ಯಾಯಾಲಯಗಳಲ್ಲಿಯೂ ಹಲವು ಬಾರಿ ಚರ್ಚೆ ನಡೆದಿದೆ. ಸ್ವಂತ ವಿವೇಚನೆಯಿಂದ ಅಧಿಕಾರ ಚಲಾಯಿಸಲು ರಾಜ್ಯಪಾಲರಿಗೆ ಅವಕಾಶ ಇಲ್ಲ. ಹಣಕಾಸಿಗೆ ಸಂಬಂಧಿಸಿದ್ದು ಹೊರತುಪಡಿಸಿ, ಸಂಪುಟ ಸಭೆ ತೀರ್ಮಾನ ಸಂವಿಧಾನಕ್ಕೆ ವಿರುದ್ಧವಾಗಿದ್ದರೆ ಅದನ್ನು ಸರ್ಕಾರಕ್ಕೆ ವಾಪಸು ಕಳುಹಿಸಬಹುದು. ಜೊತೆಗೆ, ರಾಜ್ಯದಲ್ಲಿ ಸನ್ನಿವೇಶ ಬಿಗಡಾಯಿಸಿದರೆ, ಸಾಂವಿಧಾನಿಕ ಬಿಕ್ಕಟ್ಟು ಉಲ್ಬಣಗೊಂಡರೆ ಮುಖ್ಯಮಂತ್ರಿಯಿಂದ ವರದಿ ತರಿಸಿಕೊಳ್ಳಬಹುದು. ಸಚಿವರೊಬ್ಬರು ತೀರ್ಮಾನ ತೆಗೆದುಕೊಂಡು ಒಪ್ಪಿಗೆಗೆ ಕಳುಹಿಸಿದಾಗ, 'ಒಬ್ಬರೇ ತೀರ್ಮಾನ ತೆಗೆದುಕೊಳ್ಳುವುದು ಉಚಿತವಲ್ಲ, ಸಂಪುಟ ಸಭೆಯಲ್ಲಿ ತೀರ್ಮಾನಿಸಿ' ಎಂದು ಕಡತ ವಾಪಸ್ ಕಳುಹಿಸಬಹುದು. ಹೀಗೆ ರಾಜ್ಯಪಾಲರ ಕಾರ್ಯಕ್ಷೇತ್ರ ಸಂವಿಧಾನದಡಿ ಸೀಮಿತ. ಮುಖ್ಯಮಂತ್ರಿ ಆಸ್ಪತ್ರೆಯಲ್ಲಿದ್ದರೂ, ವಿದೇಶದಲ್ಲಿದ್ದರೂ, ಎಲ್ಲೇ ಇದ್ದರೂ ಮುಖ್ಯಮಂತ್ರಿಯಾಗಿಯೇ ಇರುತ್ತಾರೆ. ರಾಜ್ಯಪಾಲರು ಆ ಜಾಗಕ್ಕೆ ಬರಲು ಅವಕಾಶ ಇಲ್ಲ. ಇತ್ತೀಚೆಗೆ ರಾಜ್ಯಪಾಲರ ಹುದ್ದೆ ಒಕ್ಕೂಟ ವ್ಯವಸ್ಥೆಗೆ ಮಾರಕವಾಗುತ್ತಿದೆ. ರಾಜ್ಯಪಾಲರು ಕೇಂದ್ರದ ಏಜೆಂಟ್ ಆಗುತ್ತಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಪಾಲರ ಕಚೇರಿಯನ್ನು ಬಳಕೆ ಮಾಡುತ್ತಿದೆ. ಇದು ಸರಿಯಲ್ಲ. ರಾಜ್ಯ ಸರ್ಕಾರದ ನಿತ್ಯದ ಆಡಳಿತದಲ್ಲಿ ರಾಜ್ಯಪಾಲರು ಹಸ್ತಕ್ಷೇಪ ಮಾಡುವುದು ಪ್ರಜಾತಂತ್ರಕ್ಕೆ ಮಾರಕ, ಸಂವಿಧಾನಕ್ಕೆ ಅಪಚಾರ.

**ಪ್ರೊ. ರವಿವರ್ಮ ಕುಮಾರ್,** ಮಾಜಿ ಅಡ್ವೊಕೇಟ್ ಜನರಲ್

ಪ್ರಜಾವಾಣಿ ಸಂವಾದ

ರಾಜ್ಯಪಾಲರು ಸಂವಿಧಾನದಡಿಯಲ್ಲಿ ಕಾರ್ಯಾಂಗ, ನ್ಯಾಯಾಂಗ, ಶಾಸಕಾಂಗವನ್ನು ನಿಯಂತ್ರಿಸುವ ಮುಖ್ಯಸ್ಥರು. ಉಸ್ತುವಾರಿ ಮಾಡುವವರು. ಆದರೆ, ಅವರಿಗೆ ಸ್ವತಂತ್ರವಾದ ವಿವೇಚನಾಧಿಕಾರ ಇಲ್ಲ. ಚುನಾಯಿತ ಸರ್ಕಾರ, ಮುಖ್ಯಮಂತ್ರಿ, ಸಚಿವ ಸಂಪುಟ ಇದ್ದಾಗ ರಾಜ್ಯದ ಆಡಳಿತದಲ್ಲಿ ಅಧಿಕಾರ ಚಲಾಯಿಸಲು ರಾಜ್ಯಪಾಲರಿಗೆ ಅವಕಾಶ ಇಲ್ಲ ಎನ್ನುವ ಅಂಶ ಸುಪ್ರೀಂ ಕೋರ್ಟ್‌ನ ಹಲವು ತೀರ್ಪುಗಳಲ್ಲಿ ಉಲ್ಲೇಖವಾಗಿದೆ. ಹೀಗಾಗಿ, ಅವರು ಸರ್ವಪಕ್ಷ ಸಭೆ ಕರೆದಿರುವುದು ಅಸಂವಿಧಾನಿಕ ನಡೆ. ಕೆಟ್ಟ ಪರಂಪರೆ. ಬೇರೆ ರಾಜ್ಯಗಳಿಗೂ ಮಾದರಿಯಾಗುತ್ತದೆ. ರಾಜ್ಯಪಾಲರು ಸಂವಿಧಾನದ ಅಧಿಕಾರಕ್ಕೆ ಪ್ರವೇಶಿಸಿರುವ ಸೂಚನೆಯಿದು. ಸಚಿವ ಸಂಪುಟದ ಅಧಿಕಾರವನ್ನು ರಾಜ್ಯಪಾಲರು ತೆಗೆದುಕೊಳ್ಳಲು ಅವಕಾಶ ಇಲ್ಲ. ಸರ್ಕಾರ ಸಕ್ರಿಯವಾಗಿ ಕೆಲಸ ಮಾಡುತ್ತಿಲ್ಲ ಎಂದೆನಿಸಿದರೆ ಮುಖ್ಯಮಂತ್ರಿ ಮೂಲಕ ವರದಿ ತರಿಸಿಕೊಳ್ಳಬಹುದು. ಜನರ ಸಮಸ್ಯೆಗಳು ಸಮರ್ಪಕವಾಗಿ ನಿರ್ವಹಣೆ ಆಗದೇ ಇದ್ದಾಗ ಸಭೆ ಕರೆಯುವಂತೆ ಸರ್ಕಾರಕ್ಕೆ ಸಲಹೆ ನೀಡಬಹುದೇ ಹೊರತು, ಅವರೇ ಸಭೆ ಕರೆಯುವ ವಿವೇಚನಾಧಿಕಾರ ಇಲ್ಲ. ಮುಖ್ಯಮಂತ್ರಿಯನ್ನು ಕಡೆಗಣಿಸಿ ರಾಜ್ಯಪಾಲರು ವರ್ತಿಸಿದ ಅನುಮಾನವಿದೆ. ಕೇಂದ್ರದಲ್ಲಿ ತಮ್ಮದೇ ಸರ್ಕಾರ ಇದ್ದಾಗ ರಾಜ್ಯಪಾಲರ ವರ್ತನೆ ರಾಜಕೀಯ ನಡೆಯಂತೆ ಕಾಣುತ್ತದೆ. ಕೇಂದ್ರ ಮತ್ತು ರಾಜ್ಯದಲ್ಲಿ ಬೇರೆ ಬೇರೆ ಸರ್ಕಾರ ಇರುತ್ತಿದ್ದರೆ ಇದಕ್ಕೆ ಅವಕಾಶ ಆಗುತ್ತಿರಲಿಲ್ಲ. ಸಂವಿಧಾನ ಮೀರಿ ಅವರು ವಿವೇಚನಾಧಿಕಾರದಿಂದ ವರ್ತಿಸುವುದು ಸರಿಯಲ್ಲ. ರಾಜ್ಯಪಾಲರದ್ದು ಸರ್ಕಾರದ ಅಧಿಕಾರ ಕೈಗೆತ್ತಿಕೊಳ್ಳುವ ರಾಜಕೀಯ ನಡೆ. ಇದು ಕೆಟ್ಟ ಪರಂಪರೆಗೆ ನಾಂದಿ.

**ಎಲ್. ಹನುಮಂತಯ್ಯ,** ರಾಜ್ಯಸಭೆ ಕಾಂಗ್ರೆಸ್ ಸದಸ್ಯ

ಪೂರ್ಣ ಸಂವಾದ ವೀಕ್ಷಿಸಲು– https://www.facebook.com/prajavani.net ನೋಡಿ

### 'ಸಮಾಲೋಚನೆ ನಡೆಸಿದರೇ ಹೊರತು, ತೀರ್ಮಾನ ತೆಗೆದುಕೊಂಡಿಲ್ಲ'

ರಾಜ್ಯಪಾಲರು ಸಭೆ ಕರೆದಿರುವುದೇ ತಪ್ಪು ಎನ್ನುವುದಕ್ಕಿಂತ ಯಾವ ಸಂದರ್ಭದಲ್ಲಿ, ಯಾವ ಉದ್ದೇಶದಿಂದ ಈ ಸಭೆ ಕರೆದರು ಎನ್ನುವುದೂ ಮುಖ್ಯ. ಕೊರೊನಾ ಸೋಂಕು ತಗಲಿ ಮುಖ್ಯಮಂತ್ರಿ ಆಸ್ಪತ್ರೆಯಲ್ಲಿ ಇದ್ದುದರಿಂದ ಅವರ ವಿನಂತಿಯಂತೆ ರಾಜ್ಯಪಾಲರು ಸಭೆ ನಡೆಸಿದರು. ಸಮಾಲೋಚನೆ ನಡೆಸಿದರೇ ಹೊರತು, ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡಿಲ್ಲ. ಹೀಗಿರುವಾಗಿ, ಕೆಟ್ಟ ಪರಂಪರೆ ಹೇಗಾಗುತ್ತದೆ. ಅವರು ಪ್ರತಿಜ್ಞೆ ತೆಗೆದುಕೊಳ್ಳುವಾಗಲೇ ರಾಜ್ಯದ ಹಿತದೃಷ್ಟಿಯಿಂದ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರ ನೀಡಲಾಗಿದೆ. ಅವರು ಸರ್ವಪಕ್ಷ ಸಭೆ ಕರೆಯಬಾರದು ಎಂದು ಸಂವಿಧಾನದಲ್ಲಿ ಎಲ್ಲಿದೆ. ಸರ್ಕಾರ ಯಾವುದೇ ತೀರ್ಮಾನಗಳನ್ನು ತೆಗೆದುಕೊಂಡರೂ ಅಂತಿಮವಾಗಿ ರಾಜ್ಯಪಾಲರಿಗೇ ಹೋಗಬೇಕು. ಅವರೇ ಕಾರ್ಯಾಂಗದ ಮುಖ್ಯಸ್ಥ, ಅವರಿಗೆ ವಿವೇಚನಾ ಅಧಿಕಾರವಿದೆ. ಮೂವರು ಉಪ ಮುಖ್ಯಮಂತ್ರಿಗಳಿದ್ದಾಗ ಗೊಂದಲಕ್ಕೆ ಅವಕಾಶ ಆಗದಂತೆ ಸಂಪುಟ ಸದಸ್ಯರೆಲ್ಲರ ಒಮ್ಮತದ ತೀರ್ಮಾನದಂತೆ, ಕೋವಿಡ್ ಪರಿಸ್ಥಿತಿ ನಿಭಾಯಿಸಲು ಏನು ಮಾಡಬಹುದು ಎಂದು ರಾಜ್ಯಪಾಲರು ಸಮಾಲೋಚನೆ ನಡೆಸಿದ್ದಾರೆ. ಉದ್ದೇಶ ಈಡೇರುವುದು ಮುಖ್ಯವಾಗಬೇಕೇ ಹೊರತು, ಇದರಲ್ಲಿ ರಾಜಕೀಯ ಮಾಡಬಾರದು. ಕೋವಿಡ್ ಪರಿಸ್ಥಿತಿಯನ್ನು ಸರ್ಕಾರ ಸಮರ್ಥವಾಗಿ ನಿಭಾಯಿಸುತ್ತಿದೆ. ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಆರೋಗ್ಯ ವಲಯದಲ್ಲಿ ಮೂಲಸೌಲಭ್ಯ ಅಭಿವೃದ್ಧಿಗೆ ಒತ್ತು ನೀಡದಿರುವುದೇ ಇವತ್ತಿನ ಹೀನಾಯ ಸ್ಥಿತಿಗೆ ಕಾರಣ.

**ಎನ್. ರವಿಕುಮಾರ್,** ಬಿಜೆಪಿ ಪ್ರಧಾನ ಕಾರ್ಯದರ್ಶಿ

ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಕಾರ್ಪೊರೇಟ್ ಕಛೇರಿ, 2ನೇ ಮಹಡಿ, ಮೆಸ್ಕಾಂ ಭವನ, ಕಾವೂರು ಅಡ್ಡ ರಸ್ತೆ, ಬಿಜೈ, ಮಂಗಳೂರು-575004
ದೂರವಾಣಿ: 0824-2885795 ಮಿಂಚಂಚೆ: sepmescom@rediffmail.com
ಕ್ರ.ಸಂ. File No. MESCOM-PROCOPURC/172/2021-PROC ದಿನಾಂಕ : 17.04.2021
ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವಿಧಾನದಲ್ಲಿ ಮಾತ್ರ)
ಮ.ವಿ.ಸ.ಕಂ.ಯು ಈ ಕೆಳಗಿನ ಸಾಮಾಗ್ರಿಗಳ ತಯಾರಿಕೆ ಹಾಗೂ ಸರಬರಾಜಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತದೆ.

| ಟೆಂಡರು ಸಂಖ್ಯೆ | ಖರೀದಿಸಲು ಉದ್ದೇಶಿಸಿರುವ ಸಾಮಾಗ್ರಿಯ ವಿವರ | ಪ್ರಮಾಣ |
|---|---|---|
| MESCOM/2021-22/IND755 | 8 ಎಸ್.ಡಬ್ಲ್ಯೂಜಿ ಜಿಐ ವಯರ್ | 60 ಮೆ.ಟನ್ |
| MESCOM/2021-22/IND756 | 25 ಕೆವಿಎ ವಿತರಣಾ ಪರಿವರ್ತಕಗಳಿಗೆ ಎಲ್‌ಟಿ ವಯರಿಂಗ್ ಕಿಟ್‌ಗಳು | 2500 ಸೆಟ್ಸ್ |

ಆಸಕ್ತ ಅರ್ಹ ಬಿಡ್ಡುದಾರರು ದಿನಾಂಕ 27.04.2021 ಅಥವಾ ನಂತರ ವೆಬ್ ಸೈಟ್ www.eproc.karnataka. gov.in on ಗೆ ಲಾಗಾನ್ ಮಾಡಬಹುದು.
ಸಹಿ/- ಅಧೀಕ್ಷಕ ಇಂಜಿನಿಯರ್ (ವಿ), (ಖರೀದಿ), ಮಂ.ವಿ.ಸ.ಕಂ., ಮಂಗಳೂರು
ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಉಚಿತ ದೂರವಾಣಿ ಸಂಖ್ಯೆ : 1912ಕ್ಕೆ ಕರೆ ಮಾಡಿ

# ಬಾಲಕಿ ಮೇಲೆ ಅತ್ಯಾಚಾರ: ಯುವಕನ ಬಂಧನ

ಪ್ರಜಾವಾಣಿ ವಾರ್ತೆ

ಧರ್ಮಪುರ: ಬಾಲಕಿಯ ಮೇಲೆ ನಿರಂತರವಾಗಿ ಅತ್ಯಾಚಾರ ನಡೆಸಿದ ಆರೋಪದಡಿ 23 ವರ್ಷದ ಯುವಕನನ್ನು ಅಬ್ಬಿನಹೊಳೆ ಠಾಣೆ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಸದ್ಯ ನ್ಯಾಯಾಂಗ ಬಂಧನದಲ್ಲಿ ಇದ್ದಾನೆ.

'ಬಾಲಕಿ 9ನೇ ತರಗತಿ ವಿದ್ಯಾರ್ಥಿನಿ. ಅದೇ ಗ್ರಾಮದ ಯುವಕ ಆರು ತಿಂಗಳುಗಳಿಂದ ಅತ್ಯಾಚಾರ ನಡೆಸಿದ್ದಾನೆ. ಇದರಿಂದಾಗಿ ಮಗಳು ಗರ್ಭಿಣಿಯಾಗಿದ್ದಾಳೆ' ಎಂದು ಪೋಷಕರು ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಸಬ್ ಇನ್‌ಸ್ಪೆಕ್ಟರ್ ಪರಶುರಾಮ್ ಎಸ್.ಲಮಾಣಿ ಅವರು ತಿಳಿಸಿದ್ದಾರೆ.

## ಲಿಂಗಸುಗೂರು ಪುರಸಭೆ ಮುಖ್ಯಾಧಿಕಾರಿ ವಿರುದ್ಧ ಆಕ್ರೋಶ

# ಬೀದಿಯಲ್ಲಿ ನಡೆಯಿತು ಅಧ್ಯಕ್ಷ, ಉಪಾಧ್ಯಕ್ಷರ ಸಭೆ!

ಪ್ರಜಾವಾಣಿ ವಾರ್ತೆ

ಲಿಂಗಸುಗೂರು ಪುರಸಭೆ ಕಚೇರಿ ಹೊರ ಆವರಣದಲ್ಲಿ ಪುರಸಭೆ ಅಧ್ಯಕ್ಷೆ, ಉಪಾಧ್ಯಕ್ಷ ಮತ್ತು ಸ್ಥಾಯಿ ಸಮಿತಿ ಅಧ್ಯಕ್ಷರು ಪುರಸಭೆಯ ಕಡತಗಳನ್ನು ಪರಿಶೀಲಿಸಿದರು

ಲಿಂಗಸುಗೂರು (ರಾಯಚೂರು ಜಿಲ್ಲೆ): ಇಲ್ಲಿನ ಪುರಸಭೆ ಮುಖ್ಯಾಧಿಕಾರಿ ಮತ್ತು ಅಧ್ಯಕ್ಷ, ಉಪಾಧ್ಯಕ್ಷರ ನಡುವಿನ ಆಂತರಿಕ ಭಿನ್ನಾಭಿಪ್ರಾಯ ತಾರಕಕ್ಕೇರಿದ್ದು, ಸೋಮವಾರ ಪುರಸಭೆ ಕಚೇರಿ ಹೊರ ಆವರಣದಲ್ಲಿ ಅಧ್ಯಕ್ಷೆ ನೇತೃತ್ವದಲ್ಲಿ ಸಭೆ ನಡೆಯಿತು.

ಪುರಸಭೆ ಅಧ್ಯಕ್ಷೆ ಗದ್ದೆಮ್ಮ ಯಮನೂರ ಭೋವಿ, ಉಪಾಧ್ಯಕ್ಷ ಎಂ.ಡಿ ರಫಿ, ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಮೋದ ಕುಲಕರ್ಣಿ ಮತ್ತು ಕೆಲ ಸದಸ್ಯರು ಹೊರ ಆವರಣದಲ್ಲಿ ಕುರ್ಚಿ ಹಾಕಿಕೊಂಡು ಸಭೆ ನಡೆಸಿದರು.

'ಪರಿಶಿಷ್ಟ ಜಾತಿಗೆ ಸೇರಿದ ನಾನು ಅಧ್ಯಕ್ಷೆ ಆಗಿರುವುದಕ್ಕೆ ಹೀಗೆ ಮಾಡಲಾಗುತ್ತಿದೆಯೇ, ಬೇರೆ ಕಾರಣವೇ ಗೊತ್ತಿಲ್ಲ. ಆಡಳಿತಕ್ಕೆ ಸಂಬಂಧಿತ ಮಾಹಿತಿ ನೀಡುತ್ತಿಲ್ಲ. ಕಡತಗಳಿಗೆ ನನ್ನ ಒಪ್ಪಿಗೆ ಪಡೆಯುತ್ತಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ' ಎಂದು ಅಧ್ಯಕ್ಷೆ ಗದ್ದೆಮ್ಮ ಯಮನೂರ ಭೋವಿ ಅಸಮಾಧಾನ ವ್ಯಕ್ತಪಡಿಸಿದರು.

'ಮುಖ್ಯಾಧಿಕಾರಿ ವಿಜಯಲಕ್ಷ್ಮಿ ಅವರು ವಿರೋಧಪಕ್ಷದವರಂತೆ ಮತ್ತು ರಾಜಕೀಯ ಮಾಡಲು ಬಂದಂತೆ ವರ್ತಿಸುತ್ತಾರೆ. ಅವರು ನಮಗೆ ಗೌರವ ಕೊಡದ ಕಾರಣಕ್ಕೆ ನಾವು ಕಚೇರಿ ಹೊರಗೆ ಕುಳಿತು ಸಭೆ ಮಾಡಿದೆವು. ಶೀಘ್ರವೇ ಸದಸ್ಯರ ಒಪ್ಪಿಗೆ ಪಡೆದು ಪುರಸಭೆ ಕಚೇರಿಗೆ ಬೀಗಮುದ್ರೆ ಹಾಕಲಾಗುವುದು' ಎಂದು ಉಪಾಧ್ಯಕ್ಷ ಎಂ.ಡಿ ರಫಿ ತಿಳಿಸಿದರು.

'ಪುರಸಭೆ ಆಡಳಿತ ಪಕ್ಷದವರು ಮತ್ತು ಸದಸ್ಯರ ಜೊತೆ ಭಿನ್ನಾಭಿಪ್ರಾಯವಿಲ್ಲ. ನಿಯಮದಂತೆ ನಾನು ಕೆಲಸ ಮಾಡುತ್ತಿದ್ದೇನೆ' ಎಂದು ಪುರಸಭೆ ಮುಖ್ಯಾಧಿಕಾರಿ ವಿಜಯಲಕ್ಷ್ಮಿ 'ಪ್ರಜಾವಾಣಿ'ಗೆ ತಿಳಿಸಿದರು.

ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿ.,ರಾಯಚೂರು
ಕ್ರ.ಸಂ:ಆರ್‌ಡಿಸಿಸಿ: ಪ್ರ.ಕಾ/ಐ.ಟಿ/ /2020–21 ದಿನಾಂಕ: 26.04.2021
–ಃ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ ಃ–
(Indent No. DOC/2020-21/IND131/CALL-2)
ಉಲ್ಲೇಖಿತ (Indent No. DOC/2020-21/IND131/CALL-2)ರ ಮೂಲಕ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ರಾಯಚೂರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ (ನಿ) ರಾಯಚೂರು ಇವರು supply, installation and commissioning of computers ಕುರಿತು ಅರ್ಹ ಪೂರೈಕೆದಾರರಿಂದ ಮರು–ಟೆಂಡರ್‌ನ್ನು ಕರೆಯಲಾಗಿದೆ. ಪೂರೈಕೆದಾರರು ಅನ್‌ಲೈನ್ ಮುಖಾಂತರ e-Procurement ಪೋರ್ಟಲ್‌ನಲ್ಲಿ ಪ್ರಕಟಿಸಿದ ನಿಗದಿತ ದಿನಾಂಕದೊಳಗೆ ಟೆಂಡರ್‌ನ್ನು ಸಲ್ಲಿಸತಕ್ಕದ್ದು ಮತ್ತು ಹೆಚ್ಚಿನ ವಿವರಗಳಿಗಾಗಿ http://eproc.karnataka.gov.inರ ಪೋರ್ಟಲ್‌ನಿಂದ ಟೆಂಡರ ಡಾಕ್ಯೂಮೆಂಟನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು.
1) ಇ–ಟೆಂಡರ್ ಪ್ರಾರಂಭ ದಿನಾಂಕ : 26–04–2021
2) ಇ–ಟೆಂಡರ್ ಸಲ್ಲಿಸಲುಕೊನೆಯ ದಿನಾಂಕ : 10–05–2021.
ಸಹಿ/– ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಅರ್.ಡಿ.ಸಿ.ಸಿ ಬ್ಯಾಂಕ್ ನಿ.,ರಾಯಚೂರು

ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಾಮಗಾರಿ ವಿಭಾಗ ಕಲಬುರಗಿ
ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ
ಸಂಖ್ಯೆ: ಈಕರಸಾ/ಕಾನಿಅ/ಡಿಬಿ/ಟೆ/55/2021–22 ದಿನಾಂಕ:22/04/2021
ಟೆಂಡರ್ ನೋಟಿಫಿಕೇಶನ್ ಪ್ರಕಟಣೆ ಸಂಖ್ಯೆ: 01/2021–22 (2ನೇ ಕರೆ)
Through GOK e-procurement platform WWW.eproc.karnataka.gov.in
1) ಕಾಮಗಾರಿ ವಿವರ : ವಿಜಯಪುರ ಜಿಲ್ಲೆಯ ನಾಗಠಾಣದಲ್ಲಿ ನೂತನ ಬಸ್ ನಿಲ್ದಾಣ ನಿರ್ಮಿಸುವುದು, 2) ಲೆಕ್ಕ ಶೀರ್ಷಿಕೆ : 2021–22 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆ ಅಡಿಯಲ್ಲಿ, 3) ಟೆಂಡರಿಗಿಟ್ಟ ಮೊತ್ತ: ಕನಿಷ್ಠ ರೂ. 150.00 ಲಕ್ಷ, ಗರಿಷ್ಠ ರೂ. 150.00 ಲಕ್ಷ, 4) ಗುತ್ತಿಗೆದಾರರ ಅರ್ಹತೆ: ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 5) ಟೆಂಡರ್‌ನ ಸ್ಪಷ್ಟೀಕರಣದ ಅಂತಿಮ ದಿನಾಂಕ : 03–05–2021 ಸಾಯಂಕಾಲ 5:00 ಗಂಟೆಯವರೆಗೆ, 6) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ : ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 7) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ : 10–05–2021 ಸಾಯಂಕಾಲ 5:00 ಗಂಟೆಯವರೆಗೆ, 8) ಟೆಂಡರ್ ಬಿಡ್ ತೆರೆಯುವ ದಿನಾಂಕ : 12–05–2021 ಮುಂಜಾನೆ 11:00 ಗಂಟೆಯವರೆಗೆ, 9) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಈಶಾನ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ, ಕಾಮಗಾರಿ ವಿಭಾಗ ಕಲಬುರಗಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ. ಮೋ. ನಂ 7760992033/08472–220663, 10) ಅಂತರಜಾಲ ತಾಣದ ವಿಳಾಸ : ಟೆಂಡರ್ ಶೆಡ್ಯೂಲ್‌ನ ವಿವರಗಳಿಗಾಗಿ ದಿನಾಂಕ 03–05–2021 ರ ನಂತರ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ www.eproc.karnataka.gov.in
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ವಾ.ಸಾ.ಸಂ.ಇ/ಕಲಬುರಗಿ/101/ಎಂ.ಸಿ&ಎ/2021–22 ಈ.ಕ.ರ.ಸಾ.ಸಂಸ್ಥೆ, ಕಾಮಗಾರಿ ವಿಭಾಗ, ಕಲಬುರಗಿ.

ಕರ್ನಾಟಕ ಸರ್ಕಾರ
ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ದಿ॥ ಶ್ರೀ ಡಿ.ದೇವರಾಜ ಅರಸು, ಸಾರ್ವಜನಿಕ ಆಸ್ಪತ್ರೆ, ಹುಣಸೂರು,
ಮೈಸೂರು ಜಿಲ್ಲೆ–571105.
E-mail:amoghhunsur@yahoo.com Ph:08222252181
ಸಂ:ಸಾ.ಆ.ಹು/ಸರಬ/15/2021–22 ದಿನಾಂಕ: 19.04.2021
ಇ–ಟೆಂಡರ್‌ಅಧಿಸೂಚನೆ
2021–22ನೇ ಸಾಲಿಗಾಗಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಹುಣಸೂರು, ಮೈಸೂರು ಜಿಲ್ಲೆ, ಈ ಕೆಳಕಂಡಂತೆ ನಾನ್ ಕ್ಲಿನಿಕ್ ಸೇವೆ ಸರಬರಾಜು ಬಗ್ಗೆ ಸರ್ಕಾರದಿಂದ ಅಂಗೀಕೃತ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್(ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ದಿ: 19.04.2021 ರಿಂದ ವೆಬ್ ಸೈಟ್ www.eproc.karnataka.gov.in ನಿಂದ ಪಡೆದು ದಿ: 18.05.2021 ವರೆಗೆ ಡೌನಲೋಡ್/ಅಪ್‌ಲೋಡ್ ಮಾಡಿಕೊಳಬಹುದು.
ಕ್ರ.ಸಂ.1 ವಿವರ: ನಾನ್ ಕ್ಲಿನಿಕಲ್ ಸೇವೆಗಳು ಟೆಂಡರ್‌ಅಂದಾಜು ಮೊತ್ತ: 20,00,000 ಇ.ಎಂ.ಡಿ: 50,000 ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ನಲ್ಲಿಡೌನಲೋಡ್/ ಅಪ್‌ಲೋಡ್ ಮಾಡಿಕೊಳ್ಳಲು ಕೊನೆಯ ದಿನಾಂಕ: 19.04.2021 ರಿಂದ 18.05.2021 ಸಂಜೆ 4.00 ಘಂಟೆಗೆರವರೆಗೆ. ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ನಲ್ಲಿ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಲಕೋಟೆ: 19.04.2021 ಪೂರ್ವಾಹ್ನ 11.00 ಗಂಟೆಗೆ. ಆರ್ಥಿಕ ಲಕೋಟೆ 20.05.2021ರ ಪೂರ್ವಾಹ್ನ 11.00 ಗಂಟೆಗೆ.
ಸೂಚನೆ: ಹೆಚ್ಚಿನ ಮಾಹಿತಿಯನ್ನು ಕಛೇರಿಯವರಲ್ಲಿ ಪಡೆಯಬಹುದಾಗಿದೆ.
ಸಹಿ/– ಆಡಳಿತವೈದ್ಯಾಧಿಕಾರಿಗಳು,
ಸಾರ್ವಜನಿಕ ಆಸ್ಪತ್ರೆ, ಹುಣಸೂರು, ಮೈಸೂರು ಜಿಲ್ಲೆ, 571105.
DIPR/DDMYS/MCA/84/2021-22

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು
ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪೂರ್ವಾರ್ಹತೆ ಪಡೆಯಲಿಚ್ಛಿಸುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

| ಕ್ರ. ಸಂ. | ಕಾಮಗಾರಿಯ ಹೆಸರು | Work Indent No. & IFT No. | ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: |
|---|---|---|---|
| 1 | ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಾನೂನು ಮಾಪನ ಶಾಸ್ತ್ರ ಇಲಾಖೆಯ ವರ್ಕಿಂಗ್ ಸ್ಟ್ಯಾಂಡರ್ಡ್ ಲ್ಯಾಬೋರೇಟರಿ ಕಂ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ. | Tender Reference No. KHB / 2021-22 /BD/Work_Indent 808 & IFT No.27/2021-22 Date: 23.04.2021 | 24.05.2021ರ ಸಂಜೆ 4.00 ಗಂಟೆಯವರೆಗೆ. |
| 2 | ತುಮಕೂರು ಜಿಲ್ಲೆ ಶೆಟ್ಟಿಹಳ್ಳಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಾನೂನು ಮಾಪನ ಶಾಸ್ತ್ರ ಇಲಾಖೆಯ ವರ್ಕಿಂಗ್ ಸ್ಟ್ಯಾಂಡರ್ಡ್ ಲ್ಯಾಬೋರೇಟರಿ ಕಂ ಕಛೇರಿ ಕಟ್ಟಡ ನಿರ್ಮಾಣ ಕಾಮಗಾರಿ. | Tender Reference No. KHB / 2021-22 /BD/Work_Indent 809 & IFT No.28/2021-22 Date: 23.04.2021 | |

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009. ದೂರವಾಣಿ: 080–22273511, 080–22100077 Website: www.khb.karnataka.gov.in, https://eproc.karnataka.gov.in
ವಾಸಾಸಂಇ/ಬೆಂ.ನ./ಜಿಎ/274/2021–22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2021–22/260 ದಿನಾಂಕ:23.04.2021
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ (1) Indent No. 20387 for Rs. 22.75 Lakhs (Call-2) (2) Indent No. 20072 for Rs. 19.10 Lakhs (Call-2) (3) Indent No. 20105 for Rs. 19.29 Lakhs (Call-2) (4) Indent No. 20099 for Rs. 8.48 Lakhs (Call-2) ಶೇಕಡಾವಾರು ದ್ವಿ–ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ–cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ ದಿನಾಂಕ: 27.04.2021 ರಿಂದ 10.05.2021 ಸಾಯಂಕಾಲ 5.00 ಘಂಟೆಯವರೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:12.05.2021 ಮುಂಜಾನೆ 11.00 ಘಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ:15.05.2021 ಮುಂಜಾನೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/49/ಎಂಸಿಎ/2021–22

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಿತ್ರದುರ್ಗ
ಸಂ: ಕೃಮಾಇ/ಕೃಉಮಾಸ/ಚಿ/104/2021–22 ದಿನಾಂಕ:23.04.2021
ಸಂಕ್ಷಿಪ್ತ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2021–22ನೇ ಸಾಲಿಗೆ ಈ ಸಮಿತಿಯ ಭದ್ರತಾ ಸಿಬ್ಬಂದಿ ಮತ್ತು ಸ್ವಚ್ಛತೆಗಾಗಿ ಅರ್ಹ ಹಾಗೂ ಅನುಭವ ಹೊಂದಿದ ಮತ್ತು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಸಂಸ್ಥೆ/ಏಜೆನ್ಸಿಯವರಿಂದ ನಿಯಮಾನುಸಾರ ಕನಿಷ್ಠ ವೇತನ ಕಾಯ್ದೆಯನ್ನು ಈ ಕೆಳಗಿನ ಸೇವೆಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಅರ್ಹ ಸಂಸ್ಥೆ/ಏಜೆನ್ಸಿಯವರು ವೆಬ್‌ಸೈಟ್ http://www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ. ಸಂ. | ಕೆಲಸದ ಹೆಸರು | ಭದ್ರತಾ ಠೇವಣಿ | ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ | ಸಿಬ್ಬಂದಿ ವಿವರ | ಸಂಖ್ಯೆ |
|---|---|---|---|---|---|
| 1 | ಭದ್ರತಾ ಸಿಬ್ಬಂದಿ ಪೂರೈಸುವುದು (ದ್ವಿ–ಲಕೋಟೆ) | ರೂ. 2,00,000/– | As per E-Portal | 1) ಸಿಬ್ಬಂದಿ | 10 |
| | | | | 2) ಕಂಪ್ಯೂಟರ್ ಆಪರೇಟರ್ | 2 |
| | | | | 3) ಡಾಟಾ ಎಂಟ್ರಿ ಆಪರೇಟರ್ | 4 |
| | | | | 4) ಎಲೆಕ್ಟ್ರೀಷಿಯನ್ | 1 |
| | | | | 5) ವಾಹನ ಚಾಲಕ | 2 |
| | | | | 6) ಪ್ಲಂಬರ್ | 1 |
| | | | | ಒಟ್ಟು | 20 |
| 2 | ಸ್ವಚ್ಛತಾ ಕಾರ್ಯ ನಿರ್ವಹಣೆ ಮುಖ್ಯ ಮಾರುಕಟ್ಟೆ ಪ್ರಾಂಗಣ ಮತ್ತು ಉಪ ಮಾರುಕಟ್ಟೆಗಳು | ರೂ. 1,00,000/– | As per E-Portal | ಸ್ವಚ್ಛತಾ ಕಾರ್ಯವನ್ನು ಕನಿಷ್ಠ 10 ಸಿಬ್ಬಂದಿಗಳನ್ನು ನೇಮಿಸಿಕೊಂಡು ನಿರ್ವಹಿಸುವುದು. | |

ಷರತ್ತು–ವ–ನಿಬಂಧನೆಗಳು
1) ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 11.5.2021ರ ಸಂಜೆ 4:00 ಗಂಟೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13.5.2021ರ ಸಂಜೆ 4:00 ಗಂಟೆ. 3) ಆರ್ಥಿಕ ಬಿಡ್ ತೆರೆಯುವ. ದಿನಾಂಕ:17.5.2021ರ ಸಂಜೆ. 4:00 ಗಂಟೆ ಅಥವಾ ಸಮಿತಿಗೆ ಅನುಕೂಲವಾದ ದಿನದಂದು ತೆರೆಯಲಾಗುವುದು. 4) ಕಾರ್ಮಿಕ ಇಲಾಖೆಯಲ್ಲಿ ನೋಂದಣಿ ಲೈಸೆನ್ಸ್ ಅನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಭದ್ರತಾ ಸಿಬ್ಬಂದಿಗಳ ಸೇವಾ ಶುಲ್ಕವನ್ನು ಕನಿಷ್ಠ ವೇತನ ಕಾಯ್ದೆ ದರಕ್ಕಿಂತ ಕಡಿಮೆ ಇಲ್ಲದಂತೆ ಝೋನ್–1 ಮತ್ತು ಝೋನ್–2 ರನ್ವಯ ನಮೂದಿಸುವುದು. 5) ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಕಾಯ್ದೆಯಡಿಯಲ್ಲಿ ನಿಗಧಿಪಡಿಸಿರುವ ದರಕ್ಕೆ ಏಜೆನ್ಸಿಯವರು 2% ಕಿಂತ ಕಡಿಮೆ ಸೇವಾ ಶುಲ್ಲವನ್ನು ನಮೂದಿಸಬಾರದು. 6) ಸಮಿತಿಯು ಸಿಬ್ಬಂದಿಗಳ ಸಂಖ್ಯೆಗಳನ್ನು ತನ್ನ ಅವಶ್ಯಕತೆಯ ಆಧಾರದ ಮೇಲೆ ಪಡೆಯುವ ಅಧಿಕಾರವನ್ನು ಹೊಂದಿರುತ್ತದೆ. 7) ಉಳಿದ ಷರತ್ತು–ವ–ನಿಬಂಧನೆಗಳನ್ನು. ಕಛೇರಿ ವೇಳೆಯಲ್ಲಿ ಪಡೆಯಬಹುದು. ಹಾಗೂ http://www.eproc.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಕಾರ್ಯದರ್ಶಿ ಕೃ.ಉ.ಮಾ.ಸ, ಚಿತ್ರದುರ್ಗ
ವಾಸಾಸಂಇ/ಚಿತ್ರದುರ್ಗ/087/ಜಿಎ/2021–22
ಸಹಿ/– ಅಧ್ಯಕ್ಷರು ಕೃ.ಉ.ಮಾ.ಸ, ಚಿತ್ರದುರ್ಗ

# ಶಿಕ್ಷಕರ ವರ್ಗಕ್ಕೆ ಸುಗ್ರೀವಾಜ್ಞೆ

ಒಂದನೇ ಪುಟದಿಂದ

**ಪ್ರಮುಖ ನಿರ್ಣಯಗಳು:**

- ಸಣ್ಣ– ಸಣ್ಣ ಆಹಾರ ಪದಾರ್ಥಗಳ ತಯಾರಿಕೆಗೆ ಸಂಬಂಧಿಸಿದಂತೆ ಆತ್ಮ ನಿರ್ಭರ್ ಯೋಜನೆಯಡಿ ₹493 ಕೋಟಿ ಆಹಾರ ಸಂಸ್ಕರಣ ಘಟಕ ಸ್ಥಾಪಿಸಲು ಒಪ್ಪಿಗೆ. ಈ ಯೋಜನೆಗೆ ಕೇಂದ್ರ ಸರ್ಕಾರ ಶೇ 60 ಮತ್ತು ರಾಜ್ಯ ಸರ್ಕಾರ ಶೇ 40 ರಷ್ಟು ಹಣ ತೊಡಗಿಸಲಿವೆ
- ಮಂಗಳೂರು ಮೀನುಗಾರಿಕಾ ಬಂದರಿನಲ್ಲಿ 3 ನೇ ಹಂತದ ಕಾಮಗಾರಿಯನ್ನು ನಡೆಸಲು ₹22 ಕೋಟಿ ನೀಡಲು ಒಪ್ಪಿಗೆ
- ಎನ್‌ಜಿಇಎಫ್‌ನಲ್ಲಿ ಜರ್ಮನಿಯ ಇಎಚ್‌ಜಿ ಕಂಪನಿಯ ಶೇ 9.7 ರಷ್ಟು ಷೇರುಗಳಿದ್ದವು. ಆ ಷೇರುಗಳ ಮೌಲ್ಯ ₹61.95 ಕೋಟಿ. ಎರಡು ಕಂಪನಿಗಳ ಮಧ್ಯೆ ಒಪ್ಪಂದ ಇದ್ದ ಕಾರಣ ಎನ್‌ಜಿಇಎಫ್‌ಗೆ ಸೇರಿದ ಜಮೀನು ಕೂಡ ಜಂಟಿ ಸುಪರ್ದಿಯಲ್ಲಿತ್ತು. ಈಗ ಜರ್ಮನಿಯ ಕಂಪನಿಗೆ ಷೇರು ಮೊತ್ತ ಪಾವತಿಸಿ 122 ಎಕರೆ ಜಮೀನು ಪಡೆಯಲು ತೀರ್ಮಾನ
- * ಮಂಗಳೂರು ವಿಶ್ವವಿದ್ಯಾಲಯದಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗಾಗಿ ಕ್ಯಾಂಪಸ್ ಕಾಂಪ್ಲೆಕ್ಸ್ ನಿರ್ಮಿಸಲು ₹63 ಕೋಟಿ ನೀಡಲು ಒಪ್ಪಿಗೆ
- ಬೆಂಗಳೂರಿನ ಸೂರ್ಯನಗರದಲ್ಲಿ ಬಹುಗ್ರಾಮ ಯೋಜನೆಯಡಿ ಕುಡಿಯುವ ನೀರು ಕಲ್ಪಿಸಲು ಸಂಪುಟ ಉಪಸಮಿತಿ ರಚಿಸಲು ತೀರ್ಮಾನ.
- ಬೆಂಗಳೂರಿನಲ್ಲಿ 12 ಹೈಡೆನ್ಸಿಟಿ ಕಾರಿಡಾರ್ ಅಭಿವೃದ್ಧಿಗೆ ₹477 ಕೋಟಿಗೆ ಅನುಮೋದನೆ
- ಮಂಡ್ಯ ಜಿಲ್ಲೆಯಲ್ಲಿ ಆದಿಚುಂಚನಗಿರಿ ಆಸ್ಪತ್ರೆ ವಿಸ್ತರಣೆಗಾಗಿ 25 ಎಕರೆ ಸರ್ಕಾರಿ ಜಮೀನು ನೀಡಲು ಒಪ್ಪಿಗೆ
- ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಸತ್ತಿ ಮತ್ತು ಇತರೆ 8 ಗ್ರಾಮಗಳಿಗೆ ₹45.39 ಕೋಟಿ ವೆಚ್ಚದಲ್ಲಿ ಕುಡಿಯುವ ನೀರು ಪೂರೈಕೆ ಯೋಜನೆಗೆ ಒಪ್ಪಿಗೆ

# ಜಿ.ಪಂ, ತಾ.ಪಂಗಳಿಗೆ ಆಡಳಿತಾಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಕಾರಣಕ್ಕೆ ಚುನಾವಣೆ ಮುಂದೂಡುವಂತೆ ರಾಜ್ಯ ಚುನಾವಣಾ ಆಯೋಗಕ್ಕೆ ಶಿಫಾರಸು ಮಾಡಿರುವ ರಾಜ್ಯ ಸರ್ಕಾರ, ಇದೇ ಮೇ– ಜೂನ್ ತಿಂಗಳಲ್ಲಿ ಅವಧಿ ಮುಕ್ತಾಯಗೊಳ್ಳಲಿರುವ 30 ಜಿಲ್ಲಾ ಪಂಚಾಯಿತಿಗಳು ಮತ್ತು ಹೊಸದಾಗಿ ರಚನೆಯಾದವು ಸೇರಿದಂತೆ 229 ತಾಲ್ಲೂಕು ಪಂಚಾಯಿತಿಗಳಿಗೆ ಆಡಳಿತಾಧಿಕಾರಿಯನ್ನು ನೇಮಿಸಿ ಸೋಮವಾರ ಆದೇಶ ಹೊರಡಿಸಿದೆ.

ಜಿಲ್ಲಾ ಪಂಚಾಯಿತಿಗಳಿಗೆ ಆಯಾ ಜಿಲ್ಲೆಗಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸಲಾಗಿದೆ. ತಾಲ್ಲೂಕು ಪಂಚಾಯಿತಿಗಳಿಗೆ ಆಯಾ ಜಿಲ್ಲಾ ಪಂಚಾಯಿತಿಯ ಉಪ ಕಾರ್ಯದರ್ಶಿ ಅಥವಾ ಆ ಶ್ರೇಣಿಗೆ ಸರಿಸಮನಾದ ಅಧಿಕಾರಿಯನ್ನು ಆಡಳಿತಾಧಿಕಾರಿಯಾಗಿ ನೇಮಿಸುವ ಅಧಿಕಾರವನ್ನು ಆಯಾ ಪ್ರಾದೇಶಿಕ ವಿಭಾಗದ ಆಯುಕ್ತರಿಗೆ ನೀಡಲಾಗಿದೆ. ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ–ಉಪಾಧ್ಯಕ್ಷರ ಅವಧಿ ಮುಕ್ತಾಯಗೊಂಡ ದಿನದಿಂದ, ಹೊಸದಾಗಿ ಆಯ್ಕೆ ಪ್ರಕ್ರಿಯೆ ಮುಗಿಯುವವರೆಗೆ ಆಡಳಿತಾಧಿಕಾರಿಯ ಅವಧಿ ಇರಲಿದೆ ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ನಿಧನ ವಾರ್ತೆ

# ಮೈಸೂರು ವಿ.ವಿ ಮೊದಲ ಮಹಿಳಾ ಕುಲಪತಿ ಸೆಲ್ವಿದಾಸ್

ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಮೊದಲ ಮಹಿಳಾ ಕುಲಪತಿಯಾಗಿದ್ದ ಡಾ.ಪಿ.ಸೆಲ್ವಿದಾಸ್ (88) ಅವರು ನಗರದ ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ನಿಧನರಾದರು. ವಯೋಸಹಜ ಸಮಸ್ಯೆಗಳಿಂದ ಅವರು ಬಳಲುತ್ತಿದ್ದರು.

ಕೋಲಾರದ ಕೆಜಿಎಫ್‌ನಲ್ಲಿ 1932 ಸೆ.29ರಂದು ಅವರು ಜನಿಸಿದ್ದರು. ಅವರ ತಂದೆ ಕೆಜಿಎಫ್‌ನಲ್ಲಿ ಗುತ್ತಿಗೆದಾರರಾಗಿದ್ದರು. 1956ರಲ್ಲಿ ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ವೃತ್ತಿ ಜೀವನ ಆರಂಭಿಸಿದ್ದ ಅವರು, ಅಮೆರಿಕದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದರು. ಅಲ್ಲಿಂದ ಸ್ವದೇಶಕ್ಕೆ ಬಂದು ಬೆಂಗಳೂರು ಗೃಹವಿಜ್ಞಾನ ಕಾಲೇಜಿನ ಪ್ರಾಂಶುಪಾಲರಾಗಿ ಅನೇಕ ಸುಧಾರಣಾ ಕ್ರಮಗಳನ್ನು ತೆಗೆದುಕೊಂಡರು.

ರಾಜ್ಯ ಉನ್ನತ ಶಿಕ್ಷಣ ಇಲಾಖೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದರು. ಸೆಲ್ವಿದಾಸ್ ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕಗೊಂಡಿದ್ದು 1988ರಲ್ಲಿ. ಕುಲಪತಿಯಾಗಿದ್ದ ವೇಳೆಯೇ ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) ಸದಸ್ಯರೂ ಆಗಿದ್ದರು. 1989ರಲ್ಲಿ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನ ಕೇಂದ್ರವನ್ನು ಅವರು ಪ್ರಾರಂಭಿಸಿದ್ದರು.

1991ರಿಂದ 1997ರವರೆಗೆ ಕೇಂದ್ರ ಲೋಕಸೇವಾ ಆಯೋಗದ ಸದಸ್ಯರಾಗಿ, ನಂತರ 1997ರಿಂದ 6 ವರ್ಷಗಳವರೆಗೆ ರಾಜ್ಯಸಭಾ ಸದಸ್ಯರಾಗಿಯೂ ಅವರು ಕಾರ್ಯನಿರ್ವಹಿಸಿದ್ದರು. ಅವಿವಾಹಿತರಾಗಿದ್ದ ಅವರಿಗೆ ಒಬ್ಬ ತಮ್ಮ ಇದ್ದಾರೆ.

# ವಿವಿಧೆಡೆ ಮಳೆ

ಬೆಂಗಳೂರು: ರಾಜ್ಯದ ಕಲಬುರ್ಗಿ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಮಳೆಯಾಗಿದೆ. ಕಲಬುರ್ಗಿಯಲ್ಲಿ ಮರ ಉರುಳಿದ್ದು, ಸಂಚಾರಕ್ಕೆ ವ್ಯತ್ಯಯವಾಯಿತು.

ಕಲಬುರ್ಗಿ ನಗರದಲ್ಲಿ ಸೋಮವಾರ ಬೆಳಗಿನ ಜಾವ ಭಾರಿ ಮಳೆ ಹಾಗೂ ಗಾಳಿಗೆ ರಾಜಾಪುರಕ್ಕೆ ತೆರಳುವ ರಸ್ತೆಯ ನಾಲೆಯ ಪಕ್ಕದಲ್ಲಿನ ಮರ ಉರುಳಿ ಬೃಹತ್ ಮರ ಉರುಳಿ, ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಸಂಜೆ ಆರಂಭವಾದ ಜಿಟಿ ಜಿಟಿ ಮಳೆ ರಾತ್ರಿವರೆಗೂ ಮುಂದುವರಿಯಿತು. ನಂತರ ತೆರವುಗೊಳಿಸಲಾಯಿತು.

ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೆಲವಡೆ ಸೋಮವಾರ ಮಳೆಯಾಗಿದೆ.

ಸುಳ್ಯ ಪಟ್ಟಣ ಸೇರಿದಂತೆ ತಾಲ್ಲೂಕಿನ ವಿವಿಧ ಕಡೆ ಸಾಧಾರಣ ಮಳೆಯಾಗಿದೆ. ಕೆಲವೆಡೆ ಸಿಡಿಲಿನ ಅಬ್ಬರದೊಂದಿಗೆ ಮಳೆ ಸುರಿದಿದೆ. ಚಿಕ್ಕಮಗಳೂರು ಜಿಲ್ಲೆಯ ಕಳಸ, ಕೊಟ್ಟಿಗೆಹಾರ, ಬಣಕಲ್‌ನಲ್ಲಿ ಸಾಧಾರಣ ಮಳೆಯಾಗಿದೆ.

### ಮೈಕ್ರೋ ಕಂಟೈನ್‌ಮೆಂಟ್ ವಲಯ ರಚನೆ: 20 ದಿನಗಳಿಂದ ಸೋಂಕು ದೂರ

# ಕೋವಿಡ್ ತಡೆಗೆ ‘ಎಂಐಟಿ ಮಾದರಿ’

● ಬಾಲಚಂದ್ರ ಎಚ್.

**ಉಡುಪಿ:** ಸಾವಿರಕ್ಕೂ ಅಧಿಕ ಪ್ರಕರಣಗಳಿದ್ದ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಎಂಐಟಿ) ಇದೀಗ ಸೋಂಕು ಮುಕ್ತವಾಗಿದೆ. ‘ಮೈಕ್ರೋ ಕಂಟೈನ್‌ಮೆಂಟ್ ವಲಯ’ದ ಮೂಲಕ ಕೋವಿಡ್–19 ಸಮುದಾಯಕ್ಕೆ ಹರಡುವುದನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದೆ.

ಬೃಹತ್ ಅಪಾರ್ಟ್‌ಮೆಂಟ್‌ಗಳು, ವಿದ್ಯಾಸಂಸ್ಥೆಗಳು, ಕಂಪನಿಗಳು ಸೇರಿದಂತೆ ನಿರ್ದಿಷ್ಟ ಪ್ರದೇಶಗಳಲ್ಲಿ ಸೋಂಕು ನಿಯಂತ್ರಣಕ್ಕೆ ತರಲು ಮೈಕ್ರೋ ಕಂಟೈನ್‌ಮೆಂಟ್ ವಲಯ ಹೆಚ್ಚು ಸಹಕಾರಿ ಎಂದು ಎಂಐಟಿ ತೋರಿಸಿಕೊಟ್ಟಿದೆ.

**ಸೋಂಕು ಮುಕ್ತವಾಗಿದ್ದು ಹೀಗೆ:** ಮಾರ್ಚ್ 15ಕ್ಕೆ ಎಂಐಟಿಯ ಕೆಲವು ವಿದ್ಯಾರ್ಥಿಗಳಲ್ಲಿ ಕೊರೊನಾ ಸೋಂಕು ಕಾಣಿಸಿಕೊಂಡಿತು. ತಕ್ಷಣ ಎಚ್ಚೆತ್ತ ಜಿಲ್ಲಾಧಿಕಾರಿ ಜಿ.ಜಗದೀಶ್, ಆರೋಗ್ಯ ಇಲಾಖೆ ಹಾಗೂ ಕಾಲೇಜು ಆಡಳಿತ ಮಂಡಳಿ ಜತೆ ತುರ್ತುಸಭೆ ನಡೆಸಿ, ಎಂಐಟಿ ಕ್ಯಾಂಪಸ್ ಅನ್ನು ಕಂಟೈನ್‌ಮೆಂಟ್ ವಲಯವಾಗಿ ಘೋಷಿಸಿದರು.

ಕಾಲೇಜಿಗೆ ಸಂಪರ್ಕಿಸುವ ಮಾರ್ಗಗಳನ್ನು ಬಂದ್ ಮಾಡಿ, ವಿದ್ಯಾರ್ಥಿಗಳ ಓಡಾಟವನ್ನು ನಿರ್ಬಂಧಿಸಲಾಯಿತು. ಕ್ಯಾಂಪಸ್‌ನ ಒಳಗೆ ಜ್ವರ ಪತ್ತೆ ಕ್ಲಿನಿಕ್ ಹಾಗೂ ಕಿಯೋಸ್ಕ್‌ಗಳನ್ನು ಹಾಕಿ, ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿ ಸೇರಿ 6 ಸಾವಿರಕ್ಕೂ ಹೆಚ್ಚು ಮಂದಿಗೆ ಹಂತ ಹಂತವಾಗಿ ಕೋವಿಡ್ ಪರೀಕ್ಷೆ ಮಾಡಲಾಯಿತು.

‘ಇಡೀ ಪ್ರಕ್ರಿಯೆಯ ಉಸ್ತುವಾರಿಗೆ ನೋಡಲ್ ಅಧಿಕಾರಿಯನ್ನು ನೇಮಿಸಿ, ಪ್ರತಿದಿನ 1 ಸಾವಿರಕ್ಕೂ ಹೆಚ್ಚು ಮಂದಿಗೆ ಪರೀಕ್ಷೆ ನಡೆಸಲಾಯಿತು. ಸೋಂಕು ಪತ್ತೆಯಾದವರಿಗೆ ಐಸೊಲೇಷನ್‌ನಲ್ಲಿ ಇರಿಸಿ ಚಿಕಿತ್ಸೆ ನೀಡಿದರೆ, ಪ್ರಾಥಮಿಕ ಸಂಪರ್ಕಿತರಿಗೆ 14 ದಿನಗಳಲ್ಲಿ ಎರಡು ಬಾರಿ ಪರೀಕ್ಷೆ ನಡೆಸಿ, ನೆಗೆಟಿವ್ ಬಂದವರಿಗೆ ಮಾತ್ರ ಮನೆಗೆ ಕಳುಹಿಸಲಾಯಿತು’ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಸುಧೀರ್ ಚಂದ್ರ ಸೂಡ ಹೇಳಿದರು.

**ಮುಖ್ಯಾಂಶಗಳು**

- ಎಂಐಟಿಯಲ್ಲಿ ಪೋಸ್ಟ್ ಕಂಟೈನ್‌ಮೆಂಟ್ ನಿಯಮ ಪಾಲನೆ
- ಏ.20 ರಂದು ಕೋವಿಡ್ ಮುಕ್ತ ಕ್ಯಾಂಪಸ್ ಆಗಿ ಘೋಷಣೆ

**‘ಮೈಕ್ರೋ ಕಂಟೈನ್‌ಮೆಂಟ್’ ವಲಯ ರಚನೆ ಸಲಹೆ ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತಂದಿದ್ದರಿಂದ ಏ.5ರ ಬಳಿಕ ಎಂಐಟಿಯಲ್ಲಿ ಸೋಂಕು ಪತ್ತೆಯಾಗಿಲ್ಲ.**

**ಡಾ.ಸುಧೀರ್ ಚಂದ್ರ ಸೂಡ**
ಉಡುಪಿ ಜಿಲ್ಲಾ ಆರೋಗ್ಯಾಧಿಕಾರಿ

### ‘ಪ್ರತ್ಯೇಕ ಬ್ಲಾಕ್‌ಗಳ ರಚನೆ’

‘ಎಲ್ಲರಿಗೂ ಕೋವಿಡ್ ಪರೀಕ್ಷೆ ಮಾಡಿ, ಚಿಕಿತ್ಸೆ ನೀಡಿದ್ದರಿಂದ ಎಂಐಟಿ ಸೋಂಕು ಮುಕ್ತವಾಯಿತು. ಅಪಾರ್ಟ್‌ಮೆಂಟ್‌ಗಳು ಹಾಗೂ ವಸತಿಸಹಿತ ವಿದ್ಯಾಸಂಸ್ಥೆಗಳಲ್ಲಿ ಸೋಂಕು ಕಂಡುಬಂದಾಗ ಇಂಥ ಕ್ರಮ ಪರಿಣಾಮಕಾರಿ’ ಎನ್ನುತ್ತಾರೆ ಮಣಿಪಾಲ ವಿವಿ ರಿಜಿಸ್ಟ್ರಾರ್ ನಾರಾಯಣ ಸಭಾಯಿತ್.

‘ಎಂಐಟಿಯಲ್ಲಿ ಸೋಂಕಿತರಿಗೆ, ಪ್ರಾಥಮಿಕ ಹಾಗೂ ದ್ವಿತೀಯ ಸಂಪರ್ಕಿತರಿಗೆ ಪ್ರತ್ಯೇಕ ಬ್ಲಾಕ್‌ಗಳಲ್ಲಿ ಇರಿಸಲಾಯಿತು. ಕ್ಯಾಂಪಸ್‌ನಿಂದ ಹೊರ ಹೋಗದಂತೆ ಎಚ್ಚರವಹಿಸಲಾಯಿತು. ಪ್ರತಿಯೊಬ್ಬರಿಗೂ ಉಪಾಹಾರ, ಊಟ ಸೇರಿ ಅಗತ್ಯ ವಸ್ತುಗಳನ್ನು ಕೊಠಡಿಗೆ ಮುಟ್ಟಿಸಲಾಯಿತು’ ಎಂದರು.

# ಹಿಂದೂ ವ್ಯಕ್ತಿಯ ಶವಸಂಸ್ಕಾರಕ್ಕೆ ಸಾಥ್

ಪ್ರಜಾವಾಣಿ ವಾರ್ತೆ

**ಕೊಪ್ಪಳ:** ಉಸಿರಾಟದ ತೊಂದರೆಯಿಂದ ಮೃತಪಟ್ಟಿದ್ದ ಹಿಂದೂ ವ್ಯಕ್ತಿಯ ಅಂತ್ಯಕ್ರಿಯೆಯನ್ನು ಮುಸ್ಲಿಂ ಯುವಕರು ಭಾನುವಾರ ರಾತ್ರಿ ನಗರದಲ್ಲಿ ನಡೆಸಿದರು.

ವಿಕಾಸನಗರದ 85 ವರ್ಷದ ವೃದ್ಧರೊಬ್ಬರು ಕೋವಿಡ್‌ನಿಂದ ಸಾವನ್ನಪ್ಪಿದ್ದರು. ಅವರ ಪುತ್ರ ಗಿಣಗೇರಿಯ ಅಲ್ಟ್ರಾ ಟೆಕ್ ಸಿಮೆಂಟ್ ಕಾರ್ಖಾನೆ ನೌಕರ. ಅವರಿಗೂ ಕೋವಿಡ್ ದೃಢಪಟ್ಟಿದ್ದರಿಂದ ಆಸ್ಪತ್ರೆಗೆ ದಾಖಲಾಗಿದ್ದರು.

ಮೃತರ ಅಂತ್ಯಕ್ರಿಯೆ ನೆರವೇರಿಸಲು ಯಾರೂ ಮುಂದೆ ಬರಲಿಲ್ಲ. ಹೀಗಾಗಿ ಕೊಪ್ಪಳದ ಜಮಾತೇ ಇಸ್ಲಾಂ ಸಂಘಟನೆಯ ಹ್ಯೂಮಾನಿಟೇರಿಯನ್ ರಿಲೀಫ್ ಸೊಸೈಟಿಯ ಕಾರ್ಯಕರ್ತರು ದಾವಣಗೆರೆಯಿಂದ ಬಂದಿದ್ದ ಅವರ ಸಂಬಂಧಿ ಸಮ್ಮುಖದಲ್ಲಿ ಹಿಂದೂ ಪದ್ಧತಿಯಂತೆ ಗವಿಮಠದ ಹಿಂಭಾಗದ ಸ್ಮಶಾನದಲ್ಲಿ ಅಂತಿಮಸಂಸ್ಕಾರ ನಡೆಸಿದರು.

ಅಂತ್ಯ ಸಂಸ್ಕಾರದಲ್ಲಿ ಸಂಘಟನೆಯ ಜಮಾತ್‌ನ ಅಧ್ಯಕ್ಷ ಸಯ್ಯದ್ ಹಿದಾಯತ್ ಅಲಿ, ಗ್ರೂಪ್ ಲೀಡರ್ ಮಹಮ್ಮದ್ ಖಲೀಲ್, ಅಸ್ಗರ್ ಖಾನ್, ಗೌಸ್ ಪಟೇಲ್, ಸಜೀದ್ ಹುಸೇನ್, ರಹಮತ್ ಹುಸೈನ್, ಮಹಮ್ಮದ್ ಅಖೀಲ್ ಭಾಗವಹಿಸಿದ್ದರು.

**ಹೆಚ್ಚಿನ ಹಣಕ್ಕೆ ಚಾಲಕನ ಒತ್ತಾಯ:** ಖಾಸಗಿ ಅಂಬುಲೆನ್ಸ್ ಚಾಲಕ ಆಸ್ಪತ್ರೆಯಿಂದ ಸ್ಮಶಾನಕ್ಕೆ ಕೇವಲ 6 ಕಿ.ಮೀ ದೂರಕ್ಕೆ 12 ಸಾವಿರಕ್ಕೆ ಬೇಡಿಕೆ ಇಟ್ಟಿದ್ದಾನೆ. ಬಳಿಕ ₹4 ಸಾವಿರ ಕೊಡುವುದಾಗಿ ಹೇಳಿದ ನಂತರ ಶವ ಸಾಗಿಸಲು ಒಪ್ಪಿಕೊಂಡಿದ್ದಾನೆ.

ಜಿಲ್ಲಾಧಿಕಾರಿ ವಿಕಾಸ್ ಕಿಶೋರ್, ‘ಅಂತ್ಯಕ್ರಿಯೆಯಾದ ಬಳಿಕ ಇದು ತಮ್ಮ ಗಮನಕ್ಕೆ ಬಂದಿದೆ. ಚಾಲಕರು ಮಾನವೀಯತೆಯಿಂದ ವರ್ತಿಸಬೇಕು’ ಎಂದರು.

**ವಧುವಿಗೆ ಕೋವಿಡ್, ಆತಂಕ:** ಕೊಪ್ಪಳ ತಾಲ್ಲೂಕಿನ ಕಿನ್ನಾಳ ಗ್ರಾಮದ ಮದುಮಗಳೊಬ್ಬಳಿಗೆ ಕೋವಿಡ್ ದೃಢಪಟ್ಟಿದೆ. ಮದುವೆಯಾಗಿ ವಧು ಮನೆ ಸೇರಿದ ನಂತರ ವರದಿ ಬಂದಿದೆ. ಇದರಿಂದಾಗಿ ಮದುವೆಗೆ ಹೋಗಿದ್ದವರಿಗೂ ಆತಂಕ ಶುರುವಾಗಿದೆ. ವಧುವಿನ ತಾಯಿ ಮತ್ತು ಸಹೋದರಿಗೆ ಸೋಂಕು ತಗುಲಿದ್ದು, ಕುಟುಂಬದವರು ಆತಂಕಕ್ಕೆ ಒಳಗಾಗಿದ್ದಾರೆ.

ಕೊಪ್ಪಳದ ಗವಿಮಠದ ಸಮೀಪದ ಸ್ಮಶಾನದಲ್ಲಿ ಹಿಂದೂ ವ್ಯಕ್ತಿಯೊಬ್ಬರ ಶವಕ್ಕೆ ಮುಸ್ಲಿಂ ಯುವಕರು ಅಗ್ನಿ ಸ್ಪರ್ಶ ಮಾಡುವ ಮೂಲಕ ಅಂತ್ಯಸಂಸ್ಕಾರ ನೆರವೇರಿಸಿದರು

### ಮುಸ್ಲಿಂ ಯುವಕರಿಂದ ಅಂತ್ಯಸಂಸ್ಕಾರ

**ಬಸವಕಲ್ಯಾಣ (ಬೀದರ್ ಜಿಲ್ಲೆ):** ಇಲ್ಲಿನ ಶಹಾನಗರ ನಿವಾಸಿ ಯಾದವರಾವ್ (55) ಅವರ ಅಂತ್ಯಕ್ರಿಯೆಯನ್ನು ಭಾನುವಾರ ಅದೇ ಓಣಿಯ ಮುಸ್ಲಿಂ ಯುವಕರು ನೆರವೇರಿಸಿದ್ದಾರೆ. ಯಾದವರಾವ್ ಮನೆಯಲ್ಲಿ ಮಲಗಿದ್ದಲ್ಲೇ ಪ್ರಾಣಬಿಟ್ಟಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಕೋವಿಡ್ ಭಯದಿಂದ ಅಂತ್ಯಸಂಸ್ಕಾರಕ್ಕೆ ಓಣಿ ಜನರು ಬಾರದಿದ್ದಾಗ ಮುಸ್ಲಿಂ ಯುವಕರು ಶವವನ್ನು ವಾಹನದಲ್ಲಿ ಸಾಗಿಸಿ ಖಾನಾಪುರ ರಸ್ತೆಯಲ್ಲಿನ ಹಿಂದೂ ಸಮುದಾಯದ ಸ್ಮಶಾನದಲ್ಲಿ ಶವಸಂಸ್ಕಾರ ನಡೆಸಿದರು.

### ಅಂತ್ಯಕ್ರಿಯೆಗೆ ಬಾರದ ಸಂಬಂಧಿಕರು

**ಬ್ಯಾಡಗಿ (ಹಾವೇರಿ ಜಿಲ್ಲೆ):** ಕೋವಿಡ್ ಸೋಂಕು ತಗುಲಿರುವ ಶಂಕೆ ಇದ್ದ ವ್ಯಕ್ತಿಯ ಶವಸಂಸ್ಕಾರವನ್ನು ತಾಲ್ಲೂಕಿನ ಖುರ್ದ ವೀರಾಪುರ ಗ್ರಾಮದಲ್ಲಿ ಪಟ್ಟಣದ ಮುಸ್ಲಿಂ ಸಮಾಜದ ಸ್ವಯಂ ಸೇವಕರು ಸೋಮವಾರ ನಡೆಸಿದ್ದಾರೆ.

ತುಮಕೂರು ಜಿಲ್ಲೆಯ ಪಾವಗಡದ ವ್ಯಕ್ತಿಯೊಬ್ಬರು ರಾಣೆಬೆನ್ನೂರ ಖಾಸಗಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ದಾಖಲಾಗಿದ್ದರು. ಚಿಕಿತ್ಸೆವೇಳೆ ಮೃತಪಟ್ಟಿದ್ದು, ಅವರ ಕೋವಿಡ್ ವರದಿ ಬಂದಿರಲಿಲ್ಲ. ಮೃತರ ಸಂಬಂಧಿಗಳು ಕೂಡ ಶವ ಸಂಸ್ಕಾರಕ್ಕೆ ಮುಂದಾಗಲಿಲ್ಲ. ಸ್ವಯಂ ಸೇವಕರಾದ ಮಂಜೂರಲಿ ಹಕೀಂ, ಮುಕ್ತಿಯಾರ್ ಮುಲ್ಲಾ, ಅಜೀಜ್ ಬಿಜಾಪುರ, ಹಸನಲಿ ಕುಪ್ಪೇಲೂರು ಕೋವಿಡ್ ನಿಯಮಾವಳಿ ಪ್ರಕಾರ ಶವ ಸಂಸ್ಕಾರ ನಡೆಸಿದರು ಎಂದು ಹಿರಿಯ ಆರೋಗ್ಯ ಸಹಾಯಕ ಎಂ.ಎನ್.ಕಂಬಳಿ ತಿಳಿಸಿದ್ದಾರೆ.

# ನಿರ್ಮಾಪಕ ರಾಮು ಕೋವಿಡ್‌ನಿಂದ ನಿಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್‌ನಿಂದ ಬಳಲುತ್ತಿದ್ದ ಚಿತ್ರ ನಿರ್ಮಾಪಕ, ನಟಿ ಮಾಲಾಶ್ರೀ ಅವರ ಪತಿ ರಾಮು (52) ಅವರು ಚಿಕಿತ್ಸೆಗೆ ಸ್ಪಂದಿಸದೆ ಸೋಮವಾರ ನಿಧನ ಹೊಂದಿದರು.

ಸೋಂಕು ಪೀಡಿತರಾಗಿದ್ದ ಅವರು ಏ. 24ರಂದು ನಗರದ ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಾಗಿದ್ದರು. ಮೂಲತಃ ಕುಣಿಗಲ್‌ನವರಾಗಿದ್ದ ರಾಮು ಅವರು ದೊಡ್ಡ ಬಜೆಟ್‌ನ ನಿರ್ಮಾಪಕರು (ಕೋಟಿ ರಾಮು) ಎಂದೇ ಖ್ಯಾತರಾಗಿದ್ದವರು. ಅವರಿಗೆ ಪತ್ನಿ ಮಾಲಾಶ್ರೀ, ಪುತ್ರಿ ಅನನ್ಯಾ, ಪುತ್ರ ಆರ್ಯನ್ ಇದ್ದಾರೆ.

ಕನ್ನಡದಲ್ಲಿ ಅದ್ದೂರಿ ಬಜೆಟ್‌ನ ಚಿತ್ರಗಳನ್ನು ನೀಡುವ ಮೂಲಕ ಕನ್ನಡ ಚಿತ್ರರಂಗವನ್ನು ಇತರ ಭಾಷೆಯವರೂ ಕೂಡಾ ಗಮನಹರಿಸುವ ಮಟ್ಟಕ್ಕೆ ಹಲವಾರು ಪ್ರಯೋಗಗಳನ್ನು ನಡೆಸಿದ್ದರು. ಆರಂಭದಲ್ಲಿ ಕನ್ನಡ ಚಿತ್ರಗಳ ಹಂಚಿಕೆದಾರರಾಗಿ ಕೆಲಸ ಮಾಡಿದ್ದ ಅವರು, ಮುಂದೆ ‘ಗೋಲಿಬಾರ್’ (1993) ಚಿತ್ರ ನಿರ್ಮಿಸುವ ಮೂಲಕ ಚಿತ್ರ ನಿರ್ಮಾಣ ವಿಭಾಗಕ್ಕೆ ಕಾಲಿಟ್ಟರು.

‘ಲಾಕಪ್ ಡೆತ್’, ‘ಎ.ಕೆ. 47’, ‘ಕಲಾಸಿಪಾಳ್ಯ’, ‘ರಾಕ್ಷಸ’, ‘ಶಿವಾಜಿನಗರ’, ‘ಗೂಳಿ’, ‘ಕಿಚ್ಚ’, ‘ಹಾಲಿವುಡ್’, ‘ಚಾಮುಂಡಿ’, ‘99’ ಅವರ (ರಾಮು ಎಂಟರ್‌ಪ್ರೈಸಸ್) ನಿರ್ಮಾಣದಲ್ಲಿ ದಾಖಲೆ ನಿರ್ಮಿಸಿದ ಚಿತ್ರಗಳು. ಒಟ್ಟು 37 ಚಿತ್ರಗಳನ್ನು ಅವರು ನಿರ್ಮಿಸಿದ್ದಾರೆ. ಒಂದು ಚಿತ್ರದ ಕಾರ್ಯಕಾರಿ ನಿರ್ಮಾಪಕರಾಗಿದ್ದರು. ರಾಮು ನಿಧನಕ್ಕೆ ಚಿತ್ರರಂಗ ಕಂಬನಿ ಮಿಡಿದಿದೆ.

ಕನ್ನಡ ಚಿತ್ರರಂಗ ಒಬ್ಬ ಅದ್ಭುತ ನಿರ್ಮಾಪಕನನ್ನು ಕಳೆದುಕೊಂಡಿದೆ. ಎಲ್ಲರನ್ನೂ ಪ್ರೀತಿಸುವ, ಮೃದುಭಾಷಿ ರಾಮು ಅವರು ಇನ್ನಿಲ್ಲ ಎಂದರೆ ನಂಬಲಾಗುತ್ತಿಲ್ಲ. ಕೋವಿಡ್ ನಿಯಮಗಳ ಹಿನ್ನೆಲೆಯಲ್ಲಿ ಅಂತಿಮ ದರ್ಶನವನ್ನೂ ಮಾಡಲಾಗುತ್ತಿಲ್ಲ. ಅವರ ಕುಟುಂಬಕ್ಕೆ ದುಃಖ ಸಹಿಸುವ ಶಕ್ತಿ ಸಿಗಲಿ ಎಂದು ಚಿತ್ರನಟರಾದ ಪುನೀತ್ ರಾಜ್‌ಕುಮಾರ್, ಶ್ರೀಮುರಳಿ, ಸಂಸದೆ ಸುಮಲತಾ ಅಂಬರೀಷ್ ಸಹಿತ ಹಲವರು ನೋವು ತೋಡಿಕೊಂಡರು.

ನಿರ್ಮಾಪಕ ರಾಮು

# ಐವರು ಸೋಂಕಿತರ ಸಾವು

ಒಂದನೇ ಪುಟದಿಂದ

‘ಐಸಿಯುನಲ್ಲಿ ಸೋಂಕಿತರ ಸಂಖ್ಯೆ ಹೆಚ್ಚಿದ್ದು, ವೈದ್ಯಕೀಯ ಆಮ್ಲಜನಕ ಬಳಕೆ ಪ್ರಮಾಣವೂ ಹೆಚ್ಚಾಗಿತ್ತು. ಆದರೆ, ರಾತ್ರಿ ಐಸಿಯುಗೆ ಏಕಾಏಕಿ ಆಮ್ಲಜನಕ ಹರಿವಿನ ಪ್ರಮಾಣ ಕಡಿಮೆಯಾಗಿದೆ. ಇದರಿಂದ ಉಸಿರಾಟಕ್ಕೆ ತೊಂದರೆಯಾಗಿ ರೋಗಿಗಳು ಮೃತಪಟ್ಟಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ನನ್ನ ಭಾವನನ್ನು ಭಾನುವಾರ ಈ ಆಸ್ಪತ್ರೆಯ ಐಸಿಯುಗೆ ದಾಖಲಿಸಿದ್ದೆವು. ರಾತ್ರಿ ಆಮ್ಲಜನಕ ಪೂರೈಕೆ ಪ್ರಮಾಣದಲ್ಲಿ ವ್ಯತ್ಯಯವಾಗಿ ಅವರು ಮೃತಪಟ್ಟರು. ವೈದ್ಯಕೀಯ ಸಿಬ್ಬಂದಿ ನಿರ್ಲಕ್ಷ್ಯವೇ ಅವರ ಸಾವಿಗೆ ಕಾರಣ’ ಎಂದು ತಾಲ್ಲೂಕಿನ ವೇಮಗಲ್ ಗ್ರಾಮದ ಪದ್ಮನಾಭ್ ಆರೋಪಿಸಿದರು.

**ಆಮ್ಲಜನಕದ ಕೊರತೆಯಿಲ್ಲ–ಜಿಲ್ಲಾಧಿಕಾರಿ ಸ್ಪಷ್ಟನೆ:** ‘ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆಯಿಲ್ಲ. ಸೋಂಕಿತರ ಸಾವಿಗೆ ಆಮ್ಲಜನಕದ ಕೊರತೆ ಕಾರಣವಲ್ಲ. ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ವೇಳೆಗಾಗಲೇ ಅವರ ದೇಹಸ್ಥಿತಿ ಗಂಭೀರವಾಗಿತ್ತು. ಹೀಗಾಗಿ ಅವರು ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ’ ಎಂದು ಜಿಲ್ಲಾಧಿಕಾರಿ ಆರ್.ಸೆಲ್ವಮಣಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಪ್ರಕರಣದ ಬಗ್ಗೆ ಆರೋಗ್ಯ ಸಚಿವರಿಗೆ ವಿವರಣೆ ನೀಡಿದ್ದೇವೆ. ಡಿಎಚ್‌ಒ ನೇತೃತ್ವದ ತಾಂತ್ರಿಕ ತಂಡವು ಪ್ರಕರಣದ ಪರಿಶೀಲನೆ ಮಾಡಿದ್ದು, ಸದ್ಯದಲ್ಲೇ ವರದಿ ನೀಡಲಿದೆ. ಬಳಿಕ ಸೋಂಕಿತರ ಸಾವಿನ ನಿಖರ ಕಾರಣ ಗೊತ್ತಾಗಲಿದೆ’ ಎಂದು ಹೇಳಿದರು.

# ಈಗ ಲಸಿಕೆಗೂ ಪರದಾಟ

ಒಂದನೇ ಪುಟದಿಂದ

‘ಮೊದಲ ಡೋಸ್ ಪಡೆಯುವಾಗ ಲಸಿಕಾ ಕೇಂದ್ರಗಳಲ್ಲಿ ಜನರೇ ಕಾಣುತ್ತಿರಲಿಲ್ಲ. ಹೋದ ತಕ್ಷಣವೇ ಲಸಿಕೆ ಹಾಕಿಸಿಕೊಂಡು ಮನೆಗೆ ಮರಳಬಹುದಿತ್ತು. ಈಗ ಎರಡನೇ ಡೋಸ್‌ಗಾಗಿ ಹೋದರೆ ನೂರಾರು ಮಂದಿ ಸರದಿಯಲ್ಲಿ ನಿಂತಿದ್ದರು. ಒಂದು ಡೋಸ್ ಲಸಿಕೆಗಾಗಿ ಹತ್ತಾರು ಕೇಂದ್ರಗಳಿಗೆ ಅಲೆಯಬೇಕಾದ ಪರಿಸ್ಥಿತಿ ಇದೆ’ ಎಂದು ಲಸಿಕೆಗಾಗಿ ಕಾಯುತ್ತಿರುವವರು ಅಳಲು ತೋಡಿಕೊಳ್ಳುತ್ತಾರೆ.

ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳು, ಜಿಲ್ಲಾ ಕೇಂದ್ರಗಳಲ್ಲಿ ಲಸಿಕೆ ಕೊರತೆ ಹೆಚ್ಚುತ್ತಿದೆ. ಕೋವಿಡ್ ಪ್ರಕರಣಗಳು ಏರುಗತಿಯಲ್ಲಿರುವ ಪ್ರದೇಶಗಳಲ್ಲಿ ಲಸಿಕಾ ಕೇಂದ್ರಗಳಲ್ಲಿ ಕಾಲಿಡುವುದಕ್ಕೂ ಸಾಧ್ಯವಾಗದ ಪರಿಸ್ಥಿತಿ ಇದೆ. ದಾವಣಗೆರೆ, ಮಂಡ್ಯ, ಬೆಳಗಾವಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಲಸಿಕೆಯ ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ ದೊಡ್ಡದಾಗಿದೆ. ಗ್ರಾಮೀಣ ಪ್ರದೇಶಗಳು, ಕೋವಿಡ್ ಪ್ರಕರಣಗಳು ಕಡಿಮೆ ಇರುವ ತಾಲ್ಲೂಕುಗಳಲ್ಲಿ ಲಸಿಕೆ ಸುಲಭವಾಗಿ ದೊರಕುತ್ತಿದೆ.

**ಕೋವಿಶೀಲ್ಡ್‌ಗೆ ಬೇಡಿಕೆ ಹೆಚ್ಚು:** ರಾಜ್ಯದಲ್ಲಿ ಈವರೆಗೆ 80.01 ಲಕ್ಷ ಡೋಸ್‌ಗಳಷ್ಟು ಕೋವಿಶೀಲ್ಡ್ ಲಸಿಕೆ ವಿತರಿಸಲಾಗಿದೆ. ಕೋವ್ಯಾಕ್ಸಿನ್‌ಗೆ ಹೆಚ್ಚಿನ ಬೇಡಿಕೆ ಇಲ್ಲ. ಸೋಮವಾರ ಸಂಜೆಯವರೆಗೆ 8.81 ಲಕ್ಷ ಡೋಸ್‌ಗಳಷ್ಟು ಕೋವ್ಯಾಕ್ಸಿನ್ ಲಸಿಕೆಯನ್ನು ಹಾಕಲಾಗಿದೆ ಎಂಬ ಮಾಹಿತಿ ಕೇಂದ್ರ ಸರ್ಕಾರದ ‘ಕೋವಿನ್’ ವೆಬ್‌ಸೈಟ್‌ನಲ್ಲಿದೆ.

### ‘ಏಳು ಲಕ್ಷ ಡೋಸ್ ದಾಸ್ತಾನು’

‘ಸೋಮವಾರ ಸಂಜೆಯ ವೇಳೆಗೆ ರಾಜ್ಯದಲ್ಲಿ ಏಳು ಲಕ್ಷ ಡೋಸ್‌ಗಳಷ್ಟು ಕೋವಿಡ್ ಲಸಿಕೆಯ ದಾಸ್ತಾನು ಇದೆ. ಸರ್ಕಾರಿ ಮತ್ತು ಖಾಸಗಿ ಲಸಿಕಾ ಕೇಂದ್ರಗಳಿಗೆ ಬೇಡಿಕೆ ಆಧರಿಸಿ, ಪೂರೈಕೆ ಮಾಡಲಾಗುತ್ತಿದೆ’ ಎಂದು ಆರೋಗ್ಯ ಇಲಾಖೆಯ ಆಯುಕ್ತ ಕೆ.ವಿ. ತ್ರಿಲೋಕಚಂದ್ರ ತಿಳಿಸಿದರು.

ನಿಖರವಾಗಿ ಯಾವ ಪ್ರದೇಶಗಳಲ್ಲಿ ಲಸಿಕೆಯ ಕೊರತೆ ಆಗಿದೆ ಎಂಬ ಮಾಹಿತಿಯನ್ನು ಪಡೆಯಲಾಗುವುದು. ಯಾವ ಕಾರಣಗಳಿಗಾಗಿ ಸಮಸ್ಯೆ ಉದ್ಭವಿಸಿದೆ ಎಂಬುದನ್ನು ಅರಿತು ಪರಿಹರಿಸಲಾಗುವುದು ಎಂದು ಅವರು ಪ್ರತಿಕ್ರಿಯಿಸಿದರು.

# ಜಿಂದಾಲ್‌ಗೆ 3,677 ಎಕರೆ ಜಮೀನು ಮಾರಾಟ

ಒಂದನೇ ಪುಟದಿಂದ

ಆಗ ವಿರೋಧ ಪಕ್ಷದಲ್ಲಿದ್ದ ಬಿಜೆಪಿ, ಜಿಂದಾಲ್ ಉಕ್ಕು ಕಂಪನಿಗೆ ಜಮೀನು ಮಾರಾಟ ಮಾಡುವ ಪ್ರಸ್ತಾವವನ್ನು ತೀವ್ರವಾಗಿ ವಿರೋಧಿಸಿತ್ತು. ಈಗ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ, ಅದೇ ತೀರ್ಮಾನವನ್ನು ಕೈಗೊಂಡಿದೆ.

‘2006 ರಲ್ಲಿ ಜಿಂದಾಲ್ ಕಂಪನಿಗೆ ಲೀಸ್ ಕಂ ಸೇಲ್ ಆಧಾರದಲ್ಲಿ ಜಮೀನು ನೀಡಲಾಗಿತ್ತು. ಗಣಿಗಾರಿಕೆಗೆ ನೀಡಿದ್ದ ಆ ಜಾಗವನ್ನು ಬಳಕೆ ಮಾಡಿದ್ದಾರೆ ಮತ್ತು ಅಲ್ಲಿ ಕಾರ್ಖಾನೆಯನ್ನೂ ಸ್ಥಾಪಿಸಿದ್ದಾರೆ. ಗುತ್ತಿಗೆ ಅವಧಿ ಮುಗಿದಿರುವುದರಿಂದ ಶುದ್ಧಕ್ರಯ ಮಾಡಲು ಹಿಂದಿನ ಸರ್ಕಾರ ಇದ್ದಾಗ ಪ್ರಸ್ತಾವ ಸಲ್ಲಿಸಿದ್ದರು’ ಎಂದರು.

‘ಆಗ ಕೆಲವು ಆಕ್ಷೇಪಗಳು ಕೇಳಿ ಬಂದಿದ್ದವು. ನಮ್ಮ ಸರ್ಕಾರ ಬಂದ ಮೇಲೆ ಅದರ ಪರಿಶೀಲನೆಗೆ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಲಾಗಿತ್ತು. ಉಪ ಸಮಿತಿಯ ಶಿಫಾರಸ್ಸಿನ ಮೇರೆಗೆ 3,667 ಎಕರೆ ಜಮೀನನ್ನು ಶುದ್ಧಕ್ರಯ ಪತ್ರ ಮಾಡಿಕೊಡಲು ಒಪ್ಪಿಕೊಳ್ಳಲಾಗಿದೆ. ತೋರಣಗಲ್ಲು ಮತ್ತು ಕುರೇಕುಪ್ಪ ಗ್ರಾಮಗಳಲ್ಲಿನ 2005.58 ಎಕರೆ ಮತ್ತು ಮುಸೇನಾಯಕನಹಳ್ಳಿ ಮತ್ತು ಯರಬನಹಳ್ಳಿ ಗ್ರಾಮಗಳಲ್ಲಿನ 1666.73 ಎಕರೆ ಜಮೀನು ಸೇರಿದೆ’ ಎಂದು ಬೊಮ್ಮಾಯಿ ತಿಳಿಸಿದರು.

‘ಎಕರೆವಾರು ಶುದ್ಧ ಕ್ರಯಕ್ಕೆ ನಿಗದಿ ಮಾಡಿದ ಮೊತ್ತವೆಷ್ಟು’ ಎಂಬ ಪ್ರಶ್ನೆಗೆ ಅವರು ಸ್ಪಷ್ಟ ಉತ್ತರ ನೀಡಲಿಲ್ಲ. ‘ಸದ್ಯಕ್ಕೆ ತಮ್ಮ ಬಳಿ ಆ ಮಾಹಿತಿ ಇಲ್ಲ’ ಎಂದು ಹೇಳಿದರು.

‘ಹಿಂದೆ ನಿಮ್ಮ ಪಕ್ಷದವರೇ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಶುದ್ಧಕ್ರಯ ಪತ್ರ ಮಾಡಿಕೊಡುವುದಕ್ಕೆ ವಿರೋಧ ವ್ಯಕ್ತಪಡಿಸಿ ಹೋರಾಟ ಮಾಡಿದ್ದರಲ್ಲ’ ಎಂಬ ಪ್ರಶ್ನೆಗೆ, ‘ಮೈಸೂರು ಮಿನರಲ್ಸ್‌ಗೆ ಜಿಂದಾಲ್ ಬಾಕಿ ಪಾವತಿ ಸಂಬಂಧ ತಕರಾರು ಇತ್ತು. ಅದಕ್ಕಾಗಿ ವಿರೋಧಿಸಿದ್ದೆವು’ ಎಂದು ಪ್ರತಿಕ್ರಿಯಿಸಿದರು.

# 14 ದಿನ ಕರ್ನಾಟಕ ಲಾಕ್‌ಡೌನ್

ಒಂದನೇ ಪುಟದಿಂದ

ಇವರನ್ನು ಅಪಾಯಕ್ಕೊಡ್ಡುವುದು ಸರಿಯಲ್ಲ ಎಂಬ ಕಾರಣಕ್ಕೆ ಗಾರ್ಮೆಂಟ್ಸ್ ಘಟಕಗಳನ್ನು ಬಂದ್ ಮಾಡಿಸಲಾಗುವುದು ಎಂದು ಯಡಿಯೂರಪ್ಪ ಹೇಳಿದರು.

ರಾಜ್ಯದಲ್ಲಿ ಆಕ್ಸಿಜನ್ ಕೊರತೆ ಬಗೆಹರಿಯಲಿದೆ. 800 ಟನ್ ಆಕ್ಸಿಜನ್ ಪೂರೈಕೆಗೆ ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಿದೆ. ಈಗಾಗಲೇ ಪೂರೈಕೆ ಆರಂಭವಾಗಿದೆ. ರೆಮ್‌ಡಿಸಿವಿರ್ ಪೂರೈಕೆ ಹೆಚ್ಚಿಸಲಾಗಿದೆ. ಒಂದು ಲಕ್ಷದಷ್ಟು ರೆಮ್‌ಡಿಸಿವಿರ್ ಪೂರೈಕೆ ಆಗುತ್ತದೆ ಎಂದರು.

**ಕಸಾಪ ಚುನಾವಣೆ ಮುಂದೂಡಿಕೆ:** ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ ಮುಂದೂಡಲಾಗಿದೆ. ಮೇ 9 ಕ್ಕೆ ಚುನಾವಣೆ ದಿನಾಂಕವನ್ನು ನಿಗದಿ ಮಾಡಲಾಗಿತ್ತು.

ಒಕ್ಕಲಿಗರ ಸಂಘದ ಚುನಾವಣೆಯನ್ನೂ ಮುಂದೂಡಲಾಗಿದೆ.

ಕೋವಿಡ್: ತೀವ್ರತೆ ಊಹಿಸದ ವಿಜ್ಞಾನಿಗಳು ★ ಪರೀಕ್ಷೆಗಳಲ್ಲಿ ವಿಶ್ವಾಸಾರ್ಹತೆ ಕೊರತೆ

# ಕೈಮೀರಲು ವಿಳಂಬ–ನಿರ್ಲಕ್ಷ್ಯ ಕಾರಣ

● ಗುರು ಪಿ.ಎಸ್.

**ಬೆಂಗಳೂರು:** ಕೋವಿಡ್ ನಿರ್ವಹಣೆಯಲ್ಲಿ ಒಂದು ವರ್ಷದ ಅನುಭವ ಇದ್ದರೂ, ಲಸಿಕೆ ಕಂಡು ಹಿಡಿದಿದ್ದರೂ ಆಕ್ರಮಣಕಾರಿಯಾಗಿ ಮುನ್ನುಗ್ಗುತ್ತಿರುವ ಎರಡನೇ ಅಲೆಯನ್ನು ಹಿಮ್ಮೆಟ್ಟಿಸಲು ಆಗದೇ ಇರುವುದಕ್ಕೆ ಸರ್ಕಾರದ ವಿಳಂಬ ನೀತಿ, ನಿರ್ಲಕ್ಷ್ಯವೇ ಪ್ರಮುಖ ಕಾರಣ ಎಂಬ ಚರ್ಚೆ ಶುರುವಾಗಿದೆ.

ಸೋಂಕು ತಡೆಗೆ ಕಠಿಣಕ್ರಮ ಕೈಗೊಳ್ಳಬೇಕು ಎಂದು ಸರ್ಕಾರವೇ ನೇಮಿಸಿದ್ದ ತಜ್ಞರ ಸಮಿತಿ ಕಳೆದ ನವೆಂಬರ್‌ನಲ್ಲೇ ಸಲಹೆ ನೀಡಿತ್ತು. ಹಾಗಿದ್ದರೂ ನಿರ್ಧಾರ ಕೈಗೊಳ್ಳುವಲ್ಲಿ ಸರ್ಕಾರ ಅಸಡ್ಡೆ ತೋರಿದ್ದು, ಪ್ರಕರಣಗಳು ಹೆಚ್ಚಲು ಪ್ರಮುಖ ಕಾರಣ ಎಂದು ತಜ್ಞರು ಹೇಳುತ್ತಾರೆ.

ಜೊತೆಗೆ ಇತರ ಹಲವು ಕಾರಣಗಳನ್ನು ಅವರು ಪಟ್ಟಿ ಮಾಡುತ್ತಾರೆ.

ರಾಜಧಾನಿಯಲ್ಲಿ ಒಂದೊಂದು ಅಪಾರ್ಟ್‌ಮೆಂಟ್‌ಗಳಲ್ಲಿ 30ಕ್ಕಿಂತ ಹೆಚ್ಚು ಪ್ರಕರಣಗಳು ವರದಿಯಾಗುವವರೆಗೆ ಆ ಪ್ರದೇಶವನ್ನು ಸೀಲ್‌ಡೌನ್‌ಗೊಳಿಸುವ ಕಾರ್ಯವನ್ನು ಬಿಬಿಎಂಪಿ ಮಾಡಲಿಲ್ಲ. ಅಕ್ಕ-ಪಕ್ಕದಲ್ಲಿ ಸೋಂಕಿತರು ಓಡಾಡಿದರೂ ಗೊತ್ತಾಗದ ಪರಿಸ್ಥಿತಿ ನಿರ್ಮಾಣವಾಯಿತು.

ಈಗ ಶೇ 80ರಿಂದ 90ರಷ್ಟು ಜನ ಹೋಂ ಐಸೊಲೇಶನ್‌ನಲ್ಲಿದ್ದಾರೆ. ಅವರ ಕೈಗೆ ಸೀಲ್ ಹಾಕಲಾಗುವುದು ಎಂದಿದ್ದ ಬಿಬಿಎಂಪಿ ಆ ಕಾರ್ಯವನ್ನೂ ಸರಿಯಾಗಿ ಮಾಡುತ್ತಿಲ್ಲ. ಕುಟುಂಬದಲ್ಲಿ ಬೇರೆ ಯಾರೂ ಇಲ್ಲದ ಇಂತಹ ಸೋಂಕಿತರು ಅನಿವಾರ್ಯವಾಗಿ ಹೊರಗಡೆ ಓಡಾಡುತ್ತಲೇ ಇದ್ದರು.

ಚುನಾವಣೆ ರ‍್ಯಾಲಿಗಳು, ಪ್ರತಿಭಟನೆಗಳು, ಧಾರ್ಮಿಕ ಸಮಾವೇಶ, ಜಾತ್ರೆ, ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಲಕ್ಷಾಂತರ ಜನ ಸೇರುವುದು ಮುಂದುವರಿಯಿತು. ಇದು ಯಾವುದಕ್ಕೂ ಕಡಿವಾಣ ಹಾಕುವ ನಿಷ್ಠುರ ತೀರ್ಮಾನವನ್ನು ಸರ್ಕಾರ ಕೈಗೊಳ್ಳಲೇ ಇಲ್ಲ.

**ಮಾನಸಿಕ ಸಮಸ್ಯೆಗಳ ನಿರ್ಲಕ್ಷ್ಯ:** ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ನೀಡಿದಷ್ಟು ಆದ್ಯತೆ ಮನೋರೋಗದಂತಹ ಸಮಸ್ಯೆಗಳಿಗೆ ನೀಡಲಿಲ್ಲ. ಒಬ್ಬರಿಗೆ ಕೋವಿಡ್ ಬಂದರೂ ಅವರ ಕುಟುಂಬ ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದೆ. ತಂದೆ–ತಾಯಿ ಇಬ್ಬರೂ ಕೋವಿಡ್ ಪೀಡಿತರಾಗಿದ್ದರೆ ಮಕ್ಕಳ ಮೇಲೆ ಪರಿಣಾಮವಾಗಲಿದೆ. ಮಾನಸಿಕ ಒತ್ತಡಕ್ಕೆ ಒಳಗಾಗುತ್ತಿದ್ದಂತೆ ರೋಗ ನಿರೋಧಕ ಶಕ್ತಿಯೂ ಕಡಿಮೆಯಾಗುತ್ತದೆ. ಪ್ರಕರಣಗಳ ಹೆಚ್ಚಳಕ್ಕೆ ಪರೋಕ್ಷವಾಗಿ ಈ ಅಂಶವೂ ಕಾರಣವಾಗುತ್ತಿದೆ ಎಂದು ನಿಮ್ಹಾನ್ಸ್‌ನ ಮನೋವೈದ್ಯರೊಬ್ಬರು ಹೇಳಿದರು. ದೇಶದ ಅಥವಾ ರಾಜ್ಯದ ಜೀವವಿಜ್ಞಾನ ವಲಯ ಇನ್ನೂ ಸುಧಾರಿಸಿಲ್ಲ.

ಅಲೆ ಎರಡನೆಯದೋ, ಮೂರನೆಯದೋ ಎಂಬುದೂ ವಿಜ್ಞಾನಿಗಳಿಗೆ ಸರಿಯಾಗಿ ಗೊತ್ತಿಲ್ಲ. ಅಮೆರಿಕ, ಇಂಗ್ಲೆಂಡ್‌ನ ವಿಜ್ಞಾನಿಗಳ ಹೇಳಿಕೆಯನ್ನೇ ಆಧರಿಸಬೇಕಾಗಿದೆ. ಇಲ್ಲಿ ಹರಡುತ್ತಿರುವ ಸೋಂಕಿನ ಪ್ರಭಾವ-ಪರಿಣಾಮಗಳ ಚಿತ್ರಣ ಸರಿಯಾಗಿ ಸಿಗುತ್ತಿಲ್ಲ ಎನ್ನುತ್ತಾರೆ ತಜ್ಞರೊಬ್ಬರು.

ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ಬಂದರೂ ಜನ ಸೋಂಕಿಗೆ ತುತ್ತಾಗುತ್ತಿರುವುದು ರೂಪಾಂತರವನ್ನು ಗ್ರಹಿಸುವಲ್ಲಿನ ವೈಫಲ್ಯಕ್ಕೆ ಸಾಕ್ಷಿ. ಈ ರೀತಿ ತಳಿಯ ಅಸ್ಪಷ್ಟ ಚಿತ್ರಣವು ಕೋವಿಡ್ ಪರಿಹಾರ ಕ್ರಮಗಳ ಮೇಲೂ ಪರಿಣಾಮ ಬೀರುತ್ತದೆ. ಬ್ರಿಟನ್ ತಳಿ ದೇಶ ಪ್ರವೇಶಿಸಲು ಕಾರಣ ವಿಮಾನ ಸಂಚಾರಕ್ಕೆ ನಿರ್ಬಂಧ ವಿಧಿಸದಿರುವುದು.

ವಿದೇಶಗಳಿಂದ ವಿಮಾನದಲ್ಲಿ ರಾಜ್ಯಕ್ಕೆ ಬಂದ ಪ್ರಯಾಣಿಕರ ಮೇಲೆ ಈ ಬಾರಿ ಹೆಚ್ಚು ನಿಗಾ ಇಡಲಿಲ್ಲ. ಅವರ ವರದಿಗಳ ತಪಾಸಣೆ, ಕ್ವಾರಂಟೈನ್ ಕಾರ್ಯ ಸಮರ್ಪಕವಾಗಿ ನಡೆಯಲಿಲ್ಲ. ಇಲ್ಲಿ 'ಜರಡಿ' ಹಿಡಿಯುವ ಕೆಲಸವಾಗಿದ್ದರೆ ಎರಡನೇ ಅಲೆ ಸೃಷ್ಟಿಯಾಗುತ್ತಿರಲಿಲ್ಲ ಎಂದೂ ತಜ್ಞರು ಹೇಳುತ್ತಾರೆ.

### 'ಹೊಸ ತಳಿಯ ವೇಗ ಹೆಚ್ಚು'

'ಸರ್ಕಾರ ಎರಡನೇ ಅಲೆ ತಡೆಗೆ ಸಿದ್ಧತೆ ಮಾಡಿಕೊಂಡಿತ್ತು. ಆದರೆ, ಹೊಸ ತಳಿ ಪರಿಣಾಮ ತೀವ್ರವಾಗಿದೆ. ಊಹಿಸಿದ್ದಕ್ಕಿಂತ ಐದು ಪಟ್ಟು ವೇಗದಲ್ಲಿ ಹರಡುತ್ತಿದೆ. ಹೀಗಾಗಿ ನಿರ್ವಹಣೆ ಸವಾಲಾಗಿದೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ಸದಸ್ಯ ಡಾ.ಗಿರಿಧರ ಬಾಬು ಹೇಳಿದರು.

'ಕಳೆದ ಬಾರಿಗಿಂತ ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆ ದುಪ್ಪಟ್ಟು ಮಾಡಲಾಗಿತ್ತು. ಬೆಂಗಳೂರಿನಲ್ಲಿ ಜಯನಗರ ಮತ್ತು ಕೆ.ಸಿ. ಜನರಲ್ ಆಸ್ಪತ್ರೆ ಎಲ್ಲ ಹಾಸಿಗೆಗಳೂ ವೈದ್ಯಕೀಯ ಆಕ್ಸಿಜನ್ ಸೌಲಭ್ಯ ಹೊಂದಿದ್ದವು' ಎಂದು ಹೇಳಿದರು.

ಕರ್ಫ್ಯೂ ಜಾರಿಯನ್ನೇ ಬಂಡವಾಳ ಮಾಡಿಕೊಂಡ ಖಾಸಗಿ ಬಸ್ ಮಾಲೀಕರು

# ಬಸ್ ಪ್ರಯಾಣದರ ಮೂರು ಪಟ್ಟು ಏರಿಕೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ಫ್ಯೂ ಜಾರಿಯಾಗಿರುವುದನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ಬಸ್ ಕಂಪನಿಗಳು, ಏಕಾಏಕಿ ಪ್ರಯಾಣ ದರವನ್ನೂ ಮೂರು ಪಟ್ಟು ಏರಿಕೆ ಮಾಡಿವೆ.

ಸೋಮವಾರ ಮಧ್ಯಾಹ್ನದವರೆಗೆ ಸಾಮಾನ್ಯ ಪ್ರಯಾಣ ದರವೇ ಇತ್ತು. ಆದರೆ, ಕರ್ಫ್ಯೂ ಘೋಷಣೆಯಾಗುತ್ತಿದ್ದಂತೆ ಪ್ರಯಾಣ ದರವನ್ನೂ ಹೆಚ್ಚಿಸಲಾಗಿದೆ. ಆನ್‌ಲೈನ್ ಮೂಲಕ ಸೀಟುಗಳ ಬುಕ್ಕಿಂಗ್ ಆರಂಭವಾಗಿದೆ. ಊರಿಗೆ ಹೋಗಲು ಸಿದ್ಧವಾಗಿರುವವರು ಅನಿವಾರ್ಯವಾಗಿಯೇ ದುಬಾರಿ ದರವನ್ನೇ ಕೊಟ್ಟು ಸೀಟು ಕಾಯ್ದಿರಿಸಿದ್ದಾರೆ.

ಬೆಂಗಳೂರಿನಿಂದ ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರ್ಗಿ, ವಿಜಯಪುರ, ಮಂಗಳೂರು ಸೇರಿದಂತೆ ಹಲವು ನಗರಗಳಿಗೆ ಹೋಗುವ ಖಾಸಗಿ ಬಸ್‌ಗಳ ದರದಲ್ಲಿ ಏರಿಕೆಯಾಗಿದೆ.

ಸಾಮಾನ್ಯ ದಿನಗಳಲ್ಲಿ ಎ.ಸಿ ಹಾಗೂ ನಾನ್ ಎ.ಸಿ ಬಸ್‌ಗಳಿಗೆ ಅನುಗುಣವಾಗಿ ₹ 450ರಿಂದ ₹ 1,200 ಪ್ರಯಾಣ ದರವಿರುತ್ತಿತ್ತು. ಆದರೆ, ಸೋಮವಾರ ಕನಿಷ್ಠ ₹ 1,399ರಿಂದ ₹ 3619 ಆಗಿದೆ.

'ಹಬ್ಬ ಹಾಗೂ ವಿಶೇಷ ದಿನಗಳಲ್ಲಿ ದರ ಏರಿಕೆ ಮಾಡುವುದು ಖಾಸಗಿ ಕಂಪನಿಗಳಿಗೆ ರೂಢಿಯಾಗಿತ್ತು. ಇದೀಗ ಕರ್ಫ್ಯೂವನ್ನೂ ಕಂಪನಿಗಳು ಬಂಡವಾಳ ಮಾಡಿಕೊಂಡಿವೆ. ಅಕ್ರಮವಾಗಿ ಪ್ರಯಾಣ ದರ ಹೆಚ್ಚಿಸಿ, ಜನರಿಂದ ಸುಲಿಗೆ ಮಾಡುತ್ತಿವೆ' ಎಂದು ಪ್ರಯಾಣಿಕರು ದೂರಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಖಾಸಗಿ ಬಸ್ ಕಂಪನಿಯೊಂದರ ಪ್ರತಿನಿಧಿ, 'ಇಂದು ಮಾತ್ರ ಬಸ್ ಓಡಿಸಲು ಅವಕಾಶವಿದೆ. ನಂತರ, 14 ದಿನ ಬಸ್‌ಗಳನ್ನು ನಿಂತಲೇ ನಿಲ್ಲಿಸಬೇಕು. ಆರ್ಥಿಕವಾಗಿ ಸಾಕಷ್ಟು ಕಷ್ಟ ಅನುಭವಿಸಬೇಕಾಗುತ್ತದೆ. ಅದೇ ಕಾರಣಕ್ಕೆ ದರ ಏರಿಕೆ ಮಾಡಿದ್ದೇವೆ. ಜನರೂ ಬುಕ್ಕಿಂಗ್ ಮಾಡುತ್ತಿದ್ದಾರೆ' ಎಂದರು.

**ಹೆಚ್ಚಾದ ಪ್ರಯಾಣ ದರ**
(ಏಪ್ರಿಲ್ 26, ಬೆಂಗಳೂರಿನಿಂದ)

| ನಗರಕ್ಕೆ | ಕನಿಷ್ಠ | ಗರಿಷ್ಠ |
|---|---|---|
| ಹುಬ್ಬಳ್ಳಿ | ₹1,499 | ₹ 3,619 |
| ಬೆಳಗಾವಿ | ₹1,499 | ₹3,619 |
| ಮಂಗಳೂರು | ₹1,399 | ₹2,499 |
| ಕಲಬುರ್ಗಿ | ₹1,999 | ₹2,100 |
| ವಿಜಯಪುರ | ₹1,300 | ₹2,499 |
| ಶಿವಮೊಗ್ಗ | ₹ 899 | ₹1,999 |

ಕೋವಿಡ್ 19ರ ಎರಡನೇ ಅಲೆಯ ಭೀಕರತೆಯನ್ನು ತಡೆಯಲು ಸರ್ಕಾರ ಘೋಷಿಸಿರುವ ಲಾಕ್‌ಡೌನ್‌ನಿಂದಾಗಿ ಹೆಚ್ಚಿನ ಜನರು ತಮ್ಮ ಊರಿಗೆ ಮರಳಲು ಸೋಮವಾರ ಬೆಂಗಳೂರಿನ ಮೆಜೆಸ್ಟಿಕ್ ಬಸ್‌ನಿಲ್ದಾಣಕ್ಕೆ ಬಂದರು
–ಪ್ರಜಾವಾಣಿ ಚಿತ್ರ / ಇರ್ಷಾದ್ ಮಹಮ್ಮದ್

ಬದುಕಿನಲ್ಲಿ ಮದುವೆಯೇ ಎಲ್ಲಾ ಅಲ್ಲ– ನಟಿ ರಮ್ಯಾ

# ಸಿನಿಮಾ, ರಾಜಕಾರಣ ಮುಗಿದ ಯಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಿನಿಮಾ ಮತ್ತು ರಾಜಕೀಯ ಈಗ ಮುಗಿದುಹೋದ ಪ್ರಯಾಣ ಎಂದಿದ್ದಾರೆ ನಟಿ, ಮಾಜಿ ಸಂಸದೆ ರಮ್ಯಾ. ವಾರಾಂತ್ಯದ ಲಾಕ್‌ಡೌನ್ ದಿನ ಇನ್‌ಸ್ಟಾಗ್ರಾಂನಲ್ಲಿ ಕಾಣಿಸಿಕೊಂಡ ರಮ್ಯಾ ಅಭಿಮಾನಿ ಗಳ ಕುತೂಹಲದ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿದರು.

ಸಿನಿಮಾದಲ್ಲಿ ನಾನು ಆಸಕ್ತಿ ಕಳೆದು ಕೊಂಡಿದ್ದೇನೆ. ಅದು ಎಂದೋ ತೇಲಿಹೋದ ಹಡಗು ಎಂದು ಬಣ್ಣಿಸಿರುವ ರಮ್ಯಾ, ಆ ಹಡಗು ಮುಳುಗಿದೆ ಎಂದೂ ಹೇಳಿದ್ದಾರೆ.

2013ರಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ರಮ್ಯಾ ಸಂಸದೆಯಾಗಿ ಆಯ್ಕೆಯಾಗಿದ್ದರು. 2014ರಲ್ಲಿ ನಡೆದ ಚುನಾವಣೆಯಲ್ಲಿ ಜೆಡಿಎಸ್ ಎದುರು ಸೋಲು ಕಂಡಿದ್ದರು.

ಮಾತು ಆರಂಭವಾದ್ದದು ಹೀಗೆ... 'ನೀವು ಸಿನಿಮಾ ಪ್ರಯಾಣ ಆರಂಭಿಸಿ ಇಂದಿಗೆ 18 ವರ್ಷ ಕಳೆದಿದೆ. ಈ ಪಯಣದ ಬಗ್ಗೆ ಏನು ಹೇಳಲು ಬಯಸುತ್ತೀರಿ' ಎಂಬ ಪ್ರಶ್ನೆ ಅಭಿಮಾನಿಯೊಬ್ಬರಿಂದ ಬಂದಿತ್ತು.

ರಮ್ಯಾ

ಅದಕ್ಕೆ ಅನುಭಾವಿಯ ಧ್ವನಿಯಲ್ಲಿ ರಮ್ಯಾ ಸ್ಪಂದಿಸಿದ್ದಾರೆ. 'ಹೌದೇ!? ನಾನು ಸಾಕಷ್ಟು ಕಲಿತಿದ್ದೇನೆ. ಅವೆಲ್ಲವೂ ಇಂದು ನನ್ನನ್ನು ಒಬ್ಬ ವ್ಯಕ್ತಿಯನ್ನಾಗಿ ರೂಪಿಸಿವೆ. ಕೀರ್ತಿ ಮತ್ತು ಹಣ ದೊಡ್ಡ ಶಿಕ್ಷಕರು. ನಾನು ಆರ್ದ್ರಭಾವ ಮತ್ತು ಕೃತಜ್ಞತೆಯಿಂದ ಹಿಂದಿರುಗಿ ನೋಡುತ್ತೇನೆ' ಎಂದಿದ್ದಾರೆ.

ನೀವು ಮದುವೆ ಆಗಿದ್ದೀರಾ? ಡೇಟಿಂಗ್ ಮಾಡುತ್ತೀರಾ? ಬಾಯ್ ಫ್ರೆಂಡ್ ಇದ್ದಾರೆಯೇ ಎಂಬೆಲ್ಲಾ ಪ್ರಶ್ನೆಗಳ ಸುರಿಮಳೆಗೆ ಒಂದೇ ಮಾತಿನಲ್ಲಿ 'ಇಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

ಇನ್ನು ಹಲವರು ಅವರ ಮೈ ಕಾಂತಿ ಬಗ್ಗೆ ಪ್ರಶ್ನಿಸಿದ್ದಾರೆ. 'ಅದು ನನಗಿಷ್ಟ' ಎಂದು ರಮ್ಯಾ ಹೇಳಿಕೊಂಡಿದ್ದಾರೆ. 'ಅರಿಶಿನ, ಮೊಸರು, ನಿಂಬೆರಸ, ಬಾದಾಮ್ ಇತ್ಯಾದಿ ಬಳಸಿ ಮೈ ಕಾಂತಿ ರಕ್ಷಿಸಿಕೊಳ್ಳಬಹುದು' ಎಂದಿರುವ ರಮ್ಯಾ, ತೂಕ ಕಳೆದುಕೊಳ್ಳಲು ಒತ್ತಡರಹಿತ ಮನಃಸ್ಥಿತಿ ಬೇಕು ಎಂದು ಸಲಹೆ ನೀಡಿದ್ದಾರೆ.

ಅಂದಹಾಗೆ, ಅವರು ಬಿಡುವಿನ ವೇಳೆಯಲ್ಲಿ ನಾಯಿಯೊಂದಿಗೆ ಕಾಲ ಕಳೆಯುತ್ತಾರಂತೆ. ಹಾಗೆಯೇ ಮಾತಿನ ಮಧ್ಯೆ ತಮ್ಮ ಸ್ವಭಾವವೊಂದನ್ನು ಹೇಳಿಕೊಂಡಿರುವ ಅವರು, 'ನನಗೆ ಭಾವನೆಗಳನ್ನು ನಿಯಂತ್ರಿಸುವುದು ಅಸಾಧ್ಯ. ಅದರಲ್ಲಿ ಅಸಮರ್ಥಳಿದ್ದೇನೆ' ಎಂದು ಹೇಳಿಕೊಂಡಿದ್ದಾರೆ.

ಮೈಸೂರಿನ ಬಗೆಗೂ ಮಾತನಾಡಿರುವ ರಮ್ಯಾ, 'ಮೈಸೂರು ನನ್ನ ಇಷ್ಟದ ಜಾಗ. ಅಲ್ಲಿ ನನ್ನ ತಂದೆಯವರ ನೆನಪು ಗಳಿವೆ' ಎಂದಿದ್ದಾರೆ. ಅಭಿಮಾನಿಯೊಬ್ಬರ 'ನೀವೇಕೆ ರಕ್ಷಿತ್ ಶೆಟ್ಟಿ ಅವರನ್ನು ಮದುವೆ ಆಗಬಾರದು' ಎಂದು ಪ್ರಶ್ನೆಗೆ ರಕ್ಷಿತ್ ಅವರ ಇನ್‌ಸ್ಟಾಗ್ರಾಂ ಖಾತೆಯನ್ನು ಟ್ಯಾಗ್ ಮಾಡಿ ನಗುವಿನ ಇಮೋಜಿ ಹಾಕಿ ಸುಮ್ಮನಾಗಿದ್ದಾರೆ.

2003ರಿಂದ 2014ರವರೆಗೆ ಕನ್ನಡ ಚಿತ್ರರಂಗದಲ್ಲಿ ಉತ್ತುಂಗದಲ್ಲಿದ್ದ ರಮ್ಯಾ, 26 ಕನ್ನಡ ಚಿತ್ರಗಳಲ್ಲಿ ನಟಿಸಿದ್ದಾರೆ.

## ರೆಮ್‌ಡಿಸಿವಿರ್ ಮಾರಾಟ: ಇಬ್ಬರ ಬಂಧನ

**ಬೆಳಗಾವಿ:** ಕೋವಿಡ್ ಸೋಂಕಿತರ ಚಿಕಿತ್ಸೆಗೆ ಬಳಸಲಾಗುವ 'ರೆಮ್‌ಡಿಸಿವಿರ್' ಔಷಧಿಯನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಆರೋಪದ ಮೇಲೆ ಇಬ್ಬರನ್ನು ನಗರ ಸಿಸಿಬಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಇಲ್ಲಿನ ಶಾಹೂನಗರದ ಸಮರ್ಥ ಗಲ್ಲಿ ನಿವಾಸಿ, ಬಾಗಲಕೋಟೆ ಜಿಲ್ಲೆ ರಬಕವಿ-ಬನಹಟ್ಟಿಯ ರಾಮಾಪೂರದ ಮಂಜುನಾಥ ದಾನವಾಡಕರ (35) ಹಾಗೂ ಶಿವಾಜಿನಗರದ ನಿವಾಸಿಯಾಗಿರುವ ಬೈಲಹೊಂಗಲ ತಾಲ್ಲೂಕು ನಯಾನಗರದವರಾದ ಸಂಜೀವ ಚಂದ್ರಶೇಖರ ಮಾಳಗಿ (33) ಬಂಧಿತರು.

ಇಬ್ಬರೂ ಖಾಸಗಿ ಆಸ್ಪತ್ರೆಗಳಲ್ಲಿ ಸ್ಟಾಫ್ ನರ್ಸ್ ಆಗಿದ್ದಾರೆ. ₹ 3,400 ಬೆಲೆಯ ಔಷಧಿಯನ್ನು ₹ 25 ಸಾವಿರದಿಂದ ₹ 30ಸಾವಿರಕ್ಕೆ ಕಾಳಸಂತೆಯಲ್ಲಿ ಮಾರಲು ಸಂಚು ರೂಪಿಸಿದ್ದರು. ಅವರಿಂದ ₹ 11,600 ಮೌಲ್ಯದ 3 ಔಷಧಿ ಬಾಟಲಿಗಳು, ದ್ವಿಚಕ್ರವಾಹನ ಮತ್ತು 2 ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಪ್ರಕರಣ ದಾಖಲಾಗಿದೆ.

## ಎಂಜಿನಿಯರಿಂಗ್, ಪಾಲಿಟೆಕ್ನಿಕ್ ಪರೀಕ್ಷೆ ಮುಂದೂಡಿಕೆ

**ಬೆಂಗಳೂರು:** ಕೋವಿಡ್ ನಿಯಂತ್ರಿಸಲು ರಾಜ್ಯ ಸರ್ಕಾರ 'ಕೊರೊನಾ ಕರ್ಫ್ಯೂ' ಜಾರಿಗೊಳಿಸಿರುವುದರಿಂದ ಮಂಗಳವಾರದಿಂದ (ಏ. 27) ಆರಂಭವಾಗಬೇಕಿದ್ದ ಎಂಜಿನಿಯರಿಂಗ್ ಮತ್ತು ಡಿಪ್ಲೊಮಾ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ, 'ಮುಂದೂಡಿದ ಪರೀಕ್ಷೆಗಳು ಯಾವಾಗ ನಡೆಯುತ್ತವೆ ಎಂಬುದನ್ನು ಕೊರೊನಾ ಕರ್ಫ್ಯೂ ಮುಗಿದ ಬಳಿಕ ತಿಳಿಸಲಾಗುವುದು' ಎಂದಿದ್ದಾರೆ.

## ಕೋವಿಡ್: 2.81 ಲಕ್ಷ ಸಕ್ರಿಯ ಪ್ರಕರಣ

**ಬೆಂಗಳೂರು:** ರಾಜ್ಯದಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 2.81 ಲಕ್ಷಕ್ಕೆ ತಲುಪಿದೆ. ಒಟ್ಟು 29,744 ಮಂದಿಯಲ್ಲಿ ಹೊಸದಾಗಿ ಕೋವಿಡ್ ಇರುವುದು ಸೋಮವಾರ ದೃಢಪಟ್ಟರೆ, 201 ಮಂದಿ ಸಾವಿಗೀಡಾಗಿದ್ದಾರೆ. ಒಟ್ಟು 28 ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣ ಮೂರಂಕಿ ಮುಟ್ಟಿದೆ.

ಸೋಮವಾರ 1.66 ಲಕ್ಷ ಜನರ ಮಾದರಿಗಳನ್ನಷ್ಟೇ ಪರೀಕ್ಷಿಸಲಾಗಿದೆ. ಹಿಂದಿನ ಎರಡು ದಿನಗಳಿಗೆ ಹೋಲಿಸಿದರೆ ಇದು ತೀರಾ ಕಡಿಮೆ. ಹೀಗಾಗಿಯೇ ಸೋಂಕು ದೃಢ ಪ್ರಮಾಣ ಶೇ 17.87ಕ್ಕೆ ತಗ್ಗಿದೆ. ಆದರೆ ಮರಣ ಪ್ರಮಾಣ ದರ ಶೇ 0.67ಕ್ಕೆ ತಲುಪಿದೆ.

ಬೆಂಗಳೂರಿನಲ್ಲೂ ಸೋಮವಾರ 16,545 ಮಂದಿಗೆ ಸೋಂಕು ತಗುಲಿರುವುದು ಖಾತರಿಯಾಗಿದೆ. ಮೈಸೂರಿನಲ್ಲಿ (1,563) ಪ್ರಕರಣಗಳು ದುಪ್ಪಟ್ಟಾಗಿವೆ. ತುಮಕೂರಿನಲ್ಲೂ (1,197) ತುಸು ಏರಿದೆ. ಬಳ್ಳಾರಿ (786), ಹಾಸನ (747), ಕಲಬುರ್ಗಿ (872), ಮಂಡ್ಯ (929), ರಾಯಚೂರು (609) ಜಿಲ್ಲೆಗಳಲ್ಲೂ ಅತಿ ಹೆಚ್ಚು ಪ್ರಕರಣಗಳು ವರದಿಯಾಗಿವೆ. ರಾಜ್ಯದಲ್ಲಿ ಇದುವರೆಗೆ 13.68 ಲಕ್ಷ ಮಂದಿ ಸೋಂಕಿಗೊಳಗಾಗಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಗೆ ಎಚ್‌.ಡಿ. ದೇವೇಗೌಡ ಪತ್ರ

# ಹಳ್ಳಿಗಳತ್ತಲೂ ಕಾಳಜಿ ತೋರಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೋವಿಡ್ ನಿಯಂತ್ರಣ ಕಾರ್ಯಕ್ರಮಗಳು ದೊಡ್ಡ ನಗರಗಳನ್ನಷ್ಟೇ ಕೇಂದ್ರೀಕರಿಸಿವೆ. ಆದರೆ, ಹಳ್ಳಿಗಳಲ್ಲಿ ಹೆಚ್ಚಿನ ಅಪಾಯ ಕಾದಿದೆ. ತಕ್ಷಣವೇ ಹಳ್ಳಿಗಳ ಕಡೆಗೂ ಕಾಳಜಿ ತೋರಬೇಕು ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯ ಎಚ್‌.ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪ್ರಧಾನಿಗೆ ಭಾನುವಾರ ನಾಲ್ಕು ಪುಟಗಳ ಪತ್ರ ಬರೆದಿರುವ ಅವರು, 'ತಕ್ಷಣವೇ ಹಳ್ಳಿಗಳಲ್ಲಿ ಕೋವಿಡ್ ನಿಯಂತ್ರಣದ ಉಸ್ತುವಾರಿಯನ್ನು ಪಂಚಾಯತ್ ರಾಜ್ ಇಲಾಖೆಗೆ ವಹಿಸಬೇಕು. ಕೋವಿಡ್ ನಿಯಂತ್ರಿಸುವುದು ಆರೋಗ್ಯ ಇಲಾಖೆಯ ಹೊಣೆ ಮಾತ್ರ ಅಲ್ಲ. ಎಲ್ಲ ಇಲಾಖೆಗಳಿಗೂ ಜವಾಬ್ದಾರಿ ನೀಡಬೇಕು' ಎಂದು ಸಲಹೆ ಮಾಡಿದ್ದಾರೆ.



ದೇವೇಗೌಡ

ಕೋವಿಡ್ ಲಸಿಕೆಗೆ ಸಂಬಂಧಿಸಿದಂತೆ ಇರುವ ಗೊಂದಲ ಮತ್ತು ಭಯವನ್ನು ದೂರ ಮಾಡುವ ಕೆಲಸ ಆಗಬೇಕಿದೆ. ಕೋವಿಡ್ ಲಸಿಕೆಯ ದರವನ್ನೂ ನಿಯಂತ್ರಿಸಬೇಕು. ಜನರು ಲಸಿಕೆ ಹಾಕಿಸಿಕೊಳ್ಳುವುದಕ್ಕೆ ಗಡುವು ವಿಧಿಸಬೇಕು. ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರದಲ್ಲಿ ಲಸಿಕೆ ಹಾಕಿಸಲು ಗುರಿ ನಿಗದಿ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

12ರಿಂದ 15 ವರ್ಷ ವಯಸ್ಸಿನ ಮಕ್ಕಳಿಗೆ ಪ್ರಾಯೋಗಿಕವಾಗಿ ಲಸಿಕೆ ನೀಡುವ ಕೆಲಸ ಆರಂಭವಾಗಬೇಕು. ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ ವಿಮಾ ಯೋಜನೆ ರೂಪಿಸಬೇಕು. ಸರ್ಕಾರಿ ನೌಕರಿಯಲ್ಲಿರುವ ಗರ್ಭಿಣಿಯರಿಗೆ ಮೂರು ತಿಂಗಳ ವೇತನಸಹಿತ ರಜೆ ನೀಡಬೇಕು. ಕೋವಿಡ್ ವಾರಿಯರ್‌ಗಳು ಮೃತಪಟ್ಟಾಗ ಅವರ ಕುಟುಂಬದ ಸದಸ್ಯರೊಬ್ಬರಿಗೆ ಅನುಕಂಪದ ಆಧಾರದಲ್ಲಿ ಸರ್ಕಾರಿ ನೌಕರಿ ನೀಡಬೇಕು ಎಂಬ ಸಲಹೆಗಳನ್ನು ಪತ್ರದಲ್ಲಿ ದೇವೇಗೌಡರು ನೀಡಿದ್ದಾರೆ.

ಎಲ್ಲ ರೀತಿಯ ಬೃಹತ್ ಸಭೆ, ಸಮಾರಂಭಗಳನ್ನು ನಿಷೇಧಿಸಬೇಕು. ಮುಂದಿನ ಆರು ತಿಂಗಳವರೆಗೆ ಎಲ್ಲ ಬಗೆಯ ಉಪ ಚುನಾವಣೆಗಳು ಮತ್ತು ಚುನಾವಣೆಗಳನ್ನು ಮುಂದೂಡಬೇಕು. ಕೋವಿಡ್ ನಿಯಂತ್ರಣಕ್ಕೆ ಸಂಬಂಧಿಸಿದ ಚಟುವಟಿಕೆಗಳ ವಿಕೇಂದ್ರೀಕರಣ ಮಾಡಬೇಕು. ಕೆಳ ಹಂತದಲ್ಲೂ ವಾರ್ ರೂಮ್‌ಗಳನ್ನು ಆರಂಭಿಸಬೇಕು.

ಆತಂಕ ಹಾಗೂ ಭಯದಿಂದ ಬಳಲುತ್ತಿರುವವರು, ಒತ್ತಡ ಇರುವವರು ಅಶ್ವಗಂಧವನ್ನು ಬಳಸಬಹುದು. ಇದರಿಂದ ಅವರಲ್ಲಿ ಈ ಮಾನಸಿಕ ಅಸಮತೋಲನ ಸುಧಾರಿಸುತ್ತದೆ. ಭಯದ ರೋಗಲಕ್ಷಣಗಳನ್ನು ನಿವಾರಿಸುವಲ್ಲಿ ಅಶ್ವಗಂಧ ಹೆಚ್ಚು ಪರಿಣಾಮಕಾರಿ.

# ಭಯ ನಿವಾರಣೆಗೂ ಅಶ್ವಗಂಧಕ್ಕೂ ಇದೆ ನಂಟು

**ಡಾ. ಬ್ರಹ್ಮಾನಂದ ನಾಯಕ**

'ಸರ್, ನನಗೆ ಮರದ ಸೇತುವೆಯ ಮೇಲೆ ನಡೆಯಲು ಆಗುವುದಿಲ್ಲ. ಪಾರ್ಶ್ವವಾಯು ಬಂದಂತೆ ಭಾಸವಾಗುತ್ತದೆ. ಸಿನಿಮಾಗಳಲ್ಲಿ ಸೇತುವೆ ಒಡೆದು ಬೀಳುವಂತಹ ದೃಶ್ಯಗಳು ಮನಸ್ಸಿನಲ್ಲಿ ಪುನರಾವರ್ತಿತವಾಗುತ್ತವೆ. ಕೈಕಾಲು ಆಡಿಸಲು ಆಗುವುದಿಲ್ಲ. ಇದು ಸಹಜ ಭಯವೇ ಅಥವಾ ನನಗೆ ಹುಚ್ಚು ಹಿಡಿಯುತ್ತಿದೆಯೇ?'

***

'ಡಾಕ್ಟರ್, ನನಗೆ ರಕ್ತ ನೋಡಿದರೆ ವಾಕರಿಕೆ ಬರುತ್ತದೆ. ನನ್ನ ಮಗನಿಗೆ ಗಾಯವಾಗಿದೆ. ಅವನಿಗೆ ಡ್ರೆಸ್ಸಿಂಗ್ ಮಾಡಬೇಕಿದೆ. ಹೆಂಡತಿ ನನ್ನ ಬಳಿ ಮಾಡಲು ಹೇಳುತ್ತಾಳೆ. ಗಾಯ ನೋಡಿದರೂ ನನಗೆ ವಾಂತಿ ಬಂದ ಹಾಗೇ ಆಗುತ್ತದೆ. ಗಾಯ ಸಂಪೂರ್ಣ ಮುಚ್ಚುವವರೆಗೂ ನನಗೆ ಅದನ್ನು ನೋಡಲು ಆಗುವುದಿಲ್ಲ. ನನ್ನ ಈ ಭಯ ಹೋಗಲಾಡಿಸಲು ಯಾವುದಾದರೂ ಔಷಧಿ ಇದೆಯೇ?'

***

'ಸರ್, ನಾನು ಗರ್ಭಿಣಿ, ನನ್ನ ತಾಯಿ ಹಾಗೂ ಅತ್ತೆ ಸಹಜ ಹೆರಿಗೆಗೆ ಪ್ರಯತ್ನ ಮಾಡು ಎನ್ನುತ್ತಿದ್ದಾರೆ. ಆದರೆ ನನ್ನಿಂದ ಅದು ಸಾಧ್ಯವಿಲ್ಲ. ನಾನು ವಿಡಿಯೊಗಳಲ್ಲಿ ಸಹಜ ಹೆರಿಗೆಯನ್ನು ನೋಡಿದ್ದೇನೆ. ಆದರೆ, ನನಗೂ ಸಹಜ ಹೆರಿಗೆಯಾದರೆ, ಮಧ್ಯದಲ್ಲೇ ಪ್ರಜ್ಞೆ ತಪ್ಪಬಹುದು. ನಂತರ ಸಿಸೇರಿಯನ್ ಮಾಡಬಹುದು ಎಂಬ ಭಯ ಇದೆ. ಅದಕ್ಕೆ ಮದ್ದೇನು?'

– ಇಂತಹ ಹಲವು ರೀತಿಯ ಭಯವನ್ನು ಹೊಂದಿರುವವರು ನಮ್ಮ ನಡುವೆ ಸಾಮಾನ್ಯ.

ಎತ್ತರದ ಪ್ರದೇಶ ಹಾಗೂ ಮುಚ್ಚಿದ ಅಥವಾ ಕತ್ತಲೆ ಇರುವ ಸ್ಥಳಗಳ ಬಗ್ಗೆ ಭಯವಿರುವುದು ಸಾಮಾನ್ಯ. ಹಲವರಿಗೆ ಹಲವು ರೀತಿಯ ಭಯ ಕಾಡುತ್ತದೆ. ಅಲ್ಲದೇ ಭಯಕ್ಕೆ ಕಾರಣಗಳು ಬೇರೆ ಬೇರೆ ಇರುತ್ತವೆ. ಕೆಲವೊಮ್ಮೆ ಭಯದ ಪ್ರಮಾಣ ಕಡಿಮೆ ಇದ್ದರೆ, ಇನ್ನೂ ಕೆಲವೊಮ್ಮೆ ಭಯ ಮನಸ್ಸಿನಾಳದಲ್ಲಿ ಬೇರೂರಿರುತ್ತದೆ.

ಆದರೆ ಭಯದೊಂದಿಗೆ ಸ್ಥಿರವಾಗಿ ಉಳಿಯುವ ವಿಷಯವೆಂದರೆ ಹೃದಯ ಬಡಿತದಲ್ಲಿನ ವ್ಯತ್ಯಾಸ, ಭಾವನೆಗಳಲ್ಲಿ ಏರುಪೇರು ಹಾಗೂ ದುರ್ಬಲ ನಿರ್ಧಾರ ತೆಗೆದುಕೊಳ್ಳುವಂತಹ ಸಂದರ್ಭಗಳು.

ಅಂತಹ ಭಯಕ್ಕೆ ಪರಿಹಾರ ತಿಳಿಯುವ ಮೊದಲು ಭಯದ ಹಿಂದಿರುವ ಮನೋವೈಜ್ಞಾನಿಕ ಕಾರಣಗಳೇನು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

## ಒಳ್ಳೆಯ ಭಯ

ಭಯವು ವೇಗವಾಗಿ ಯೋಚಿಸಲು ಹಾಗೂ ಕಾರ್ಯನಿರ್ವಹಿಸಲು ವ್ಯಕ್ತಿಯನ್ನು ಶಕ್ತಗೊಳಿಸುತ್ತದೆ. ಸಂದರ್ಭ, ಮಾಹಿತಿ ಹಾಗೂ ಪರಿಸರದ ಸೂಚನೆಗಳನ್ನು ಬಳಸಿಕೊಂಡು ಥಟ್ಟನೆ ಅಪಾಯವನ್ನು ಗ್ರಹಿಸಲು ಕಲಿಸುತ್ತದೆ.

## ಭಯ ಎಂದರೇನು?

ಭಯ ಎಂದರೆ ಅಪಾಯ ಅಥವಾ ಬೆದರಿಕೆಯಿಂದ ಪ್ರಚೋದಿಸಲ್ಪಟ್ಟ ನೈಸರ್ಗಿಕವಾದ ಮಾನಸಿಕ ಭಾವನೆಯಾಗಿದೆ. ಇದು ಮಾನವನಿಗೆ ತನ್ನ ಉಳಿವಿಗಾಗಿ ಬೇಕಾಗುವ ಪ್ರಬಲ ಭಾವನೆ. ಇದನ್ನು ಮನಸ್ಸಿನ ಎಚ್ಚರಿಕೆ ವ್ಯವಸ್ಥೆ ಎಂದೂ ವ್ಯಾಖ್ಯಾನಿಸಬಹುದು. ಭಯವಾದಾಗ ಹೃದಯ ಬಡಿತ ಹೆಚ್ಚುತ್ತದೆ ಹಾಗೂ ಮೈ ಬೆವರುತ್ತದೆ.

ಭಯವು ಭಯಾನಕವಾಗಿದ್ದರೂ ಅದರಿಂದ ಪ್ರಯೋಜನವಿದೆ. ಇದು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಹೋರಾಟದ ಪ್ರತಿಕ್ರಿಯೆಯನ್ನು ಪ್ರಚೋದಿಸುವ ಪ್ರವೃತ್ತಿಯಾಗಿದೆ. ಆದರೂ ಈ ಅಸಹಜ ಭಯ ಹಾಗೂ ಫೋಬಿಯಾ ನಮಗೆ ತೊಂದರೆ ಮಾಡಬಹುದು.

## ಕೆಟ್ಟ ಭಯ

ಆಘಾತಕಾರಿ ಅನುಭವವು ಭಯವನ್ನು ಮನಸ್ಸಿನಾಳದಲ್ಲಿ ಆ ಳ ವಾ ಗಿ ಬೇರೂರುವಂತೆ ಮಾಡುತ್ತದೆ ಎನ್ನುತ್ತದೆ ಮನೋವಿಜ್ಞಾನ. ಬೆಂಕಿ, ನೀರು ಹಾಗೂ ಎತ್ತರ ಪ್ರದೇಶದ ಭಯ ಇದರಲ್ಲಿ ಬರುತ್ತವೆ. ದೆವ್ವಗಳ ಭಯ, ಕತ್ತಲೆಯ ಭಯದಂತೆ ಇವು ಮನಸ್ಸಿನಲ್ಲಿ ಹಾಗೇ ಇರಬಹುದು. ಕ್ಲಾಸ್ಟ್ರೋಫೋಬಿಯಾ (ಇಕ್ಕಟ್ಟಿನ ಜಾಗದಲ್ಲಿ ಇರುವಾಗ ತಲೆದೋರುವ ಭಯ) ದಂತೆ ಕೆಲವೊಮ್ಮೆ ಕೆಲವೊಂದು ರೀತಿಯ ಭಯ ಸ್ಪಷ್ಟ ಕಾರಣವಿಲ್ಲದೇ ಮನಸ್ಸಿನಲ್ಲಿ ಹರಿದಾಡಬಹುದು. ನಿಖರವಲ್ಲದ, ತರ್ಕಬದ್ಧ ತಾರ್ಕಿಕತೆಯಿಲ್ಲದ ಅಂತಹ ಭಯವನ್ನು ಮನಸ್ಸಿನಿಂದ ತೆಗೆದುಹಾಕಬೇಕು.

## ಭಯಕ್ಕೆ ಕಾರಣ ಹಾಗೂ ಪ್ರತಿಕ್ರಿಯೆಗಳು

ಭಯದಿಂದ ಒತ್ತಡ, ಆತಂಕ ಹಾಗೂ ಹೆದರಿಕೆ ಉಂಟಾಗುತ್ತದೆ. ಇದು ಸ್ಪಷ್ಟವಾಗಿ ಯೋಚಿಸುವ ಸಾಮರ್ಥ್ಯದ ಮೇಲೆ ಪರಿಣಾಮ ಬೀರುವಂತೆ ಮಾಡುತ್ತದೆ. ರೋಗನಿರೋಧಕ ಶಕ್ತಿಯನ್ನು ದುರ್ಬಲಗೊಳಿಸುತ್ತದೆ. ಲೈಂಗಿಕ ಜೀವನದ ಮೇಲೆ ಪರಿಣಾಮ ಬೀರುತ್ತದೆ ಹಾಗೂ ಮೆದುಳನ್ನು ಗೊಂದಲಕ್ಕೆ ತಳ್ಳುತ್ತದೆ.

ಪುರುಷರಿಗಿಂತ ಮಹಿಳೆಯರನ್ನು ಭಯ ಹೆಚ್ಚು ಕಾಡುತ್ತದೆ. ಆದರೆ ಪುರುಷರಿಗೂ ಭಯದ ಅನುಭವವಾಗುತ್ತದೆ. ಸಾಮಾನ್ಯವಾಗಿ ಎರಡು ರೀತಿಯ ಹಾರ್ಮೋನ್‌ಗಳು ಭಯವನ್ನು ಹೆಚ್ಚು ಪ್ರಚೋದಿಸುತ್ತವೆ. ಒಂದು ಒತ್ತಡದ ಹಾರ್ಮೋನ್ ಹಾಗೂ ಇನ್ನೊಂದು ಲೈಂಗಿಕ ಹಾರ್ಮೋನ್. ಕೆಲವೊಂದು ಸಂದರ್ಭಗಳಲ್ಲಿ ಥೈರಾಯಿಡ್ ಹಾರ್ಮೋನ್‌ಗಳು ಸಹ ಭಯಕ್ಕೆ ಕಾರಣವಾಗಬಹುದು.

ಲೈಂಗಿಕ ಹಾರ್ಮೋನ್‌ಗಳಾದ ಈಸ್ಟ್ರೋಜನ್ ಹಾಗೂ ಟೆಸ್ಟೊಸ್ಟಿರಾನ್ ಹಾರ್ಮೋನ್‌ಗಳಲ್ಲಿನ ವ್ಯತ್ಯಾಸವು ಆತಂಕಕ್ಕೆ ಕಾರಣವಾಗುತ್ತದೆ. ಆ ಕಾರಣಕ್ಕೆ ಪ್ರೌಢಾವಸ್ಥೆ, ಋತುಚಕ್ರ ಹಾಗೂ ಋತುಬಂಧದ ಸಮಯದಲ್ಲಿ ಹಾರ್ಮೋನ್‌ಗಳ ಬದಲಾವಣೆಯಿಂದ ಭಯದ ಪ್ರಮಾಣವು ಗರಿಷ್ಠ ಮಟ್ಟವನ್ನು ತಲುಪುತ್ತದೆ.

ಒತ್ತಡಕ್ಕೆ ಕಾರಣವಾಗುವ ಕಾರ್ಟಿಸಾಲ್ ಹಾರ್ಮೋನ್ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುತ್ತದೆ. ಇದು ಆತಂಕ ಹೆಚ್ಚುವಂತೆ ಮಾಡುತ್ತದೆ. ಆತಂಕ ಹಾಗೂ ಒತ್ತಡದಿಂದ ಜೀವನದ ಕುರಿತ ಭಯ, ಸೋಲಿನ ಭಯ, ಅಪಹಾಸ್ಯಕ್ಕೆ ಒಳಗಾಗುವ ಭಯ ಮುಂತಾದ ಹಲವು ರೀತಿಯ ಭಯವು ನಮ್ಮನ್ನು ಕಾಡುವಂತೆ ಮಾಡುತ್ತದೆ.

## ಅಶ್ವಗಂಧ ಮದ್ದು

ಕೆಲವೊಂದು ಸಂದರ್ಭಗಳಲ್ಲಿ ಭಯಕ್ಕೆ ಪರಿಹಾರವಾಗಿ ಅಶ್ವಗಂಧವನ್ನು ಬಳಸಬೇಕೆಂದು ಆಯುರ್ವೇದ ಸಲಹೆ ನೀಡುತ್ತದೆ. ಈ ಗಿಡಮೂಲಿಕೆಯನ್ನು ಹಲವು ಕಾರಣಗಳಿಗಾಗಿ ಆಯುರ್ವೇದದಲ್ಲಿ ಔಷಧಿಯಾಗಿ ಬಳಸುತ್ತಾರೆ. ಬಲವರ್ಧಕ ಹಾಗೂ ನವ ತಾರುಣ್ಯ ಮೂಡಿಸುವ ಅಶ್ವಗಂಧದಲ್ಲಿ ಹಲವು ವೈದ್ಯಕೀಯ ಅಂಶಗಳಿವೆ. ಇದರಲ್ಲಿರುವ ಅಡಾಪ್ಟೋಜೆನ್ ಹಾಗೂ ಅಫ್ರೊಡಿಸಾಯಿಕ್ ಅಂಶಗಳು ಹಾರ್ಮೋನ್‌ಗಳನ್ನು ಆರೋಗ್ಯಕರ ರೀತಿಯಲ್ಲಿ ಬಿಡುಗಡೆ ಮಾಡಲು ಸಹಾಯ ಮಾಡುತ್ತವೆ.

ಒತ್ತಡ, ಆತಂಕ, ಭಯದಂತಹ ಭಾವನಾತ್ಮಕ ಆಘಾತಗಳ ನಿರ್ವಹಣೆಯಲ್ಲಿ ಅಶ್ವಗಂಧದ ಪರಿಣಾಮವು ವೈಜ್ಞಾನಿಕವಾಗಿ ಸಾಬೀತಾಗಿದೆ. ಈ ಆಯುರ್ವೇದ ಮೂಲಿಕೆ ಮಾನಸಿಕ ಕಾರ್ಯಚಟುವಟಿಕೆಯ ಮೇಲೆ ಕಾರ್ಯನಿರ್ವಹಿಸುತ್ತದೆ, ಆತಂಕವನ್ನು ನಿವಾರಿಸುತ್ತದೆ ಮತ್ತು ನಿದ್ರೆಯನ್ನು ಸುಧಾರಿಸುತ್ತದೆ. ಇದು ಅರಿವಿನ ಕಾರ್ಯ ಮತ್ತು ತರ್ಕಬದ್ಧ ಚಿಂತನೆಯನ್ನು ಸುಧಾರಿಸುತ್ತದೆ. ಆದರೆ ಈ ಕುರಿತು ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯುವ ಅಗತ್ಯವಿದೆ.

(ಲೇಖಕ: ಆಯುರ್ವೇದ ವೈದ್ಯರು, ಆಯುರ್ವೇದಿಸಂ, ಬೆಂಗಳೂರು)



# ಅತ್ತು ಬಿಡಿ.. ದುಗುಡ ಹೊರಹಾಕಿ!

**ಶ್ರೀವತ್ಸ ಅನಂತ ರಾವ್**

ಮೀರಾ ಮಿಮೆ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಳು. ಗಂಡ ಕಾನೂನು ಸಲಹೆ ಸಂಸ್ಥೆಯಲ್ಲಿದ್ದ. ಮಗಳು ವಿಜ್ಞಾನ ಓದುತ್ತಿದ್ದಳು. ಮೀರಾ ಹೆಸರಲ್ಲಿ ಒಂದು ಫ್ಲಾಟ್ ಇತ್ತು, ಕಾರು ಇತ್ತು. ಆಕೆ ಕೆಲಸದ ಜೊತೆಗೆ ವಯಸ್ಸಾದ ಅತ್ತೆ–ಮಾವನನ್ನು ನೋಡಿಕೊಳ್ಳುತ್ತಿದ್ದಳು. ತಾನು ಹೇಗೆ ಇರಬೇಕು ಎಂದು ಬಯಸಿದ್ದಳೋ ಹಾಗೆ ಇರಲಿಲ್ಲ ಆಕೆ. ಆತ್ಮವಿಶ್ವಾಸದ ಕೊರತೆ ಜೊತೆಗೆ ಹೆಚ್ಚಿನ ಸಮಯದಲ್ಲಿ ಉತ್ಸಾಹವೇ ಕುಂದಿದಂತೆ ಇರುತ್ತಿದ್ದಳು. ತನ್ನ ಈ ಎಲ್ಲಾ ಕೆಲಸಗಳಲ್ಲಿ ಎಷ್ಟು ಮುಳುಗಿದ್ದಳು ಎಂದರೆ, ತನ್ನ ಪೋಷಕರು, ಸ್ನೇಹಿತರು ಎಲ್ಲರಿಂದಲೂ ದೂರವಾಗಿದ್ದಳು. ಭಾವನೆಗಳನ್ನು ಹಂಚಿಕೊಳ್ಳಲು ಆಕೆಯೊಂದಿಗೆ ಯಾರೂ ಇರಲಿಲ್ಲ.

ಮೀರಾಳಂತೆ ಹಲವರಿಗೆ ತನ್ನವರಿಂದ ದೂರ ಇರುವುದು ಮತ್ತು ಹೊಸ ಸಂಬಂಧಗಳೊಂದಿಗೆ ಹೊಂದಿಕೊಳ್ಳುವುದು ಕಷ್ಟ; ಇದರೊಂದಿಗೆ ದೈಹಿಕ ಅನಾರೋಗ್ಯ– ಇವು ನಮ್ಮ ಭಾವನೆಗಳನ್ನು ಕೆರಳಿಸುತ್ತವೆ. ಇಂಥ ಸಂದರ್ಭದಲ್ಲಿ ಅತ್ತು ಬಿಟ್ಟರೆ ನಮ್ಮನ್ನು ಎಲ್ಲಿ ದುರ್ಬಲರು ಎಂದುಬಿಟ್ಟಾರೋ ಎನ್ನುವ ಕಾರಣಕ್ಕೆ ಅಳುವನ್ನು ಅದುಮಿಟ್ಟುಕೊಳ್ಳುತ್ತೇವೆ.

ನಮ್ಮೊಳಗಿನ ದುಗುಡ, ಹೊರ ಪರಿಸರದಿಂದ ಉಂಟಾಗುವ ಮಾನಸಿಕ ಒತ್ತಡ– ಇವು ನಮ್ಮ ನಾಳೆಗಳು ಹೇಗೋ ಎಂದು ಚಿಂತೆಗೀಡು ಮಾಡುತ್ತವೆ. ವ್ಯಾಯಾಮ ಮಾಡುತ್ತೇವೆ, ಆಟವಾಡುತ್ತೇವೆ, ನಮಗೆ ಇಷ್ಟದ ಹವ್ಯಾಸದಲ್ಲಿ ತೊಡಗಿಕೊಂಡು ನಮ್ಮ ಒತ್ತಡವನ್ನು ಮರೆಯುವ ಅಥವಾ ಅದರಿಂದ ದೂರ ಓಡುವ ಪ್ರಯತ್ನ ಮಾಡುತ್ತೇವೆ. ಯಾವುದೋ ಒಂದು ಬಾಹ್ಯಒತ್ತಡ ನಮ್ಮ ಗಮನವನ್ನು ಬೇಡುತ್ತದೆ ಮತ್ತು ನಾವು ಅದರ ಹಿಂದೆ ಓಡುತ್ತೇವೆ. ಇದು ನಮ್ಮ ಆಧುನಿಕ ಜೀವನಶೈಲಿ.

ದುರಾದೃಷ್ಟವಶಾತ್, ನಮ್ಮ ಭಾವನೆಗಳನ್ನು ಹೊರ ಹಾಕದೇ ನಮ್ಮೊಳಗೇ ಇಟ್ಟುಕೊಳ್ಳಬೇಕು ಎಂದು ನಮಗೆ ಹೇಳಿಕೊಡಲಾಗುತ್ತದೆ. ಆದರೆ, ಹೀಗೆ ಭಾವನೆಗಳನ್ನು ಅದುಮಿಟ್ಟುಕೊಳ್ಳುವುದರಿಂದ ಭಯ, ಆತಂಕ, ನಿರಾಶೆ ಮತ್ತು ತಪ್ಪಿತಸ್ಥ ಭಾವ ನಮ್ಮನ್ನು ಆವರಿಸಿಬಿಡುತ್ತವೆ. ಇದು ನಮ್ಮಲ್ಲಿ ಆಕ್ರಮಣಕಾರಿ ಕ್ರಿಯೆಗಳಿಗೆ (ಸಿಟ್ಟು) ಪ್ರಚೋದನೆ ಕೊಡುತ್ತದೆ. ಇದರಿಂದ ಸಂಬಂಧಗಳು ಹಳಸುತ್ತವೆ.

## ಹಾಗಾದರೆ, ಏನು ಮಾಡಬೇಕು?

- ಭಾವನೆಗಳನ್ನು ಹೊರಹಾಕಿ, ಇತರರೊಂದಿಗೆ ಹಂಚಿಕೊಳ್ಳಿ– ಇದು ದುಗುಡದಿಂದ ಹೊರಬರಲು ಹೆಚ್ಚು ಸಹಕಾರಿಯಾದುದು. ಭಾವನೆಗಳನ್ನು ಹೊರ ಹಾಕಿ, ಅದರೊಂದಿಗೆ ಮುಖಾಮುಖಿ ಆದಾಗ ದುಗುಡದ ಮೂಲ ತಿಳಿಯುತ್ತದೆ. ನೀವೂ ನಿರಾಳರಾಗಬಹುದು.
- ದುಃಖಕ್ಕೆ ಏನು ಕಾರಣ ಎಂಬುದನ್ನು ಕಂಡುಹಿಡಿಯಬಹುದು. ಅದು ಬಾಹ್ಯ ಕಾರಣಗಳಿಂದ ಆಗಿರಬಹುದು– ಜನ, ಸಂದರ್ಭ ಹೀಗೆ. ಇಲ್ಲ, ನಮ್ಮೊಳಗಿನ ಕಾರಣವೂ ಇರಬಹುದು– ನಿರೀಕ್ಷೆ, ಅವಲಂಬನೆ, ಇಷ್ಟ ಮುಂತಾದವುಗಳು. ಹಿಂದಿನದನ್ನೇ ಯೋಚಿಸುತ್ತಾ ಕೂರುವುದಕ್ಕಿಂತ ಭವಿಷ್ಯದ ಬಗ್ಗೆ ಹೆಚ್ಚು ಗಮನಹರಿಸಿ.
- ಬದುಕಿನ ಕ್ರೌರ್ಯದಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಮ್ಮ ಸಂತೋಷವನ್ನು ಕಿತ್ತುಕೊಳ್ಳುವ ದುಗುಡದಿಂದ ನಮ್ಮನ್ನು ನಾವು ಹೇಗೆ ರಕ್ಷಿಸಿಕೊಳ್ಳುತ್ತೇವೆ ಎನ್ನುವುದು ಮುಖ್ಯವಾಗುತ್ತದೆ.
- ಎಷ್ಟೋ ಬಾರಿ ನಮ್ಮ ಭಾವನೆಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳುವಾಗ ನಮ್ಮಿಂದಾದ ತಪ್ಪಿನ ಬಗೆಗೆ ಅರಿವಾಗುತ್ತದೆ. ನಮ್ಮ ತಪ್ಪಿನ ಜವಾಬ್ದಾರಿಯನ್ನು ನಾವು ಹೊತ್ತುಕೊಳ್ಳುತ್ತೇವೆ ಮತ್ತು ಹಲವು ಬಾರಿ ಅದರಿಂದ ನಾವು ಪಾಠವನ್ನೂ ಕಲಿಯುತ್ತೇವೆ. ನಮ್ಮನ್ನು ನಾವು ಕ್ಷಮಿಸಿಕೊಳ್ಳುತ್ತೇವೆ ಕೂಡ.
- ಅಳು ಎನ್ನುವ ಭಾವನೆ ನಮ್ಮೊಳಗೆ ಇರುವಂತಹದ್ದು. ನಮ್ಮೊಳಗಿನ ದುಗುಡವನ್ನು ಸೂಚಿಸಲು ಅಳು ಬರುತ್ತದೆ. ಅಳುವನ್ನು ನಿರ್ಲಕ್ಷಿಸದೇ, ಅಳುವಿನ ಕಾರಣವನ್ನು ಅರಿತು ಅದನ್ನು ಸರಿಪಡಿಸಿಕೊಳ್ಳುವುದರ ಕಡೆ ಗಮನಹರಿಸಬೇಕು. ಅಳುವು ಅಹಿತ ಎಂದು ಅನ್ನಿಸಬಹುದು. ಆದರೆ, ಅದು ತುಂಬಾ ಸಾಮಾನ್ಯ ಮತ್ತು ಆರೋಗ್ಯಕರವಾದುದು. ನಮ್ಮ ಭಾವನೆಗಳನ್ನು ಇನ್ನೊಬ್ಬರೊಂದಿಗೆ ಹಂಚಿಕೊಳ್ಳಬೇಕು. ಅಳುವನ್ನು ತಡೆಹಿಡಿದುಕೊಳ್ಳಬಾರದು. ಅತ್ತು ಸಮಾಧಾನ ಮಾಡಿಕೊಂಡು ಮುಂದೆ ಸಾಗಬೇಕು.

(ಲೇಖಕ: ಆಪ್ತ ಸಮಾಲೋಚಕ, ಬೆಂಗಳೂರು)

**ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ**

# ಸಂಖ್ಯಾಶಾಸ್ತ್ರ (ಮುಂದುವರಿದ ಭಾಗ)

ಗಣಿತ

ಎಸ್ಸೆಸ್ಸೆಲ್ಸಿ

**ಉದಾಹರಣೆ:** ಒಂದು ಶಾಲೆಯ 10ನೇ ತರಗತಿಯ 51 ಬಾಲಕಿಯರ ಎತ್ತರಕ್ಕೆ ಸಂಬಂಧಿಸಿದಂತೆ ಸಮೀಕ್ಷೆಯನ್ನು ನಡೆಸಲಾಯಿತು ಮತ್ತು ಕೆಳಗಿನ ದತ್ತಾಂಶಗಳನ್ನು ಪಡೆಯಲಾಯಿತು.

| ಎತ್ತರ (ಸೆಂ.ಮೀಗಳಲ್ಲಿ) | ಬಾಲಕಿಯರ ಸಂಖ್ಯೆ |
|---|---|
| 140ಕ್ಕಿಂತ ಕಡಿಮೆ | 4 |
| 145 ಕ್ಕಿಂತ ಕಡಿಮೆ | 11 |
| 150 ಕ್ಕಿಂತ ಕಡಿಮೆ | 29 |
| 155 ಕ್ಕಿಂತ ಕಡಿಮೆ | 40 |
| 160 ಕ್ಕಿಂತ ಕಡಿಮೆ | 46 |
| 165 ಕ್ಕಿಂತ ಕಡಿಮೆ | 51 |

**ಎತ್ತರಗಳ ಮಧ್ಯಾಂಕವನ್ನು ಕಂಡುಹಿಡಿಯಿರಿ.**

**ಪರಿಹಾರ:** ಎತ್ತರದ ಮಧ್ಯಾಂಕವನ್ನು ಕಂಡುಹಿಡಿಯಲು ವರ್ಗಾಂತರಗಳನ್ನು ಮತ್ತು ಅವುಗಳ ಅನುರೂಪ ಆವೃತ್ತಿಗಳನ್ನು ನಾವು ಕಂಡುಹಿಡಿಯುವ ಅಗತ್ಯವಿದೆ.

| ವರ್ಗಾಂತರಗಳು | ಆವೃತ್ತಿ | ಸಂಚಿತ ಆವೃತ್ತಿ |
|---|---|---|
| 140ಕ್ಕಿಂತ ಕಡಿಮೆ | 4 | 4 |
| 140–145 | 7 | 11 |
| 145–150 | 18 | 29 |
| 150–155 | 11 | 40 |
| 155–160 | 6 | 46 |
| 160–165 | 5 | 51 |

ಈಗ ಪ್ರಾಪ್ತಾಂಕವು 145 -150 ಈ ವರ್ಗಾಂತರದಲ್ಲಿದೆ.

ಹೀಗಾಗಿ (ಕೆಳಮಿತಿ) = 145

ಹಿಂದಿನ ವರ್ಗಾಂತರದ ಸಂಚಿತ ಆವೃತ್ತಿ = 11

ಮಧ್ಯಾಂಕವಿರುವ ಆವೃತ್ತಿ = 18

ವರ್ಗಾಂತರದ ಗಾತ್ರ = 5

$$\text{ಮಧ್ಯಾಂಕ} = l + \left(\frac{\frac{n}{2} - cf}{f}\right) \times h$$

$$= 145 + \left(\frac{25.5 - 11}{18}\right) \times 5$$

$$= 145 + \frac{72.5}{18} = 149.03$$

ಆದ್ದರಿಂದ ಬಾಲಕಿಯರ ಎತ್ತರಗಳ ಮಧ್ಯಾಂಕವು 149.03 ಆಗಿದೆ.

ಸಂಚಿತ ಆವೃತ್ತಿ ವಿತರಣೆಯನ್ನು ನಕ್ಷೆಯಲ್ಲಿ ಪ್ರತಿನಿಧಿಸುವುದು.

ನಾವೆಲ್ಲರೂ ತಿಳಿದಂತೆ ಪದಗಳಾಗಿರುವ ಚಿತ್ರಗಳು ಸುಲಭವಾಗಿ ಅರ್ಥೈಸಲು ಸಹಾಯಕವಾಗಿವೆ. ಕೋಷ್ಟಕದ ದತ್ತಾಂಶಗಳನ್ನು ನಕ್ಷೆಯಲ್ಲಿ ಪ್ರತಿನಿಧಿಸಲು ನಾವು ಅನುಕೂಲ ಪ್ರಮಾಣವನ್ನು ಆಯ್ಕೆ ಮಾಡಿ x– ಅಕ್ಷದ ಮೇಲೆ - ವರ್ಗಾಂತರಗಳ ಮೇಲ್ಮಿತಿಗಳನ್ನು ಮತ್ತು ಲಂಬ ಅಕ್ಷರ ಮೇಲೆ ಈ ಅನುರೂಪ ಸಂಚಿತ ಆವೃತ್ತಿಗಳನ್ನು ಗುರುತಿಸುತ್ತೇವೆ. ಬಿಂದುಗಳನ್ನು ನಕ್ಷಾ ಹಾಳೆಯಲ್ಲಿ ಗುರುತಿಸೋಣ ಮತ್ತು ಅವುಗಳನ್ನು ಸಾಧನಗಳ ನೆರವಿಲ್ಲದೆ ಸೇರಿಸೋಣ. ಈಗ ನಾವು ಪಡೆದ ಈ ರೇಖೆಯನ್ನು ಸಂಚಿತ ಆವೃತ್ತಿ ರೇಖೆ ಅಥವಾ ಓಜೀವ ಎನ್ನುತ್ತೇವೆ.

**ಉದಾಹರಣೆ:** ಒಂದು ಪ್ರದೇಶದ ವ್ಯಾಪಾರ ಮಳಿಗೆಯ 30 ಅಂಗಡಿಗಳು ಗಳಿಸಿದ ವಾರ್ಷಿಕ ಲಾಭದ ವಿತರಣೆಯನ್ನು ಈ ಕೆಳಗೆ ನೀಡಿದೆ.

| ಲಾಭ (ಲಕ್ಷಗಳಲ್ಲಿ) | ಅಂಗಡಿಗಳ ಸಂಖ್ಯೆ |
|---|---|
| 5 ಅಥವಾ 5ಕ್ಕಿಂತ ಅಧಿಕ | 30 |
| 10 ಅಥವಾ 10ಕ್ಕಿಂತ ಅಧಿಕ | 28 |
| 15 ಅಥವಾ 15ಕ್ಕಿಂತ ಅಧಿಕ | 16 |
| 20 ಅಥವಾ 20ಕ್ಕಿಂತ ಅಧಿಕ | 14 |
| 25 ಅಥವಾ 25ಕ್ಕಿಂತ ಅಧಿಕ | 10 |
| 30 ಅಥವಾ 30ಕ್ಕಿಂತ ಅಧಿಕ | 7 |
| 35 ಅಥವಾ 35ಕ್ಕಿಂತ ಅಧಿಕ | 3 |

**ಪರಿಹಾರ:** ನಾವು ಮೊದಲು x– ಅಕ್ಷದಲ್ಲಿ ಲಾಭಾಂಶದ ಕೆಳಮಿತಿ ಮತ್ತು y ಅಕ್ಷದಲ್ಲಿ ಸಂಚಿತ ಆವೃತ್ತಿಗಳು ಇರುವಂತೆ ನಿರ್ದೇಶಾಂಕ ಅಕ್ಷಗಳನ್ನು ಎಳೆಯುತ್ತೇವೆ.







(5,30) (10,28) (15,16) (20,14) (25,10) (30,7) ಮತ್ತು (35,3) ಬಿಂದುಗಳನ್ನು ಗುರುತಿಸಿ ಅವುಗಳನ್ನು ಸಾಧನಗಳ ನೆರವಿಲ್ಲದೆ ಸೇರಿಸಿದಾಗ ಅಧಿಕ ಇರುವ ವಿಧಾನದ ಓಜೀವ ಪಡೆಯುತ್ತೇವೆ. ಅವುಗಳ ಆವೃತ್ತಿಗಳು ಮತ್ತು ಸಂಚಿತ ಆವೃತ್ತಿಯನ್ನು ಪಡೆದು

| ವರ್ಗಾಂತರಗಳು | 5–10 | 10–15 | 15–20 | 20–25 | 25–30 | 30–35 | 35–40 |
|---|---|---|---|---|---|---|---|
| ಸಂಚಿತ ಆವೃತ್ತಿ | 2 | 14 | 16 | 20 | 23 | 27 | 30 |

ಈ ಬೆಲೆಗಳಲ್ಲಿ (10,2) (15,14) (20,16) (25,20) (30,23) (35,27) (40,30) ಬಿಂದುಗಳನ್ನು ಗುರುತಿಸಿ ಕಡಿಮೆ ಇರುವ ವಿಧಾನದ ಓಜೀವ ಪಡೆಯುತ್ತೇವೆ.

# ಒಂದು ಸರಳ ರೇಖೆಯ ಮೇಲೆ ಸದಿಶದ ಬಾಗುವಿಕೆ

ಗಣಿತ

ದ್ವಿತೀಯ ಪಿಯುಸಿ

$\vec{AB}$ ಸದಿಶವು L ಎಂಬ ಅದಿಶಾ ರೇಖೆಯೊಂದಿಗೆ ಅಪ್ರದಕ್ಷಿಣವಾಗಿ $\theta$ ಕೋನವನ್ನು ಉಂಟು ಮಾಡಿದಾಗ $\vec{AB}$ ಸದಿಶದ ಬಾಗುವಿಕೆಯು L ರೇಖೆಯ ಮೇಲೆ ಸದಿಶ $\vec{P}$ ಆಗಿರುತ್ತದೆ ಮತ್ತು ಅದರ ಪರಿಮಾಣ $|\vec{AB}| \cos\theta$




**ಅವಲೋಕನಗಳು:**

1) $\vec{P}$ ಯು L ರೇಖೆಯ ದಿಕ್ಕಿನಲ್ಲಿನ ಏಕ ಸದಿಶವಾದರೆ L ಮೇಲೆ $\vec{a}$ ಸದಿಶದ ಬಾಗುವಿಕೆ $\vec{a}, P$ ಆಗುತ್ತದೆ.

2) $\vec{b}$ ಸದಿಶದ ಮೇಲೆ $\vec{a}$ ಸದಿಶದ ಬಾಗುವಿಕೆ $\frac{\vec{a}, \vec{b}}{|\vec{b}|}$ ಆಗಿರುತ್ತದೆ.

3) $\theta = 0$ ಆದರೆ ಸದಿಶ $\vec{AB}$ ನ ಬಾಗುವಿಕೆ $\vec{AB}$ ಆಗಿರುತ್ತದೆ. $\theta = \pi$ = ಆದರೆ $\vec{AB}$ ಸದಿಶದ ಬಾಗುವಿಕೆ ಸದಿಶವು $\vec{BA}$ ಆಗಿರುತ್ತದೆ. $\theta = \frac{\pi}{2}$ OR $\frac{3\pi}{2}$ ಆದರೆ $\vec{AB}$ ಸದಿಶದ ಬಾಗುವಿಕೆ ಸದಿಶವು ಶೂನ್ಯ ಸದಿಶವಾಗುತ್ತದೆ.

**ಉದಾಹರಣೆ:** $\vec{b} = \hat{i} + 2\hat{j} + \hat{k}$ ಸದಿಶದ ಮೇಲೆ $\vec{a} = 2\hat{i} + 3\hat{j} + 2\hat{k}$ ಸದಿಶದ ಬಾಗುವಿಕೆ ಕಂಡು ಹಿಡಿಯಿರಿ.

**ಪರಿಹಾರ:** ಸದಿಶದ ಮೇಲೆ ಸದಿಶದ ಬಾಗುವಿಕೆ

ಎರಡು $\vec{b}$ ಸದಿಶಗಳ $\vec{a}$ ಸದಿಶ ಗುಣಲಬ್ಧ: $\frac{\vec{a}, \vec{b}}{|\vec{b}|}$

$$= 8 = \frac{2 \times 1 + 3 \times 2 + 2 \times 1}{\sqrt{1^2 + 2^2 + 1^2}}$$

$$= \frac{10}{\sqrt{6}}$$

**ಎರಡು ಸದಿಶಗಳ ಸದಿಶ ಗುಣಲಬ್ಧ:**

$\vec{a}$ ಮತ್ತು $\vec{b}$ ಎರಡು ಶೂನ್ಯವಲ್ಲದ ಸದಿಶಗಳ ಸದಿಶ ಗುಣಲಬ್ಧವನ್ನು $\vec{a} \times \vec{b}$ ಎಂದು ಸೂಚಿಸುತ್ತೇವೆ ಮತ್ತು ಅದನ್ನು $\vec{a} \times \vec{b} = |\vec{a}||\vec{b}| \sin\theta \, \hat{n}$ ಎಂದು ವ್ಯಾಖ್ಯಾನಿಸುತ್ತೇವೆ. ಇಲ್ಲಿ $\theta$ ಎನ್ನುವುದು ಮತ್ತು $\vec{a}$ ಸದಿಶಗಳ $\vec{b}$ ನಡುವಿನ ಕೋನ $\hat{n}$ ಎನ್ನುವರು. $\vec{a} \times \vec{b}$ ದಿಶೆಯಾಗಿರುತ್ತದೆ $\vec{a} = 0$ ಅಥವಾ $\vec{b} = 0$ ಆದಲ್ಲಿ ಎಂದು ವ್ಯಾಖ್ಯಾನಿಸುತ್ತೇವೆ.




**ವೀಕ್ಷಣೆಗಳು**

- $\vec{a} \times \vec{b}$ ಒಂದು ಸದಿಶ
- $\vec{a}$ ಮತ್ತು $\vec{b}$ ಎರಡು ಶೂನ್ಯವಲ್ಲದ ಸದಿಶಗಳಾಗಿರಲಿ. ಆಗ $\vec{a} \times \vec{b} = 0 \Leftrightarrow a // b$ ನಿಖರವಾಗಿ $\vec{a} \times \vec{a} = 0$ ಮತ್ತು $\vec{a} \times (-\vec{a}) = 0$
- $\theta = \frac{\pi}{2}$ ಆದರೆ $\vec{a} \times \vec{b} = |\vec{a}||\vec{b}|$

*ಸದಿಶದ ಗುಣಲಬ್ಧ ಅಪರಿವರ್ತನೀಯ. ಏಕೆಂದರೆ $\vec{a} \times \vec{b} = -\vec{b} \times \vec{a}$ ವಾಸ್ತವವಾಗಿ $\vec{a} \times \vec{b} = |\vec{a}||\vec{b}| \sin\theta$ ಇಲ್ಲಿ $\vec{a} \times \vec{b}$ ಮತ್ತು $\vec{n}$ ತಿರುವು ವ್ಯವಸ್ಥೆಯಾಗಿರುತ್ತದೆ.

- $\hat{i}, \hat{j}$ ಮತ್ತು $\hat{k}$ ಏಕ ಸದಿಶಗಳು ಪರಸ್ಪರ ಲಂಬವಾಗಿರುತ್ತವೆ.

$$\hat{i} \times \hat{i} = \hat{j} \times \hat{j} = \hat{k} \times \hat{k} = 0$$

$$\hat{i} \times \hat{j} = \hat{k}, \hat{j} \times \hat{k} = \hat{i}, \hat{k} \times \hat{i} = \hat{j}$$

$$\hat{j} \times \hat{i} = -\hat{k}, \hat{k} \times \hat{j} = -\hat{i}, \hat{i} \times \hat{k} = -\hat{j}$$

*ಸದಿಶ ಗುಣಲಬ್ಧದ ಅನುಸಾರ, ಎರಡು ಸದಿಶಗಳ ನಡುವಿನ ಕೋನ

$\sin\theta = \frac{|\vec{a} \times \vec{b}|}{|\vec{a}||\vec{b}|}$ ಎಂದು ಬರೆಯಬಹುದು.

* $\vec{a}$ ಮತ್ತು $\vec{b}$ ಒಂದು ತ್ರಿಕೋನ ಅಕ್ಕಪಕ್ಕ ಬಾಹುಗಳಾದಲ್ಲಿ ಅದರ ವಿಸ್ತೀರ್ಣ $\frac{1}{2}|\vec{a} \times \vec{b}|$ ಆಗಿರುತ್ತದೆ.

* $\vec{a}$ ಮತ್ತು $\vec{b}$ ಒಂದು ಸಮಾನಾಂತರ ಚತುರ್ಭುಜದ ಅಕ್ಕಪಕ್ಕ ಬಾಹುಗಳಾಗಿದ್ದಲ್ಲಿ ಅದರ ವಿಸ್ತೀರ್ಣ $|\vec{a} \times \vec{b}|$ ಆಗುತ್ತದೆ.

$\vec{a} = a_1\hat{i} + a_2\hat{j} + a_3\hat{k}$ ಮತ್ತು

$\vec{b} = b_1\hat{i} + b_2\hat{j} + b_3\hat{k}$ ಆಗಿರಲಿ ಆಗ

$$\vec{a} \times \vec{b} = \begin{vmatrix} \hat{i} & \hat{j} & \hat{k} \\ a_1 & a_2 & a_3 \\ b_1 & b_2 & b_3 \end{vmatrix}$$

**ಉದಾಹರಣೆ:** $\vec{a} = 2\hat{i} + \hat{j} + 3\hat{k}$ ಮತ್ತು $\vec{b} = 3\hat{i} + 5\hat{j} + 2\hat{k}$ ಆದರೆ $|\vec{a} \times \vec{b}|$ ಯನ್ನು ಕಂಡು ಹಿಡಿಯಿರಿ.

**ಪರಿಹಾರ:**

$$\vec{a} \times \vec{b} = \begin{vmatrix} \hat{i} & \hat{j} & \hat{k} \\ 2 & 1 & 3 \\ 3 & 5 & -2 \end{vmatrix}$$

$$= \hat{i}(-2 - 15) - (-4 - 9)\hat{j} + (10-3)\hat{k}$$

$$= -17\hat{i} + 13\hat{j} + 7\hat{k}$$

ಆದ್ದರಿಂದ $|\hat{a} \times \hat{b}| = \sqrt{(-17)^2 + (13)^2 + 7^2} = \sqrt{507}$

**ಉದಾಹರಣೆ:** ಒಂದು ಸಮಾನಾಂತರ ಚತುರ್ಭುಜದ ಸಹಬಾಹುಗಳು $\vec{a} = 3\hat{i} + \hat{j} + 4\hat{k}$ ಮತ್ತು $\vec{b} = \hat{i} - \hat{j} + \hat{k}$ ಅದರಲ್ಲಿ ಅದರ ವಿಸ್ತೀರ್ಣವನ್ನು ಕಂಡು ಹಿಡಿಯಿರಿ.

**ಪರಿಹಾರ:** ಸಮಾಧಾನ $\hat{a}$ ಮತ್ತು $\hat{b}$ ಒಂದು ಸಮಾಂತರ ಚತುರ್ಭುಜದ ಬಾಹುಗಳಾದರೆ ಅದರ ವಿಸ್ತೀರ್ಣ $|\vec{a} \times \vec{b}|$

$$\vec{a} \times \vec{b} = \begin{vmatrix} \hat{i} & \hat{j} & \hat{k} \\ 3 & 1 & 4 \\ 1 & -1 & 1 \end{vmatrix} == 5\hat{i} + \hat{j} - 4\hat{k}$$

ಆದ್ದರಿಂದ $|\vec{a} \times \vec{b}| = \sqrt{25 + 1 + 16} = \sqrt{46}$

ಹಾಗಾಗಿ ವಿಸ್ತೀರ್ಣ $= \sqrt{42}$ ಚದರ ಮೂಲ ಮಾನಗಳು.

ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ವೇವ್ ಆಪ್ಟಿಕಲ್ಸ್: ಹೈಜನ್ಸ್ ಪ್ರಿನ್ಸಿಪಲ್ ಆ್ಯಂಡ್ ವೇವ್ ಫ್ರಂಟ್ಸ್' ಇಂಗ್ಲಿಷ್ ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

https://bit.ly/32MV2NM

**ಸುಭಾಷಿತ**

ನೀವು ಬೆಳಿಗ್ಗೆ ಎದ್ದಾಗ, ಭವಿಷ್ಯವು ಉತ್ತಮವಾಗಿ ಇರಲಿದೆ ಎಂದು ಭಾವಿಸಿದರೆ, ಅಂದು ನಿಮ್ಮ ಪಾಲಿಗೆ ಪ್ರಕಾಶಮಾನವಾದ ದಿನವಾಗಿರುತ್ತದೆ. ಹಾಗೆ ಅಂದುಕೊಳ್ಳದಿದ್ದರೆ ಅಂತಹ ದಿನವಾಗಲು ಸಾಧ್ಯವಿಲ್ಲ.

–ಎಲಾನ್ ಮಸ್ಕ್

# ಕಠಿಣ ನಿರ್ಬಂಧ: ಜನರ ಬದುಕನ್ನು ಕಠಿಣವಾಗಿಸದಂತೆ ನಿಭಾಯಿಸಿ

**ಕೋವಿಡ್** ಸೋಂಕು ತಡೆಗೆ ಹರಸಾಹಸ ಪಡುತ್ತಿರುವ ರಾಜ್ಯ ಸರ್ಕಾರವು ರಾಜ್ಯದ ಜನರ ಮೇಲೆ 14 ದಿನಗಳ ಅವಧಿಗೆ ಕಠಿಣ ನಿರ್ಬಂಧ ಹೇರಿದೆ. ರಾಜ್ಯದಲ್ಲಿ ಅತ್ಯಂತ ವೇಗವಾಗಿ ಪಸರಿಸುತ್ತಿರುವ ಕೋವಿಡ್ ಸೋಂಕನ್ನು ತಡೆಯಲು ಇದೊಂದು ಪರಿಣಾಮಕಾರಿ ಕ್ರಮ ಎಂದು ಸರ್ಕಾರ ಭಾವಿಸಿದೆ. ಆದರೆ, ಈ ಕಠಿಣ ಕ್ರಮವೂ ಕೋವಿಡ್ ಸೋಂಕನ್ನು ನಿಯಂತ್ರಣಕ್ಕೆ ತರಬಹುದು ಎನ್ನುವ ಪೂರ್ಣ ವಿಶ್ವಾಸ ಸರ್ಕಾರಕ್ಕೇ ಇದ್ದಂತಿಲ್ಲ. ‘14 ದಿನಗಳಲ್ಲಿ ಸೋಂಕು ನಿಯಂತ್ರಣಕ್ಕೆ ಬಾರದಿದ್ದರೆ, ನಿರ್ಬಂಧಗಳನ್ನು ಮುಂದುವರಿಸುವುದು ಅನಿವಾರ್ಯ ಆಗಬಹುದು’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪತ್ರಿಕಾಗೋಷ್ಠಿಯಲ್ಲಿ ಹೇಳಿರುವುದೇ ಇದಕ್ಕೆ ಸಾಕ್ಷಿ. ನಿರ್ಬಂಧಗಳ ಕುರಿತು ಸರ್ಕಾರ ಗೊಂದಲದಲ್ಲಿ ಇರುವಂತಿದೆ. ಅದು, ಸಾರ್ವಜನಿಕರನ್ನೂ ಗೊಂದಲಕ್ಕೆ ದೂಡಬಹುದು. ತಯಾರಿಕಾ ವಲಯದ ಉದ್ದಿಮೆಗಳು ಮತ್ತು ನಿರ್ಮಾಣ ಕ್ಷೇತ್ರದವರು ಕೆಲಸ ಮಾಡಬಹುದು ಎನ್ನುವ ಸರ್ಕಾರ, ಎಲ್ಲ ಸಾರ್ವಜನಿಕ ಮತ್ತು ಖಾಸಗಿ ವಾಹನಗಳ ಸಂಚಾರಕ್ಕೆ ನಿಷೇಧ ಹೇರಿರುವುದು ಏನನ್ನು ಸೂಚಿಸುತ್ತದೆ? ಈ ಉದ್ದಿಮೆಗಳ ನೌಕರರು ಕಚೇರಿ ಅಥವಾ ಫ್ಯಾಕ್ಟರಿ ತಲುಪುವುದು ಹೇಗೆ? ಬಹುತೇಕ ಅಸಹಾಯಕ ಹೆಣ್ಣುಮಕ್ಕಳೇ ಉದ್ಯೋಗದಲ್ಲಿರುವ ಗಾರ್ಮೆಂಟ್ಸ್ ಉದ್ಯಮವನ್ನು ಸಂಪೂರ್ಣ ಬಂದ್ ಮಾಡಿರುವುದನ್ನು ಹೇಗೆ ಅರ್ಥೈಸಿಕೊಳ್ಳುವುದು? ಕಳೆದ ವರ್ಷ ಸರ್ಕಾರ ಹೇರಿದ ಲಾಕ್‌ಡೌನ್‌ನಲ್ಲಿ ಆರ್ಥಿಕವಾಗಿ ಸದೃಢರಲ್ಲದ ಜನರು ಬಹುದೊಡ್ಡ ಹೊಡೆತವನ್ನು ಅನುಭವಿಸಿದ್ದು ಇನ್ನೂ ನೆನಪಿನಿಂದ ಮರೆಯಾಗಿಲ್ಲ. ಈಗ ಹೇರಿರುವ ನಿರ್ಬಂಧ ಕೂಡಾ ಅದೇ ವರ್ಗವನ್ನು ಕಂಗೆಡಿಸುವ ಸಾಧ್ಯತೆ ಇದೆ. ಆಟೊ ಚಾಲಕರು, ಕ್ಯಾಬ್ ಚಾಲಕರು, ದಿನಗೂಲಿ ಕಾರ್ಮಿಕರು ಮುಂತಾದವರಿಗೆ ಸೂಕ್ತ ಪರಿಹಾರ ಒದಗಿಸುವ ಹೊಣೆಯನ್ನೂ ಸರ್ಕಾರ ನಿರ್ವಹಿಸಬೇಕಾಗಿದೆ. ಆದರೆ, ಅದರ ಬಗ್ಗೆ ಸರ್ಕಾರ ಯಾವುದೇ ಕ್ರಮ ಪ್ರಕಟಿಸಿಲ್ಲ. ನಗರಗಳಲ್ಲಿ ಇರುವ ಇಂದಿರಾ ಕ್ಯಾಂಟೀನ್‌ಗಳಲ್ಲಿನ ಆಹಾರ ಪೂರೈಕೆಯಲ್ಲಿ ಸರ್ಕಾರದ ಧೋರಣೆಯಿಂದಾಗಿ ವ್ಯತ್ಯಯವಾಗಿದೆ. ನಿರ್ಬಂಧಗಳಿಂದಾಗಿ ಈಗ ದೈನಂದಿನ ಆದಾಯ ಕಳೆದುಕೊಳ್ಳಲಿರುವ ದುರ್ಬಲ ವರ್ಗಗಳ ಜನರಿಗೆ ಆಹಾರ ಖಾತರಿಯೂ ಇಲ್ಲದಂತಾಗುತ್ತದೆ. ಇದಕ್ಕೆ ಪರಿಹಾರವನ್ನು ಸರ್ಕಾರವೇ ಸೂಚಿಸಬೇಕು.

ಸೋಂಕು ಪ್ರಸರಣ ತಡೆಗೆ ನೀಡುವಷ್ಟೇ ಮಹತ್ವವನ್ನು ಸೋಂಕಿತರ ತುರ್ತು ಚಿಕಿತ್ಸೆಗೂ ನೀಡುವ ಮೂಲಕ ಸಾವು–ನೋವು ಕನಿಷ್ಠಗೊಳಿಸಲು ಸರ್ವ ರೀತಿಯಲ್ಲೂ ಯತ್ನಿಸಬೇಕು

ರಾಜ್ಯದಲ್ಲಿ ಪ್ರತಿದಿನ ವರದಿಯಾಗುತ್ತಿರುವ ಹೊಸ ಸೋಂಕು ಪ್ರಕರಣಗಳ ಪೈಕಿ ಅರ್ಧಕ್ಕಿಂತ ಹೆಚ್ಚು ಪ್ರಕರಣಗಳು ಬೆಂಗಳೂರು ನಗರವೊಂದರಲ್ಲೇ ಪತ್ತೆಯಾಗುತ್ತಿವೆ. ಬೆಂಗಳೂರು ನಗರಕ್ಕೇ ಪ್ರತ್ಯೇಕವಾದ ಕಾರ್ಯಸೂಚಿಯೊಂದನ್ನು ಜಾರಿಗೊಳಿಸಬೇಕಾದ ಅಗತ್ಯವನ್ನು ಇದು ಒತ್ತಿಹೇಳುತ್ತದೆ. ಆಸ್ಪತ್ರೆಗಳಲ್ಲಿ ಆಮ್ಲಜನಕ ಸಮೇತ ಹಾಸಿಗೆಗಳ ತೀವ್ರ ಕೊರತೆಯನ್ನು ನಿವಾರಿಸುವಲ್ಲಿ ಸರ್ಕಾರ ಕಠಿಣ ಕ್ರಮಗಳನ್ನು ತಕ್ಷಣ ಜಾರಿಗೊಳಿಸಬೇಕಿದೆ. ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಕೊರೊನಾ ಸೋಂಕಿತರಿಗೆ ಮೀಸಲಿಡುವ ತನ್ನ ಆದೇಶವನ್ನು ಕಾರ್ಯಗತಗೊಳಿಸುವಲ್ಲಿ ಸರ್ಕಾರದ ವೈಫಲ್ಯ ಎದ್ದು ಕಾಣುತ್ತಿದೆ. ಈ ಪ್ರಮಾಣವನ್ನು ಶೇ 75ಕ್ಕೆ ಏರಿಸಬೇಕು ಎಂಬ ಆದೇಶವು ಸರ್ಕಾರ ಹಾಗೂ ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್ ಅಸೋಸಿಯೇಷನ್ ನಡುವೆ ಜಟಾಪಟಿಗೆ ಕಾರಣವಾಗಿದೆ. ಇದು ಅಸಾಧಾರಣ ಸಂದರ್ಭ. ಇಂತಹ ಹೊತ್ತಲ್ಲಿ ಬಿಕ್ಕಟ್ಟಿನ ಪರಿಹಾರ ಪ್ರಕ್ರಿಯೆಗೆ ಪ್ರತಿಷ್ಠೆಗಳು ಅಡ್ಡಿಬರಬಾರದು. ನೈರುತ್ಯ ರೈಲ್ವೆಯು ಸಿದ್ಧಗೊಳಿಸಿರುವ 4,240 ಹಾಸಿಗೆ ಸಾಮರ್ಥ್ಯದ ಐಸೊಲೇಷನ್ ಬೋಗಿಗಳನ್ನೂ ಸರ್ಕಾರ ತಕ್ಷಣ ಬಳಸಿಕೊಳ್ಳಬೇಕು. ಇದರ ನಡುವೆ, 18ರಿಂದ 45 ವರ್ಷದವರೆಗಿನ ಎಲ್ಲ ವ್ಯಕ್ತಿಗಳಿಗೂ ರಾಜ್ಯ ಸರ್ಕಾರವೇ ಉಚಿತ ಲಸಿಕೆ ನೀಡಲು ನಿರ್ಧರಿಸಿರುವುದು ಸ್ವಾಗತಾರ್ಹ. ಆದರೆ ಈ ಲಸಿಕೆ ಅಭಿಯಾನವನ್ನು ವ್ಯವಸ್ಥಿತವಾಗಿ ಜಾರಿಗೊಳಿಸಲು ವಿಶೇಷ ಕ್ರಿಯಾಯೋಜನೆಯನ್ನು ರೂಪಿಸಿ, ಹೊಣೆಗಾರಿಕೆಯನ್ನು ನಿಗದಿ ಮಾಡಬೇಕು. ಸೋಂಕು ಪ್ರಸರಣ ತಡೆಗೆ ನೀಡುವಷ್ಟೇ ಮಹತ್ವವನ್ನು ಸೋಂಕಿತರ ತುರ್ತು ಚಿಕಿತ್ಸೆಗೂ ನೀಡುವ ಮೂಲಕ ಸಾವು–ನೋವು ಕನಿಷ್ಠಗೊಳಿಸಲು ಸರ್ವ ರೀತಿಯಲ್ಲೂ ಯತ್ನಿಸಬೇಕು.

## ದಿನದ ಟ್ವೀಟ್

### ಅಭಿಯಾನ ನಿಲ್ಲದು

**ಕೇರಳ ಇದುವರೆಗೆ 57.58 ಲಕ್ಷ ಜನರಿಗೆ ಮೊದಲ ಡೋಸ್ ಮತ್ತು 10.39 ಲಕ್ಷ ಜನರಿಗೆ ಎರಡನೇ ಡೋಸ್ ಲಸಿಕೆಯನ್ನು ನೀಡಿದೆ. 50 ಲಕ್ಷ ಡೋಸ್‌ಗಳಿಗಾಗಿ ನಾವು ಸಲ್ಲಿಸಿರುವ ಮನವಿಗೆ ಕೇಂದ್ರ ಸರ್ಕಾರವು ಇನ್ನಷ್ಟೇ ಅನುಮತಿ ನೀಡಬೇಕಿದೆ. ನಮ್ಮ ಅಸಾಧಾರಣ ಅಭಿಯಾನವನ್ನು ನಿಲ್ಲಿಸಲು ಯಾವುದೇ ಕಾರಣಕ್ಕಾಗಿ ನಾವು ಅವಕಾಶ ನೀಡುವುದಿಲ್ಲ. ಲಸಿಕೆಗಳನ್ನು ನೇರವಾಗಿ ಮಾರುಕಟ್ಟೆಯಿಂದ ಖರೀದಿಸಲು, ಅಧಿಕಾರಿಗಳು ಎರಡೂ ಕಂಪನಿಗಳೊಂದಿಗೆ ಸಂಪರ್ಕದಲ್ಲಿದ್ದಾರೆ.**

**ಪಿಣರಾಯಿ ವಿಜಯನ್**, ಕೇರಳ ಮುಖ್ಯಮಂತ್ರಿ

## 25 ವರ್ಷಗಳ ಹಿಂದೆ

ಶನಿವಾರ, 27-4-1996

• **16 ಕೋಟಿ ಮತದಾರರಿಂದ ಇಂದು ತೀರ್ಮಾನ**

**ನವದೆಹಲಿ, ಏ. 26 (ಪಿಟಿಐ)**– ದೆಹಲಿಯಲ್ಲಿ ಹೊಸ ಸರ್ಕಾರ ಅಧಿಕಾರ ಹಿಡಿಯಲು ಈಗಾಗಲೇ ಕ್ಷಣಗಣನೆ ಪ್ರಾರಂಭವಾಗಿದ್ದು, ನಾಳೆ ನಡೆಯಲಿರುವ ಪ್ರಥಮ ಹಂತದ ಚುನಾವಣೆಯಲ್ಲಿ 14 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 16 ಕೋಟಿ ಮತದಾರರು 150 ಲೋಕಸಭಾ ಮತ್ತು ಐದು ವಿಧಾನಸಭೆಗಳ 532 ಸ್ಥಾನಗಳಿಗೆ ಸ್ಪರ್ಧಿಸಿರುವ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಲಿದ್ದಾರೆ.

ಪ್ರಧಾನಿ ಪಿ.ವಿ.ನರಸಿಂಹ ರಾವ್, ಮಾಜಿ ಉಪಪ್ರಧಾನಿ ದೇವಿಲಾಲ್, ಕೇಂದ್ರ ಸಚಿವರುಗಳಾದ ಕೆ.ಕರುಣಾಕರನ್, ಶೆಲ್ಜಾ, ಪಿ.ಜೆ.ಕುರಿಯನ್, ಎಸ್.ಕೃಷ್ಣಕುಮಾರ್, ಜನತಾ ಪಕ್ಷದ ನಾಯಕ ಸುಬ್ರಮಣಿಯನ್ ಸ್ವಾಮಿ, ತಮಿಳು ಮಾನಿಲ ಕಾಂಗ್ರೆಸ್‌ನ ಪಿ.ಚಿದಂಬರಂ, ಬಹುಜನ ಸಮಾಜ ಪಕ್ಷದ ನಾಯಕ ಕಾನ್ಶಿರಾಮ್, ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಎಸ್.ಬಂಗಾರಪ್ಪ ಮುಂತಾದ ಪ್ರಮುಖ ರಾಜಕಾರಣಿಗಳ ರಾಜಕೀಯ ಭವಿಷ್ಯವನ್ನು ಈ ಮೊದಲ ಹಂತದ ಚುನಾವಣೆ ನಿರ್ಧರಿಸಲಿದೆ.

• **ಸಂಜಯ್ ದತ್ ದೋಷಮುಕ್ತ**

**ದಾಂಡೇಲಿ, ಏ. 26**– ಸಿನಿಮಾ ನಟ ಸಂಜಯ್ ದತ್ ಮತ್ತು ಇತರ ನಾಲ್ವರ ಮೇಲಿನ ಆರೋಪಗಳಿಗೆ ಪೂರಕವಾಗಿ ಪ್ರಾಸಿಕ್ಯೂಷನ್ ಸಾಕ್ಷ್ಯ ಒದಗಿಸುವಲ್ಲಿ ವಿಫಲವಾದ ಕಾರಣ, ಇಲ್ಲಿನ ಪ್ರಥಮ ದರ್ಜೆ ನ್ಯಾಯಾಲಯ ಅವರನ್ನು ಆರೋಪಮುಕ್ತಗೊಳಿಸಿದೆ.

ನಟ ಸಂಜಯ್ ದತ್ ಅವರು ಕಳೆದ 1991ರಲ್ಲಿ ದಾಂಡೇಲಿ ಅಭಯಾರಣ್ಯಕ್ಕೆ ಅಕ್ರಮ ಪ್ರವೇಶಿಸಿ, ಕಳ್ಳತನದಿಂದ ಬೇಟೆಯಾಡಿ, ಮಂದುರ್ಲಿ ಅರಣ್ಯ ಇಲಾಖೆಯ ವಿಶ್ರಾಂತಿ ಗೃಹದ ಬಾಗಿಲು ಮುರಿದು, ಸರ್ಕಾರಿ ಆಸ್ತಿಗೆ ಹಾನಿಯುಂಟು ಮಾಡಿದ್ದಾರೆ ಎಂದು ಆಪಾದಿಸಲಾಗಿತ್ತು.

## 50 ವರ್ಷಗಳ ಹಿಂದೆ

ಮಂಗಳವಾರ, 27-4-1971

• **ಭಾರತದಿಂದ ಪಾಕ್ ಸಿಬ್ಬಂದಿ ನಿರ್ಗಮನಕ್ಕೆ ನಿರ್ಬಂಧ**

**ನವದೆಹಲಿ, ಏ. 26**– ಭಾರತದಲ್ಲಿರುವ ಪಾಕಿಸ್ತಾನಿ ರಾಯಭಾರವರ್ಗ ಮತ್ತಿತರ ಅಧಿಕಾರಿಗಳ ಚಲನವಲನದ ಮೇಲೆ ಭಾರತವು ಇಂದು ಪ್ರತೀಕಾರಾರ್ಥ ಕ್ರಮಗಳನ್ನು ಕೈಗೊಂಡಿದ್ದರಿಂದ ಭಾರತ–ಪಾಕಿಸ್ತಾನ ಬಾಂಧವ್ಯವು ರಾಜತಾಂತ್ರಿಕ ಹಣಾಹಣಿಯ ಘಟ್ಟದ ಕಡೆಗೆ ಸಾಗುತ್ತಿದೆ.

ಇಂದು ಸಂಜೆ ಆರು ಗಂಟೆಯಿಂದ ಜಾರಿಗೆ ಬಂದ ಹೊಸ ಕ್ರಮಗಳ ಪ್ರಕಾರ, ಭಾರತದಲ್ಲಿರುವ ಪಾಕಿಸ್ತಾನಿ ರಾಯಭಾರ ಕಚೇರಿಗಳ ಎಲ್ಲ ರಾಜತಾಂತ್ರಿಕ ಅಧಿಕಾರಿಗಳು, ಅವರ ಪತ್ನಿಯರು, ಮಕ್ಕಳು ಮತ್ತು ಪಾಕಿಸ್ತಾನಿ ಪ್ರಜೆಗಳಾಗಿರುವ ಮನೆ ಆಳುಗಳು ಭಾರತದಿಂದ ಹೊರ ಹೋಗಲು ಸರ್ಕಾರದ ಪೂರ್ವಭಾವಿ ಅನುಮತಿ ಪಡೆಯಬೇಕು.

• **ಗಡಿ, ಕಾವೇರಿಯಂತಹ ಸಮಸ್ಯೆಗಳಲ್ಲಿ ರಾಜ್ಯಪಾಲರು ಕೈ ಹಾಕುವುದಕ್ಕೆ ವಿರೋಧ**

**ಬೆಂಗಳೂರು, ಏ. 26**– 1924ರ ಒಪ್ಪಂದದ ಮಿತಿಯೊಳಗೆ, ಕಾವೇರಿ ಯೋಜನೆಗಳಿಗೆ ಕೇಂದ್ರದ ಅನುಮತಿ ಪಡೆಯುವ ರಾಜ್ಯಪಾಲರ ಪ್ರಯತ್ನವನ್ನು ವಿರೋಧಿಸಿ ಕೆಲವು ಶಾಸಕರು ಹಾಗೂ ಮಾಜಿ ಶಾಸಕರು ರಾಷ್ಟ್ರಪತಿ ಹಾಗೂ ರಾಜ್ಯಪಾಲರಿಗೆ ಪತ್ರ ಬರೆದಿದ್ದಾರೆ.

ಈ ಸದಸ್ಯರು ರಾಷ್ಟ್ರಪತಿ ಹಾಗೂ ಪ್ರಧಾನಿಗೆ ತಂತಿ ಕಳುಹಿಸಿ ಕಾವೇರಿ ನೀರು ಹಾಗೂ ಗಡಿ ವಿವಾದಗಳಂಥ ‘ಕ್ಲಿಷ್ಟವಾದ ಹಾಗೂ ಸೂಕ್ಷ್ಮವಾದ’ ಪ್ರಶ್ನೆಗಳಿಗೆ ಕೈಹಾಕಬಾರದೆಂದು ರಾಜ್ಯಪಾಲರಿಗೆ ಸಲಹೆ ಮಾಡಬೇಕೆಂದು ಕೋರಿದ್ದಾರೆ.

ಭಾರತೀಯ ಮೂಲದ ಕ್ರಿಕೆಟ್ ಕೋಚ್‌ಗಳ ನೇಮಕಕ್ಕೆ ಫ್ರ್ಯಾಂಚೈಸಿಗಳ ಹಿಂದೇಟು ಮೊದಲಿನಿಂದಲೂ ಇದೆ

# ಐಪಿಎಲ್: ‘ಇಂಡಿಯನ್’ ಕೋಚ್‌ಗಳೆಲ್ಲಿ?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

**ಸಂಜಯ್** ಬಾಂಗರ್ ಭಾರತ ಕ್ರಿಕೆಟ್ ತಂಡದಲ್ಲಿ ಸುಮಾರು ಐದು ವರ್ಷ ಬ್ಯಾಟಿಂಗ್ ಕೋಚ್ ಆಗಿದ್ದವರು. ಅವರ ಅವಧಿಯಲ್ಲಿ ಚೇತೇಶ್ವರ್ ಪೂಜಾರ, ವಿರಾಟ್ ಕೊಹ್ಲಿ, ಅಜಿಂಕ್ಯ ರಹಾನೆ, ರೋಹಿತ್ ಶರ್ಮಾ ಸೇರಿದಂತೆ ಹಲವು ಬ್ಯಾಟ್ಸ್‌ಮನ್‌ಗಳು ರನ್‌ಗಳ ಹೊಳೆಯನ್ನೇ ಹರಿಸಿದರು. ಫಾರ್ಮ್ ಕೊರತೆ ಅನುಭವಿಸಿದ್ದ ಕೆಲವು ಬ್ಯಾಟ್ಸ್‌ಮನ್‌ಗಳು ವಿದೇಶಿ ನೆಲದಲ್ಲಿಯೂ ಪುಟಿದೇಳುವಂತೆ ಮಾಡುವಲ್ಲಿ ಸಂಜಯ್ ಮಾರ್ಗದರ್ಶನದ ಪಾತ್ರ ಇತ್ತು. ಈ ಹಿಂದೆ ಎರಡು ವರ್ಷ ಐಪಿಎಲ್‌ನಲ್ಲಿ ಪಂಜಾಬ್ ಕಿಂಗ್ಸ್ ತಂಡಕ್ಕೂ ಮುಖ್ಯ ಕೋಚ್ ಆಗಿದ್ದವರು.

ಕೋಚಿಂಗ್‌ನಲ್ಲಿ ಶ್ರೀಮಂತ ಅನುಭವ ಇರುವ ಅದೇ ಸಂಜಯ್ ಈಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಬ್ಯಾಟಿಂಗ್ ಸಲಹೆಗಾರ ಮಾತ್ರ. ತಂಡದ ನಿರ್ದೇಶಕ ಮೈಕ್ ಹೆಸನ್, ಮುಖ್ಯ ಕೋಚ್ ಸೈಮನ್ ಕ್ಯಾಟಿಚ್ ಅವರ ಸಹಾಯಕನಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಶ್ರೀಮಂತ ಕ್ರಿಕೆಟ್ ಲೀಗ್ ಶುರುವಾದಾಗಿನಿಂದಲೂ ದೇಶಿ ಕೋಚ್‌ಗಳಿಗೆ ಮುಖ್ಯ ಸ್ಥಾನ ಸಿಕ್ಕಿರುವುದು ಬಹಳ ಕಡಿಮೆಯೇ. ಫ್ರ್ಯಾಂಚೈಸಿಗಳು ಭಾರತೀಯ ಕೋಚ್‌ಗಳನ್ನು ನೇಮಕ ಮಾಡುವ ಬಗ್ಗೆ ಹೆಚ್ಚು ಆಸಕ್ತಿ ತೋರಿಸಿಲ್ಲ. ಸದ್ಯ ನಡೆಯುತ್ತಿರುವ ಐಪಿಎಲ್ ಟೂರ್ನಿಯಲ್ಲಿ ಆಡುತ್ತಿರುವ ಎಂಟು ತಂಡಗಳ ಪೈಕಿ ಪಂಜಾಬ್ ಕಿಂಗ್ಸ್ ತಂಡದ ಅನಿಲ್ ಕುಂಬ್ಳೆ ಒಬ್ಬರಿದ್ದಾರೆ ಅಷ್ಟೇ.

2008ರಲ್ಲಿ ಐಪಿಎಲ್ ಆರಂಭವಾದಾಗ ಮೂರು ತಂಡಗಳಿಗೆ ಭಾರತದ ಕೋಚ್‌ಗಳಿದ್ದರು. ಆಗ ಆರ್‌ಸಿಬಿಗೆ ಕನ್ನಡಿಗ ವೆಂಕಟೇಶ್ ಪ್ರಸಾದ್, ಮುಂಬೈ ಇಂಡಿಯನ್ಸ್‌ಗೆ ಲಾಲ್‌ಚಂದ್ ರಜಪೂತ್ ಮತ್ತು ಡೆಕ್ಕನ್ ಚಾರ್ಜರ್ಸ್ ತಂಡಕ್ಕೆ ರಾಬಿನ್ ಸಿಂಗ್ ಮುಖ್ಯ ಕೋಚ್‌ಗಳಾಗಿದ್ದರು. ನಂತರದ ವರ್ಷಗಳಲ್ಲಿ ಪಂಜಾಬ್ ತಂಡ ಮಾತ್ರ ಸಂಜಯ್ ಬಾಂಗರ್ (2014–16) ಮತ್ತು ವೀರೇಂದ್ರ ಸೆಹ್ವಾಗ್ (2017) ಅವರನ್ನು ನೇಮಕ ಮಾಡಿತ್ತು. ಆದರೆ ಚೆನ್ನೈ ಸೂಪರ್ ಕಿಂಗ್ಸ್, ಸನ್‌ರೈಸರ್ಸ್ ಹೈದರಾಬಾದ್, ಕೋಲ್ಕತ್ತ ನೈಟ್ ರೈಡರ್ಸ್, ಡೆಲ್ಲಿ ಕ್ಯಾಪಿಟಲ್ಸ್, ರಾಜಸ್ಥಾನ್ ರಾಯಲ್ಸ್ ತಂಡಗಳು ಆರಂಭದಿಂದ ಇಲ್ಲಿಯವರೆಗೆ ಸ್ವದೇಶಿ ಕೋಚ್‌ಗಳ ನೇಮಕದ ಗೋಜಿಗೇ ಹೋಗಿಲ್ಲ. ಈ ರೀತಿಯಾಗಲು ಕಾರಣವೇನು, ಭಾರತದಲ್ಲಿ ಅರ್ಹ ತರಬೇತುದಾರರು ಇಲ್ಲವೇ ಎಂಬ ಪ್ರಶ್ನೆಗಳು ಮೂಡುವುದು ಸಹಜ.

ಹಾಗೇನಿಲ್ಲ. ಭಾರತದಲ್ಲಿಯೂ ಉತ್ತಮ ಕೋಚ್‌ಗಳು ಸಿಗುತ್ತಾರೆ. 2007ರಲ್ಲಿ ಮಹೇಂದ್ರಸಿಂಗ್ ಧೋನಿ ಬಳಗವು ಮೊದಲ ಟಿ20 ವಿಶ್ವಕಪ್ ಗೆದ್ದ ತಂಡದ ಹಿಂದಿನ ಶಕ್ತಿಯಾಗಿದ್ದವರು ಕೋಚ್ ಲಾಲ್‌ಚಂದ್ ರಜಪೂತ್, ಬೌಲಿಂಗ್ ಕೋಚ್ ವೆಂಕಟೇಶ್ ಪ್ರಸಾದ್ ಮತ್ತು ಫೀಲ್ಡಿಂಗ್ ಕೋಚ್ ರಾಬಿನ್ ಸಿಂಗ್ ಅವರು. ಐದು ತಿಂಗಳುಗಳ ಹಿಂದೆ ಆಸ್ಟ್ರೇಲಿಯಾದಲ್ಲಿ ಭಾರತ ತಂಡದ ಯುವ ಕ್ರಿಕೆಟಿಗರು ಟೆಸ್ಟ್ ಕ್ರಿಕೆಟ್‌ನಲ್ಲಿ ಐತಿಹಾಸಿಕ ಜಯ ಸಾಧಿಸಿದ್ದರು. ಆಗ ತಂಡದಲ್ಲಿ ನಾಯಕ ವಿರಾಟ್ ಕೊಹ್ಲಿ ಸೇರಿದಂತೆ ಪ್ರಮುಖ ಆಟಗಾರರೇ ಇರಲಿಲ್ಲ. ತಂಡದ ಅರ್ಧಕ್ಕಿಂತ ಹೆಚ್ಚು ಆಟಗಾರರಿಗೆ ಚೊಚ್ಚಲ ಸರಣಿಯೂ ಅದಾಗಿತ್ತು. ಆದರೂ ಆಸ್ಟ್ರೇಲಿಯಾದ ಬೌಲರ್‌ಗಳ ಬಿರುಗಾಳಿ ವೇಗದ ಬೌಲಿಂಗ್‌ಗೆ ದಿಟ್ಟ ಉತ್ತರ ನೀಡಿದರು. ಮೈಕೈ ತುಂಬಾ ಗಾಯಗಳಾಗಿದ್ದರೂ ಗಟ್ಟಿ ಮನೋಬಲದ ಇತಿಹಾಸ ಬರೆದರು. ಆಗ ಎಲ್ಲರ ದೃಷ್ಟಿ ಹೊರಳಿದ್ದು ತಂಡದ ಮುಖ್ಯ ಕೋಚ್ ರವಿಶಾಸ್ತ್ರಿ ಮತ್ತು ಭಾರತ ಜೂನಿಯರ್ ತಂಡಗಳ ಮಾಜಿ ಕೋಚ್ ರಾಹುಲ್ ದ್ರಾವಿಡ್ ಅವರತ್ತ. ಹೊಸ ಹುಡುಗರ ಮನೋಬಲವನ್ನು ಉದ್ದೀಪನಗೊಳಿಸುವ ಕೆಲಸವನ್ನು ರವಿಶಾಸ್ತ್ರಿ ಅಚ್ಚುಕಟ್ಟಾಗಿ ಮಾಡಿದ್ದರು. ಯಾವುದೇ ಹಂತದಲ್ಲಿಯೂ ಅವಕಾಶ ಸಿಕ್ಕಾಗ ಪ್ರತಿಭೆ ಸಾಬೀತು ಮಾಡುವ ಕಲೆಯನ್ನು ದ್ರಾವಿಡ್ ಮೊದಲೇ ಹೇಳಿಕೊಟ್ಟಿದ್ದರು. ಇದರ ಲಾಭ ಭಾರತಕ್ಕಾಯಿತು.

ಅಷ್ಟೇ ಏಕೆ, ಭಾರತದಲ್ಲಿ ನಡೆಯುವ ಪ್ರತಿಷ್ಠಿತ ದೇಶಿ ಟೂರ್ನಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಚಂದ್ರಕಾಂತ್ ಪಂಡಿತ್, ಯರೇಗೌಡ, ಕರ್ಸನ್ ಗಾವ್ರಿ, ಪ್ರವೀಣ್ ಆಮ್ರೆ, ಜೆ. ಅರುಣಕುಮಾರ್, ಸನತ್‌ಕುಮಾರ್, ದೊಡ್ಡಗಣೇಶ್, ಶಶಿಕಾಂತ್ ಮತ್ತಿತರರ ತರಬೇತಿಯಲ್ಲಿ ತಂಡಗಳು ಮಾಡಿರುವ ಸಾಧನೆಯತ್ತ ಫ್ರ್ಯಾಂಚೈಸಿಗಳು ಗಮನಹರಿಸಿಲ್ಲ. ಆದರೆ ಇವರ ಮಾರ್ಗದರ್ಶನದಲ್ಲಿ ಬೆಳೆದ ಹುಡುಗರಿಗೆ ಕೋಟಿ ಕೋಟಿ ಕೊಟ್ಟು ಖರೀದಿಸಿವೆ.

ಈ ರೀತಿಯ ಧೋರಣೆಗೆ ಫ್ರ್ಯಾಂಚೈಸಿಗಳಲ್ಲಿರುವ ಪೂರ್ವಗ್ರಹವೂ ಕಾರಣ ಎಂದು ಸದ್ಯ ಐಪಿಎಲ್ ತಂಡವೊಂದರಲ್ಲಿ ಸಲಹೆಗಾರರಾಗಿರುವ ಮಾಜಿ ಕ್ರಿಕೆಟಿಗರೊಬ್ಬರು ಹೇಳುತ್ತಾರೆ. ತಂಡದಲ್ಲಿರುವ ವಿದೇಶಿ ಆಟಗಾರರೊಂದಿಗೆ ಸಂವಹನ ಕೊರತೆಯಾಗಬಹುದು. ಇದರಿಂದಾಗಿ ವಿದೇಶಿಗರಿಗೆ ವಿನಿಯೋಗಿಸಿದ ದುಬಾರಿ ಮೌಲ್ಯ ವ್ಯರ್ಥವಾಗಬಹುದು ಎಂಬ ಭಯ ಅವರನ್ನು ಕಾಡುತ್ತದೆ. ಇದಲ್ಲದೇ ಸ್ಥಳೀಯ ಕೋಚ್‌ಗಳು ಸ್ವಜನ ಪಕ್ಷಪಾತ ಅನುಸರಿಸಬಹುದು ಎಂಬ ಸಂಶಯವೂ ಅವರಲ್ಲಿದೆ. ಅಲ್ಲದೇ ಈ ಟೂರ್ನಿಯು 45–50 ದಿನಗಳ ಅವಧಿಯದ್ದಾಗಿರುವ ಕಾರಣ ವೃತ್ತಿಪರತೆ ಮತ್ತು ಸಮಯನಿಷ್ಠೆಗೆ ಹೆಚ್ಚು ಮಹತ್ವ ಕೊಡುವ ವಿದೇಶಿ ಕೋಚ್‌ಗಳ ಬಗ್ಗೆ ಮಾಲೀಕರಿಗೆ ಹೆಚ್ಚು ಒಲವು ಎನ್ನಲಾಗುತ್ತಿದೆ.

‘ನಾವು ವರ್ಷವಿಡೀ ಶ್ರಮಪಟ್ಟು ವಯೋಮಿತಿ ಮತ್ತು ದೇಶಿ ಟೂರ್ನಿಗಳ ಮಟ್ಟದಲ್ಲಿ ಪ್ರತಿಭೆಗಳನ್ನು ಗುರುತಿಸಿ ತರಬೇತಿ ನೀಡುತ್ತೇವೆ. ಆ ಹುಡುಗರು ರಾಜ್ಯ ಮತ್ತು ಭಾರತ ತಂಡಕ್ಕೆ ಆಡುವಾಗ ಸಿಗುವ ಸಂತಸಕ್ಕೆ ಬೆಲೆ ಕಟ್ಟಲಾಗದು. ಅದರಿಂದ ನಮ್ಮ ದೇಶಕ್ಕೆ ಲಾಭವಾಗುತ್ತದೆ. ಅದೇ ಆಟಗಾರರು ಐಪಿಎಲ್ ತಂಡಗಳಲ್ಲಿ ಮಿಂಚಿದ ಶ್ರೇಯಸ್ಸು ವಿದೇಶಿ ಕೋಚ್‌ಗಳ ಪಾಲಾಗುವಾಗ ಸಂಕಟವಾಗುತ್ತದೆ’ ಎಂದು ಕೆಲವು ಹಿರಿಯ ತರಬೇತುದಾರರು ಬೇಸರ ವ್ಯಕ್ತಪಡಿಸುತ್ತಾರೆ.

ಹೊರದೇಶಗಳಲ್ಲಿ ನಡೆಯುವ ಬಿಗ್ ಬ್ಯಾಷ್ ಲೀಗ್‌ನಂತಹ ಫ್ರ್ಯಾಂಚೈಸಿ ಟೂರ್ನಿಗಳ ಯಾವುದೇ ತಂಡದಲ್ಲಿಯೂ ಭಾರತದ ಕೋಚ್‌ಗಳು ಕಾರ್ಯನಿರ್ವಹಿಸುತ್ತಿಲ್ಲ. ನಮ್ಮಲ್ಲಿ ಏಕಿಷ್ಟು ಮಹತ್ವ ಎಂದು ಕೇಳುವವರೂ ಇದ್ದಾರೆ.

ಐಪಿಎಲ್‌ನಲ್ಲಿ ದೇಶಿ ಆಟಗಾರರಿಗೆ ಆದ್ಯತೆ ಕೊಡಲು ಸ್ಪಷ್ಟ ನಿಯಮವಿದೆ. ಪಂದ್ಯದಲ್ಲಿ ಆಡುವ 11 ಆಟಗಾರರಲ್ಲಿ ಗರಿಷ್ಠ ನಾಲ್ವರು ವಿದೇಶಿ ಆಟಗಾರರು ಮಾತ್ರ ಕಣಕ್ಕಿಳಿಯಬೇಕು. ಉಳಿದಂತೆ ಇಲ್ಲಿಯ ಆಟಗಾರರು ಇರಬೇಕು. ಆದರೆ ಇಂತಹ ನಿಯಮ ದೇಶಿ ಕೋಚ್‌ಗಳ ನೇಮಕಕ್ಕೆ ಇಲ್ಲ. ಕೋವಿಡ್ ಹಾವಳಿಯ ಈ ಕಾಲದಲ್ಲಿ ಕೋಚ್ ಮತ್ತು ನೆರವು ಸಿಬ್ಬಂದಿ ನೇಮಕದಲ್ಲಿಯೂ ಇಂತಹದ್ದೊಂದು ನಿಯಮದ ಅಗತ್ಯ ಎದ್ದು ಕಾಣುತ್ತಿದೆ. ಭಾರತದಲ್ಲಿ ದೇಶಿ ಮತ್ತು ವಯೋಮಿತಿ ಕ್ರಿಕೆಟ್ ಟೂರ್ನಿಗಳು ಕಳೆದೊಂದು ವರ್ಷದಿಂದ ನಡೆಯುತ್ತಿಲ್ಲ. ಆಟಗಾರರಿಗೇನೋ ಬಿಸಿಸಿಐ ಮತ್ತು ರಾಜ್ಯ ಸಂಸ್ಥೆಗಳು ನೆರವು ನೀಡುತ್ತಿವೆ. ಹಲವರು ಕೋವಿಡ್ ಬಿಕ್ಕಟ್ಟಿನಿಂದಾಗಿ ತಮ್ಮ ಅಕಾಡೆಮಿಗಳಿಗೆ ಬೀಗ ಹಾಕಿದ್ದಾರೆ. ಕೋಚಿಂಗ್ ಮತ್ತು ಸಹಾಯಕ ಸಿಬ್ಬಂದಿಯಲ್ಲಿ ಸ್ಥಳೀಯ ಮತ್ತು ಅರ್ಹರಿಗೆ ಅವಕಾಶ ಕೊಡುವತ್ತ ಯೋಚಿಸಬೇಕು. ‘ಇಂಡಿಯನ್’ ಲೀಗ್‌ನಲ್ಲಿ ಭಾರತೀಯರಿಗೇ ಹೆಚ್ಚು ಆದ್ಯತೆ ನೀಡಲು ಫ್ರ್ಯಾಂಚೈಸಿಗಳಿಗೆ ಮೂಗುದಾರ ಹಾಕಲೂ ಇದು ಸಹಕಾರಿ. ಲೀಗ್‌ನಲ್ಲಿ ಲಭಿಸುವ ಅತ್ಯಾಧುನಿಕ ಸೌಲಭ್ಯಗಳ ಅನುಭವವನ್ನು ಈ ಕೋಚ್‌ಗಳು ಮತ್ತೆ ಸ್ಥಳೀಯ ಮಟ್ಟದಲ್ಲಿ ವಿನಿಯೋಗಿಸುವುದರಿಂದ ಮತ್ತಷ್ಟು ಪ್ರತಿಭೆಗಳೂ ಬೆಳೆಯಬಹುದು.

ಭಾರತ ತಂಡಕ್ಕೆ ವಿದೇಶಿ ಕೋಚ್‌ಗಳ ನೇಮಕ ಮಾಡುವಾಗ ವಿರೋಧ ವ್ಯಕ್ತಪಡಿಸುವ ದಿಗ್ಗಜ ಆಟಗಾರರು ಐಪಿಎಲ್ ವಿಷಯದಲ್ಲಿ ಇಷ್ಟು ವರ್ಷಗಳಿಂದ ಸುಮ್ಮನಿರುವುದು ಸೋಜಿಗದ ಸಂಗತಿಯಲ್ಲವೇ?

## ಚುರುಮುರಿ



### ದೇವರೇಗತಿ.ಇನ್

• ಲಿಂಗರಾಜು ಡಿ.ಎಸ್.

**ಮೊನ್ನೆ** ಹೈಕೋರ್ಟು ಈ ದೇಶಾನ ದೇವರೇ ಕಾಯಬೇಕು ಅಂತಂದ್ರ, ಸುಪ್ರೀಂ ಕೋರ್ಟು ಆರೋಗ್ಯ ತುರ್ತುಪರಿಸ್ಥಿತಿ ಬಂದದೆ ಅಂತ ಬೇಜಾರು ಮಾಡಿಕ್ಯಂಡಿತ್ತು. ಕೋವಿಡ್ ಯುದ್ಧದಲ್ಲಿ ರಾಜಾವುಲಿಗೆ ಸಪೋರ್ಟು ಮಾಡುಮಾ ಅಂತ ವಾಯುಮುದ್ರೆ ಹಾಕಿ ‘ಮೋದಿ ನಾಮೋಚ್ಚರಣ ಸಕಲ ರೋಗಃ ನಶ್ಯಂತಿ. ನಮೋ ನಮೋ ಆಕ್ಸಿಜನ್ ದೇಹಿ ದೇಹಿ, ವ್ಯಾಕ್ಸಿನ್ ದೇಹಿ ದೇಹಿ’ ಅಂತ ಮಂತ್ರ ಕೀ ಬಾತ್ ಹೇಳ್ಕೈತಿದ್ದೆ.

ಯಾರೋ ತಿವುದಂಗಾಯ್ತು. ಕಣ್ಬುಟ್ಟು ನೋಡಿದರೆ ಯಮದೂತ! ‘ಯಮಲೋಕಕ್ಕೆ ಜನ ತಕ್ಕೋಗುವಾಗ ನೀನು ಮಾಸ್ಕಾಕ್ಯಂಡೇ ಕಷ್ಟೋತ್ತರ ಮಂತ್ರ ಹೇಳತಿದ್ದಲ್ಲಾ, ಅದುಕ್ಕೇ ಮಾತಾಡಿಸ್ಕೋಗುಮಾ ಅಂತ ಕುಂತೆ’ ಅಂದ.

‘ಏನು ಮಾಡನಣ್ಣೆ, ವ್ಯಾಕ್ಸಿನ್ ಇಲ್ಲ, ಬೆಡ್ ಇಲ್ಲ, ಆಕ್ಸಿಜನ್ ಇಲ್ಲ, ವೆಂಟಿಲೇಟರ್ ಇಲ್ಲ, ಇಂಜೆಕ್ಷನ್ ಇಲ್ಲ. ನಾವು ತಿರುಪೆಯೋರ ಥರ ಆಗಿದೀವಿ. ಹೋದ್ರೋರ್ಸದ ಹಾಸಿಗೆ, ಮಂಚ, ವೆಂಟಿಲೇಟರ್ ಏನಾದ್ರೋ ಕಾಣೆ. ಕಾಸಿದ್ರೆ ಮಾತ್ರ ಸತ್ತೋರಿಗೆ ಕೈಲಾಸ. ಸರ್ಕಾರಗಳು ನಮ್ಮ ಭಂಗಕ್ಕಾಯ್ತಿಲ್ಲ. ವಿರೋಧ ಪಕ್ಷಗಳು ತೌಡು ಕುಟ್ಟುತಾವೆ’.

‘ಮಾಸ್ಕಾಕ್ಕಳಿ, ಕೈತೊಳೀರಿ, ಡಿಸ್ಟೆನ್ಸ್ ಇರಲಿ ಅಂತ ಡಾಕ್ಟ್ರುಗಳು ಬಡಕಂಡ್ರೂ ನೀವು ಬಾಡುಬಳ್ಳೆ, ತರಕಾರಿ ಅಂತ ಅಲೀತಿದ್ದೀರಿ! ನಾಯಕರು ಬೂತುಚೇಷ್ಟೆಯಲ್ಲೇ ಬಿಜಿಯಾಗವ್ರೆ!’ ಅಂದ ಯಮದೂತ.

‘ನಮ್ಮದಿರಲಿ ನೀವೇನು ಓವರ್ ಟೈಂ ಮಾಡ್ತಿದ್ದರಿಯಾ?’ ವಿಚಾರಿಸಿದೆ.

‘ನಮ್ಮ ಸಯಾಬ್ರು ಎಕ್ಸ್‌ಪೈರಿ ಡೇಟ್ ಆಗಿರೋರ ಲಿಸ್ಟ್ ಕೊಟ್ಟವ್ರೆ. ಮಾಸ್ಕಾಕಿಕೊಂಡೋರ ಮಧ್ಯೆ ಎಕ್ಸ್‌ಪೈರಿ ಡೇಟ್ ಆಗಿರೋರ ಗುರುತೇ ಸಿಕ್ತಿಲ್ಲ ಅನ್ನದೇ ಪ್ರಾಬ್ಲಮ್ಮು ಕನೋ!’ ಅಂದ ದೂತಣ್ಣ.

‘ಅದುಕ್ಕೇನು ಮಾಡಿಯೇ?’

‘ಮಾಡದೇನು? ಮಾಸ್ಕಾಕದೇ ಬೀದೀಲಿ ಸುತ್ತೋರ್‍ನ ಹಿಡಕಬಂದು ಬೊಂಬುಲೆನ್ಸಿಗೆ ಹಾಕ್ಯಂಡಿವನಿ. ಜನ ಬುದ್ಧಿ ಕಲೀದಿದ್ರೆ ನಾನೇ ಫೀಲ್ಡಿಗೆ ಬತ್ತಿನಿ ಅಂತ ನಮ್ಮ ಸಾಯಬ್ರು ಏಳ್ಯವರೆ!’ ಅಂತ ದೂತಣ್ಣ ಫೈನಲ್ ನೋಟಿಸ್ ಕೊಟ್ಟು ಕಡದೋದ.

## ಸಂಗತ

# ಕೊರೊನಾ ‘ಮಸೂರ’ದಲ್ಲಿ ಕಾಣದ ಮೌಲ್ಯ

### ಹಣದ ಹಪಹಪಿಯಲ್ಲಿ ಮರೆಯಾಗಿದೆ ಮಾನವೀಯ ಗುಣ

• ದೊಡ್ಡರಂಗೇಗೌಡ

**ಕೊರೊನಾದ** ಇಂದಿನ ವಿಷಮ ಸಂದರ್ಭ ಕುರಿತು ನಿತ್ಯ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ವಿವಿಧ ವಾಹಿನಿಗಳಲ್ಲಿ ಕಣ್ಣಾರೆ ನೋಡುತ್ತಿದ್ದೇವೆ.

ಆತ್ಮೀಯರು ತೀರಿ ಹೋಗಿದ್ದಾರೆ. ಅವರ ಅಂತ್ಯಸಂಸ್ಕಾರ ಮಾಡಬೇಕಾಗಿದೆ. ಅಂಥ ವಿಷ ಗಳಿಗೆಯಲ್ಲೂ ಆಂಬುಲೆನ್ಸ್ ಚಾಲಕ, ತನಗೆ ಸರ್ಕಾರ ಸಂಬಳವನ್ನು ಕೊಡುತ್ತಿದ್ದರೂ ಇಷ್ಟೇ ಕೊಡಬೇಕೆಂದು ಲಂಚಕ್ಕಾಗಿ ಡಿಮ್ಯಾಂಡ್ ಮಾಡುತ್ತಿದ್ದಾನೆ. ನಿಷ್ಕರುಣಿ. ಬಡವರು ತಮ್ಮ ಆಪ್ತರನ್ನು ಕಳೆದುಕೊಂಡು ಒಂದೇ ಸಮನೆ ಗೋಳಿಡುತ್ತಿದ್ದಾರೆ. ಈ ಕಟುಕರಿಗೆ ಒಂದಿಷ್ಟೂ ಕನಿಕರವಿಲ್ಲ. ತಮ್ಮ ಕರ್ತವ್ಯವನ್ನು ತಾವು ಮಾಡಲು ದುಬಾರಿ ದುಡ್ಡಿಗಾಗಿ ಪೀಡಿಸುತ್ತಿದ್ದಾರೆ. ಮೌಲ್ಯಗಳಿವೆಯೇನು?

ಕೆಲವು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಖಾಲಿ ಬೆಡ್‌ಗಳಿಲ್ಲ ಎಂದು ಸುಳ್ಳು ಹೇಳುತ್ತಿವೆ. ಕಾಳಸಂತೆಯಲ್ಲಿ ವ್ಯಾಕ್ಸಿನ್ ಮಾರಾಟವಾಗುತ್ತಿದೆ. ಟ್ಯಾಕ್ಸಿಯವನು ಇದೇ ಸರಿಯಾದ ಸಮಯ ಎಂದು ದುಪ್ಪಟ್ಟು ಕೇಳುತ್ತಿದ್ದಾನೆ. ಆಟೊದವನೂ ಕಡಿಮೆಯೇನಿಲ್ಲ. ಒಂದಕ್ಕೆ ಮೂರರಷ್ಟು! ಸುಲಿಗೆ ಎಂಬ ಯಾಗ ನಡೆಯುತ್ತಿದೆ. ಎಲ್ಲೆಡೆ ಇದೇ ರಾಗ... ಮೋಸ... ವಂಚನೆ... ಮುಗ್ಧ ಕಪ್ಪೆಗಳು ಕಾಳಸರ್ಪದ ಹೆಡೆಯ ಕೆಳಗೆ ಕುಳಿತು ಆಶ್ರಯ ಬೇಡುತ್ತಿವೆ. ಮಂತ್ರಿಮಹೋದಯರಿಗೆ ಕಣ್ಣಿಲ್ಲ. ಪಾಪ! ಜಾಣ ಕುರುಡು, ಜಾಣ ಕಿವುಡು. ಬೆಕ್ಕುಗಳು ಕಣ್ಮುಚ್ಚಿ ಹಾಲು ಕುಡಿಯುತ್ತಿವೆ.

ಈ ಒಂದು ವರ್ಷದಲ್ಲಿ ಒಂದು ದಿನವೂ ಶಾಲೆ ನಡೆಯದ ಇಬ್ಬಂದಿ ದಿನಗಳು ಹಾದುಹೋಗಿವೆ. ಪಾಠ ಹೇಳದಿದ್ದರೂ ಪೋಷಕರಿಂದ ಫೀಸುಗಳನ್ನು ವಸೂಲಿ ಮಾಡಿದರು. ತಾವು ದುಡ್ಡು ತೆಗೆದುಕೊಂಡದ್ದನ್ನು ಕೆಲವರು ಸಮರ್ಥಿಸಿಕೊಂಡರು. ‘ನಾವು ಶಾಲೆಯನ್ನು ನಡೆಸಬೇಕಲ್ಲವಾ’ ಎಂದು ಪ್ರಶ್ನಿಸಿದರು. ಶಾಲೆಗಳು ನಡೆಯೋದೇನು ಬಂತು? ನಿಂತಲ್ಲೇ ನಿಂತಿವೆ! ನಿಜಕ್ಕೂ ಕೂತಲ್ಲೇ ಕೂತಿವೆ. ಕೆಲಸ ಮಾಡದೆ ಈಗ ಎಲ್ಲರಿಗೂ ಬೇಕು ಬಿಟ್ಟಿ ಕಮಾಯಿ. ಬಡಪಾಯಿ ಸಹೃದಯಿ ಮೌನವಾಗಿ ಎಲ್ಲವನ್ನೂ ನೋಡುತ್ತಿದ್ದಾನೆ. ಕಣ್ಣೆದುರೇ ಅಕ್ರಮ, ಅನ್ಯಾಯ, ಲೂಟಿ, ಅಸತ್ಯ, ಅಧರ್ಮ ನಿರಾತಂಕ ಸಾಗಿದೆ. ಹಾಗಾದರೆ ಇನ್ನೂ ನಮ್ಮ ಸಮಾಜದಲ್ಲಿ ಮೌಲ್ಯಗಳಿವೆಯೇನು?

ರಾಜಕಾರಣಿಗಳು ಗದ್ದುಗೆಗೆ ಫೆವಿಕಾಲ್ ಹಾಕಿ ಅಂಟಿಸಿಕೊಂಡು ಕೂತಿದ್ದಾರೆ. ಅವರು ಹೇಳಿದ್ದೇ ಸತ್ಯ. ಅವರ ಪಾಲಿಗೆ ಎಲ್ಲ ಮಾಧ್ಯಮಗಳೂ ಸುಳ್ಳು ಹೇಳುತ್ತಿವೆ, ತಪ್ಪು ಅಂಕಿ ಅಂಶಗಳನ್ನು ನೀಡುತ್ತಿವೆ. ಇವು ಅವರ ಆಪಾದನೆ ಪಟ್ಟಿ. ಅವರು ಮಾತ್ರ ಸತ್ಯವಂತರು, ಅವರು ಮಾತ್ರ ದೇಶಪ್ರೇಮಿಗಳು.

ಮೌಲ್ಯಗಳು ಇದ್ದಿದ್ದರೆ– ಎಲ್ಲಿರುತ್ತಿತ್ತು ಲಂಚ? ಎಲ್ಲಿರುತ್ತಿತ್ತು ಕಲಬೆರಕೆ? ಎಲ್ಲಿ ಇರುತ್ತಿತ್ತು ಸ್ವಾಮಿ ತಾವೇ ಹುಟ್ಟು ಹಾಕಿದ ಅಂಕಿ ಅಂಶಗಳು? ಬೇಲಿಯೇ ಎದ್ದು ಹೊಲ ಮೇಯುತ್ತಿದೆ, ಜನಸಾಮಾನ್ಯರು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದಾರೆ.

ಇಷ್ಟೆಲ್ಲಾ ಆಗುತ್ತಿರುವುದೇ ಮಾನವನ ಅತಿಯಾದ ದುರಾಸೆಯಿಂದ. ಹಣ! ಹಣ! ಹಣ! ಎಲ್ಲಿ ಹೋಯಿತು ಮಾನವೀಯ ಗುಣ? ಅಂಗಡಿಯ ವರ್ತಕ ರಸೀದಿ ನೀಡುವುದಿಲ್ಲ. ಹೇಳುವುದು ಒಂದು ಮಾಡುವುದು ಮತ್ತೊಂದು. ತಮ್ಮನು ಅಣ್ಣನನ್ನು ಕೊಲ್ಲುತ್ತಾನೆ. ಇದೆಯೇ ಮೌಲ್ಯ ಸಮಾಜದಲ್ಲಿ? ಹೆಂಡತಿ ಅನ್ನುವವಳು ಗಂಡನಿಗೆ ಪ್ರಿಯಕರನ ಸಲುವಾಗಿ ಸುಪಾರಿ ಕೊಡುತ್ತಾಳೆ. ಇದೇ ಏನು ಮೌಲ್ಯ ಎಂದರೆ?

ಮಹಾವೀರ ಜಯಂತಿ ದಿನವೂ ಮಾಂಸದ ಅಂಗಡಿಗಳ ಮುಂದೆ ನೂಕು ನುಗ್ಗಲು. ಏನಾಯಿತು ಸರ್ಕಾರದ ಆಜ್ಞೆ? ಇಂಥವುಗಳನ್ನು ಸಾವಿರ ಪಟ್ಟಿ ಮಾಡಬಹುದು.

ಅಪಮೌಲ್ಯ ಎಂಬುದು ಈಗಿನವರಿಗೆ ಅಫೀಮು! ಅನೀತಿ ತಾಂಡವವಾಡುತ್ತಿದೆ. ಅಸತ್ಯ ಎಂಬುದು ಹಿಮಾಲಯದ ಬೆಳ್ಳಿಬೆಟ್ಟದಷ್ಟು ಎತ್ತರ ಬೆಳೆದಿದೆ. ಅಧರ್ಮವು ಗಂಗಾ, ಕಾವೇರಿ ನದಿಗಳಂತೆ ನಿರಂತರ ಹರಿಯುತ್ತಲೇ ಇದೆ. ಅನ್ಯಾಯಗಳು ಮಾಮೂಲಾಗಿವೆ.

ಬೇಕಾಗಿಲ್ಲ ಇಂದಿನವರಿಗೆ ಸತ್ಪಥ. ಬೇಡವೇ ಬೇಡ ಯುವಜನರಿಗೆ ಸನ್ಮಾರ್ಗ. ಯಾಕೆ ಬೇಕು ಜೀವಸತ್ವ, ಉಪ್ಪು, ಹುಳಿ ಖಾರ ಇಲ್ಲದ ಸಲ್ಲಾಪ? ಇದನ್ನೆಲ್ಲಾ ನೋಡುತ್ತಿದ್ದರೆ– ಈಗ ವಿಶ್ವದಲ್ಲಿ ನಾವು ಉತ್ಪಾತದ ಅಂಚಿಗೆ ಬಂದು ನಿಂತಿದ್ದೇವೆ. ಮುಂದಡಿ ಇಟ್ಟರೆ ಪ್ರಪಾತ. ಕೊಲೆರೆಡೋ ಕಮರಿಯನ್ನೂ ಮೀರಿಸಿದ್ದು. ಈ ದುರಂತ ತಪ್ಪಿಸುವವರು ಯಾರು?

*ಲೇಖಕ: 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ*

### ಸಿದ್ಧತೆ ಬಿರುಸಾಗಲಿ

**ಕೋವಿಡ್** ಎರಡನೇ ಅಲೆ ತೀವ್ರವಾಗಿ ಉಲ್ಬಣಗೊಳ್ಳುತ್ತದೆ ಎಂದು ತಜ್ಞರು ಈ ಮೊದಲೇ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಎಚ್ಚರಿಸಿದ್ದರು. ಆದರೂ ಪೂರ್ವಸಿದ್ಧತೆಯತ್ತ ಗಮನಹರಿಸದೇ ಇದ್ದುದರಿಂದ ಸರ್ಕಾರಗಳಿಗೆ ಈಗ ದಿಕ್ಕು ತೋಚದಂತಾಗಿದೆ. ಕೇಂದ್ರ ಸರ್ಕಾರ ಈಗಲಾದರೂ ಎಚ್ಚೆತ್ತು ಪಿಎಮ್ ಕೇರ್ಸ್ ನಿಧಿಯಿಂದ ದೇಶದಾದ್ಯಂತ 551 ಆಮ್ಲಜನಕ ಘಟಕಗಳನ್ನು ಸ್ಥಾಪಿಸಲು ಮುಂದಾಗಿರುವುದು ಸ್ವಾಗತಾರ್ಹ.

‘ವಾಸ್ತವ ಸತ್ಯ’ ಹೇಳಿದ ತಜ್ಞರ ಮಾಹಿತಿಯನ್ನು ಮಿಥ್ಯ ಎಂದು ಭಾವಿಸಿದ ಸರ್ಕಾರಗಳು ‘ವ್ಯಾವಹಾರಿಕ ಸತ್ಯ’ವಾದ ರಾಜಕೀಯ ನಿರ್ಣಯಗಳಿಗೆ ಜೋತುಬಿದ್ದ ಪರಿಣಾಮವಾಗಿ, ಕೊರೊನಾ ಸೋಂಕು ಇಷ್ಟರ ಮಟ್ಟಿಗೆ ಉಲ್ಬಣಿಸುವಂತೆ ಆಗಿದೆ. ಸರ್ಕಾರಗಳು ಕೋವಿಡ್ ಸಂಹಾರಕ್ಕೆ ಬೇಕಾದ ಸಿದ್ಧತೆಗಳಿಗೆ ತಕ್ಷಣದಿಂದಲೇ ಬಿರುಸು ತುಂಬಬೇಕು. ಪ್ರಾಮಾಣಿಕ, ಸಕಾಲಿಕ ನಡೆ– ನಿಲುವುಗಳಿಂದ ದೇಶವನ್ನು ಕೋವಿಡ್‌ನಿಂದ ರಕ್ಷಿಸುವಂತಾಗಲಿ.

**ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ**, ಮೈಸೂರು

## ವಾಚಕರ ವಾಣಿ

### ಚುನಾವಣೆ ಮುಂದೂಡಿಕೆ: ಸೂಕ್ತ ನಿರ್ಧಾರ

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆ ಮುಂದೂಡುವುದು ಸರಿಯಲ್ಲ ಎಂದು ಆರ್.ಜಿ. ಹಳ್ಳಿ ನಾಗರಾಜ ಹೇಳಿದ್ದಾರೆ (ವಾ.ವಾ., ಏ. 26). ಆದರೆ ಪರಿಷತ್ತಿಗೆ ಮೇ 9ರಂದು ನಿಗದಿಯಾಗಿದ್ದ ಚುನಾವಣೆಯನ್ನು ಕೋವಿಡ್ ಸೋಂಕಿನ ಕಾರಣದಿಂದ ಸರ್ಕಾರವು ಮುಂದೂಡಿರುವುದು ಸರಿಯಾಗಿದೆ. ಇಂತಹ ಸಂಕಷ್ಟದ ಸಮಯದಲ್ಲಿ ಯಾವುದೇ ಚುನಾವಣೆ ನಡೆಸುವುದು ಸೂಕ್ತವಲ್ಲ. ಜನರ ಜೀವಕ್ಕಿಂತ ಚುನಾವಣೆ ಮುಖ್ಯವಲ್ಲ. ಚುನಾವಣೆಯನ್ನು ಕೆಲವು ತಿಂಗಳುಗಳ ಕಾಲ ಮುಂದೂಡುವುದರಿಂದ ಹಲವಾರು ಜೀವಗಳನ್ನು ಉಳಿಸಬಹುದು. ಜನರ ಅಮೂಲ್ಯ ಜೀವಕ್ಕಿಂತ ಯಾವುದೇ ಚುನಾವಣೆ ಮುಖ್ಯವಲ್ಲ.

ಅಭ್ಯರ್ಥಿಗಳು ಹಾಗೂ ಅವರ ಬೆಂಬಲಿಗರು ಮಾನಸಿಕ ಒತ್ತಡದಿಂದಾಗಿ ಕೋವಿಡ್ ಮುಂಜಾಗ್ರತಾ ನಿಯಮಗಳನ್ನು ಗಾಳಿಗೆ ತೂರಿ ಕೆಲಸ ಮಾಡುವ ಸಾಧ್ಯತೆಯೇ ಹೆಚ್ಚಾಗಿ ಇರುತ್ತಿತ್ತು. ಹಾಗಾಗಿದ್ದರೆ ಸೋಂಕು ಇನ್ನಷ್ಟು ವ್ಯಾಪಕವಾಗಲು ಅವಕಾಶವಾಗುತ್ತಿತ್ತು. ಈಗಾಗಲೇ ಸಾಂಸ್ಕೃತಿಕ ಕ್ಷೇತ್ರದ ಹಲವಾರು ಹಿರಿಕಿರಿಯರನ್ನು ಕೋವಿಡ್‌ನಿಂದಾಗಿ ಕಳೆದುಕೊಂಡಿದ್ದೇವೆ. ಚುನಾವಣೆಯಿಂದ ಇನ್ನಷ್ಟು ಜನರನ್ನು ಕಳೆದುಕೊಳ್ಳುವುದು ಬೇಡ.

**ಟಿ.ಸುರೇಂದ್ರ ರಾವ್**, ಬೆಂಗಳೂರು

### ವಾಣಿಜ್ಯ ಉದ್ದೇಶದ ವಾದ ಸರಣಿ?

ತಿರುಮಲ ತಿರುಪತಿ ದೇವಸ್ಥಾನಂ ಟ್ರಸ್ಟ್ ಇತ್ತೀಚೆಗೆ ಪ್ರಾರಂಭಿಸಿದ ಹನುಮನ ಜನ್ಮಸ್ಥಳ ಕುರಿತಾದ ಚರ್ಚೆ ಈಗ ಬಿರುಸಾಗಿದೆ. ಭಾರತದ ಮಹಾಕಾವ್ಯ ರಾಮಾಯಣದ ಒಂದು ಪಾತ್ರವಾದ ಹನುಮಂತನು ಪುರಾಣ ಪುರುಷನೇ ವಿನಾ ಇತಿಹಾಸ ಪುರುಷನಲ್ಲ. ಹಾಗಾಗಿ ಆತನ ಜನ್ಮಸ್ಥಳ ಕುರಿತಾದ ಚರ್ಚೆ ಅಪ್ರಸ್ತುತ ಹಾಗೂ ಅನವಶ್ಯಕ. ಆದರೆ ಧಾರ್ಮಿಕ ನಂಬಿಕೆಯಿಂದಾಗಿ ಜನಸಾಮಾನ್ಯರ ಹೃದಯದಲ್ಲಿ ನೆಲೆಸಿರುವ ಹನುಮಂತ ‘ಇಲ್ಲೇ’ ಹುಟ್ಟಿದ್ದೆಂದು ಹೇಗಾದರೂ ನಿರೂಪಿಸಿದರೆ, ಆ ಸ್ಥಳ ಶ್ರದ್ಧಾ ಕೇಂದ್ರವಾಗಿ, ಪ್ರವಾಸಿ ತಾಣವಾಗಿ ಕೋಟ್ಯಂತರ ರೂಪಾಯಿ ಆದಾಯದ ಮೂಲವಾಗುವುದರಿಂದ ಇಂತಹ ಚರ್ಚೆಯನ್ನು ಉದ್ದೇಶಪೂರ್ವಕವಾಗಿ ಹುಟ್ಟುಹಾಕಲಾಗಿದೆ ಎನಿಸುತ್ತದೆ. ಹೀಗಾಗಿ ಇಂತಹ ಚರ್ಚೆಗೆ ಹೆಚ್ಚು ಪ್ರಾಮುಖ್ಯ ಕೊಡುವ ಅವಶ್ಯಕತೆ ಇಲ್ಲ.

**ನಂದಕುಮಾರ್ ಎಚ್.ಎಸ್.**, ಮಂಗಳೂರು

### ವೈದ್ಯರ ನೇಮಕಾತಿ: ಅಂಗವಿಕಲರ ನಿರ್ಲಕ್ಷ್ಯ ಸಲ್ಲ

ಕೋವಿಡ್ ನಿಯಂತ್ರಣಕ್ಕಾಗಿ ಹೆಚ್ಚಿನ ವೈದ್ಯರ ಅವಶ್ಯಕತೆ ಎದುರಾಗಿರುವುದರಿಂದ, ಬೃಹತ್ ಬೆಂಗಳೂರು ಮಹಾನಗರಪಾಲಿಕೆಯು (ಬಿಬಿಎಂಪಿ) 6 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ವೈದ್ಯರ ನೇಮಕಾತಿ ಮಾಡಿಕೊಳ್ಳುತ್ತಿದೆ. ಆದರೆ ಈ ನೇಮಕಾತಿಯಲ್ಲಿ ಅಂಗವಿಕಲರಿಗೆ ಯಾವುದೇ ಮೀಸಲಾತಿ ಕಲ್ಪಿಸಿಲ್ಲ. ಅಂಗವಿಕಲ ವೈದ್ಯರು ನಿರ್ವಹಿಸುವಂತಹ ಕಾರ್ಯಗಳಲ್ಲಿ ಸಾಮಾನ್ಯ ವೈದ್ಯರನ್ನು ನೇಮಕ ಮಾಡಿ, ಅರ್ಹ ಅಂಗವಿಕಲ ವೈದ್ಯರನ್ನು ವಂಚಿಸಿರುವುದು ಅಂಗವಿಕಲರ ಹಕ್ಕುಗಳ ಕಾಯ್ದೆ– 2016ರ ಸ್ಪಷ್ಟ ಉಲ್ಲಂಘನೆಯಾಗಿದೆ.

ಅಂಗವಿಕಲ ವೈದ್ಯರು ಫೀವರ್ ಕ್ಲಿನಿಕ್‌ಗಳು ಮತ್ತು ಕೋವಿಡ್ ವಾರ್‌ರೂಮ್‌ಗಳಲ್ಲಿ ನಿರಾಯಾಸವಾಗಿ ಕರ್ತವ್ಯ ನಿರ್ವಹಿಸಬಲ್ಲರು. ಅಲ್ಲದೆ ಅಂಗವೈಕಲ್ಯದ ಪ್ರಮಾಣ ಕಡಿಮೆ ಇರುವ ವೈದ್ಯರು ಸಾಮಾನ್ಯ ವೈದ್ಯರಂತೆ ಎಲ್ಲಾ ರೀತಿಯ ಕರ್ತವ್ಯಗಳನ್ನೂ ನಿರ್ವಹಿಸಬಲ್ಲರು. ಅರ್ಹ ಅಂಗವಿಕಲರಿಗೆ ಅವರ ಪದವಿಗನುಗುಣವಾಗಿ ಉದ್ಯೋಗ ಒದಗಿಸಿ ಕೊಡುವುದು ಸರ್ಕಾರದ ಜವಾಬ್ದಾರಿ. ಅಂಗವಿಕಲರ ಹೆಸರಿನಲ್ಲಿ ಶೇ 5ರಷ್ಟು ಉದ್ಯೋಗ ಮೀಸಲಾತಿಯನ್ನು ಕಾಗದದಲ್ಲಷ್ಟೇ ಇಟ್ಟರೆ ಸಾಲದು, ಅದು ಅನುಷ್ಠಾನಕ್ಕೆ ಬರಬೇಕು.

**ಚಂದ್ರಶೇಖರ ಪುಟ್ಟಪ್ಪ**, ಬೆಂಗಳೂರು

### ನಾಯಕರ ಬಲಿಷ್ಠ ಕೋಟೆ

‘ಮತ್ತೆ ಮತ್ತೆ ನೆನಪಾಗುವ ನೀರೊ’ ಎಂಬ ಎ.ನಾರಾಯಣ ಅವರ ಲೇಖನಕ್ಕೆ (ಪ್ರ.ವಾ., ಏ. 24) ಸಂಬಂಧಿಸಿದಂತೆ ಒಂದು ಪೂರಕ ಪ್ರತಿಕ್ರಿಯೆ: ಕೊರೊನಾದಿಂದ ಆಗುತ್ತಿರುವ ಅನಾಹುತಗಳಿಂದ ಬೇಸರಗೊಂಡು ಗೆಳೆಯರ ವಾಟ್ಸ್‌ಆ್ಯಪ್ ಗುಂಪಿನಲ್ಲೊಂದು ಸಂದೇಶ ಹಾಕಿದೆ: ‘ಕಳೆದ ವರ್ಷದ ಅನಾಹುತದಿಂದ ನಾವು ಯಾವ ಪಾಠವನ್ನೂ ಕಲಿಯಲಿಲ್ಲ. ಕಳೆದೊಂದು ವರ್ಷದಲ್ಲಿ ಆರೋಗ್ಯ ಕ್ಷೇತ್ರದ ಮೂಲ ಸೌಕರ್ಯದಲ್ಲಿ ಯಾವುದೇ ಮಹತ್ತರವಾದ ಬದಲಾವಣೆ ಆಗಿಲ್ಲ’. ತಕ್ಷಣವೇ ಸ್ನೇಹಿತನೊಬ್ಬನಿಂದ ಉತ್ತರ ಬಂತು: ‘ಕಳೆದ ಎಪ್ಪತ್ತು ವರ್ಷಗಳಿಂದ ಏನು ಮಾಡುತ್ತಿದ್ದರು? ಈ ಮೀಸಲಾತಿಯಿಂದ ಏನೂ ಮಾಡಲು ಸಾಧ್ಯವಾಗುವುದಿಲ್ಲ’.

ವಿತಂಡವಾದವೆನಿಸಿದರೂ ಉತ್ತರಿಸಿದೆ: ‘ಪದವಿ ಪರೀಕ್ಷೆಯಲ್ಲಿ ಫೇಲಾದರೆ ಪದವಿ ಪರೀಕ್ಷೆಯ ತಯಾರಿ ಸರಿಯಾಗಿ ಮಾಡಲಿಲ್ಲವೆಂದು ಹೇಳಬೇಕೇ ಹೊರತು, ಪ್ರಾಥಮಿಕ ಶಾಲೆಯಲ್ಲಿ ಸರಿಯಾಗಿ ಓದಲಿಲ್ಲ ಎಂದಲ್ಲ’. ಮತ್ತೊಮ್ಮೆ ಉತ್ತರ ಬಂತು: ‘ಪ್ರಾಥಮಿಕ ಶಾಲೆಯಲ್ಲಿ ಸರಿಯಾಗಿ ಓದದಿದ್ದರೆ, ಪದವಿ ಓದಲು ನಾಲಾಯಕ್ಕು’. ಪ್ರಾಥಮಿಕ ಶಾಲೆಯಲ್ಲಿ ಸರಿಯಾಗಿ ಓದದೇ ಇದ್ದರೂ ಮುಂದೆ ಚೆನ್ನಾಗಿ ಓದಿ ಅಗಾಧವಾದುದನ್ನು ಸಾಧಿಸಿರುವವರು ಬೇಕಷ್ಟು ಮಂದಿ ಇರುವರೆಂದು ಹೇಳಿ ಸುಮ್ಮನಾದೆ.

ಈ ಘಟನೆಯ ಹಿನ್ನೆಲೆಯಲ್ಲಿ ಉಲ್ಲೇಖಿತ ಲೇಖನ ಓದಿದಾಗ ಅನ್ನಿಸಿತು: ‘ಪ್ರಾಯಶಃ ನಾಯಕನೊಬ್ಬ ಕಟ್ಟಬಹುದಾದ ಅತ್ಯಂತ ಬಲಿಷ್ಠ ಕೋಟೆಯೆಂದರೆ ಆತನ ಅಂಧ ಅನುಯಾಯಿಗಳು’.

**ಮಂಜುನಾಥ ಎಸ್.ಎಸ್.**, ಬೆಂಗಳೂರು

### ಕಾಲಕ್ಕೆ ತಕ್ಕಂತೆ...

ವಿದ್ಯಾರ್ಥಿಯಾಗಿದ್ದಾಗ...
ಹೆತ್ತವರಿಗಾಗಿ
‘ಮಾರ್ಕ್ಸ್‌ಂಡೇಯ’ನಾಗಿದ್ದೆ,
ವೃತ್ತಿಯಲ್ಲಿದ್ದಾಗ...
ಮೇಲಿನವರಿಗಾಗಿ
‘ಟಾಸ್ಕಂಡೇಯ’ನಾಗಿದ್ದೆ,
ಈಗಿನ ನಿವೃತ್ತ ಜೀವನದಲ್ಲಿ
ಎಲ್ಲರ ಹಿತಕ್ಕಾಗಿ
‘ಮಾಸ್ಕಂಡೇಯ’ನಾಗಿದ್ದೇನೆ!

**ವಿ.ವಿಜಯೇಂದ್ರ ರಾವ್**
ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers ( Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪಿಎಂ–ಕೇರ್ಸ್ ಅನುದಾನದಲ್ಲಿ 162 ಆಮ್ಲಜನಕ ತಯಾರಿಕಾ ಘಟಕ ಸ್ಥಾಪನೆ ಯೋಜನೆ

# ಜಾರಿಗೆ ನಿರ್ಲಕ್ಷ್ಯ: ಸಮಸ್ಯೆ ಉಲ್ಬಣ

• ಜಯಸಿಂಹ ಆರ್.

ಕೇಂದ್ರ ಆರೋಗ್ಯ ಸಚಿವಾಲಯದ ಅಧೀನ ಸಂಸ್ಥೆ 'ಕೇಂದ್ರೀಯ ವೈದ್ಯಕೀಯ ಸೇವಾ ಸೊಸೈಟಿ' ಈ ಯೋಜನೆಯ ಅನುಷ್ಠಾನದ ನೋಡಲ್ ಏಜೆನ್ಸಿಯಾಗಿದೆ

ಈ ಎಲ್ಲಾ ಘಟಕಗಳ ಸ್ಥಾಪನೆಯ ಮೇಲ್ವಿಚಾರಣೆಯನ್ನು ಈ ಸಂಸ್ಥೆಯೇ ನೋಡಿಕೊಳ್ಳಲಿದೆ

ಯೋಜನೆ ಅಡಿ ಈ ಘಟಕಗಳನ್ನು ಸ್ಥಾಪಿಸಲಾಗುತ್ತದೆ ಮತ್ತು ಏಳು ವರ್ಷಗಳವರೆಗೆ ದುರಸ್ತಿ ಮತ್ತು ಸೇವೆಯ ಜವಾಬ್ದಾರಿ ಈ ಸಂಸ್ಥೆಯದ್ದೇ ಆಗಿರುತ್ತದೆ

ಈ ಘಟಕಗಳಿಗೆ ಅಗತ್ಯವಾದ ಷೆಡ್, ವಿದ್ಯುತ್ ಮತ್ತು ನಿರ್ವಹಣಾ ಸಿಬ್ಬಂದಿ ಒದಗಿಸುವುದು ಆಯಾ ಆಸ್ಪತ್ರೆಯ ಹೊಣೆ

**₹201.5 ಕೋಟಿ** ಯೋಜನೆಯ ಒಟ್ಟು ವೆಚ್ಚ

ದೇಶದಲ್ಲಿ ಆಮ್ಲಜನಕದ ಕೊರತೆಯನ್ನು ಕಡಿಮೆ ಮಾಡಲು ಕೇಂದ್ರ ಸರ್ಕಾರವು, ದೇಶದ ವಿವಿಧೆಡೆ 162 ಪ್ರೆಷರ್ ಸ್ವಿಂಗ್ ಅಡ್ಸಾರ್ಪ್ಶನ್ (ಪಿಎಸ್ಎ) ಆಮ್ಲಜನಕ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಯೋಜನೆ ಹಾಕಿಕೊಂಡಿತ್ತು. ಇದಕ್ಕಾಗಿ 2020ರ ಅಕ್ಟೋಬರ್ 21ರಂದು ಟೆಂಡರ್ ಕರೆಯಲಾಗಿತ್ತು (ಟೆಂಡರ್ ಸಂಖ್ಯೆ: CMSS/ PROC/ 2020-21/PSA PLANT/ 018 ). 2020ರ ನವೆಂಬರ್ 11ರಂದು ಟೆಂಡರ್ ಅಂತಿಮವಾಗಿತ್ತು.

ಬಿಡ್ಡಿಂಗ್‌ನಲ್ಲಿ ಆಯ್ಕೆ ಆದವರಿಗೆ 2020ರ ಡಿಸೆಂಬರ್ 12ರಂದು ಯೋಜನೆ ಅನುಷ್ಠಾನದ ಗುತ್ತಿಗೆ ನೀಡಲಾಗಿತ್ತು. ಕಾಮಗಾರಿಗೆ ಲೆಟರ್ ಆಫ್ ಕ್ರೆಡಿಟ್ ನೀಡಿ 45 ದಿನಗಳ ಒಳಗೆ ಈ ಘಟಕಗಳನ್ನು ಸ್ಥಾಪಿಸಬೇಕು ಎಂದು ಟೆಂಡರ್‌ನಲ್ಲಿ ಷರತ್ತು ವಿಧಿಸಲಾಗಿತ್ತು. ಆದರೆ 2021ರ ಏಪ್ರಿಲ್ 18ರ ವೇಳೆಗೆ ಇಂತಹ 33 ಘಟಕಗಳನ್ನಷ್ಟೇ ಸ್ಥಾಪಿಸಲಾಗಿತ್ತು. ಅಂದರೆ, ಗುತ್ತಿಗೆ ನೀಡಿ ಐದು ತಿಂಗಳು ಕಳೆದರೂ ಯೋಜನೆ ಶೇ 20ರಷ್ಟು ಮಾತ್ರ ಅನುಷ್ಠಾನವಾಗಿದೆ.

ಆಮ್ಲಜನಕ ಕೊರತೆ ಸಂಬಂಧ ದೆಹಲಿ ಹೈಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ವೇಳೆ ಕೇಂದ್ರ ಆರೋಗ್ಯ ಸಚಿವಾಲಯವು ಯೋಜನೆ ಅನುಷ್ಠಾನದ ಬಗ್ಗೆ ಮಾಹಿತಿ ನೀಡಿದೆ. 'ಈಗಾಗಲೇ 33 ಘಟಕಗಳನ್ನು ಸ್ಥಾಪಿಸಲಾಗಿದೆ. ಏಪ್ರಿಲ್ ಅಂತ್ಯಕ್ಕೆ ಇನ್ನೂ 59 ಘಟಕಗಳು ಮತ್ತು ಮೇ ಅಂತ್ಯಕ್ಕೆ ಉಳಿದ 80 ಘಟಕಗಳು ಸ್ಥಾಪನೆಯಾಗಲಿವೆ. ದೆಹಲಿಗೆ 8 ಘಟಕಗಳನ್ನು ಹಂಚಿಕೆ ಮಾಡಲಾಗಿದೆ. ಅದರಲ್ಲಿ ಒಂದು ಘಟಕವನ್ನು ಸ್ಥಾಪಿಸಲಾಗಿದೆ' ಎಂದು ಸಚಿವಾಲಯವು ಹೈಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತ್ತು.

ಆದರೆ ಈಗಾಗಲೇ ಸ್ಥಾಪನೆಯಾಗಿರುವ 33 ಘಟಕಗಳಲ್ಲಿ ಎಷ್ಟು ಘಟಕಗಳು ಕಾರ್ಯನಿರ್ವಹಿಸುತ್ತಿವೆ ಎಂಬುದರ ಬಗ್ಗೆ ಆರೋಗ್ಯ ಸಚಿವಾಲಯವು, ಹೈಕೋರ್ಟ್‌ಗೆ ಯಾವುದೇ ಮಾಹಿತಿ ನೀಡಿಲ್ಲ.

ಈಗ ಕೇಂದ್ರ ಸರ್ಕಾರವು ಇಂತಹ ಇನ್ನೂ 551 ಘಟಕಗಳನ್ನು 'ಪಿಎಂಕೇರ್ಸ್' ಅಡಿ ಸ್ಥಾಪಿಸುವುದಾಗಿ ಘೋಷಿಸಿದೆ. ಈ ಹೊಸ ಕಾರ್ಯಕ್ರಮಕ್ಕೆ ಸಂಬಂಧಿಸಿದ ಮಾಹಿತಿ ಇನ್ನಷ್ಟೇ ಲಭ್ಯವಾಗಬೇಕಿದೆ.

## ಕರ್ನಾಟಕಕ್ಕೆ ಎಷ್ಟು ಎಂಬ ಗೊಂದಲ

162 ಘಟಕಗಳನ್ನು ಸ್ಥಾಪಿಸುವ ಈ ಯೋಜನೆ ಅಡಿ, ಕರ್ನಾಟಕಕ್ಕೆ ಒಂದು ಘಟಕವೂ ಹಂಚಿಕೆಯಾಗಿಲ್ಲ. ಆದರೆ ದೆಹಲಿ ಹೈಕೋರ್ಟ್‌ಗೆ ಕೇಂದ್ರ ಆರೋಗ್ಯ ಸಚಿವಾಲಯವು ಸಲ್ಲಿಸಿರುವ ಪ್ರಮಾಣಪತ್ರದಲ್ಲಿ '2 ಘಟಕಗಳನ್ನು ಕರ್ನಾಟಕದಲ್ಲಿ ಈಗಾಗಲೇ ಸ್ಥಾಪಿಸಲಾಗಿದೆ' ಎಂದು ವಿವರಿಸಲಾಗಿದೆ. ಇದೇ ಮಾಹಿತಿಯನ್ನು ಆರೋಗ್ಯ ಸಚಿವಾಲಯವು ಟ್ವೀಟ್ ಸಹ ಮಾಡಿತ್ತು. ಆದರೆ, ಕರ್ನಾಟಕದ ಯಾವ ಆಸ್ಪತ್ರೆಗಳಲ್ಲಿ ಈ ಘಟಕಗಳನ್ನು ಸ್ಥಾಪಿಸಲಾಗಿದೆ ಎಂಬ ಮಾಹಿತಿಯನ್ನು ಆರೋಗ್ಯ ಸಚಿವಾಲಯ ನೀಡಿಲ್ಲ.

'ಪಿಎಂಕೇರ್ಸ್ ಅಡಿ ಕರ್ನಾಟಕಕ್ಕೆ 6 ಘಟಕಗಳು ಮಂಜೂರಾಗಿವೆ' ಎಂದು ಕರ್ನಾಟಕದ ಆರೋಗ್ಯ ಸಚಿವ ಕೆ.ಸುಧಾಕರ್ ಅವರ ಕಚೇರಿಯು 'ಪ್ರಜಾವಾಣಿ'ಗೆ ಮಾಹಿತಿ ನೀಡಿತ್ತು. 'ರಾಜ್ಯದ ಪಾವಗಡ, ಶಿಕಾರಿಪುರ, ಮುಧೋಳ, ಯಲ್ಲಾಪುರ, ಚಿಂಚೋಳಿ ಮತ್ತು ಶೋರಾಪುರ ತಾಲ್ಲೂಕುಗಳ ಆಸ್ಪತ್ರೆಗಳಿಗೆ ತಲಾ 100 ಎಲ್‌ಪಿಎಂ ಸಾಮರ್ಥ್ಯದ ಒಂದು ಪಿಎಸ್ಎ ಘಟಕ ಮಂಜೂರಾಗಿದೆ. ಈ ತಿಂಗಳ ಅಂತ್ಯಕ್ಕೆ ಈ ಘಟಕಗಳು ಕಾರ್ಯಾರಂಭ ಮಾಡುತ್ತವೆ' ಎಂದು ಆರೋಗ್ಯ ಸಚಿವರ ಕಚೇರಿಯು ಮಾಹಿತಿ ನೀಡಿದೆ.

ಈ ಘಟಕಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಟೆಂಡರ್‌ನಲ್ಲಿರುವ ಮಾಹಿತಿ, ಕೇಂದ್ರ ಆರೋಗ್ಯ ಸಚಿವಾಲಯವು ದೆಹಲಿ ಹೈಕೋರ್ಟ್‌ಗೆ ನೀಡಿರುವ ಮಾಹಿತಿ ಮತ್ತು ರಾಜ್ಯ ಆರೋಗ್ಯ ಸಚಿವರ ಕಚೇರಿ ನೀಡಿರುವ ಮಾಹಿತಿ ಪರಸ್ಪರ ವ್ಯತಿರಿಕ್ತವಾಗಿವೆ.

162 ಘಟಕಗಳ ಸ್ಥಾಪನೆ ಕಾರ್ಯಕ್ರಮದಲ್ಲಿ ರಾಜ್ಯಕ್ಕೆ ಒಂದೂ ಘಟಕ ಹಂಚಿಕೆಯಾಗಿಲ್ಲ. ಆದರೆ ಏಪ್ರಿಲ್ 22ರಂದು ಆರೋಗ್ಯ ಸಚಿವರ ಕಚೇರಿಯು ರಾಜ್ಯಕ್ಕೆ 6 ಘಟಕಗಳು ಹಂಚಿಕೆಯಾಗಿದೆ ಎಂದು ಹೇಳಿತ್ತು. ಕೇಂದ್ರ ಸರ್ಕಾರವು ಭಾನುವಾರವಷ್ಟೇ (ಏಪ್ರಿಲ್ 25) 551 ಪಿಎಸ್ಎ ಘಟಕಗಳನ್ನು ದೇಶದಾದ್ಯಂತ ಸ್ಥಾಪಿಸುತ್ತೇವೆ ಎಂದು ಹೇಳಿದೆ. ಆರೋಗ್ಯ ಸಚಿವ ಸುಧಾಕರ್ ಅವರ ಕಚೇರಿ ಹೇಳಿರುವ 6 ಘಟಕಗಳು, ಈಗ ಕೇಂದ್ರ ಸರ್ಕಾರ ಘೋಷಿಸಿರುವ ಕಾರ್ಯಕ್ರಮದ ಅಡಿಯಲ್ಲಿ ಬರುವುದಿಲ್ಲ.

## 154 ಟನ್ ಸಾಮರ್ಥ್ಯ

ಪಿಎಂಕೇರ್ಸ್ ಅಡಿ ಸ್ಥಾಪಿಸಲಾಗುತ್ತಿರುವ ಈ 162 ಪಿಎಸ್ಎ ಆಮ್ಲಜನಕ ಘಟಕಗಳ ಒಟ್ಟು ಸಾಮರ್ಥ್ಯ 154 ಟನ್.

ಪಿಎಸ್ಎ ಘಟಕಗಳು ಅನಿಲ ಸ್ವರೂಪದ ಆಮ್ಲಜನಕವನ್ನು ಮಾತ್ರ ತಯಾರಿಸುತ್ತವೆ. ಈ ಘಟಕಗಳ ಸಾಮರ್ಥ್ಯವನ್ನು 'ಪ್ರತಿ ನಿಮಿಷಕ್ಕೆ ಲೀಟರ್'ನಂತೆ (ಲೀಟರ್ ಪರ್ ಮಿನಿಟ್-ಎಲ್‌ಪಿಎಂ) ಲೆಕ್ಕಹಾಕಲಾಗುತ್ತದೆ. 24 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಮತ್ತು ಸಾಮಾನ್ಯ ಒತ್ತಡದಲ್ಲಿ ಒಂದು ಲೀಟರ್ ಅನಿಲ ಆಮ್ಲಜನಕದ ತೂಕ 1.43 ಗ್ರಾಂ ಮಾತ್ರ.

ಈ ಎಲ್ಲಾ ಘಟಕಗಳು ದಿನದ 24 ಗಂಟೆಯೂ ಶೇ 100ರಷ್ಟು ಕಾರ್ಯದಕ್ಷತೆಯಲ್ಲಿ ಕೆಲಸ ಮಾಡಿದರೆ, ದಿನಕ್ಕೆ ಗರಿಷ್ಠ 11.5 ಕೋಟಿ ಲೀಟರ್ ಅನಿಲ ಆಮ್ಲಜನಕವನ್ನು ತಯಾರಿಸುತ್ತವೆ. ಈ ಅನಿಲ ಆಮ್ಲಜನಕವನ್ನು ದ್ರವೀಕೃತ ಆಮ್ಲಜನಕವಾಗಿ ಪರಿವರ್ತಿಸಿದರೆ, ಒಟ್ಟು 154 ಟನ್ ದ್ರವೀಕೃತ ಆಮ್ಲಜನಕ ಲಭ್ಯವಾಗುತ್ತದೆ.

**80,250** ಲೀಟರ್ ಈ ಘಟಕಗಳು ಪ್ರತಿ ನಿಮಿಷಕ್ಕೆ ತಯಾರಿಸುವ ಅನಿಲ ಆಮ್ಲಜನಕ

**48.15** ಲಕ್ಷ ಲೀಟರ್ ಈ ಘಟಕಗಳು ಪ್ರತಿ ಗಂಟೆಗೆ ತಯಾರಿಸುವ ಅನಿಲ ಆಮ್ಲಜನಕ

**11.55** ಲಕ್ಷ ಲೀಟರ್ ಈ ಘಟಕಗಳು ದಿನವೊಂದರಲ್ಲಿ ತಯಾರಿಸುವ ಅನಿಲ ಆಮ್ಲಜನಕ

## ಮಹಾರಾಷ್ಟ್ರಕ್ಕೆ ಕಡಿಮೆ ಹಂಚಿಕೆ

ಪಿಎಂಕೇರ್ಸ್ ನಿಧಿಯ ಅಡಿ 201.8 ಕೋಟಿ ವೆಚ್ಚದಲ್ಲಿ ಈ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇದರಲ್ಲಿ ದೇಶದ 25 ರಾಜ್ಯಗಳಿಗೆ ಮತ್ತು 4 ಕೇಂದ್ರಾಡಳಿತ ಪ್ರದೇಶಗಳಿಗೆ 162 ಘಟಕಗಳನ್ನು ಹಂಚಿಕೆ ಮಾಡಲಾಗಿದೆ. ಕೆಲವು ರಾಜ್ಯಗಳಿಗೆ ಹೆಚ್ಚು ಘಟಕಗಳು ಹಂಚಿಕೆಯಾಗಿದ್ದರೆ, ಕೆಲವು ರಾಜ್ಯಗಳಿಗೆ ಕಡಿಮೆ ಘಟಕಗಳು ಹಂಚಿಕೆಯಾಗಿವೆ.

ಆದರೆ ಹೀಗೆ ಹಂಚಿಕೆ ಮಾಡಲಾದ ಘಟಕಗಳ ಸಾಮರ್ಥ್ಯದಲ್ಲಿ ಭಾರಿ ವ್ಯತ್ಯಾಸವಿದೆ. ಕೆಲವು ರಾಜ್ಯಗಳಿಗೆ 100 ಎಲ್‌ಪಿಎಂ ಸಾಮರ್ಥ್ಯದ ಘಟಕಗಳು ದೊರೆತಿದ್ದರೆ, ಕೆಲವು ರಾಜ್ಯಗಳಿಗೆ 2,000 ಮತ್ತು 3,000 ಎಲ್‌ಪಿಎಂ ಸಾಮರ್ಥ್ಯದ ಘಟಕಗಳು ಹಂಚಿಕೆಯಾಗಿವೆ. ಹೀಗಾಗಿ ರಾಜ್ಯಗಳಿಗೆ ಹಂಚಿಕೆಯಾದ ಆಮ್ಲಜನಕದ ಪ್ರಮಾಣದಲ್ಲಿ ಭಾರಿ ವ್ಯತ್ಯಾಸವಿದೆ. ಅತಿಹೆಚ್ಚು ಸಕ್ರಿಯ ಪ್ರಕರಣಗಳು ಇರುವ ಮತ್ತು ಹೆಚ್ಚು ಹೊಸ ಪ್ರಕರಣಗಳು ಪತ್ತೆಯಾಗುತ್ತಿರುವ ಮಹಾರಾಷ್ಟ್ರಕ್ಕೆ ಕಡಿಮೆ ಪ್ರಮಾಣದ ಆಮ್ಲಜನಕವನ್ನು ಹಂಚಿಕೆ ಮಾಡಲಾಗಿದೆ.

| ರಾಜ್ಯ | ಎಲ್ಲಾ ಘಟಕಗಳ ಒಟ್ಟು ಸಾಮರ್ಥ್ಯ (ಎಲ್‌ಪಿಎಂ) | ಹಂಚಿಕೆ ಮಾಡಲಾದ ಘಟಕಗಳು |
|---|---|---|
| ಅಸ್ಸಾಂ | 1,250 | 6 |
| ಮಣಿಪುರ | 1,000 | 3 |
| ಮೇಘಾಲಯ | 1,600 | 4 |
| ನಾಗಾಲ್ಯಾಂಡ್ | 700 | 3 |
| ಸಿಕ್ಕಿಂ | 200 | 1 |
| ತ್ರಿಪುರಾ | 1,500 | 2 |
| ಹಿಮಾಚಲ ಪ್ರದೇಶ | 3,000 | 7 |
| ಉತ್ತರಾಖಂಡ | 1,500 | 7 |
| ಬಿಹಾರ | 1,200 | 5 |
| ಛತ್ತೀಸಗಡ | 900 | 4 |
| ಮಧ್ಯಪ್ರದೇಶ | 4,000 | 8 |
| ಒಡಿಶಾ | 2,100 | 7 |
| ಉತ್ತರ ಪ್ರದೇಶ | 4,800 | 13 |
| ಪಶ್ಚಿಮ ಬಂಗಾಳ | 2,800 | 5 |
| ಚಂಡೀಗಡ | 1,600 | 3 |
| ಲಕ್ಷದ್ವೀಪ | 200 | 2 |
| ಪುದುಚೇರಿ | 1,700 | 6 |
| ದೆಹಲಿ | 7,700 | 8 |
| ಆಂಧ್ರಪ್ರದೇಶ | 6,100 | 5 |
| ಹರಿಯಾಣ | 1,300 | 6 |
| ಗೋವಾ | 2,600 | 2 |
| ಪಂಜಾಬ್ | 3,400 | 3 |
| ರಾಜಸ್ತಾನ | 6,900 | 4 |
| ಜಾರ್ಖಂಡ್ | 3,200 | 4 |
| ಕೇರಳ | 6,900 | 5 |
| ತೆಲಂಗಾಣ | 4,300 | 5 |
| ಲಡಾಖ್ | 300 | 3 |
| ಗುಜರಾತ್ | 5,400 | 8 |
| ಮಹಾರಾಷ್ಟ್ರ | 3,000 | 10 |

• ಈ ಯೋಜನೆ ಅಡಿ ಕರ್ನಾಟಕ, ತಮಿಳುನಾಡು, ಜಮ್ಮು-ಕಾಶ್ಮೀರ, ಅರುಣಾಚಲ ಪ್ರದೇಶಕ್ಕೆ ಒಂದು ಘಟಕವನ್ನೂ ಹಂಚಿಕೆ ಮಾಡಿಲ್ಲ

ಆಧಾರ: ಕೇಂದ್ರ ಆರೋಗ್ಯ ಸಚಿವಾಲಯ, ಕೇಂದ್ರೀಯ ವೈದ್ಯಕೀಯ ಸೇವಾ ಸೊಸೈಟಿ, ರಿಟ್ ಅರ್ಜಿ ಸಂಖ್ಯೆ 10060/2020 ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್‌ನ ತೀರ್ಪು, ಪಿಟಿಐ

ಪ್ರಜಾವಾಣಿ ಗ್ರಾಫಿಕ್ಸ್| ಮಂಜುನಾಥ ಹುಲಕೊಪ್ಪದ

## ಖರೀದಿ

ಆಮ್ಲಜನಕ ಕೊರತೆಯನ್ನು ನಿವಾರಿಸುವ ಸಲುವಾಗಿ ಕೇಂದ್ರ ಸರ್ಕಾರವು ಏಪ್ರಿಲ್ ಮೂರನೇ ವಾರದಲ್ಲಿ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಜಾಗತಿಕ ಮಾರುಕಟ್ಟೆಯಿಂದ 50,000 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕ ಖರೀದಿಸಲು ಕೇಂದ್ರ ಸರ್ಕಾರವು ಒಪ್ಪಿಗೆ ನೀಡಿದೆ. ಆರೋಗ್ಯ ಸಚಿವಾಲಯದ ಪರವಾಗಿ ಎಚ್‌ಎಲ್‌ಎಲ್ ಲೈಫ್‌ಕೇರ್ ಸಂಸ್ಥೆಯು ಏಪ್ರಿಲ್ 16ರಂದು ಈ ಸಂಬಂಧ ಜಾಗತಿಕ ಟೆಂಡರ್ ಕರೆದಿದೆ. ಏಪ್ರಿಲ್ 20ರಂದು ಪೂರ್ವ ಬಿಡ್ಡಿಂಗ್ ಸಭೆ ನಡೆದಿದೆ. ಏಪ್ರಿಲ್ 28ರಂದು ಬಿಡ್ಡಿಂಗ್ ತೆರೆಯಲಾಗುತ್ತದೆ.

ದೇಶದಲ್ಲಿ ಆಮ್ಲಜನಕ ಸಿಲಿಂಡರ್‌ಗಳ ಕೊರತೆ ಇದೆ. ಈ ಸಿಲಿಂಡರ್‌ಗಳ ಬೇಡಿಕೆ ಏರಿಕೆಯಾಗಿದೆ. ಹೀಗಾಗಿ ಜಾಗತಿಕ ಮಾರುಕಟ್ಟೆಯಿಂದ 1 ಲಕ್ಷ ಸಿಲಿಂಡರ್‌ಗಳನ್ನು ಖರೀದಿಸಲು ಕೇಂದ್ರೀಯ ವೈದ್ಯಕೀಯ ಸೇವಾ ಸೊಸೈಟಿ ಟೆಂಡರ್ ಕರೆದಿದೆ.

## ಉತ್ಪಾದನೆ ಕಡಿಮೆ ಸಾಗಾಟವೂ ಸಮಸ್ಯೆ

• ಉದಯ ಯು.

ಕೈಗಾರಿಕಾ ಬಳಕೆಯ ಆಮ್ಲಜನಕ ಸೇರಿದಂತೆ ಭಾರತವು ಪ್ರತಿನಿತ್ಯ 7,100 ಟನ್‌ನಷ್ಟು ಆಮ್ಲಜನಕ ತಯಾರಿಕಾ ಸಾಮರ್ಥ್ಯ ಹೊಂದಿದೆ. ಇದರ ಪೂರ್ತಿ ಸಾಮರ್ಥ್ಯವನ್ನು ಬಳಕೆ ಮಾಡಿದರೆ ಈಗಿನ ತುರ್ತು ಬೇಡಿಕೆಯನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಬಹುದು. ಆದರೆ ಅದರ ಸಾಗಾಣಿಕೆಯೇ ದೊಡ್ಡ ಸಮಸ್ಯೆಯಾಗಿದೆ.

**ಪ್ರಧಾನಿ ಕಾರ್ಯಾಲಯ ಹೇಳಿದ್ದು**

| | |
|---|---|
| 7,100 ಟನ್ ಆಮ್ಲಜನಕ | ದೇಶದಲ್ಲಿ ಪ್ರತಿನಿತ್ಯ ತಯಾರಿಕೆ ಸಾಮರ್ಥ್ಯ |
| 6,785 ಟನ್ ವೈದ್ಯಕೀಯ ಆಮ್ಲಜನಕ | ದೇಶದ ಎಲ್ಲಾ ರಾಜ್ಯಗಳ ಪ್ರತಿದಿನದ ಬೇಡಿಕೆ |
| 6,822 ಟನ್ ವೈದ್ಯಕೀಯ ಆಮ್ಲಜನಕ | ಎಲ್ಲಾ ರಾಜ್ಯಗಳಿಗೆ ಹಂಚಿಕೆ ಪ್ರಮಾಣ |

* ಪ್ರಧಾನಿ ಕಾರ್ಯಾಲಯ ಏಪ್ರಿಲ್ 22ರಂದು ನೀಡಿರುವ ಮಾಹಿತಿ

ಪ್ರಸಕ್ತ, ಅತಿ ಹೆಚ್ಚು ಬೇಡಿಕೆ ಇರುವ 10 ರಾಜ್ಯಗಳಲ್ಲಿ ಆಮ್ಲಜನಕ ತಯಾರಿಕೆಯ ಪ್ರಮಾಣವು ಅಗತ್ಯಕ್ಕೆ ತಕ್ಕಷ್ಟು ಇಲ್ಲ. ಆದ್ದರಿಂದ ಬೇರೆ ರಾಜ್ಯಗಳಿಂದ ತರಿಸಬೇಕಾದ ಸ್ಥಿತಿ ಎದುರಾಗಿದೆ. ಕೆಲವು ರಾಜ್ಯಗಳು ಸಾವಿರಕ್ಕೂ ಹೆಚ್ಚು ಕಿ.ಮೀ. ದೂರದಿಂದ ಆಮ್ಲಜನಕವನ್ನು ತರಿಸಬೇಕಾಗಿದೆ.

ಸಾಗಾಣಿಕೆಯ ಸಮಸ್ಯೆ ಈಗಲೂ ಪೂರ್ತಿಯಾಗಿ ಬಗೆಹರಿದಿಲ್ಲವಾದ್ದರಿಂದ ಕೆಲವು ರಾಜ್ಯಗಳಲ್ಲಿ ರೋಗಿಗಳು ಆಮ್ಲಜನಕದ ಕೊರತೆಯಿಂದ ಸಾಯುವಂತಾಗಿದೆ. ದೆಹಲಿಗೆ ಕಳೆದ ವಾರ 378 ಟನ್ ಆಮ್ಲಜನಕ ಹಂಚಿಕೆಯಾಗಿದ್ದರೂ ತಲುಪಿದ್ದು 177 ಟನ್ ಮಾತ್ರ. ಸಾಗಾಣಿಕೆಯ ಜಾಲವು ಸರಿಯಾಗಿ ಇಲ್ಲದಿರುವುದು ಇದಕ್ಕೆ ಕಾರಣ. 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲುಗಳು ಆರಂಭವಾಗಿದ್ದರಿಂದ ಈಗ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ದೇಶದಲ್ಲಿ ಪ್ರತಿನಿತ್ಯ 3,842 ಟನ್ ವೈದ್ಯಕೀಯ ಆಮ್ಲಜನಕಕ್ಕೆ ಬೇಡಿಕೆ ಇರುತ್ತಿತ್ತು. ಆದರೆ, ಕೋವಿಡ್ ಎರಡನೇ ಅಲೆಯು ಅಪ್ಪಳಿಸಿದ ನಂತರ ಬೇಡಿಕೆ ಹೆಚ್ಚಾಗಿದೆ. ರಸ್ತೆ, ವಾಯುಮಾರ್ಗ, ರೈಲು ಮಾರ್ಗ ಸೇರಿದಂತೆ, ಆಮ್ಲಜನಕ ಸಾಗಾಣಿಕೆಗೆ ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಸರ್ಕಾರ ಮಾಡುತ್ತಿದೆ.

ಉಕ್ಕು ಘಟಕ ಹಾಗೂ ಇತರ ಕೆಲವು ಕೈಗಾರಿಕೆಗಳಿಂದಲೂ ಸರಬರಾಜು ಹೆಚ್ಚಿದ್ದರಿಂದ ಕಳೆದ ಕೆಲವು ದಿನಗಳಲ್ಲಿ ದ್ರವೀಕ್ರತ ಆಮ್ಲಜನಕ ಲಭ್ಯತೆಯ ಪ್ರಮಾಣವನ್ನು 3,300 ಟನ್‌ನಷ್ಟು ಹೆಚ್ಚಿಸಲಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

### ಕೋಟಾ ನಿಗದಿ

ಆಮ್ಲಜನಕದ ಬೇಡಿಕೆ ಹೆಚ್ಚುತ್ತಿದ್ದಂತೆ, ಪೂರೈಕೆ ಏರುಪೇರಾಗುವುದನ್ನು ತಡೆಯಲು ಕೇಂದ್ರ ಸರ್ಕಾರವೇ ರಾಜ್ಯಗಳಿಗೆ ಆಮ್ಲಜನಕದ ಹಂಚಿಕೆಯನ್ನು ಆರಂಭಿಸಿತು.

ಅತಿ ಹೆಚ್ಚು ಬೇಡಿಕೆ ಇರುವ ಮಹಾರಾಷ್ಟ್ರ, ದೆಹಲಿ ಮುಂತಾದ ರಾಜ್ಯಗಳಿಗೆ ಹೆಚ್ಚು, ಹಾಗೂ ಬೇಡಿಕೆ ಕಡಿಮೆ ಇರುವ ರಾಜ್ಯಗಳಿಗೆ ಕಡಿಮೆ ಪ್ರಮಾಣದಲ್ಲಿ ಹಂಚಿಕೆ ಮಾಡಲಾಯಿತು. ಅತಿ ಹೆಚ್ಚು ಕೋವಿಡ್ ಪ್ರಕರಣಗಳಿರುವ 10 ರಾಜ್ಯಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹಂಚಿಕೆಯಾಯಿತು. ಉತ್ತರಾಖಂಡಕ್ಕೆ ಕನಿಷ್ಠ 103 ಟನ್, ಮಹಾರಾಷ್ಟ್ರಕ್ಕೆ 1661 ಟನ್ ಕೋಟಾ ನಿಗದಿ ಮಾಡಲಾಯಿತು.

ಈ ಕೋಟಾ ವ್ಯವಸ್ಥೆಯು ಇತರ ರಾಜ್ಯಗಳ ಚಿಂತೆ ಹೆಚ್ಚಿಸಲು ಕಾರಣವಾಗಿದೆ. ನಮ್ಮ ರಾಜ್ಯದಲ್ಲಿ ತಯಾರಾದ ಆಮ್ಲಜನಕವನ್ನು ಬೇರೆ ರಾಜ್ಯಗಳಿಗೆ ಸಾಗಿಸಿದರೆ ನಮ್ಮಲ್ಲಿನ ರೋಗಿಗಳಿಗೆ ಕಷ್ಟವಾಗುತ್ತದೆ. ನಮಗೆ ಹಂಚಿಕೆಯಾಗಿರುವ ಪ್ರಮಾಣವೂ ಕಡಿಮೆ ಇದೆ. ಆದ್ದರಿಂದ ಇಲ್ಲಿನ ಆಮ್ಲಜನಕವನ್ನು ಬೇರೆಡೆಗೆ ಸಾಗಿಸಬಾರದು ಎಂದು ಆಂಧ್ರಪ್ರದೇಶ, ತೆಲಂಗಾಣ ಹಾಗೂ ತಮಿಳುನಾಡು ಸರ್ಕಾರಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸಿವೆ.

### ಕೇರಳದಲ್ಲಿಲ್ಲ ಸಮಸ್ಯೆ

ದೇಶದ ಅನೇಕ ರಾಜ್ಯಗಳು ಆಮ್ಲಜನಕದ ಕೊರತೆ ಎದುರಿಸುತ್ತಿದ್ದರೆ, ಕೋವಿಡ್ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದರೂ, ಕೇರಳ ಮಾತ್ರ ಈ ಸಮಸ್ಯೆಯಿಂದ ಮುಕ್ತವಾಗಿದೆ. ಬರಬಹುದಾದ ಸಮಸ್ಯೆಯನ್ನು ಮನಗಂಡಿದ್ದ ಕೇರಳವು ಕಳೆದ ಒಂದು ವರ್ಷದಲ್ಲಿ ಆಮ್ಲಜನಕದ ತಯಾರಿಕೆಯನ್ನು ದ್ವಿಗುಣಗೊಳಿಸಿತ್ತು. ಆದರೆ, ರಾಜ್ಯದಲ್ಲಿ ಆಮ್ಲಜನಕದ ಅಗತ್ಯ ಇರುವ ರೋಗಿಗಳ ಸಂಖ್ಯೆಯು ಅಂದಾಜಿಸಿದ ಮಟ್ಟದಲ್ಲಿ ಹೆಚ್ಚಳವಾಗಿಲ್ಲ. ಆಮ್ಲಜನಕದ ಕೊರತೆ ಗಂಭೀರ ಆಗದಿರಲು ಇದೂ ಕಾರಣ ಎನ್ನಲಾಗಿದೆ.

'ಕಳೆದ ಮಾರ್ಚ್‌ನಲ್ಲಿ ಕೇರಳದ ಆಮ್ಲಜನಕ ಉತ್ಪಾದನಾ ಸಮಾರ್ಥ್ಯ ದಿನಕ್ಕೆ 99 ಟನ್‌ನಷ್ಟಿತ್ತು. ಈಗ ಅದು 200 ಟನ್ ಮೀರಿದೆ. ಅದನ್ನು 250 ಟನ್‌ಗೆ ಹೆಚ್ಚಿಸಲು ಕೇರಳ ಮೆಡಿಕಲ್ ಸರ್ವೀಸ್ ಕಾರ್ಪೊರೇಷನ್ ಚಿಂತನೆ ನಡೆಸಿದೆ' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'ಕೋವಿಡ್ ವಿರುದ್ಧ ಹೋರಾಡಲು ನರೇಂದ್ರ ಮೋದಿ ಅವರ ಸರ್ಕಾರ ಶತಾಯಗತಾಯ ಹೋರಾಡುತ್ತಿದೆ. ದೆಹಲಿಗೆ 8 ಪಿಎಸ್ಎ ಆಮ್ಲಜನಕ ತಯಾರಿಕಾ ಘಟಕಗಳನ್ನು ಮಂಜೂರು ಮಾಡಲಾಗಿದೆ. ಆದರೆ, ಅದರಲ್ಲಿ ಎರಡನ್ನು ಮಾತ್ರ ದೆಹಲಿ ಸರ್ಕಾರ ಸ್ಥಾಪನೆ ಮಾಡಿದೆ. ಮಹಾರಾಷ್ಟ್ರಕ್ಕೆ 10 ಘಟಕಗಳನ್ನು ಮಂಜೂರು ಮಾಡಿದ್ದು, ರಾಜ್ಯ ಸರ್ಕಾರ 1 ಘಟಕವನ್ನು ಮಾತ್ರ ಸ್ಥಾಪನೆ ಮಾಡಿದೆ. ಆದರೆ ಗುಜರಾತ್‌ಗೆ 11 ಘಟಕಗಳನ್ನು ಹಂಚಿಕೆ ಮಾಡಿದ್ದು, ಇದರಲ್ಲಿ 11 ಘಟಕಗಳೂ ಕಾರ್ಯಾರಂಭ ಮಾಡಿವೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ (ಸಂಘಟನಾ) ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರು ಟ್ವೀಟ್ ಮಾಡಿದ್ದಾರೆ. ಇದನ್ನು ದೇಶದಾದ್ಯಂತ ಹಲವರು ಸಾವಿರಾರು ಬಾರಿ ರಿಟ್ವೀಟ್ ಮಾಡಿದ್ದಾರೆ.

ಆದರೆ ಈ ಟ್ವೀಟ್‌ನಲ್ಲಿ ಇರುವ ಮಾಹಿತಿ ತಪ್ಪಾಗಿದೆ. ಈ ಘಟಕಗಳನ್ನು ಸ್ಥಾಪನೆ ಮಾಡುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇಲ್ಲ. ಗುತ್ತಿಗೆ ಪಡೆಯುವ ಕಂಪನಿಯೇ ಈ ಘಟಕಗಳನ್ನು ಸ್ಥಾಪಿಸಲಿದೆ ಎಂದು ಟೆಂಡರ್‌ನಲ್ಲಿ ಉಲ್ಲೇಖಿಸಲಾಗಿದೆ. ಕೇಂದ್ರ ಆರೋಗ್ಯ ಸಚಿವಾಲಯದ ಕೇಂದ್ರೀಯ ಮೆಡಿಕಲ್ ಸೇವಾ ಸೊಸೈಟಿಯ ಮೇಲ್ವಿಚಾರಣೆಯಲ್ಲಿ ಈ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ದೆಹಲಿ ಹೈಕೋರ್ಟ್‌ಗೆ ಆರೋಗ್ಯ ಸಚಿವಾಲಯವು ಸಲ್ಲಿಸಿರುವ ಪ್ರಮಾಣ ಪತ್ರದ ಪ್ರಕಾರ ದೆಹಲಿಯಲ್ಲಿ ಒಂದು ಘಟಕ ಮತ್ತು ಗುಜರಾತ್‌ನಲ್ಲಿ ಮೂರು ಘಟಕ ಸ್ಥಾಪನೆಯಾಗಿದೆ. ಬಿ.ಎಲ್.ಸಂತೋಷ್ ತಪ್ಪು ಮಾಹಿತಿ ಹಂಚಿಕೊಂಡಿದ್ದಾರೆ.

## ಗುಂಡಣ್ಣ




## ಬೆರಗಿನ ಬೆಳಕು

ಗುರುರಾಜ ಕರಜಗಿ

### ಕುಟಿಲಕ್ಕೆ ಕುಟಿಲವೇ ಸರಿ

**ಮಂತ್ರಿ** ಕೇವಟ್ಟ, ರಾಜ ಬ್ರಹ್ಮದತ್ತನಿಗೆ ಹೇಳಿದ, 'ಸ್ವಾಮಿ, ನಾನೂ ಪಂಡಿತನಿದ್ದೇನೆ, ಮಹೋಷಧಕುಮಾರನಿಗಿಂತ ತುಂಬ ಹಿರಿಯನಿದ್ದೇನೆ. ಈ ರಾಜನನ್ನು ಶಕ್ತಿಯಿಂದ ಸೋಲಿಸುವುದಕ್ಕಿಂತ ಯುಕ್ತಿಯಿಂದ ಸೋಲಿಸೋಣ. ಧರ್ಮಯುದ್ಧವನ್ನು ಘೋಷಿಸೋಣ. ಇದರಲ್ಲಿ ಎರಡೂ ಕಡೆಯ ಸೈನಿಕರು ಯುದ್ಧ ಮಾಡುವುದಿಲ್ಲ. ಅವರು ದೂರ ನಿಲ್ಲುತ್ತಾರೆ. ನಾನು ಮತ್ತು ಮಹೋಷಧಕುಮಾರ ಎರಡೂ ಸೈನ್ಯಗಳ ಮಧ್ಯೆ ಸೇರುತ್ತೇವೆ, ವಾದ ಮಾಡುತ್ತೇವೆ. ಯಾರು ಮತ್ತೊಬ್ಬರಿಗೆ ನಮಸ್ಕಾರ ಮಾಡುತ್ತಾರೋ ಅವರು, ಅವರ ರಾಜ್ಯ ಸೋತಂತೆ. ಈ ಯುಕ್ತಿ ಮಹೋಷಧನಿಗೆ ತಿಳಿದಿಲ್ಲ. ನಾನು ವಯಸ್ಸಿನಲ್ಲಿ ದೊಡ್ಡವನು. ಆದ್ದರಿಂದ ಆತ ನನಗೆ ನಮಸ್ಕಾರ ಮಾಡಿಯೇ ಮಾಡುತ್ತಾನೆ. ಆಗ ಮಿಥಿಲಾ ನರೇಶ ವಿದೇಹ, ಸೋತಂತೆ ಆಯಿತು". ರಾಜನಿಗೆ ಇದು ಸರಿ ಎನ್ನಿಸಿತು. ಮಹೋಷಧಕುಮಾರನ ದಕ್ಷ ಗುಪ್ತಚಾರರು ಈ ವಿಷಯವನ್ನು ಅವನಿಗೆ ತಿಳಿಸಿದರು.

ಆತ ನಕ್ಕು ಈ ಉಪಾಯಕ್ಕೂ ಸಜ್ಜಾದ. ದೂತರು ಬ್ರಹ್ಮದತ್ತನ ಸಂದೇಶವನ್ನು ರಾಜ ವಿದೇಹನಿಗೆ ತಲುಪಿಸಿದರು. ರಾಜ ಮಹೋಷಧಕುಮಾರನನ್ನು ಕರೆಸಿ ಅಭಿಪ್ರಾಯ ಕೇಳಿದ. ಕುಮಾರ, "ಪ್ರಭೂ, ಚಿಂತೆ ಬೇಡ. ಈ ಕುಟಿಲ ಯುದ್ಧದಲ್ಲಿ ಗೆಲವು ನಮ್ಮದೆ. ಆ ಕೇವಟ್ಟನನ್ನು ನಾನು ವಂಚಿಸುತ್ತೇನೆ. ಅದಕ್ಕೆ ತಮ್ಮಲ್ಲಿದ್ದ, ಭಾರವಾದ ಎಂಟು ವಕ್ರದ ಮಣಿ ಬೇಕು" ಎಂದ. ರಾಜ ಅದನ್ನು ತರಿಸಿಕೊಟ್ಟ. ಅದು ಅತ್ಯಂತ ಬೆಲೆಬಾಳುವ, ಅದ್ಭುತ ಬೆಳಕು ಬೀರುವ ಮಣಿ. ಅದನ್ನು ತೆಗೆದುಕೊಂಡು ರಾಜನಿಗೆ ನಮಸ್ಕರಿಸಿ ಹೊರಗೆ ಬಂದ ಕುಮಾರ.

ನಿಗದಿಯಾಗಿದ್ದಂತೆ ಮರುದಿನ ಬೆಳಿಗ್ಗೆ ಮಹೋಷಧಕುಮಾರ, ತನ್ನ ಜೊತೆಗಾರರಾದ ಸಾವಿರ ಜನ ಸೈನಿಕರನ್ನು ಜೊತೆಯಲ್ಲಿ ಕರೆದುಕೊಂಡು, ಸುಗಂಧ ಜಲದಿಂದ ಸ್ನಾನಮಾಡಿ, ಗಂಧವನ್ನು ಲೇಪಿಸಿಕೊಂಡು, ಲಕ್ಷ ಕಹಾಪಣ ಬೆಲೆಯ ಪೀತಾಂಬರವನ್ನಿಟ್ಟು, ಎಲ್ಲ ಅಲಂಕಾರಗಳನ್ನು ಧರಿಸಿ, ಒಂಭತ್ತು ಸಾವಿರ ಕಹಾಪಣಗಳ ಬೆಲೆಯುಳ್ಳ ಬಿಳೀ ಕುದುರೆಗಳನ್ನು ಹೂಡಿದ ರಥವನ್ನೇರಿಕೊಂಡು ಉಭಯ ಸೈನ್ಯಗಳ ನಡುವೆ, ನಿರ್ಧಾರಿತ ಸ್ಥಳದಲ್ಲಿ ಬಂದು ನಿಂತ. ಕೇವಟ್ಟ ಇವನಿಗೋಸ್ಕರ ಕಾಯುತ್ತಿದ್ದ. ಬಿಸಿಲಿಗೆ ಅವನ ಮೈ ಬೆಮರಿತ್ತು, ಕಾಲು ನಡುಗುತ್ತಿದ್ದವು. ಮಹೋಷಧಕುಮಾರ ಸ್ಥಳಕ್ಕೆ ಬರುತ್ತಿದ್ದಂತೆ ಅವನ ಜೊತೆಗಿದ್ದ ಸಾವಿರ ಜನ ಸೈನಿಕರು, ನೆಲ ನಡುಗುವಂತೆ ಜಯಘೋಷ ಮಾಡಿದರು.

ದೂರದಲ್ಲಿ ನಿಂತಿದ್ದ ಬ್ರಹ್ಮದತ್ತನ ಸೈನಿಕರೂ ಈತನ ರೂಪಶೋಭೆಯನ್ನು ಕಂಡು, ಈತ ಮಹಾತ್ಮ, ಮಹಾತೇಜಸ್ವಿ ಎಂದು ಹೊಗಳತೊಡಗಿದರು. ಎರಡೂ ಬದಿಯಲ್ಲಿ, ದೂರದಲ್ಲಿ ಇಬ್ಬರೂ ರಾಜರು, ಸೈನಿಕರು, ಮಧ್ಯದಲ್ಲಿ ನಡೆಯುವುದನ್ನು ನೋಡುತ್ತಿದ್ದರು.

ಮೊದಲು ಒಂದೆರಡು ಲೋಕಾಭಿರಾಮದ ಮಾತುಗಳನ್ನಾಡಿದ ಕುಮಾರ, ನಂತರ ತನ್ನ ಉಡಿಯಲ್ಲಿ ಕಟ್ಟಿಕೊಂಡಿದ್ದ ಪ್ರಕಾಶಮಾನವಾದ ಮಣಿಯನ್ನು ಹೊರತೆಗೆದು ಕೈಯಲ್ಲಿ ಹಿಡಿದುಕೊಂಡು ಅಮಾತ್ಯ ಕೇವಟ್ಟನೆಡೆಗೆ ಚಾಚಿದ. ಲೋಭಿಯಾದ ಕೇವಟ್ಟ ಅದನ್ನು ಕಂಡು ಬೆರಗಾದ. ಅದು ತನಗೆ ಆತ ನೀಡುವ ಕಾಣಿಕೆ ಎಂದು ಭಾವಿಸಿ, ಅದನ್ನು ತೆಗೆದುಕೊಳ್ಳಲು ಮುಂದೆ ಬಂದ. ಆಗ ಕುಮಾರ ಅದನ್ನು ಉಪಾಯವಾಗಿ ಕೆಳಗೆ ತನ್ನ ಕಾಲ ಬಳಿ ಬೀಳುವಂತೆ ಮಾಡಿದ. ಲೋಭವಶನಾದ ಬ್ರಾಹ್ಮಣ ಅದನ್ನು ತೆಗೆದುಕೊಳ್ಳಲು ಕುಮಾರನ ಪಾದದ ಬಳಿಗೆ ಬಾಗಿದ. ಕುಮಾರ ಒಂದು ಕೈಯಿಂದ ಅವನನ್ನು ಎತ್ತುವವನಂತೆ ಮಾಡಿ ಮತ್ತೊಂದು ಕೈಯಿಂದ ಅವನನ್ನು ನೆಲಕ್ಕೆ ಒತ್ತಿ ಅವನ ಮೂಗು, ಹಣೆಗಳಿಂದ ರಕ್ತ ಬರುವಂತೆ ತಿವಿದು, ತಿಕ್ಕಾಡಿದ. ದೂರದಲ್ಲಿ ನಿಂತಿದ್ದ ಎಲ್ಲರಿಗೂ ಕೇವಟ್ಟ, ಕುಮಾರನಿಗೆ ಶರಣಾಗಿ ನಮಸ್ಕಾರ ಮಾಡಿದ ಎಂದು ತೋರಿ ಜಯಘೋಷ ಮಾಡಿದರು. ಬ್ರಹ್ಮದತ್ತನ ಸೈನ್ಯ ಹಿಂದೆ ಓಡತೊಡಗಿತು.

## ದಿನ ಭವಿಷ್ಯ

ಮಂಗಳವಾರ 27 ಏಪ್ರಿಲ್ 2021

**ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಭರಣಿ ಪೂರ್ಣಿಮ ಗಂ. 8-52 (ಬೆ. 9-41) ಮಂಗಳವಾರ ನಿತ್ಯ ನಕ್ಷತ್ರ ಸ್ವಾತಿ ಗಂ. 38-41 (ರಾ. 9-36) ಸಿದ್ಧಿ ನಾಮ ಯೋಗ ಗಂ 38-33 ಬವ ಕರಣ ಗಂ. 8-52 ವಿಷ ಗಂ. 51-43 ಅಮೃತ ಗಂ. 17-57 :** ರಾಹುಕಾಲ: ಮ. ಗಂ. 3-00 ರಿಂದ 4-30 ಗುಳಿಕ ಕಾಲ ಮ. ಗಂ 12-00 ರಿಂದ 1-30 ಯಮಗಂಡ ಕಾಲ ಬೆ. ಗಂ 9-00 ರಿಂದ 10-30 ಸೂರ್ಯೋದಯ: 6-04 ಸೂರ್ಯಾಸ್ತ: 6-30 ಅದೃಷ್ಟ ಸಂಖ್ಯೆ 2, 6

**ಮೇಷ:** ಹಂತ ಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳ ಆಗಮನದಿಂದ ಸಂತಸ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತ ಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

**ವೃಷಭ:** ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರ ಪ್ರಯಾಣ ಮಾಡಬೇಕಾದೀತು. ಪತ್ನಿವರ್ಗದವರಿಂದ ಸಹಾಯ ದೊರಕಲಿದೆ. ಸಂಬಂಧಿಗಳ ಮಧ್ಯಸ್ಥಿಕೆಯಿಂದಾಗಿ ಸಮಸ್ಯೆ ನಿವಾರಣೆ.

**ಮಿಥುನ:** ಹೊಸ ಉದ್ಯಮದ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯ ಪೂರ್ವಕ ಪ್ರಸ್ತಾಪಗಳು ಬರಲಿದೆ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.

**ಕರ್ಕಾಟಕ:** ಚಿನ್ನಾಭರಣಗಳ ವ್ಯವಹಾರದಲ್ಲಿ ಹಿನ್ನಡೆಯ ದಿನ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯ ಹೊಂದುವಿರಿ. ಪುಸ್ತಕ ಗ್ರಂಥಗಳ ಖರೀದಿಗಾಗಿ ವೆಚ್ಚವನ್ನು ಭರಿಸಬೇಕಾದೀತು.

**ಸಿಂಹ:** ತರಕಾರಿ, ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯಾಪಾರಸ್ಥರಿಗೆ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ.

**ಕನ್ಯಾ:** ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಿ. ನೆರೆಯವರೊಂದಿಗೆ ಸ್ನೇಹ ಸಂಬಂಧಗಳು ವೃದ್ಧಿಯಾಗಲಿವೆ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ. ಅತಿಯಾದ ಪ್ರಯಾಣದಿಂದಾಗಿ ದೇಹಾಯಾಸ.

**ತುಲಾ:** ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರಹೊಗಬೇಕಾದೀತು. ದೂರದ ಪ್ರಯಾಣ. ಸ್ವಂತ ವಾಹನ ಖರೀದಿಯಿಂದ ನೆಮ್ಮದಿ ಕಾಣುವಿರಿ.

**ವೃಶ್ಚಿಕ:** ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಭತ್ಯೆಯಲ್ಲಿ ಹೆಚ್ಚಳ.

**ಧನು:** ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಸ್ಯ ಉಂಟಾಗಬಹುದು. ಗುರುದೇವತಾ ದರ್ಶನ ಮಾಡುವ ಸಾಧ್ಯತೆ.

**ಮಕರ:** ಜಮೀನಿನ ಕೆಲಸಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ. ಮನೆಯವರ ದೂರ ಪ್ರಯಾಣ.

**ಕುಂಭ:** ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗವಹಿಸುವ ಸಾಧ್ಯತೆ. ನಿಮ್ಮ ಸಹಾಯ, ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.

**ಮೀನ:** ತಂದೆ–ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ ಕಂಡುಬರುತ್ತಿದೆ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

**ನಿಮ್ಮ ಜನ್ಮದಿನ 27-ಏಪ್ರಿಲ್:** ಈ ದಿನ ಅತ್ಯಂತ ಶುಭಕರ. ಆರೋಗ್ಯ ಸ್ಥಿತಿಯಲ್ಲಿ ಉತ್ತಮವಾಗಿರುವುದು ಮಕ್ಕಳ ಸಲುವಾಗಿ ವಿದೇಶ ಪ್ರಯಾಣವನ್ನು ಮಾಡಬೇಕಾದೀತು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಖರ್ಚು. ನಿಮ್ಮ ಅತ್ಯಂತ ಪ್ರಿಯವಾದ ಹುದ್ದೆಯನ್ನೇ ಅಲಂಕರಿಸುವ ಸಾಧ್ಯತೆ ಕಂಡುಬರಲಿದೆ. ಅಪೇಕ್ಷಿತರಿಗೆ ಸಂತಾನ ಭಾಗ್ಯ ದೊರಕುವ ಸುಯೋಗವಿದೆ.

## ಪದಬಂಧ 4579 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1.ಕಗ್ಗೊಲೆಯ ಘಟನೆ (4)
3.ಕಾಸು ಇದ್ದಾಗ ಖರೀದಿಸಿದ ತೋಟ! (4)
5.ಟಕ ಟಕ ಓಡುತ್ತಿರುವ ಕುದುರೆಯ ಬಂಡಿ (3)
7.ರಕ್ತ ಕೀವುಗಳಿಂದ ಏಳುವ ಗುಳ್ಳೆ (2)
9.ಮನೋರಥದಲ್ಲಿರುವ ತೇರು (2)
11.ನಾಟಕದ ಒಂದು ಭಾಗ (2)
12.ಭವನವಿರುವ ಅರಣ್ಯ (2)
14.ಅವನ ಮುಖವಿದು! (3)
16.ತಳದಿಂದ ಬಂದಿರುವ ಬುನಾದಿ (4)
17.ಕೊನೆಗೆ ಬರವಿದ್ದಾಗಿನ ಬೆತ್ತಲೆ (4)

**ಮೇಲಿಂದ ಕೆಳಕ್ಕೆ**
1.ಹಲಾಲುಕೋರನಿಂದಲೇ ಈ ನಷ್ಟ! (3)
2.ತಿರುಗಿದಾಗ ಕಾಣಿಸಿದ ಆಲಸ್ಯ (2)
3.ಉತ್ತರದವರ ಚಿಕ್ಕಪ್ಪ (2)
4.ಒಳ್ಳೆಯ ಹಾದಿಯಿದು (3)
6.ಹೀಗೆ ಮೋಸಗೊಳಿಸು (3)
8.ದುಃಖಾಂತವಾದ ನಾಟಕ (5)
9.ಬೆಳ್ಳಿ ಹಬ್ಬವಿದು (5)
10.ವನದಲ್ಲಿರುವ ಉಡುಗೆ ಕಾಣುತ್ತಿದೆಯೇ? (3)
11.ಹೆಸರು ಅಥವಾ ಗುರುತು (3)
13.ಕ್ಷಣಿಕವಾದುದು ನರನಲ್ಲಿದೆಯಲ್ಲಾ (3)
14.ಆ ದಿನವೇ ಪ್ರಾರಂಭ! (2)
15.ಮೌನದಿಂದ ವೀಕ್ಷಿಸಿರುವ ಹೊಳೆ! (2)




### 4578ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:** 1.ಕನಲು 3.ಪರಾರಿ 5.ಸುಂಡು 6.ಕರಿಕು 7.ರಿಪು 9.ಶಿಹ 11.ಸುಖಾಂತ 13.ಹಸು 14.ಗುಲಾಮ 15.ನಗರ

**ಮೇಲಿಂದ ಕೆಳಕ್ಕೆ:** 1.ಕರಡು 2.ಲುಬ್ಧಕ 3.ಪರಾಕು 4.ರಿಪೇರಿ 5.ಸುಂಟರಗಾಳಿ 8.ಪುಸಲಾಯಿಸು 10.ಹಡಗು 11.ಸುಗಮ 12.ತಲ್ಲೀನ 13.ಹತ್ತಿ

## ಸುಡೊಕು 4965

| | | | | | | | | |
|---|---|---|---|---|---|---|---|---|
| | | 5 | 8 | | | | 1 | |
| 2 | | | | | | | | |
| | | 4 | | | 2 | 8 | | 6 |
| 3 | | 6 | | | 8 | 5 | | 9 |
| | | | | | | | | |
| | | 1 | | | | 3 | | 7 |
| 4 | | | 6 | | 1 | | 9 | |
| | 3 | | | | 5 | 7 | | 8 |
| 6 | | 8 | | 3 | | | 5 | |

**ಆಡುವುದು ಹೇಗೆ?**
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 4964 ಸುಡೊಕು

| | | | | | | | | |
|---|---|---|---|---|---|---|---|---|
| 3 | 9 | 8 | 2 | 7 | 5 | 4 | 6 | 1 |
| 2 | 7 | 6 | 4 | 3 | 1 | 8 | 9 | 5 |
| 1 | 4 | 5 | 6 | 8 | 9 | 7 | 3 | 2 |
| 4 | 6 | 3 | 9 | 1 | 7 | 5 | 2 | 8 |
| 9 | 5 | 2 | 3 | 4 | 8 | 1 | 7 | 6 |
| 8 | 1 | 7 | 5 | 2 | 6 | 3 | 4 | 9 |
| 5 | 3 | 4 | 8 | 6 | 2 | 9 | 1 | 7 |
| 7 | 2 | 9 | 1 | 5 | 4 | 6 | 8 | 3 |
| 6 | 8 | 1 | 7 | 9 | 3 | 2 | 5 | 4 |

# ಕೋವಿಡ್ ಕರ್ಫ್ಯೂ: ಉದ್ಯಮಕ್ಕೆ ಹೆಚ್ಚಿದ ಸಂಕಷ್ಟ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ರಾಜ್ಯ ಸರ್ಕಾರವು ಮಂಗಳವಾರದಿಂದ ಜಾರಿಗೆ ತರಲಿರುವ ಕೋವಿಡ್ ಕರ್ಫ್ಯೂ ಅವಧಿಯಲ್ಲಿ ಉತ್ಪಾದನಾ ಚಟುವಟಿಕೆಗಳಿಗೆ ಅನುಮತಿ ನೀಡಿದ್ದರೂ, ಕೈಗಾರಿಕೆ ನಡೆಸಲು ಅಗತ್ಯವಾದ ಕೆಲವು ಸೌಲಭ್ಯಗಳು ಇಲ್ಲದಂತಾಗಿದೆ. ಈ ನಿರ್ಧಾರವು ಉದ್ಯಮವನ್ನು ಇನ್ನಷ್ಟು ಸಂಕಷ್ಟಕ್ಕೆ ದೂಡಲಿದೆ' ಎಂದು ರಾಜ್ಯದ ವಾಣಿಜ್ಯ ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿವೆ.

ಇದೇ ಪರಿಸ್ಥಿತಿ ಮುಂದುವರಿದರೆ ಈಗ ರಾಜ್ಯಕ್ಕೆ ಪ್ರತಿದಿನ ಬರುತ್ತಿರುವ ವರಮಾನದಲ್ಲಿ ಶೇಕಡ 70ರಷ್ಟು ಕಡಿಮೆ ಆಗಲಿದೆ. ಶೇಕಡ 25ರಷ್ಟು ಸಣ್ಣ ವ್ಯಾಪಾರಸ್ಥರು ಈಗಾಗಲೇ ಬಾಗಿಲು ಹಾಕಿದ್ದಾರೆ. ಈ ಪರಿಸ್ಥಿತಿಯು ಉದ್ಯಮ ಮತ್ತು ರಾಜ್ಯದ ಬೆಳವಣಿಗೆಯ ಮೇಲೆ ತೀವ್ರ ಪರಿಣಾಮ ಉಂಟುಮಾಡಲಿದೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಅವರು ಪರಿಸ್ಥಿತಿಯನ್ನು ವಿವರಿಸಿದರು.

ಬೇರೆ ರಾಜ್ಯಗಳಿಂದ ಕಚ್ಚಾ ಸಾಮಗ್ರಿಗಳನ್ನು ತರಿಸಿಕೊಳ್ಳಲು ಅಡ್ಡಿಯಾದರೆ ಉತ್ಪಾದನೆ ಆಗುವುದಿಲ್ಲ. ಕಚ್ಚಾ ಸಾಮಗ್ರಿಗಳ ಅಂಗಡಿಗಳನ್ನು ಮುಚ್ಚಿದರೆ ಕೈಗಾರಿಕೆ ನಡೆಸಲು ಸಾಧ್ಯವಿಲ್ಲ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಅಧ್ಯಕ್ಷ ಕೆ.ಬಿ. ಅರಸಪ್ಪ ಹೇಳಿದರು.


ನಿಧನ

ಶ್ರೀಮತಿ ಅಕ್ಕಯ್ಯಮ್ಮ
ಲೇಟ್ ಎಂ.ಕೃಷ್ಣರೆಡ್ಡಿರವರ ಧರ್ಮಪತ್ನಿ
ಇವರು ದಿನಾಂಕ: 26.04.2021ರಂದು ದೈವಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅಂತ್ಯಕ್ರಿಯೆಯನ್ನು ದಿ: 27.04.2021ರಂದು ಮಧ್ಯಾಹ್ನ 12.00 ಗಂಟೆಗೆ ದೊಡ್ಡನೆಕ್ಕುಂದಿ ರುದ್ರಭೂಮಿಯಲ್ಲಿ ನಡೆಸಲಾಗುವುದು.
ದುಃಖತಪ್ತರು: ಚಿಕ್ಕಕೊಂಡಾರೆಡ್ಡಿ ಕುಟುಂಬದವರು
ಫೋ: 7676660575

BOOK OBITUARY / REMEMBRANCE
ADVERTISEMENT IN
DECCAN HERALD & PRAJAVANI
Call / Email / WhatsApp for more details
DH DECCAN HERALD ಪ್ರಜಾವಾಣಿ
9880856233 | 9731810277
9901641752 | 9845114560 | 9886213331
E-mail: dhclassifieds@deccanherald.co.in


ಅಮೆರಿಕದಿಂದ 318 ಆಮ್ಲಜನಕ ಕಾನ್ಸನ್‌ಟ್ರೇಟರ್; ಬ್ರಿಟನ್, ಸೌದಿಯಿಂದ ವೈದ್ಯಕೀಯ ಉಪಕರಣದ ಭರವಸೆ

# ವಿವಿಧ ದೇಶಗಳ ನೆರವಿನ ಭರವಸೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಕೋವಿಡ್–19ರ ಎರಡನೇ ಅಲೆಯಿಂದಾಗಿ ತತ್ತರಿಸಿರುವ ಭಾರತಕ್ಕೆ ನೆರವು ನೀಡಲು ಅಮೆರಿಕ ಸೇರಿ ಹಲವು ರಾಷ್ಟ್ರಗಳು ಮುಂದೆ ಬಂದಿವೆ.

ಜೋ ಬೈಡನ್



ಕಮಲಾ ಹ್ಯಾರಿಸ್

ಕೋವಿಡ್–19 ಪಿಡುಗಿನ ಆರಂಭದ ದಿನಗಳಲ್ಲಿ ಭಾರತವು ನೀಡಿದ್ದ ನೆರವನ್ನು ಅಮೆರಿಕ ಅಧ್ಯಕ್ಷ ಜೋ ಬೈಡನ್ ಸ್ಮರಿಸಿದ್ದಾರೆ. ಈಗ ಭಾರತದಲ್ಲಿ ಸಾಂಕ್ರಾಮಿಕವು ತೀವ್ರಗೊಂಡಿರುವ ಸಂದರ್ಭದಲ್ಲಿ ಅಗತ್ಯವಿರುವ ನೆರವು ನೀಡುವುದಾಗಿ ಅವರು ಭರವಸೆ ಕೊಟ್ಟಿದ್ದಾರೆ.

ಏರ್ ಇಂಡಿಯಾ ವಿಶೇಷ ವಿಮಾನದಲ್ಲಿ 318 ಫಿಲಿಪ್ಸ್ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು (ವಾತಾವರಣದಿಂದ ಆಮ್ಲಜನಕ ಸಂಗ್ರಹಿಸುವ ಸಣ್ಣ ಯಂತ್ರಗಳು) ಅಮೆರಿಕವು ಭಾರತಕ್ಕೆ ಕಳುಹಿಸಿದೆ.

ಭಾರತಕ್ಕೆ ಅಗತ್ಯ ನೆರವು ನೀಡುವುದಾಗಿ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್, ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್, ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಜಾಕ್ ಸಲಿವನ್ ಕೂಡ ಹೇಳಿದ್ದಾರೆ.

ವೈದ್ಯಕೀಯ ಉಪಕರಣಗಳನ್ನು ಭಾರತಕ್ಕೆ ಸಾಗಿಸುವುದಕ್ಕಾಗಿ ಸೇನಾ ವಿಮಾನವನ್ನು ಅಮೆರಿಕ ಬಳಸುವ ಸಾಧ್ಯತೆ ಇದೆ.

ಅಮೆರಿಕ ಮಾತ್ರವಲ್ಲದೆ, ಸಿಂಗಪುರ, ಸೌದಿ ಅರೇಬಿಯಾ, ಬ್ರಿಟನ್ ಕೂಡ ವೈದ್ಯಕೀಯ ಉಪಕರಣಗಳನ್ನು ಭಾರತಕ್ಕೆ ರವಾನಿಸಲು ಆರಂಭಿಸಿವೆ. ಕೆನಡಾ, ಐರ್ಲೆಂಡ್ ಆಸ್ಟ್ರೇಲಿಯಾ, ಜರ್ಮನಿ, ರಷ್ಯಾ, ಇರಾನ್, ಫ್ರಾನ್ಸ್ ಮತ್ತು ಡೆನ್ಮಾರ್ಕ್ ನೆರವು ನೀಡುವುದಾಗಿ ಭರವಸೆ ಕೊಟ್ಟಿವೆ. ನೆರೆಯ ಚೀನಾ ಮತ್ತು ಪಾಕಿಸ್ತಾನ ಕೂಡ ಸಹಕರಿಸುವುದಾಗಿ ಹೇಳಿವೆ.

'ಅಮೆರಿಕ ಸಾಂಕ್ರಾಮಿಕದಿಂದಾಗಿ ತತ್ತರಿಸಿ ಹೋಗಿದ್ದಾಗ ಭಾರತವು ನಮಗೆ ನೆರವು ನೀಡಿತ್ತು. ಅದೇ ರೀತಿ ಈಗ ಭಾರತ ತೊಂದರೆಯಲ್ಲಿರುವಾಗ ಅಮೆರಿಕವೂ ಅದರ ನೆರವಿಗೆ ಬರಲಿದೆ' ಎಂದು ಬೈಡನ್ ಹೇಳಿದ್ದಾರೆ.

'ಕೋವಿಡ್ ವಿರುದ್ಧ ಹೋರಾಡಲು ಬೇಕಾಗಿರುವ ಹೆಚ್ಚುವರಿ ಬೆಂಬಲವನ್ನು ಒದಗಿಸಲು ಅಮೆರಿಕವು ಭಾರತ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡುತ್ತಿದೆ. ನಾವು ಭಾರತದ ಆರೋಗ್ಯ ಕಾರ್ಯಕರ್ತರು ಮತ್ತು ದೇಶದ ಜನರು ಸುರಕ್ಷತೆಗಾಗಿ ಪ್ರಾರ್ಥನೆ ಮಾಡುತ್ತಿದ್ದೇವೆ' ಎಂದು ಕಮಲಾ ಹ್ಯಾರಿಸ್ ಟ್ವೀಟ್ ಮಾಡಿದ್ದಾರೆ.

'ಭಾರತದ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ ಶ್ರಿಂಗ್ಲಾ ಮತ್ತು ಅಮೆರಿಕದಲ್ಲಿನ ಭಾರತದ ರಾಯಭಾರಿ ತರಣಜಿತ್ ಸಿಂಗ್ ಅವರೊಂದಿಗೆ ಸಂಪರ್ಕದಲ್ಲಿದ್ದೇನೆ' ಎಂದು ವಿದೇಶಾಂಗ ಸಚಿವಾಲಯದ ಉಪಕಾರ್ಯದರ್ಶಿ ವೆಂಡಿ ಶರ್ಮನ್ ಅವರು ತಿಳಿಸಿದರು.

'ಅಮೆರಿಕದ ನಾಗರಿಕರೂ ಭಾರತದ ಜೊತೆಗಿದ್ದಾರೆ. ಅಮೆರಿಕವು ಈ ಕಷ್ಟ ಕಾಲದಲ್ಲಿ ವೆಂಟಿಲೇಟರ್, ಪಿಪಿಇ, ಲಸಿಕೆಯ ಕಚ್ಚಾ ವಸ್ತುಗಳು ಸೇರಿದಂತೆ ಇತರೆ ಅಗತ್ಯ ವಸ್ತುಗಳನ್ನು ಭಾರತಕ್ಕೆ ನೀಡುತ್ತಿದೆ' ಎಂದು ಅವರು ಹೇಳಿದರು.

ಅಲ್ಲದೆ ಭಾರತೀಯ ಮೂಲದ ಅಮೆರಿಕದ ಸಂಸದ ರೋ ಖನ್ನಾ ಅವರು ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಭಾರತಕ್ಕೆ ಗೂಗಲ್, ಮೈಕ್ರೊಸಾಫ್ಟ್ ನೆರವು

**ಹ್ಯೂಸ್ಟನ್:** ಕೋವಿಡ್–19ನಿಂದ ಬಿಕ್ಕಟ್ಟು ಎದುರಿಸುತ್ತಿರುವ ಭಾರತಕ್ಕೆ ಸಾಧ್ಯವಿರುವ ಎಲ್ಲ ರೀತಿಯ ನೆರವು ನೀಡುವುದಾಗಿ ಗೂಗಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಂದರ್ ಪಿಚೈ ಮತ್ತು ಮೈಕ್ರೊಸಾಫ್ಟ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತ್ಯ ನಾದೆಲ್ಲ ಭರವಸೆ ನೀಡಿದ್ದಾರೆ.

'ಭಾರತದಲ್ಲಿ ಕೋವಿಡ್‌ನಿಂದ ಎದುರಾಗಿರುವ ಪರಿಸ್ಥಿತಿ ನೋಡಿ ನೋವಾಗಿದೆ. ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಲು ನೆರವಾಗಲು ಮತ್ತು ಮಹತ್ವದ ಮಾಹಿತಿಯ ಪ್ರಚಾರಕ್ಕೆ ₹135 ಕೋಟಿಗಳನ್ನು ಗೂಗಲ್ ಮತ್ತು ಗೂಗಲರ್ಸ್ ವತಿಯಿಂದ ಗಿವ್ ಇಂಡಿಯಾ ಮತ್ತು ಯುನಿಸೆಫ್‌ಗೆ ನೀಡಲಾಗುವುದು' ಎಂದು ಗೂಗಲ್ ಸಿಇಒ ಪಿಚೈ ಟ್ವೀಟ್ ಮಾಡಿದ್ದಾರೆ.

ಆಮ್ಲಜನಕ ಉಪಕರಣಗಳನ್ನು ಖರೀದಿಸಲು ಮತ್ತು ಯಾವುದೇ ರೀತಿಯ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲು ತಮ್ಮ ಕಂಪನಿಯ ಸಂಪನ್ಮೂಲಗಳು ಮತ್ತು ತಂತ್ರಜ್ಞಾನಗಳನ್ನು ಒದಗಿಸಲಾಗುವುದು ಎಂದು ಮೈಕ್ರೊಸಾಫ್ಟ್ ಸಿಇಒ ನಾದೆಲ್ಲಾ ಟ್ವೀಟ್ ಮಾಡಿದ್ದಾರೆ.

'ಭಾರತದಲ್ಲಿ ಪರಿಸ್ಥಿತಿ ಹೃದ್ರಯ ವಿದ್ರಾವಕವಾಗಿದೆ. ನೆರವು ನೀಡಲು ಮುಂದಾಗಿರುವ ಅಮೆರಿಕಕ್ಕೆ ಧನ್ಯವಾದಗಳು. ಮೈಕ್ರೊಸಾಫ್ಟ್ ಸಹ ಭಾರತಕ್ಕೆ ಎಲ್ಲ ರೀತಿಯ ನೆರವು ಒದಗಿಸಲಿದೆ' ಎಂದು ತಿಳಿಸಿದ್ದಾರೆ.

## ಭಾರತಕ್ಕೆ ವೈದ್ಯಕೀಯ ಸರಕು ಸಾಗಣೆ ವಿಮಾನಯಾನ ರದ್ದುಪಡಿಸಿದ ಚೀನಾ

**ಬೀಜಿಂಗ್:** ಚೀನಾದ ಸರ್ಕಾರಿ ಸಿಚುವಾನ್ ಏರ್‌ಲೈನ್ಸ್ 15 ದಿನಗಳ ಕಾಲ ಭಾರತಕ್ಕೆ ತನ್ನ ಎಲ್ಲ ಸರಕು ವಿಮಾನಗಳ ಹಾರಾಟವನ್ನು ರದ್ದುಗೊಳಿಸಿದೆ. ಇದರಿಂದಾಗಿ ದೇಶಕ್ಕೆ ಅಗತ್ಯವಿರುವ ಆಮ್ಲಜನಕ ಸಾಂದ್ರಕಗಳು ಮತ್ತು ಇತರ ವೈದ್ಯಕೀಯ ಉಪಕರಣಗಳನ್ನು ಖರೀದಿಸುವ ಭಾರತದ ಪ್ರಯತ್ನಕ್ಕೆ ದೊಡ್ಡ ಅಡ್ಡಿಯುಂಟಾಗಿದೆ.

ಸಿಚುವಾನ್ ಏರ್‌ಲೈನ್ಸ್‌ನ ಭಾಗವಾಗಿರುವ ಸಿಚುವಾನ್ ಚುವಾನ್‌ಹಾಂಗ್ ಲಾಜಿಸ್ಟಿಕ್ಸ್ ಕಂಪನಿಯು ತನ್ನ ಮಾರಾಟದ ಏಜೆಂಟರಿಗೆ ಸೋಮವಾರ ಪತ್ರ ಬರೆದಿದ್ದು, 'ಕ್ಸಿಯಾನ್, ದೆಹಲಿ ಸೇರಿದಂತೆ ಆರು ಮಾರ್ಗಗಳಲ್ಲಿ ತನ್ನ ಸರಕುವಿಮಾನಗಳ ಹಾರಟವನ್ನು ಸ್ಥಗಿತಗೊಳಿಸಲಾಗಿದೆ. ಭಾರತದಲ್ಲಿ ಸಾಂಕ್ರಾಮಿಕ ರೋಗದ ಸ್ಥಿತಿ ಉಲ್ಬಣಗೊಂಡಿದ್ದು, ಈ ನಿಟ್ಟಿನಲ್ಲಿ ಮುಂದಿನ 15 ದಿನಗಳ ಕಾಲ ವಿಮಾನಯಾನವನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ' ಎಂದು ತಿಳಿಸಿದೆ.

'ಭಾರತಕ್ಕೆ ಸರಕು ಸಾಗಣೆ ವಿಮಾನಗಳನ್ನು ರದ್ದು ಪಡಿಸಿರುವುದು ನಮ್ಮ ಸಂಸ್ಥೆಗೆ ದೊಡ್ಡ ನಷ್ಟವುಂಟಾಗಿದೆ. 15 ದಿನಗಳ ನಂತರ ನಿರ್ಧಾರ ಬದಲಾವಣೆ ಮಾಡುವ ಕುರಿತು ಚಿಂತನೆ ನಡೆಸಲಾಗುವುದು' ಎಂದೂ ಕಂಪನಿಯು ಹೇಳಿದೆ.

ಇದರ ನಡುವೆಯೇ ಚೀನಾವು ಭಾರತದಲ್ಲಿ ಉಲ್ಬಣಿಸುತ್ತಿರುವ ಕೋವಿಡ್ –19 ಪ್ರಕರಣಗಳ ನಿಯಂತ್ರಣಕ್ಕೆ ಸಹಾಯ ಮಾಡುವುದಾಗಿ ಪುನರುಚ್ಚರಿಸಿದೆ.

'ಭಾರತದಲ್ಲಿನ ಸಾಂಕ್ರಾಮಿಕ ರೋಗದ ಪರಿಸ್ಥಿತಿಯನ್ನು ಚೀನಾ ಗಮನಿಸುತ್ತಿದೆ. ಭಾರತದಲ್ಲಿ ದಿನದಿಂದ ದಿನಕ್ಕೆ ಹದಗೆಡುತ್ತಿರುವ ಪರಿಸ್ಥಿತಿಗೆ ಚೀನಾವು ತನ್ನ ಪ್ರಾಮಾಣಿಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ವಾಂಗ್ ವೆನ್ಬಿನ್ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ವಿಧಾನಸಭೆ: ಶೇ 75ರಷ್ಟು ಮತದಾನ

# 7ನೇ ಹಂತ: ಕೆಲವೆಡೆ ಹಿಂಸೆ

ಪ್ರಜಾವಾಣಿ ವಾರ್ತೆ

**ಕೋಲ್ಕತ್ತ:** ಪಶ್ಚಿಮ ಬಂಗಾಳ ವಿಧಾನಸಭೆಗೆ ಸೋಮವಾರ ನಡೆದ ಏಳನೇ ಹಂತದ ಮತದಾನದ ಸಂದರ್ಭದಲ್ಲಿ ಕೆಲವೆಡೆ ಹಿಂಸಾಚಾರವಾಗಿದೆ. ಸಂಜೆ 5 ಗಂಟೆಯ ಹೊತ್ತಿಗೆ ಶೇ 75.06ರಷ್ಟು ಮತದಾರರು ಹಕ್ಕು ಚಲಾಯಿಸಿದ್ದಾರೆ.

ಅಸನ್ಸೋಲ್ ದಕ್ಷಿಣ ಕ್ಷೇತ್ರದಲ್ಲಿ ತನ್ನ ಕಾರ್ಯಕರ್ತರ ಮೇಲೆ ಪೊಲೀಸರು ಲಾಠಿ ಪ್ರಹಾರ ನಡೆಸಿದ್ದಾರೆ ಎಂದು ಟಿಎಂಸಿ ಆರೋಪಿಸಿದೆ. ಟಿಎಂಸಿ ಅಭ್ಯರ್ಥಿ ಸಾಯನಿ ಘೋಷ್ ಅವರು ಸ್ಥಳಕ್ಕೆ ಧಾವಿಸಿ, ಪೊಲೀಸ್ ಅಧಿಕಾರಿಗಳ ಜತೆಗೆ ಮಾತಿನ ಚಕಮಕಿ ನಡೆಸಿದ್ದಾರೆ.

ಬಿಜೆಪಿ ಕಾರ್ಯಕರ್ತರು ಇಲ್ಲಿ ಮತದಾನ ಸ್ಥಗಿತಕ್ಕೆ ಯತ್ನಿಸಿದ್ದಾರೆ ಎಂದು ಅವರು ಆರೋಪಿಸಿದ್ದಾರೆ. ಈ ಆರೋಪವನ್ನು ಬಿಜೆಪಿ ಅಭ್ಯರ್ಥಿ ಅಗ್ನಿಮಿತ್ರ ಪಾಲ್ ನಿರಾಕರಿಸಿದ್ದಾರೆ.

'ಸೋಲು ಸನ್ನಿಹಿತ ಎಂಬುದು ಖಚಿತವಾದ ಕಾರಣ ಘೋಷ್ ಅವರು ಇಂತಹ ಆಧಾರರಹಿತ ಆರೋಪ ಮಾಡುತ್ತಿದ್ದಾರೆ' ಎಂದಿದ್ದಾರೆ.

ಕೋಲ್ಕತ್ತದ ರಶ್‌ಬರಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಲೆ. ಜ. (ನಿವೃತ್ತ) ಸುಬ್ರತಾ ಸಹಾ ಅವರ ಏಜೆಂಟ್ ಮೋಹನ್ ರಾವ್ ಅವರನ್ನು ಮತಗಟ್ಟೆಯಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಮತಗಟ್ಟೆಯೊಳಗೆ ಈ ವ್ಯಕ್ತಿಯು ತಮ್ಮ ಕೈ ಹಿಡಿದರು ಮತ್ತು ತಮ್ಮತ್ತ ಸೆಳೆದುಕೊಂಡರು ಎಂದು ಹಲವು ಮಹಿಳೆಯರು ಆರೋಪಿಸಿದ್ದಾರೆ. ರಾವ್ ಅವರು ಈ ಆರೋಪಗಳನ್ನು ಅಲ್ಲಗಳೆದಿದ್ದಾರೆ.

ಏಳನೇ ಹಂತದ ಮತದಾನದ ದಿನ ಕೋಲ್ಕತ್ತದ ಮತಗಟ್ಟೆಯೊಂದರ ದೃಶ್ಯ
—ಪಿಟಿಐ ಚಿತ್ರ

ರಶ್ಮಿಹರಿ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ತಳ್ಳಾಟ ನಡೆದಿದೆ. ಬಿಜೆಪಿಗೆ ಮತ ಹಾಕುವಂತೆ ಕೇಂದ್ರೀಯ ಪಡೆಗಳು ಮತದಾರರಿಗೆ ಹೇಳಿವೆ ಎಂದು ಟಿಎಂಸಿ ಆರೋಪಿಸಿದ್ದು ಈ ಸಂಘರ್ಷಕ್ಕೆ ಕಾರಣ. ಮಾಲ್ಡಾ ಜಿಲ್ಲೆಯ ಮಾಲತಿಪುರ ಕ್ಷೇತ್ರದ ಮತಗಟ್ಟೆಯ ಏಜೆಂಟ್ ಒಬ್ಬರಿಗೆ ಕೇಂದ್ರೀಯ ಪಡೆ ಥಳಿಸಿದೆ ಎಂದು ಟಿಎಂಸಿ ಆರೋಪಿಸಿದೆ. ತಕ್ಷಣವೇ ಟಿಎಂಸಿ ಮತ್ತು ಬಿಜೆಪಿ ಕಾರ್ಯಕರ್ತರು ಅಲ್ಲಿ ದೊಡ್ಡ ಸಂಖ್ಯೆಯಲ್ಲಿ ಜಮಾಯಿಸಿ, ಕೈ ಕೈ ಮಿಲಾಯಿಸಿದರು. ಕೋಲ್ಕತ್ತ ಪೋರ್ಟ್ ಕ್ಷೇತ್ರದಲ್ಲಿ ಎರಡೂ ಪಕ್ಷಗಳ ಕಾರ್ಯಕರ್ತರು ಪರಸ್ಪರ ಕಲ್ಲೆಸೆದಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಮತದಾರರಿಗೆ ನೀಡಿದ ಸ್ಲಿಪ್ ಅನ್ನು ಕಾಂಗ್ರೆಸ್ ಕಾರ್ಯಕರ್ತರು ಹರಿದು ಹಾಕಿದ್ದಾರೆ ಎಂದು ಟಿಎಂಸಿಯ ಹಿರಿಯ ಮುಖಂಡ ಫಿರ್ಹಾದ್ ಹಕೀಮ್ ಆರೋಪಿಸಿದ್ದಾರೆ. ಹಾಗೆ ಹರಿದು ಹಾಕುತ್ತಿದ್ದರು ಎನ್ನಲಾದ ವ್ಯಕ್ತಿಯೊಬ್ಬರನ್ನು ಹಕೀಮ್ ಅವರು ಓಡಿಸಿದ್ದಾರೆ. ಆದರೆ, ಈ ಆರೋಪವನ್ನು ಕಾಂಗ್ರೆಸ್ ಅಲ್ಲಗಳೆದಿದೆ.

ಮುರ್ಷಿದಾಬಾದ್ ಜಿಲ್ಲೆಯ ರಾಣಿನಗರ ಕ್ಷೇತ್ರದ ತನ್ನ ಅಭ್ಯರ್ಥಿಯ ಮೇಲೆ ಟಿಎಂಸಿ ಕಾರ್ಯಕರ್ತರು ಹಲ್ಲೆ ನಡೆಸಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಆಯುಧಗಳನ್ನು ಹೊಂದಿದ್ದ ದುಷ್ಕರ್ಮಿಗಳು ಅಭ್ಯರ್ಥಿಯನ್ನು ಅಕ್ರಮವಾಗಿ ವಶದಲ್ಲಿ ಇರಿಸಿಕೊಂಡಿದ್ದರು ಎಂದೂ ಹೇಳಿದೆ. ಆದರೆ, ಇಂತಹ ಘಟನೆಯೇ ನಡೆದಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ.

ಪ್ರಜಾ ಮತ 2021 ಜನತಂತ್ರದ ಹಬ್ಬ

## ಕೇಂದ್ರೀಯ ಪಡೆಗಳ ತೆರವಿಗೆ ಮಮತಾ ಆಗ್ರಹ

**ಕೋಲ್ಕತ್ತ (ಪಿಟಿಐ):** ಕೋವಿಡ್ ಹರಡುವುದನ್ನು ತಡೆಯುವುದಕ್ಕಾಗಿ ಪಶ್ಚಿಮ ಬಂಗಾಳದಿಂದ ಕೇಂದ್ರೀಯ ಪಡೆಗಳನ್ನು ತೆರವು ಮಾಡಬೇಕು ಎಂದು ಅಲ್ಲಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಗ್ರಹಿಸಿದ್ದಾರೆ.

'ರಾಜ್ಯದಲ್ಲಿ ಕೇಂದ್ರೀಯ ಪಡೆಗಳ ಸುಮಾರು 2 ಲಕ್ಷ ಸಿಬ್ಬಂದಿ ಇದ್ದಾರೆ. ಅವರೆಲ್ಲರೂ ಕೋವಿಡ್ ಬಾಧಿತ ರಾಜ್ಯಗಳಿಂದ ಬಂದವರು. ಅವರು ಶಾಲೆ, ಕಾಲೇಜು ಮತ್ತು ಸುರಕ್ಷಿತ ಸ್ಥಳಗಳಲ್ಲಿ ತಂಗಿದ್ದಾರೆ. ಅವರಲ್ಲಿ ಶೇ 75ರಷ್ಟು ಸಿಬ್ಬಂದಿಗೆ ಸೋಂಕು ಇರಬಹುದು. ಕೊನೆಯ ಹಂತದ ಮತದಾನದಿಂದಲಾದರೂ ಅವರನ್ನು ಹೊರಗೆ ಇಡಿ' ಎಂದು ಮಮತಾ ಕೋರಿದ್ದಾರೆ.

ನೋಮ್ಯಾಡ್ಸ್ ಲ್ಯಾಂಡ್ ಚಿತ್ರದ ನಿರ್ಮಾಪಕಿ ಫ್ರಾನ್ಸಿಸ್ ಮ್ಯಾಕ್‌ಡೊರ್ಮಾಂಡ್ ಹಾಗು ಕ್ಲೋಯ್ ಝೂವೊ

# 'ನೋಮ್ಯಾಡ್ ಲ್ಯಾಂಡ್'ಗೆ ಆಸ್ಕರ್

**ಲಾಸ್ ಏಂಜಲೀಸ್ (ಅಮೆರಿಕ):** ಪ್ರಸಕ್ತ ಸಾಲಿನ ಆಸ್ಕರ್ ಪ್ರಶಸ್ತಿ ಪ್ರಕಟವಾದಾಗ ಚೀನಾದ ಕ್ಲೋಯಿ ಝೂವೊ ಅವರಿಗೆ ಹ್ಯಾಟ್ರಿಕ್ ಸಂಭ್ರಮ. ಅವರ ನಿರ್ದೇಶನದ 'ನೋಮ್ಯಾಡ್ ಲ್ಯಾಂಡ್' ಚಿತ್ರವು 'ಅತ್ಯುತ್ತಮ ಚಿತ್ರ' ಪ್ರಶಸ್ತಿಯನ್ನು ಬಾಚಿಕೊಂಡರೆ, ಇದೇ ಚಿತ್ರಕ್ಕಾಗಿ ಕ್ಲೋಯಿ ಝೂವೊ ಅತ್ಯುತ್ತಮ ನಿರ್ದೇಶಕಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

ಈ ಪ್ರಶಸ್ತಿಯನ್ನು ಪಡೆದ ಮೊದಲ ಕಪ್ಪುವರ್ಣೀಯ ನಿರ್ದೇಶಕಿ ಎಂಬ ಹಿರಿಮೆಗೂ ಝೂವೊ ಪಾತ್ರರಾದರು.

ಲಾಸ್ ಏಂಜಲೀಸ್‌ನಲ್ಲಿ ಭಾನುವಾರ ರಾತ್ರಿ ನಡೆದ ಸಮಾರಂಭದಲ್ಲಿ ಆಸ್ಕರ್ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. 'ನೋಮ್ಯಾಡ್ ಲ್ಯಾಂಡ್' ಚಿತ್ರದ ನಟನೆಗೆ, ಫ್ರಾನ್ಸಿಸ್ ಮ್ಯಾಕ್‌ಡೊರ್ಮಾಂಡ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿ ಒಲಿದು ಬಂತು. ಹೀಗಾಗಿ ಈ ಚಿತ್ರಕ್ಕೆ ಮೂರು ಪ್ರಶಸ್ತಿಗಳನ್ನು ಪಡೆದ ಸಂಭ್ರಮ.

'ನೋಮ್ಯಾಡ್ಸ್ ಲ್ಯಾಂಡ್' ಚಿತ್ರವು ಭಾಗಶಃ ಸಾಕ್ಷ್ಯಚಿತ್ರದ ಮಾದರಿಯಲ್ಲಿದೆ. ಅಮೆರಿಕದಲ್ಲಿ ವ್ಯಾನ್‌ನೊಳಗೇ ಬದುಕು ನಡೆಸುವವರ (ವ್ಯಾನ್ ನಿವಾಸಿಗಳು) ಬದುಕಿನ ಪ್ರಯಾಣವನ್ನು ಈ ಚಿತ್ರ ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದೆ. 83 ವರ್ಷದ ಆಂತೋನಿ ಹಾಪ್ಕಿನ್ಸ್ ಅವರಿಗೆ 'ಮಾಂಕ್' ಚಿತ್ರದ ಅಭಿನಯಕ್ಕಾಗಿ ಅತ್ಯುತ್ತಮ ನಟ ಪ್ರಶಸ್ತಿ ಒಲಿದಿದೆ. ಅತ್ಯುತ್ತಮ ಅಂತರರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯನ್ನು 'ಅನದರ್ ರೌಂಡ್' ಚಿತ್ರ ಗೆದ್ದಿದೆ.

**ಪ್ರಶಸ್ತಿ ಪುರಸ್ಕೃತ ಇತರರು:** ಡ್ಯಾನಿಯಲ್ ಕಲೂಯಾ (ಅತ್ಯುತ್ತಮ ಪೋಷಕ ನಟ), ಯಾನ್ ಯು ಜಂಗ್ (ಅತ್ಯುತ್ತಮ ಪೋಷಕ ನಟಿ) ಎಮೆರಲ್ಡ್ ಫೆನಲ್ (ಅತ್ಯುತ್ತಮ ಚಿತ್ರಕಥೆ; ಚಿತ್ರ: ಪ್ರಾಮಿಸಿಂಗ್ ಯಂಗ್ ವುಮನ್).

**ಷೇರುಪೇಟೆ ವಹಿವಾಟು** ▲ 508





**ಎನ್‌ಎಸ್‌ಇ ನಿಫ್ಟಿ**

| | |
|---|---|
| ಹಿಂದಿನ ಅಂತ್ಯ | 14,341 |
| ಇಂದಿನ ಅಂತ್ಯ | 14,485 |
| ▲ | 144 |
| ದಿನದ ಗರಿಷ್ಠ | 11,680 |

**ವಿನಿಮಯ ದರ**

| | |
|---|---|
| $ ಡಾಲರ್ | 74.73 |
| £ ಪೌಂಡ್ | 104 |
| € ಯುರೊ | 90.43 |
| ¥ ಯೆನ್ (100ಕ್ಕೆ) | 69 |

**ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ**

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹410 |
| 12 ಮೊಟ್ಟೆಗೆ | ₹57 |
| ಮೈಸೂರು | |
| 100 ಮೊಟ್ಟೆಗೆ | ₹410 |

ಪೌಷ್ಟಿಕ ಆಹಾರ ಸೇವಿಸಿ

**ಮುಂಬೈ ಧಾರಣೆ**

**ಶೇಂಗಾ**

26-4-2021

| | |
|---|---|
| ಜಾವಾ 70/80(ಹೊಸ) | 10200-10300 |
| ಜಾವಾ 80/90(ಹೊಸ) | 9450-9550 |
| ದಪ್ಪ ಮಧ್ಯಪ್ರದೇಶ(ಹೊಸ) | 9950-10050 |
| ದಪ್ಪ ಗುಜರಾತ್(ಹೊಸ) | 9100-9200 |
| **ಶೇಂಗಾ ಎಣ್ಣೆ (10 ಕೆಜಿಗೆ)** | |
| ಕಚ್ಚಾ (ತೆರಿಗೆ ಬಿಟ್ಟು) | 1600 (1630) |
| ಒಂದು ವಾರದ ಡೆಲಿವರಿ | 1595 (1625) |
| ಸೋಯಾ ಕಚ್ಚಾ | 1395 (1395) |
| ಪಾಮ್ ವಾರದ ಡೆಲಿವರಿ | 1283 (1291) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 1650 (1660) |
| **ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)** | |
| ಅಪರಂಜಿ ಚಿನ್ನ 10 ಗ್ರಾಂ | 47,300 (47,500) |
| ಬೆಳ್ಳಿ ಕೆ.ಜಿ | 68,600 (69,000) |

ಆವರಣದಲ್ಲಿ ಶನಿವಾರದ ಧಾರಣೆ

## ಇನ್ಫೊಸಿಸ್ ನೌಕರರಿಗೆ ಆರೈಕೆ ಕೇಂದ್ರ ಆರಂಭ

**ನವದೆಹಲಿ (ಪಿಟಿಐ):** ತನ್ನ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ಬೆಂಗಳೂರು ಮತ್ತು ಪುಣೆಯಲ್ಲಿ ಕೋವಿಡ್ ಆರೈಕೆ ಕೇಂದ್ರಗಳನ್ನು ಆರಂಭಿಸಿರುವುದಾಗಿ ಇನ್ಫೊಸಿಸ್ ತಿಳಿಸಿದೆ. ಅಲ್ಲದೆ, ತನ್ನ ಪ್ರಮುಖ ಶಾಖೆಗಳು ಇರುವ ಇತರ ಕಡೆಗಳಲ್ಲಿಯೂ ಇಂತಹ ಕೇಂದ್ರಗಳನ್ನು ಆರಂಭಿಸುವ ಪ್ರಕ್ರಿಯೆ ನಡೆದಿದೆ ಎಂದು ಹೇಳಿದೆ.

'ಕೊರೊನಾ ಸೋಂಕಿಗೆ ತುತ್ತಾಗಿರುವ, ಮನೆಯಲ್ಲೇ ಕ್ವಾರೆಂಟೀನ್ ಆಗುವುದಕ್ಕಿಂತ ಹೆಚ್ಚಿನ ಆರೈಕೆಯ ಅಗತ್ಯವಿರುವ ನಮ್ಮ ನೌಕರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಬೆಂಬಲವಾಗಿ ನಿಲ್ಲಲು ಈ ಕೇಂದ್ರಗಳನ್ನು ಆರಂಭಿಸಲಾಗಿದೆ' ಎಂದು ಕಂಪನಿ ಹೇಳಿದೆ. ಪುಣೆಯ ಕೇಂದ್ರವನ್ನು ರುಬಿ ಹಾಲ್ ಆಸ್ಪತ್ರೆ ಹಾಗೂ ಬೆಂಗಳೂರಿನ ಕೇಂದ್ರವನ್ನು ಮಣಿಪಾಲ್ ಆಸ್ಪತ್ರೆ ನಿಭಾಯಿಸಲಿದೆ. ಕಂಪನಿಯು ತನ್ನ ಕೆಲವು ಕ್ಯಾಂಪಸ್‌ಗಳಲ್ಲಿ ಲಸಿಕೆ ನೀಡುವ ವ್ಯವಸ್ಥೆಯನ್ನೂ ಕಲ್ಪಿಸಿದೆ.

**ದೇಶದಾದ್ಯಂತ ಮಾರುಕಟ್ಟೆ ಧಾರಣೆ**

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 900-9050 |
| ನಡುಗೋಲು | 1000-1050 |
| ರಾಶಿ | 1200-1300 |
| ರಾಶಿ ಉತ್ತಮ | 1300-1400 |
| ಜರಡಿ | 1500-1550 |
| ಹೆರಕಿದ್ದು | 1900-2000 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1700-1750 |
| ಹಸಿರು ಅತಿ ಉತ್ತಮ | 1900-2000 |
| ಕಾಳು ಮೆಣಸು | 350 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 10000-22500 |
| ಹೊಸತು | 23500-41000 |
| ಹಳತು | 42500-50500 |
| **ಕುಮಟ** | |
| ಚಿಪ್ಪು | 26169-29619 |
| ಕೋಕ | 18019-28709 |
| ಫ್ಯಾಕ್ಟರಿ | 15109-15989 |
| ಹಳೆಚಾಲಿ | 37899-38899 |
| ಹೊಸಚಾಲಿ | 33109-36569 |
| **ಪುತ್ತೂರು** | |
| ಕೋಕ | 9500-24000 |
| ಹೊಸತು | 28500-40500 |
| **ಸಿದ್ದಾಪುರ** | |
| ಬಿಳಿಗೋಟು | 24608-29808 |
| ಕೋಕ | 18699-29899 |
| ಚಾಲಿ | 33812-35409 |
| ಕೆಂಪುಗೋಟು | 22408-30099 |
| ರಾಶಿ | 37099-41099 |
| ತಟ್ಟಿಬೆಟ್ಟೆ | 29219-36099 |
| **ಯಲ್ಲಾಪುರ** | |
| ಬಿಳಿಗೋಟು | 25012-31099 |
| ಕೋಕ | 18899-28812 |
| ಚಾಲಿ | 31612-36501 |
| ಕೆಂಪುಗೋಟು | 26899-30599 |
| ರಾಶಿ | 38799-43269 |
| ತಟ್ಟಿಬೆಟ್ಟೆ | 32499-37770 |
| **ಶಿವಮೊಗ್ಗ** | |
| ಬೆಟ್ಟೆ | 41619-43410 |
| ಗೊರಬಲು | 11809-30499 |
| ರಾಶಿ | 36569-40619 |
| ಸರಕು | 47009-73000 |
| **ಚನ್ನಗಿರಿ ತುಮ್ಕೋಸ್** | |
| ರಾಶಿ | 39086-40099 |
| ಬೆಟ್ಟೆ | 31229-31329 |
| **ರಾಮನಗರ ರೇಷ್ಮೆ** | |
| ಮಿಶ್ರತಳಿ | 180-338 |
| ದ್ವಿತಳಿ | 222-381 |

**ಮೂಡಿಗೆರೆ ಕಾಫಿ**

| | ಮುದ್ರಮನೆ |
|---|---|
| ಎಪಿ | 10250 |
| ಎಸಿ | 4090 |
| ಆರ್‌ಪಿ | 5100 |
| ಆರ್‌ಸಿ | 2900 |

## ಮಾಸ್ಕ್ ಧರಿಸದ ಥಾಯ್ಲೆಂಡ್ ಪ್ರಧಾನಿಗೆ ದಂಡ

**ಬ್ಯಾಂಕಾಕ್:** ಮಾಸ್ಕ್ ಧರಿಸದ ಥಾಯ್ಲೆಂಡ್ ಪ್ರಧಾನಿ ಪ್ರಯುಥ್ ಚಾನ್–ಒಚಾ ಅವರಿಗೆ ಸೋಮವಾರ 190 ಡಾಲರ್ (₹14,223) ದಂಡ ವಿಧಿಸಲಾಗಿದೆ.

ಸಭೆಯೊಂದರಲ್ಲಿ ಮಾಸ್ಕ್ ಧರಿಸದೆ ಅವರು ಭಾಗವಹಿಸಿದ್ದ ಚಿತ್ರವನ್ನು ಫೇಸ್‌ಬುಕ್‌ನಲ್ಲಿ ಅಪ್‌ಲೋಡ್ ಮಾಡಲಾಗಿತ್ತು. ಈ ಚಿತ್ರವನ್ನು ಆಧರಿಸಿ ದಂಡ ವಿಧಿಸಲಾಗಿದೆ. ಬಳಿಕ ಚಿತ್ರವನ್ನು ತೆಗೆಯಲಾಗಿದೆ.

# 'ಕೋವಿಡ್: ವಿಮೆ ತಿರಸ್ಕೃತ ಆಗುವ ಸಾಧ್ಯತೆ ಕಡಿಮೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕೊರೊನಾ ವಿಮೆ ಕ್ಲೇಮ್ ಅರ್ಜಿಯು ಕಾರ್ಪೊರೇಟ್ ವಲಯದಿಂದ, ಬೇರೆ ಬೇರೆ ಕಂಪನಿಗಳ ಸಮೂಹ ವಿಮೆಗೆ ಒಳಪಟ್ಟ ನೌಕರರಿಂದ ಬಂದಿದ್ದರೆ, ಅದು ತಿರಸ್ಕೃತವಾಗುವುದು ತೀರಾ ಕಡಿಮೆ' ಎಂದು ವಿಮಾ ಕಂಪನಿಗಳ ಪ್ರತಿನಿಧಿಗಳು ಹಾಗೂ ಟಿಪಿಎ (ನೌಕರ ಕೆಲಸ ಮಾಡುವ ಕಂಪನಿ ಮತ್ತು ವಿಮಾ ಕಂಪನಿ ನಡುವಿನ ಮಧ್ಯವರ್ತಿ) ಪ್ರತಿನಿಧಿಗಳು ಹೇಳುತ್ತಾರೆ.

'ಕಂಪನಿ ಕಡೆಯಿಂದ ಅಥವಾ ವೈಯಕ್ತಿಕವಾಗಿ ಆರೋಗ್ಯ ವಿಮಾ ಸೌಲಭ್ಯ ಪಡೆದುಕೊಂಡಿರುವವರು ಕೋವಿಡ್–19 ಕಾಯಿಲೆಗೆ ವಿಮಾ ಸೌಲಭ್ಯ ಪಡೆಯಬೇಕು ಎಂದಾದರೆ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಪಾಸಿಟಿವ್ ಎಂಬ ವರದಿ ಬಂದಿರಲೇಬೇಕು. ಬೇರೆ ಯಾವುದೇ ಪರೀಕ್ಷೆಗಳಲ್ಲಿ ಕೋವಿಡ್–19 ಪಾಸಿಟಿವ್ ಬಂದಿದ್ದರೂ, ಅದು ವಿಮಾ ಸೌಲಭ್ಯ ಪಡೆಯಲು ನೆರವಾಗುವುದಿಲ್ಲ' ಎಂದು ಟಿಪಿಎ ಪ್ರತಿನಿಧಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವ್ಯಕ್ತಿಯು ಚಿಕಿತ್ಸೆ ಪಡೆಯಲು ಮಾಡಿರುವ ವೆಚ್ಚ ಹಾಗೂ ವಿಮಾ ಕಂಪನಿಯಿಂದ ಮಂಜೂರಾಗುವ ಮೊತ್ತದ ನಡುವೆ ವ್ಯತ್ಯಾಸ ಆಗುವ ಸಾಧ್ಯತೆಗಳು ಇರುತ್ತವೆ. ಈ ವ್ಯತ್ಯಾಸಕ್ಕೆ, ವ್ಯಕ್ತಿ ಪಡೆದಿರುವ ವಿಮಾ ಯೋಜನೆಯ ನಿಬಂಧನೆಗಳು ಕಾರಣವಾಗಿರುತ್ತವೆ ಎಂದು ಅವರು ಹೇಳಿದರು.

'ಕೆಲವು ಆಸ್ಪತ್ರೆಗಳು ಕೋವಿಡ್–19 ರೋಗಿಗಳಿಗೆ ವಿಮಾ ಸೌಲಭ್ಯವಿದ್ದರೂ ನಗದುರಹಿತ ಚಿಕಿತ್ಸೆ ಸೌಲಭ್ಯ ನೀಡದಿರುವ ವರದಿಗಳು ಇವೆ. ಆದರೆ, ವಿಮಾ ಕಂಪನಿ ಹಾಗೂ ಆಸ್ಪತ್ರೆ ನಡುವೆ ನಗದು ರಹಿತ ಚಿಕಿತ್ಸೆಯ ಒಪ್ಪಂದ ಇದ್ದರೆ, ಅಂತಹ ಆಸ್ಪತ್ರೆಗಳು ರೋಗಿಗಳಿಗೆ ಈ ಸೌಲಭ್ಯ ನಿರಾಕರಿಸುವಂತೆ ಇಲ್ಲ' ಎಂದು ಭಾರತೀಯ ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಐಆರ್‌ಡಿಎಐ) ಈಚೆಗೆ ತಾಕೀತು ಮಾಡಿದೆ.

## ಟಾಪ್–ಅಪ್ ಸೌಲಭ್ಯ: ಗಮನದಲ್ಲಿ ಇರಲಿ



ವಿಮಾ ಕವರೇಜ್ ಮೊತ್ತ ಸಾಕಾಗುವುದಿಲ್ಲ ಎಂದು ಅನ್ನಿಸಿದರೆ ಅದನ್ನು ಹೆಚ್ಚು ಮಾಡಿಕೊಳ್ಳಲು ಟಾಪ್–ಅಪ್ ಸೌಲಭ್ಯ ಇದೆ. ಆದರೆ, ಟಾಪ್–ಅಪ್ ಸೌಲಭ್ಯವನ್ನು ಕಾಯಿಲೆಗೆ ತುತ್ತಾಗಿ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಸಂದರ್ಭದಲ್ಲಿ ತೆಗೆದುಕೊಳ್ಳಲು ಅವಕಾಶವಿಲ್ಲ ಎಂದು ವಿಮಾ ಕಂಪನಿಯ ಪ್ರತಿನಿಧಿಯೊಬ್ಬರು ತಿಳಿಸಿದರು.

'ಆರೋಗ್ಯ ವಿಮೆಯ ಮೊತ್ತ ಸಾಕಾಗದು ಎಂದು ಗ್ರಾಹಕರಿಗೆ ಅನ್ನಿಸಿದರೆ ಟಾಪ್–ಅಪ್ ಪಾಲಿಸಿಯನ್ನು ವ್ಯಕ್ತಿ ಆರೋಗ್ಯವಾಗಿ ಇರುವಾಗಲೇ ಖರೀದಿಸಬೇಕು. ಆಸ್ಪತ್ರೆಯ ಹಾಸಿಗೆಯಲ್ಲಿ ಮಲಗಿದ್ದಾಗ, ಮೂಲ ಮೊತ್ತ ಖಾಲಿ ಆದಾಗ ತಕ್ಷಣಕ್ಕೆ ಟಾಪ್–ಅಪ್ ಮಾಡಿಸಿಕೊಳ್ಳಲು ಸಾಧ್ಯವಿಲ್ಲ' ಎಂದು ಭಾರತೀಯ ಜೀವ ವಿಮಾ ನಿಗಮದ ಅಧಿಕಾರಿ ಬೂಕನಕೆರೆ ವಿಜಯೇಂದ್ರ ತಿಳಿಸಿದರು.

ಕೋವಿಡ್–19 ಕಾಯಿಲೆಗೆ ವಿಮಾ ಸೌಲಭ್ಯ ಪಡೆದುಕೊಳ್ಳಲು 'ಕಾಯುವಿಕೆಯ ಅವಧಿ' ಇಲ್ಲ. ಹಿಂದಿನ ದಿನ ವಿಮೆ ಮಾಡಿಸಿದ್ದರೂ, ಮಾರನೆಯ ದಿನ ಆರ್‌ಟಿಪಿಸಿಆರ್ ಪರೀಕ್ಷೆಯಲ್ಲಿ ಕೋವಿಡ್ ದೃಢಪಟ್ಟರೆ ವಿಮಾ ಸೌಲಭ್ಯ ತೆಗೆದುಕೊಳ್ಳಲು ಅಡ್ಡಿ ಇಲ್ಲ ಎಂದು ಅವರು ಹೇಳಿದರು.


ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವ್ಯಾಪಾರ
Business to Business
Hotel & Restaurant
BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

Business Offers
Finance
★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ
Astrology
★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★ವಶೀಕರಣ ಸ್ಪೆಷಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ, 25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್★ ಜನವಶೀಕರಣ, ಧನವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಾವುದೇ ಕಠಿಣ ಸಮಸ್ಯೆಗಳಿಗೆ ಫೋನಿನಲ್ಲೇ ಪರಿಹಾರ. ಮಂಜುನಾಥ ಗುರೂಜಿ 9886999747

★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

ಉದ್ಯೋಗಾವಕಾಶ
General
WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8884875553/ 8884875554

Part-Time Jobs
ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

ಮನೆಯಿಂದಲೇ ಕಂಪ್ಯೂಟರ್ ಆಫ್ ಲೈನ್ ಡೆಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ವಾರಕ್ಕೆ 3000/- ವಯಸ್ಸಿನ ಮಿತಿಯಿಲ್ಲ 9902603707, 9686115054

ವಾಹನ
Four Wheelers Selling
Others
ಯುಗಾದಿ ಹಬ್ಬಕ್ಕೆ ಕೊಳ್ಳಿರಿ ನವ ಚೈತನ್ಯದ ವಾಹನಗಳು
TATA INTRA ವಾಹನದ ಮೇಲೆ ಆಕರ್ಷಕ ಕೊಡುಗೆಗಳೊಂದಿಗೆ

₹25,000/–* ದವರೆಗೆ ಗ್ರಾಹಕರ ಕೊಡುಗೆಗಳು
ಎಕ್ಸ್‌ಚೇಂಜ್ ₹25,000/-* ದವರೆಗೆ
Intra V-10 ಮತ್ತು V-30 A/C ಮಾದರಿಯಲ್ಲೂ ಲಭ್ಯ
ಹೆಚ್ಚಿನ ವಿವರಗಳಿಗಾಗಿ ಕರೆಮಾಡಿ
Bangalore 7259784441
Bangalore/Mysore 95389 35533
Tumkur/Davanagere/Chitradurga 98950 23373
Mangalore/Shivamogga/Udupi/Hassan/Chikkamagalur/Karwar 96208 63338
Hubli/Haveri/Gadag/Bellary/Raichur - 9620955858
Bagalkot/Bijapur/Gulbarga/Bidar 80952 02223
Belgaum - 91088 64572
* ಷರತ್ತುಗಳು ಅನ್ವಯಿಸುತ್ತದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಹೆಸರು ಬದಲಾವಣೆ
BOOK YOUR NAME CHANGE AD IN PRAJAVANI ALL KARNATAKA ALL DAY
CHANGE OF NAME @ 40/-* Per Words
condition apply*
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9880856233 | 9731810277
9901641752 | 9845114560 | 9886213331
080- 45557163 | 45557164

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

## ಸಕ್ರಿಯ ಪ್ರಕರಣಗಳ ಸಂಖ್ಯೆ 48 ಲಕ್ಷ; ದಿನದ ಏರಿಕೆ 4.4 ಲಕ್ಷಕ್ಕೆ: ಐಐಟಿ ವಿಜ್ಞಾನಿಗಳ ಅಂದಾಜು

# ಮೇ ಮಧ್ಯದಲ್ಲಿ ಕೋವಿಡ್ ಗರಿಷ್ಠ ಮಟ್ಟಕ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೋವಿಡ್–19 ಪಿಡುಗಿನ ಎರಡನೇ ಅಲೆಯು ಮೇ 14–18ರ ಹೊತ್ತಿಗೆ ಗರಿಷ್ಠ ಮಟ್ಟಕ್ಕೆ ತಲುಪಬಹುದು. ಈ ಹೊತ್ತಿಗೆ ದೇಶದಲ್ಲಿ 38 ಲಕ್ಷದಿಂದ 48 ಲಕ್ಷ ಸಕ್ರಿಯ ಪ್ರಕರಣಗಳು ಇರಬಹುದು. ಪ್ರತಿದಿನ ಹೊಸ ಪ್ರಕರಣಗಳ ಸಂಖ್ಯೆಯು 4.4 ಲಕ್ಷದಷ್ಟಾಗಬಹುದು ಎಂದು ಗಣಿತಶಾಸ್ತ್ರೀಯ ಮಾದರಿಯೊಂದರ ಆಧಾರದಲ್ಲಿ ಐಐಟಿ ವಿಜ್ಞಾನಿಗಳು ಅಂದಾಜಿಸಿದ್ದಾರೆ.

ಕಾನ್ಪುರ ಮತ್ತು ಹೈದರಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ವಿಜ್ಞಾನಿಗಳು ಈ ಲೆಕ್ಕಾಚಾರ ಹಾಕಿದ್ದಾರೆ.

ಮೇ 11-15ರ ನಡುವೆ 33 ಲಕ್ಷದಿಂದ 35 ಲಕ್ಷ ಸಕ್ರಿಯ ಪ್ರಕರಣಗಳೊಂದಿಗೆ ಸಾಂಕ್ರಾಮಿಕ ರೋಗವು ಗರಿಷ್ಠ ಹಂತ ತಲುಪಿ, ಮೇ ಅಂತ್ಯದ ವೇಳೆಗೆ ಇಳಿಕೆ ಕಾಣಲಿದೆ ಎಂದು ತಜ್ಞರು ಕಳೆದ ವಾರ ತಿಳಿಸಿದ್ದರು. ಸಕ್ರಿಯ ಪ್ರಕರಣಗಳ ಸಂಖ್ಯೆ ಮತ್ತು ಗರಿಷ್ಠ ಮಟ್ಟ ತಲುಪುವ ದಿನಗಳನ್ನು ಅವರು ಇದೀಗ ಪರಿಷ್ಕರಿಸಿದ್ದಾರೆ.

ಏಪ್ರಿಲ್ 15ರ ವೇಳೆಗೆ ದೇಶದಲ್ಲಿ ಸಕ್ರಿಯ ಸೋಂಕುಗಳು ಗರಿಷ್ಠ ಮಟ್ಟದಲ್ಲಿ ಇರಲಿವೆ ಎಂದು ಈ ತಿಂಗಳ ಆರಂಭದಲ್ಲಿ ಊಹಿಸಲಾಗಿತ್ತು. ಆದರೆ ಅದು ನಿಜವಾಗಲಿಲ್ಲ.

‘ಈ ಬಾರಿ ಕನಿಷ್ಠ ಮತ್ತು ಗರಿಷ್ಠ ಮೌಲ್ಯಗಳನ್ನು ನೀಡಿದ್ದೇನೆ. ನೈಜ ಸಂಖ್ಯೆಗಳು ನಾನು ಅಂದಾಜಿಸಿರುವ ಸಂಖ್ಯೆಗಳ ಒಳಗೇ ಬರುತ್ತವೆ ಎಂಬ ವಿಶ್ವಾಸವಿದೆ’ ಎಂದು ಖರಗಪುರ ಐಐಟಿ ಪ್ರಾಧ್ಯಾಪಕ ಮನಿಂದರ್ ಅಗರ್‌ವಾಲ್ ತಿಳಿಸಿದ್ದಾರೆ.

ಸೂತ್ರ ಎಂಬ ಮಾದರಿಯ ಆಧಾರದಲ್ಲಿ ಈ ಲೆಕ್ಕಾಚಾರ ಹಾಕಲಾಗಿದೆ. ‘ಸೂತ್ರ’ ಮಾದರಿಯಲ್ಲಿ ಹಲವಾರು ಹೊಸ ವೈಶಿಷ್ಟ್ಯಗಳಿವೆ ಎಂದು ವಿಜ್ಞಾನಿಗಳು ಅಪ್ರಕಟಿತ ಅಧ್ಯಯನ ವರದಿಯಲ್ಲಿ ಹೇಳಿದ್ದಾರೆ.

ಮೂರು ಮುಖ್ಯ ಅಂಶಗಳನ್ನು ಇರಿಸಿಕೊಂಡು ಸೂತ್ರ ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ. ಸೋಂಕು ಸಂಪರ್ಕ ದರ ಅಂದರೆ, ಸೋಂಕಿತ ವ್ಯಕ್ತಿಯು ಪ್ರತಿ ದಿನ ಎಷ್ಟು ಜನರಿಗೆ ಸೋಂಕು ತಗಲಿಸುತ್ತಾನೆ ಎಂಬ ಸಂಖ್ಯೆ, ಜನ ಸಮುದಾಯವು ಪಿಡುಗಿಗೆ ತೆರೆದುಕೊಂಡಿರುವ ಮಟ್ಟ ಮತ್ತು ದೃಢಪಟ್ಟ ಮತ್ತು ದೃಢಪಡದ ಪ್ರಕರಣಗಳ ಅನುಪಾತಗಳ ಆಧಾರದಲ್ಲಿ ಪಿಡುಗು ಯಾವಾಗ ಗರಿಷ್ಠ ಮಟ್ಟಕ್ಕೆ ತಲುಪಬಹುದು ಎಂದು ಅಂದಾಜಿಸಲಾಗಿದೆ.

ಏಪ್ರಿಲ್ ಮಧ್ಯ ಭಾಗ ಮತ್ತು ಮೇ ಮಧ್ಯ ಭಾಗದ ನಡುವಲ್ಲಿ ಪಿಡುಗು ಗರಿಷ್ಠ ಮಟ್ಟಕ್ಕೆ ತಲುಪಬಹುದು ಎಂದು ಅಶೋಕ ವಿಶ್ವವಿದ್ಯಾಲಯದ ಗೌತಮ್ ಮೆನನ್ ಮತ್ತು ಅವರ ತಂಡವು ಇತ್ತೀಚೆಗೆ ಅಂದಾಜಿಸಿತ್ತು. ಇದು ಅಲ್ಪಾವಧಿಯ ಅಂದಾಜು. ಯಾವುದೇ ರೀತಿಯಲ್ಲಿ ಲೆಕ್ಕ ಹಾಕಿದರೂ ಪಿಡುಗಿನ ಅನಿಶ್ಚಿತತೆಯಿಂದಾಗಿ ನಿಖರವಾಗಿ ಅಂದಾಜಿಸುವುದು ಸಾಧ್ಯವಿಲ್ಲ ಎಂದೂ ಅವರು ಹೇಳಿದ್ದರು.

ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಸಾಮೂಹಿಕ ಅಂತ್ಯ ಸಂಸ್ಕಾರ ದೆಹಲಿಯ ಗಾಜಿಪುರ ಸ್ಮಶಾನದಲ್ಲಿ ಸೋಮವಾರ ನಡೆಯಿತು –ಪಿಟಿಐ ಚಿತ್ರ

## ‘ಮನೆಯಲ್ಲೂ ಮಾಸ್ಕ್ ಧರಿಸಿ’

ನವದೆಹಲಿ: ‘ಕೋವಿಡ್ ಪ್ರಕರಣಗಳು ವಿಪರೀತ ಹೆಚ್ಚುತ್ತಿರುವುದರಿಂದ ಜನರು ಮನೆಯಲ್ಲೂ ಮಾಸ್ಕ್ ಧರಿಸುವುದು ಸೂಕ್ತ. ಮನೆಯಲ್ಲಿ ಯಾರಾದರೂ ಸೋಂಕಿತರು ಇದ್ದರೆ, ಅಂಥ ಮನೆಯಲ್ಲಿರುವ ಎಲ್ಲರೂ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು’ ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಇನ್ನೊಂದೆಡೆ, ‘ಶೇ 85ರಷ್ಟು ಕೋವಿಡ್ ರೋಗಿಗಳು ಮನೆಯಲ್ಲೇ ಇದ್ದುಕೊಂಡು ಚಿಕಿತ್ಸೆ ಪಡೆಯಬಹುದು. ಕೋವಿಡ್ ದೃಢಪಟ್ಟ ವರದಿ ಬಂದ ಕೂಡಲೇ ಆಸ್ಪತ್ರೆಗೆ ಧಾವಿಸುವ ಅಥವಾ ರೆಮ್‌ಡಿಸಿವಿರ್‌ನಂಥ ಔಷಧಗಳನ್ನು ಸಂಗ್ರಹಿಸಿಡುವ ಅಗತ್ಯವಿಲ್ಲ’ ಎನ್ನುವ ಮೂಲಕ, ಜನರ ಆತಂಕವನ್ನು ಕಡಿಮೆ ಮಾಡುವ ಪ್ರಯತ್ನವನ್ನು ಆರೋಗ್ಯ ಇಲಾಖೆಯ ತಜ್ಞರು ಮಾಡಿದ್ದಾರೆ.

‘ಮನೆಯಲ್ಲಿ ಯಾರಾದರೂ ಸೋಂಕಿತರು ಇದ್ದರೆ, ಅದು ಇತರರಿಗೂ ಹರಡುವುದನ್ನು ತಪ್ಪಿಸಲು ಸೋಂಕಿತರು ಮನೆಯೊಳಗೂ ಮಾಸ್ಕ್ ಧರಿಸುವುದು ಅಗತ್ಯ. ಮನೆಯೊಳಗೆ ಸೋಂಕಿತರು ಇಲ್ಲದಿದ್ದರೂ ಎಲ್ಲರೂ ಮಾಸ್ಕ್ ಧರಿಸುವುದು ಸೂಕ್ತ ಎಂಬುದು ನನ್ನ ಅಭಿಪ್ರಾಯ’ ಎಂದು ನೀತಿ ಆಯೋಗದ ಆರೋಗ್ಯ ವಿಭಾಗದ ಸದಸ್ಯ ವಿ.ಕೆ. ಪಾಲ್ ಹೇಳಿದ್ದಾರೆ.

‘ಸೋಂಕಿಗೆ ಒಳಗಾಗಬಹುದೆಂಬ ಭಯದಿಂದ ಔಷಧ, ಆಮ್ಲಜನಕದ ಸಿಲಿಂಡರ್ ಅನ್ನು ಸಂಗ್ರಹಿಸಿಡುವುದು ಸರಿಯಲ್ಲ. ಸೋಂಕಿನ ಲಕ್ಷಣಗಳು ಕಾಣಿಸಿಕೊಳ್ಳುವುದಕ್ಕೂ ಮೊದಲು ಕೋವಿಡ್‌ಗೆ ಹೇಳಲಾಗಿರುವ ಔಷಧಗಳನ್ನು ತೆಗೆದುಕೊಳ್ಳುವುದರಿಂದ ಒಳ್ಳೆಯದಕ್ಕಿಂತ ಹೆಚ್ಚಾಗಿ ಆರೋಗ್ಯದ ಮೇಲೆ ಕೆಟ್ಟ ಪರಿಣಾಮಗಳು ಆಗಬಹುದು’ ಎಂದು ಅಖಿಲ ಭಾರತ ವೈದ್ಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕ ರಣದೀಪ್ ಗುಲೇರಿಯಾ ಎಚ್ಚರಿಸಿದ್ದಾರೆ.

‘ಸೋಂಕಿತದಲ್ಲಿ ಆಮ್ಲಜನಕದ ಮಟ್ಟವು 94–95ರಷ್ಟು ಇದ್ದರೆ ಅಪಾಯ ಆಗುವುದಿಲ್ಲ. ಅದನ್ನು 98–99ಕ್ಕೆ ಏರಿಸಲು ಆಮ್ಲಜನಕವನ್ನು ಬಳಸುವ ಅಗತ್ಯವಿಲ್ಲ. ಈ ಪಿಡುಗಿಗೂ ಮೊದಲು ನಾವು ಈ ಯಂತ್ರಗಳ ಸಹಾಯದಿಂದ ಆಮ್ಲಜನಕದ ಮಟ್ಟವನ್ನು 88–90ರ ಮಟ್ಟದಲ್ಲೇ ಇರಿಸಿ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದೆವು. ಅನಗತ್ಯವಾದ ಆತಂಕದಿಂದಾಗಿ ಜನರು ಔಷಧ ಹಾಗೂ ಆಮ್ಲಜನಕದ ಸಿಲಿಂಡರ್‌ಗಳನ್ನು ಸಂಗ್ರಹಿಸಿ, ಸೌಲಭ್ಯಗಳ ದುರ್ಬಳಕೆ ಮಾಡುತ್ತಿದ್ದಾರೆ ಎಂದರು.

‘ಕೋವಿಡ್ ಲಕ್ಷಣಗಳು ಕಾಣಿಸಿಕೊಂಡು, ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ನೆಗೆಟಿವ್ ವರದಿ ಬಂದರೂ ಅಂಥವರನ್ನು ಸೋಂಕಿತರು ಎಂದೇ ಪರಿಗಣಿಸಿ, ವೈದ್ಯರ ಸಲಹೆಗಳನ್ನು ಪಡೆಯಬೇಕು’ ಎಂದು ಗುಲೇರಿಯಾ ಸಲಹೆ ನೀಡಿದ್ದಾರೆ.

## ಹರಿಯಾಣ: ಆಮ್ಲಜನಕ ಕೊರತೆ ಐವರ ಸಾವು

ಹಿಸ್ಸಾರ್(ಹರಿಯಾಣ): ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಐವರು ಕೋವಿಡ್ ರೋಗಿಗಳು ಸೋಮವಾರ ಸಾವಿಗೀಡಾಗಿದ್ದಾರೆ.

ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯೇ ಸಾವಿಗೆ ಕಾರಣ ಎಂದು ಆರೋಪಿಸಿದ ಸಂಬಂಧಿಕರು ಆಸ್ಪತ್ರೆ ಮುಂದೆ ಪ್ರತಿಭಟನೆ ನಡೆಸಿದರು.

ಆಮ್ಲಜನಕ ಕೊರತೆ ಆರೋಪದ ಬಗ್ಗೆ ಹಿಸ್ಸಾರ್‌ನ ಮುಖ್ಯ ವೈದ್ಯಾಧಿಕಾರಿಗಳು ತನಿಖೆ ನಡೆಸಲಿದ್ದಾರೆ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಆಸ್ಪತ್ರೆ ಆಡಳಿತ ಮಂಡಳಿತ ಈ ಘಟನೆ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ.

**ಆಮ್ಲಜನಕ ಪೂರೈಕೆಯಲ್ಲಿ ತಾಂತ್ರಿಕ ದೋಷ– ಇಬ್ಬರ ಸಾವು:** ವಿಜಯನಗರ(ಆಂಧ್ರಪ್ರದೇಶ): ‘ವಿಜಯನಗರದ ಸರ್ಕಾರಿ ಆಸ್ಪತ್ರೆಯಲ್ಲಿ ಸೋಮವಾರ ಮುಂಜಾನೆ ಆಮ್ಲಜನಕ ಪೂರೈಕೆ ಸಂದರ್ಭದಲ್ಲಿ ಆದ ತಾಂತ್ರಿಕ ದೋಷದಿಂದಾಗಿ ಇಬ್ಬರು ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಆಸ್ಪತ್ರೆಯಲ್ಲಿ 97 ರೋಗಿಗಳಿಗೆ ಆಮ್ಲಜನಕ ನೀಡಲಾಗುತ್ತಿದೆ. ಈ ಪೈಕಿ 12 ಮಂದಿಗೆ ಅವರ ಪರಿಸ್ಥಿತಿಗೆ ಅನುಗುಣವಾಗಿ ಅಧಿಕ ಒತ್ತಡದ ಆಮ್ಲಜನಕವನ್ನು ನೀಡಲಾಗುತ್ತಿದೆ’ ಎಂದು ಜಿಲ್ಲಾ ವೈದ್ಯಕೀಯ ಮತ್ತು ಆರೋಗ್ಯ ಅಧಿಕಾರಿ ರಮಣ ಕುಮಾರಿ ತಿಳಿಸಿದರು.

ಈ ಇಬ್ಬರು ರೋಗಿಗಳನ್ನು ಅಧಿಕ ಒತ್ತಡದ ಆಮ್ಲಜನಕ ಹೊಂದಿರುವ ವೆಂಟಿಲೇಟರ್‌ಗಳಲ್ಲಿ ಇರಿಸಲಾಗಿತ್ತು. ತಡ ರಾತ್ರಿ ತಾಂತ್ರಿಕ ಅಡಚಣೆ ಉಂಟಾಗಿದೆ ಸಾವಿಗೀಡಾಗಿದ್ದಾರೆ’ ಎಂದರು.

# ಆಮ್ಲಜನಕದ ಕೊರತೆ ಇಲ್ಲ: ಕೇಂದ್ರ

ನವದೆಹಲಿ: ‘ದೇಶದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಆಮ್ಲಜನಕದ ಸಂಗ್ರಹ ಇದೆ. ಹೀಗಾಗಿ, ಯಾವುದೇ ರೀತಿಯ ಆತಂಕ ಬೇಡ’ ಎಂದು ಕೇಂದ್ರ ಗೃಹ ಸಚಿವಾಲಯ ಸೋಮವಾರ ತಿಳಿಸಿದೆ.

‘ಆದರೆ, ವಿವಿಧ ರಾಜ್ಯಗಳಲ್ಲಿ ಉತ್ಪಾದನೆಯಾಗುತ್ತಿರುವ ಆಮ್ಲಜನಕವನ್ನು ಅತ್ಯಧಿಕ ಬೇಡಿಕೆ ಇರುವ ರಾಜ್ಯಗಳಿಗೆ ಸಾಗಿಸಲು ಸಮಸ್ಯೆಯಾಗುತ್ತಿದೆ. ಸರ್ಕಾರ ಈ ಸಮಸ್ಯೆಯನ್ನು ತ್ವರಿತವಾಗಿ ಬಗೆಹರಿಸಲು ಯತ್ನಿಸುತ್ತಿದೆ’ ಎಂದು ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಪಿಯೂಷ್ ಗೋಯಲ್ ತಿಳಿಸಿದ್ದಾರೆ.

‘ಈ ಮೊದಲು ಆಮ್ಲಜನಕ ಕೊಂಡೊಯ್ಯುವ ಟ್ಯಾಂಕರ್‌ಗಳು ಒಟ್ಟಾರೆಯಾಗಿ 4ರಿಂದ 5 ದಿನಗಳ ಸಮಯವನ್ನು ತೆಗೆದುಕೊಳ್ಳುತ್ತಿದ್ದವು. ಈಗ ಅದನ್ನು ಒಂದರಿಂದ ಎರಡು ಗಂಟೆಗೆ ಇಳಿಸಲಾಗಿದೆ. ಇದಕ್ಕಾಗಿ, ಭಾರತೀಯ ವಾಯು ಪಡೆಯ ನೆರವು ಪಡೆಯಲಾಗಿದೆ. ಖಾಲಿ ಟ್ಯಾಂಕರ್‌ಗಳನ್ನು ವಿಮಾನಗಳ ಮೂಲಕ ಸಾಗಿಸಲಾಗುತ್ತಿದೆ’ ಎಂದಿದ್ದಾರೆ.

### ‘ಸ್ಥಳೀಯವಾಗಿ ಕಂಟೈನ್‌ಮೆಂಟ್ ರಚಿಸಿ’

ನವದೆಹಲಿ(ಪಿಟಿಐ): ಕೋವಿಡ್ ಸೋಂಕು ಹೆಚ್ಚುವುದನ್ನು ನಿಯಂತ್ರಿಸಲು ಸ್ಥಳೀಯವಾಗಿ ಕಂಟೈನ್‌ಮೆಂಟ್ ವಲಯಗಳನ್ನು ನಿರ್ಮಿಸಿ ನಿರಂತರ ನಿಗಾವಹಿಸಬೇಕು ಎಂದು ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೂಚಿಸಿದೆ.

ಕಂಟೈನ್‌ಮೆಂಟ್ ವಲಯಗಳ ನಿರ್ಮಾಣದ ಕಾರ್ಯತಂತ್ರದ ಬಗ್ಗೆ ಏಪ್ರಿಲ್ 25ರಂದು ಆರೋಗ್ಯ ಸಚಿವಾಲಯವು ನೀಡಿದ್ದ ಸಲಹೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಕೇಂದ್ರ ಗೃಹ ಕಾರ್ಯದರ್ಶಿ ಅಜಯ್ ಭಲ್ಲಾ ತಿಳಿಸಿದ್ದಾರೆ.

ಸೋಂಕು ಹಬ್ಬುವುದನ್ನು ತಡೆಯಲು ಸ್ಥಳೀಯವಾದ ಮತ್ತು ನಿಗಾವಹಿಸಲಾದ ಕಂಟೈನ್‌ಮೆಂಟ್ ವಲಯಗಳನ್ನು ನಿರ್ದಿಷ್ಟ ಜಿಲ್ಲೆಗಳು, ನಗರಗಳು, ಪ್ರದೇಶಗಳಲ್ಲಿ ರಚಿಸಬೇಕು. ಜತೆಗೆ, ಸ್ಥಳೀಯ ಪರಿಸ್ಥಿತಿ, ಅಗತ್ಯಗಳು ಮತ್ತು ಸಂಪನ್ಮೂಲಗಳನ್ನು ಸಹ ಪರಿಗಣಿಸಬೇಕು ಎಂದು ಅವರು ತಿಳಿಸಿದ್ದಾರೆ. ಹೀಗಾಗಿ, ಆರೋಗ್ಯ ಸಚಿವಾಲಯದ ಸಲಹೆ ಅನ್ವಯ ಕಂಟೈನ್‌ಮೆಂಟ್ ವಲಯಗಳನ್ನು ಸ್ಥಾಪಿಸಲು ಜಿಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಬೇಕು ಎಂದು ಅವರು ರಾಜ್ಯ ಸರ್ಕಾರಗಳಿಗೆ ಸೂಚಿಸಿದ್ದಾರೆ.

# ಆಮ್ಲಜನಕ ಉತ್ಪಾದನೆಗೆ ‘ಸ್ಟೆರ್‌ಲೈಟ್’

## ತಮಿಳುನಾಡಿನ ಸರ್ವಪಕ್ಷಗಳ ಸಭೆಯಲ್ಲಿ ನಿರ್ಧಾರ

ಚೆನ್ನೈ: ತೂತ್ತುಕುಡಿಯಲ್ಲಿನ ವೇದಾಂತ ಕಂಪನಿಯ ಸ್ಟೆರ್‌ಲೈಟ್ ಕಾರ್ಖಾನೆಗೆ ನಾಲ್ಕು ತಿಂಗಳುಗಳ ಕಾಲ ಆಮ್ಲಜನಕ ಉತ್ಪಾದಿಸಲು ಅವಕಾಶ ನೀಡಲಾಗಿದೆ.

ತಮಿಳುನಾಡು ಸರ್ಕಾರ ಸೋಮವಾರ ಕರೆದಿದ್ದ ಸರ್ವಪಕ್ಷಗಳ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ಕೈಗೊಳ್ಳಲಾಯಿತು. ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಡಿಎಂಕೆ ಸೇರಿದಂತೆ ಇತರ ಪಕ್ಷಗಳು ಸಭೆಯಲ್ಲಿ ಭಾಗವಹಿಸಿದ್ದವು.

ಆಮ್ಲಜನಕ ಘಟಕದ ಆರಂಭಕ್ಕೆ ಅನುಮತಿ ನೀಡುವಂತೆ ಕೋರಿ ವೇದಾಂತ ಕಂಪನಿಯೂ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಶುಕ್ರವಾರ ಈ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ‘ಆಮ್ಲಜನಕ ಕೊರತೆಯಿಂದ ಜನರು ಸಾವಿಗೀಡಾಗುತ್ತಿದ್ದಾರೆ.

ಕೆ. ಪಳನಿಸ್ವಾಮಿ

ಆಮ್ಲಜನಕ ಉತ್ಪಾದಿಸಲು ಸ್ಟೆರ್‌ಲೈಟ್ ತಾಮ್ರ ಸಂಸ್ಕರಣ ಘಟಕವನ್ನು ತಮಿಳುನಾಡು ಸರ್ಕಾರ ಏಕೆ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಿಲ್ಲ. ನಾವು ಯಾವುದೇ ಕಂಪನಿಯ ಬಗ್ಗೆ ಆಸಕ್ತಿ ಹೊಂದಿಲ್ಲ. ಆಮ್ಲಜನಕ ಉತ್ಪಾದನೆಯಾಗುವುದು ಮುಖ್ಯ’ ಎಂದು ಹೇಳಿತ್ತು.

‘ಸುಪ್ರೀಂ ಕೋರ್ಟ್ ನಿರ್ದೇಶನ ಮೇರೆಗೆ ಆಮ್ಲಜನಕ ಉತ್ಪಾದಿಸಲು ವಿದ್ಯುತ್ ಪೂರೈಕೆ ಸೇರಿದಂತೆ ಅಗತ್ಯ ಇರುವ ನೆರವು ಒದಗಿಸಲಾಗುವುದು. ನಾಲ್ಕು ತಿಂಗಳು ಮಾತ್ರ ಆಮ್ಲಜನಕ ಉತ್ಪಾದನೆಗೆ ಅವಕಾಶ ದೊರೆಯಲಿದೆ. ಪರಿಸ್ಥಿತಿಯ ಆಧಾರದ ಮೇಲೆ ಈ ಅವಧಿಯನ್ನು ವಿಸ್ತರಿಸಬಹುದಾಗಿದೆ. ಆದರೆ, ತಾಮ್ರ ಉತ್ಪಾದನೆ, ಕೋ–ಜನರೇಷನ್ ಘಟಕ ಆರಂಭಿಸುವುದು ಸೇರಿದಂತೆ ಯಾವುದೇ ಚಟುವಟಿಕೆಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ. ನಾಲ್ಕು ತಿಂಗಳ ಬಳಿಕ ವಿದ್ಯುತ್ ಪೂರೈಕೆಯನ್ನು ಕಡಿತಗೊಳಿಸಲಾಗುವುದು’ ಎಂದು ಸರ್ವಪಕ್ಷಗಳ ಸಭೆಯಲ್ಲಿ ನಿರ್ಧರಿಸಲಾಗಿದೆ.

## ಲಸಿಕೆ ದರ ಕಡಿಮೆಗೊಳಿಸಲು ಕೇಂದ್ರದ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆಗಳ ದರಗಳನ್ನು ಕಡಿಮೆ ಮಾಡುವಂತೆ ಸೀರಂ ಇನ್‌ಸ್ಟಿಟ್ಯೂಟ್ ಮತ್ತು ಭಾರತ್ ಬಯೊಟೆಕ್‌ಗೆ ಕೇಂದ್ರ ಸರ್ಕಾರ ಸೂಚಿಸಿದೆ.

ಸಂಕಷ್ಟದ ಸಂದರ್ಭದಲ್ಲಿ ಕಂಪನಿಗಳು ಲಾಭ ಗಳಿಸಲು ಗಮನಹರಿಸಿವೆ ಎಂದು ರಾಜಕೀಯ ಪಕ್ಷಗಳು ಹಾಗೂ ವಿವಿಧ ವಲಯಗಳಿಂದ ಟೀಕೆಗಳು ವ್ಯಕ್ತವಾಗಿದ್ದರಿಂದ ಸರ್ಕಾರ ಈ ಸೂಚನೆ ನಿಡಿದೆ.

ಲಸಿಕೆ ದರಗಳ ಬಗ್ಗೆ ಸಂಪುಟ ಕಾರ್ಯದರ್ಶಿ ರಾಜೀವ್ ಗೌಬಾ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲೂ ಚರ್ಚಿಸಲಾಗಿದೆ. ಎರಡು ಕಂಪನಿಗಳು ಲಸಿಕೆಗಳ ಪರಿಷ್ಕೃತ ದರಗಳನ್ನು ಶೀಘ್ರ ಪ್ರಕಟಿಸುವ ಸಾಧ್ಯತೆ ಇದೆ.

## ದೇಶದಲ್ಲಿ 3.54 ಲಕ್ಷ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಲ್ಲಿ ಸೋಮವಾರ 3,54,653 ಕೋವಿಡ್ ಪ್ರಕರಣಗಳು ದೃಢಪಟ್ಟಿವೆ. ಇದುವರೆಗಿನ ಅತಿ ಹೆಚ್ಚಿನ ಪ್ರಕರಣಗಳು ಇದಾಗಿದ್ದು, ದೇಶದಲ್ಲಿನ ಒಟ್ಟು ಸೋಂಕಿತರ ಸಂಖ್ಯೆ 1.75 ಕೋಟಿ ದಾಟಿದೆ. ಸೋಮವಾರವೂ 2,808 ಸೋಂಕಿತರು ಸಾವಿಗೀಡಾಗಿದ್ದಾರೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

# 18 ವರ್ಷ ಮೇಲ್ಪಟ್ಟವರಿಗೂ ಉಚಿತ ಲಸಿಕೆ

ನವದೆಹಲಿ: ‘ದೆಹಲಿ ಕೇಂದ್ರಾಡಳಿತ ಪ್ರದೇಶದ ವ್ಯಾಪ್ತಿಯಲ್ಲಿರುವ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಉಚಿತವಾಗಿ ಕೋವಿಡ್ 19 ಲಸಿಕೆ ನೀಡಲಾಗುವುದು. ಈ ಸಂಬಂಧ 1.34 ಕೋಟಿ ಡೋಸ್ ಲಸಿಕೆ ಖರೀದಿಸಲು ಅನುಮೋದನೆ ನೀಡಲಾಗಿದೆ’ ಎಂದು ದೆಹಲಿ ಸಿ.ಎಂ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ.

ಆನ್‌ಲೈನ್ ಮೂಲಕ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಜ್ರಿವಾಲ್ ಅವರು, ‘ಲಸಿಕೆ ಖರೀದಿಸುವ ಮತ್ತು ಜನರಿಗೆ ನೀಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗಿದೆ’ ಎಂದು ಹೇಳಿದರು.

### ಎಲ್ಲರಿಗೂ ಉಚಿತ ಲಸಿಕೆ: ಒತ್ತಾಯ

ನವದೆಹಲಿ: ‘ದೇಶದ ಎಲ್ಲ ನಾಗರಿಕರಿಗೂ ಉಚಿತವಾಗಿ ಕೋವಿಡ್ ಲಸಿಕೆ ದೊರೆಯಬೇಕು. ಬಿಜೆಪಿಯ ವ್ಯವಸ್ಥೆಗೆ ಭಾರತ ಬಲಿಯಾಗಬಾರದು’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಮೇ 1ರಿಂದ ದೇಶದಾದ್ಯಂತ 18 ವರ್ಷ ಮೇಲ್ಪಟ್ಟವರಿಗೆ ಕೋವಿಡ್ ಲಸಿಕೆ ತೆಗೆದುಕೊಳ್ಳಲು ಅನುಮತಿ ನೀಡಲಾಗಿದೆ. ಈ ಮೂಲಕ ದೇಶದಲ್ಲಿ ಕೋವಿಡ್ ವಿರುದ್ಧದ ಹೋರಾಟಕ್ಕೆ ಮತ್ತೊಂದು ಮಹತ್ವದ ಹೆಜ್ಜೆ ಇಟ್ಟಂತಾಗಿದೆ.

ಎಲ್ಲರೂ ಲಸಿಕೆ ಹಾಕಿಸಿಕೊಳ್ಳುವಂತೆ ಕೇಳಿಕೊಂಡಿರುವ ರಾಹುಲ್, ‘ಲಸಿಕೆ ವಿಚಾರದಲ್ಲಿ ಚರ್ಚೆಗಳು ಸಾಕು. ದೇಶದ ಎಲ್ಲ ನಾಗರಿಕರಿಗೆ ಉಚಿತವಾಗಿ ಲಸಿಕೆ ದೊರೆಯುವಂತಾಗಬೇಕು’ ಎಂದು ಟ್ವೀಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಇದೇ ವೇಳೆ ‘ದೇಶದಾದ್ಯಂತ ಕೋವಿಡ್ ಲಸಿಕೆಗೆ ಏಕರೂಪದ ದರ ನಿಗದಿಪಡಿಸಬೇಕು’ ಎಂದು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

### ಸಂಕ್ಷಿಪ್ತ ಸುದ್ದಿ

#### ನೂರು ದಿನಗಳಲ್ಲಿ 14.19 ಕೋಟಿ ಲಸಿಕೆ

ನವದೆಹಲಿ: ದೇಶದಾದ್ಯಂತ ಆರಂಭವಾಗಿರುವ ವಿಶ್ವದ ಅತಿ ದೊಡ್ಡ ಕೋವಿಡ್ ಲಸಿಕಾ ಅಭಿಯಾನ ಏಪ್ರಿಲ್ 25ಕ್ಕೆ ಶತದಿನಗಳನ್ನು ಪೂರೈಸಿದ್ದು, ಈ ಅಭಿಯಾನದಲ್ಲಿ ಲಸಿಕೆ ನೀಡಿರುವ ಪ್ರಮಾಣ 14.19 ಕೋಟಿ ಡೋಸ್ ದಾಟಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಒಟ್ಟು 14,19,11,223 ಡೋಸ್‌ಗಳಷ್ಟು ಲಸಿಕೆಯನ್ನು ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸೋಮವಾರ ಬೆಳಿಗ್ಗೆ 7 ಗಂಟೆಗೆ ಬಿಡುಗಡೆ ಮಾಡಿರುವ ವರದಿಯಲ್ಲಿ ತಿಳಿಸಿದೆ.

#### ಸಿಧುಗೆ ಜಾಮೀನು

ನವದೆಹಲಿ: ನವದೆಹಲಿಯಲ್ಲಿ ಗಣರಾಜ್ಯೋತ್ಸವ ದಿನದಂದು ನಡೆದ ಹಿಂಸಾಚಾರದಲ್ಲಿ ಕೆಂಪುಕೋಟೆಗೆ ಹಾನಿ ಮಾಡಿದ ಪ್ರಕರಣದಡಿ ಬಂಧನಕ್ಕೊಳಗಾಗಿದ್ದ ನಟ–ಹೋರಾಟಗಾರ ದೀಪ್ ಸಿಧು ಅವರಿಗೆ ದೆಹಲಿ ನ್ಯಾಯಾಲಯವು ಸೋಮವಾರ ಜಾಮೀನು ನೀಡಿದೆ.

ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಸಾಹಿಲ್ ಗುಪ್ತಾ ಅವರು, ಸಿಧುಗೆ ₹25 ಸಾವಿರ ವೈಯಕ್ತಿಕ ಬಾಂಡ್ ಮತ್ತು ಅಷ್ಟೇ ಮೊತ್ತದ ಮುಚ್ಚಳಿಕೆ ಬರೆಸಿಕೊಂಡು ಜಾಮೀನು ನೀಡಿದ್ದಾರೆ.

ದೆಹಲಿ ಪೊಲೀಸರು ಸಿಧುವನ್ನು ಏಪ್ರಿಲ್ 17ರಂದು ಬಂಧಿಸಿದ್ದರು.

#### ಎಂದಿನಂತೆ ರೈಲುಗಳ ಓಡಾಟ

ನವದೆಹಲಿ: ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳನ್ನು ನಿಯಂತ್ರಿಸಲು ಹಲವು ರಾಜ್ಯಗಳು ಲಾಕ್‌ಡೌನ್ ಘೋಷಿಸಿದ್ದರೂ ರೈಲುಗಳು ಮಾತ್ರ ಎಂದಿನಂತೆ ಸಂಚರಿಸಲಿವೆ. ಅಗತ್ಯಬಿದ್ದರೆ ವಿಶೇಷ ರೈಲುಗಳನ್ನು ಓಡಿಸಲಾಗುವುದು ಎಂದು ಭಾರತೀಯ ರೈಲ್ವೆ ಮಂಡಳಿಯು ತಿಳಿಸಿದೆ.

ಪ್ರಸ್ತುತ ಮೇಲ್ ಮತ್ತು ಎಕ್ಸ್‌ಪ್ರೆಸ್ ಸೇರಿದಂತೆ ಶೇ 70ರಷ್ಟು ರೈಲುಗಳು ಕೋವಿಡ್ ಪೂರ್ವದಿಂದಲೂ ಕಾರ್ಯನಿರ್ವಹಿಸುತ್ತಿವೆ. ಅಲ್ಲದೇ, ಸುಮಾರು 330 ಬೇಸಿಗೆ ವಿಶೇಷ ರೈಲುಗಳು ಸಹ ಸಂಚರಿಸುತ್ತಿವೆ ಎಂದು ರೈಲ್ವೆ ಮಂಡಳಿಯ ಅಧ್ಯಕ್ಷ ಸುನೀತ್ ಶರ್ಮಾ ಹೇಳಿದ್ದಾರೆ.

‘ಮಂಡಳಿಯು ಒಟ್ಟಾರೆ ಪರಿಸ್ಥಿತಿ ಹಾಗೂ ಟಿಕೆಟಿಂಗ್ ಮಾದರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದು, ಹೆಚ್ಚಿನ ಜನಸಂದಣಿ ಹಾಗೂ ಅಗತ್ಯಬಿದ್ದ ಕಡೆಗಳಲ್ಲಿ ವಿಶೇಷ ರೈಲುಗಳ ಸಂಚಾರಕ್ಕೆ ವ್ಯವಸ್ಥೆ ಮಾಡಿಕೊಡಲಾಗುವುದು’ ಎಂದು ಅವರು ತಿಳಿಸಿದ್ದಾರೆ.

## ಕೊರೊನಾ ಸಾಂತ್ವನ

### ನಿರ್ಲಕ್ಷ್ಯ ಬಿಡಿ; ಶೀಘ್ರವೇ ಚಿಕಿತ್ಸೆ ಪಡೆಯಿರಿ

‘ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ನಂತರ ಬಹುತೇಕ ರೋಗಿಗಳು ಶ್ವಾಸಕೋಶ ಸಮಸ್ಯೆಗೆ ಗುರಿಯಾಗುತ್ತಿದ್ದಾರೆ. ಉಸಿರಾಡುವಾಗ ವೈರಾಣು, ಮೂಗಿನ ಮೂಲಕ ದೇಹ ಪ್ರವೇಶಿಸುತ್ತದೆ. ಅದು ನಿಧಾನವಾಗಿ ಶ್ವಾಸಕೋಶಕ್ಕೆ ಹಾನಿಯುಂಟುಮಾಡುತ್ತದೆ’.

‘ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಬಹುತೇಕರಲ್ಲಿ ನೆಗೆಟಿವ್ ಎಂದು ತೋರಿಸುತ್ತದೆ. ಆರಂಭದಲ್ಲಿ ಐದು ದಿನ ಜ್ವರ ಬಂದು ನಂತರ ಹೋಗಿಬಿಡುತ್ತದೆ. ಎಂಟನೇ ದಿನಕ್ಕೆ ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಆಗ ಸಿ.ಟಿ.ಸ್ಕ್ಯಾನ್ ಮಾಡಿಸಿದರೆ ದೇಹದೊಳಗೆ ಕೋವಿಡ್ ಲಕ್ಷಣಗಳು ಗೋಚರಿಸುತ್ತವೆ. ಕೋವಿಡ್ ನ್ಯುಮೋನಿಯಾ ಪತ್ತೆಯಾಗುತ್ತದೆ. ಹೀಗಾಗಿ ಜ್ವರ ಕಾಣಿಸಿಕೊಂಡ ಒಂದೆರಡು ದಿನಗಳಲ್ಲೇ ಸಿ.ಟಿ. ಸ್ಕ್ಯಾನ್ ಮಾಡಿಸುವುದು ಉತ್ತಮ. ಜೊತೆಗೆ ಅಗತ್ಯ ಔಷಧಗಳನ್ನು ತೆಗೆದುಕೊಂಡರೆ ಗಂಭೀರ ತೊಂದರೆಯಿಂದ ಪಾರಾಗಬಹುದು’.

‘ನಾನು ಜಿಮ್‌ನಲ್ಲಿ ನಿತ್ಯವೂ ದೇಹ ದಂಡಿಸುತ್ತಿದ್ದೇನೆ. ದಷ್ಟಪುಷ್ಟವಾಗಿಯೂ ಇದ್ದೇನೆ. ನನಗೆ ಸೋಂಕು ತಗಲುವುದಿಲ್ಲ ಎಂಬ ಭಾವನೆ ಬಹುತೇಕರಲ್ಲಿದೆ. ಅವರು ಭ್ರಮಾಲೋಕದಿಂದ ಹೊರಬರಬೇಕು. ಕೋವಿಡ್ ನಿಯಂತ್ರಿಸಲು ಜಾರಿಗೊಳಿಸಿರುವ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು’.

‘14 ವರ್ಷದೊಳಗಿನ ಮಕ್ಕಳ ದೇಹದಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಿರುತ್ತದೆ. ಹೀಗಾಗಿ ಅವರಿಗೆ ಸೋಂಕು ತಗಲುವ ಅಪಾಯ ತೀರಾ ಕಡಿಮೆ. ಹಾಗಂತ ನಿರ್ಲಕ್ಷ್ಯ ಬೇಡ. ಯುವಕರ ಪೈಕಿ ಅನೇಕರು ಮಧುಮೇಹ, ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿರುತ್ತಾರೆ. ಕೆಲವರು ತುಂಬಾ ದಪ್ಪಗಿರುತ್ತಾರೆ. ಅವರು ಯಾವ ಬಗೆಯ ದೈಹಿಕ ಚಟುವಟಿಕೆಗಳಲ್ಲೂ ತೊಡಗಿಕೊಳ್ಳುವುದಿಲ್ಲ. ಅಂತಹವರು ತುಂಬಾ ಜಾಗರೂಕವಾಗಿರಬೇಕು’.

‘ಕೋವಿಡ್‌ನಿಂದ ಮೆದುಳು, ಹೃದಯ, ಮೂತ್ರಪಿಂಡ ಸೇರಿದಂತೆ ದೇಹದ ಎಲ್ಲಾ ಅಂಗಗಳಿಗೂ ತೊಂದರೆಯಾಗಬಹುದು. ಇವುಗಳಿಂದ ಬೇಗ ಚೇತರಿಸಿಕೊಳ್ಳಬಹುದು. ಶ್ವಾಸಕೋಶಕ್ಕೆ ಹಾನಿಯಾದರೆ ಗುಣಮುಖರಾಗುವುದು ತುಂಬಾ ಕಷ್ಟ. ಹೀಗಾಗಿ ಇದನ್ನು ಯಾರೂ ಲಘುವಾಗಿ ಪರಿಗಣಿಸಬಾರದು. ಅನಗತ್ಯವಾಗಿ ಹೊರಗಡೆ ಓಡಾಡುವುದನ್ನು ನಿಲ್ಲಿಸಬೇಕು. ಮನೆಯಲ್ಲಿ ಹಿರಿಯ ಸದಸ್ಯರಿರುತ್ತಾರೆ. ಅವರ ಬಗ್ಗೆಯೂ ಯೋಚಿಸಬೇಕು. ಅಂತರ ಕಾಪಾಡಿಕೊಂಡರೆ ಕೋವಿಡ್ ಸರಪಳಿ ಮುರಿಯುವುದು ಸುಲಭ. ಈ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು’.

**ಡಾ.ಹಿರೇಣಪ್ಪ ಉಡನೂರ,** ಶ್ವಾಸಕೋಶ ತಜ್ಞ, ಕೊಲಂಬಿಯಾ ಏಷ್ಯಾ ಆಸ್ಪತ್ರೆ, ಹೆಬ್ಬಾಳ, ಬೆಂಗಳೂರು.




## ‘ಸುಪ್ರೀಂ’ಗೆ ಮೇ 8ರಿಂದಲೇ ಬೇಸಿಗೆ ರಜೆ

ನವದೆಹಲಿ (ಪಿಟಿಐ): ಕೋವಿಡ್ ಪ್ರಕರಣಗಳ ಹಿನ್ನೆಲೆಯಲ್ಲಿ ಬೇಸಿಗೆ ರಜೆ ಒಂದು ವಾರ ಮೊದಲೇ ಅಂದರೆ ಮೇ 8ರಿಂದಲೇ ಜಾರಿಗೆ ಬರಲಿದೆ ಎಂದು ‘ಸುಪ್ರೀಂ’ ಸೋಮವಾರ ಪ್ರಕಟಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ಅವರು ತಮ್ಮ ಕೆಲಸದ ಮೊದಲ ದಿನವೇ, ಸುಪ್ರೀಂ ಕೋರ್ಟ್‌ನ ವಕೀಲರ ಸಂಘ ಸೇರಿದಂತೆ ವಿವಿಧ ಸಂಘಗಳ ಪದಾಧಿಕಾರಿಗಳ ಜೊತೆಗೆ ಕೋವಿಡ್ ಪರಿಸ್ಥಿತಿ ಕುರಿತು ಸಭೆ ನಡೆಸಿದರು.

ಹಿರಿಯ ವಕೀಲ, ಎಸ್‌ಸಿಬಿಎ ಅಧ್ಯಕ್ಷ ವಿಕಾಸ್ ಸಿಂಗ್ ಅವರು, ಬೇಸಿಗೆ ರಜೆಯು ಮೇ 8ರಿಂದ ಆರಂಭವಾಗಿ ಜೂನ್ 27ರವರೆಗೂ ಇರುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

# ಕರ್ನಾಟಕ ಸೇರಿ ದೇಶದ ವಿವಿಧೆಡೆ ಮಳೆಯಾಗುವ ಸಾಧ್ಯತೆ

ನವದೆಹಲಿ: ಕರ್ನಾಟಕದ ದಕ್ಷಿಣ ಒಳನಾಡು ಮತ್ತು ಕೇರಳದ ಉತ್ತರ ಭಾಗದಲ್ಲಿ ಏ.28ರಂದು ಧಾರಾಕಾರ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದೇಶದ ಈಶಾನ್ಯ, ದಕ್ಷಿಣ, ಕೇಂದ್ರ ಭಾಗದ ವಿವಿಧೆಡೆ ಏಪ್ರಿಲ್ 26 ರಿಂದ 30ರವರೆಗೂ ಮಳೆಯಾಗುವ ಸಂಭವವಿದೆ ಎಂದೂ ಇಲಾಖೆಯು ತಿಳಿಸಿದೆ.

ಅಲ್ಲದೆ, ಕರ್ನಾಟಕದ ಕರಾವಳಿ ಮತ್ತು ದಕ್ಷಿಣ ಒಳಗಾಡು, ತೆಲಂಗಾಣ, ಪುದುಚೇರಿ, ತಮಿಳುನಾಡು ಒಳಗೊಂಡಂತೆ ವಿವಿಧೆಡೆ ಏ. 29ರಂದು ಗುಡುಗು, ಸಿಡಿಲು ಸಮೇತ ಧಾರಾಕಾರ ಮಳೆ ಆಗಬಹುದು. ಗಾಳಿಯು ಗಂಟೆಗೆ 30 ರಿಂದ 40 ಕಿ.ಮೀ. ವೇಗದಲ್ಲಿ ಬೀಸಲಿದೆ ಎಂದು ಇಲಾಖೆಯು ತಿಳಿಸಿದೆ.

ಗುಡುಗು, ಸಿಡಿಲು ಮತ್ತು ಬೀಸು ಗಾಳಿಯೂ ಕೂಡ ತೆಲಂಗಾಣ, ಕೇರಳ ಮತ್ತು ಮಾಹೆ ಭಾಗದಲ್ಲಿ ಏಪ್ರಿಲ್ 26ರ ನಂತರ ಕಾಣಿಸಿಕೊಳ್ಳಬಹುದು. ಪಶ್ಚಿಮ ಬಂಗಾಳ, ಮಹಾರಾಷ್ಟ್ರದ ಕೇಂದ್ರ ಭಾಗ, ಮರಾಠಾವಾಡ, ರಾಯಲಸೀಮಾ, ಪುದುಚೇರಿ ಭಾಗದ ಕೆಲವೆಡೆ ಸೋಮವಾರ ಗುಡುಗು, ಮಿಂಚು ಕಾಣಿಸಿಕೊಳ್ಳಲಿದೆ. ಏಪ್ರಿಲ್ 30ರಂದು ದಕ್ಷಿಣ ಕರ್ನಾಟಕದ ಒಳನಾಡು ಮತ್ತು ಕೇರಳದ ಉತ್ತರ ಭಾಗದ ಕೆಲವೆಡೆ ಭಾರಿ ಮಳೆಯಾಗುವ ಸಂಭವವಿದೆ. ಉಳಿದಂತೆ, ಗುಜರಾತ್ ಮತ್ತು ಒಡಿಶಾದ ಕಡಲ ತೀರ ಭಾಗದಲ್ಲಿ ಒಣಹವೆ ಮುಂದುವರಿಯಲಿದೆ. ಏಪ್ರಿಲ್ 27ರಂದು ಉತ್ತರಾಖಂಡ, ಅಸ್ಸಾಂ, ಮೇಘಾಲಯ, ಕೇಂದ್ರ ಮಹಾರಾಷ್ಟ್ರ, ತೆಲಂಗಾಣ, ಕೇರಳ, ಮಾಹೆ ಭಾಗದಲ್ಲಿ ಭಾರಿ ಮಳೆಯಾಗಬಹುದು ಎಂದು ಮಾಹಿತಿ ನೀಡಿದೆ.


ಕರ್ನಾಟಕ ಸರ್ಕಾರ

**ಕರ್ನಾಟಕ ಸರ್ಕಾರದ ಸಚಿವಾಲಯ**

ಬಹುಮಹಡಿ ಕಟ್ಟಡ, ಬೆಂಗಳೂರು,

ಸಂಖ್ಯೆ: ಆರ್‌ಡಿ 34 ಜಿಆರ್‌ಸಿ 2021 ದಿನಾಂಕ:17.04.2021

**ಅಧಿಸೂಚನೆ**

ಕೇಂದ್ರ ತನಿಖಾ ಬ್ಯೂರೋ (ಸಿಬಿಐ) ಠೇವಣಿದಾರರ ದೂರಿನ ಬಗ್ಗೆ ಸೂಕ್ತ ತನಿಖೆ ಕೈಗೊಂಡು ಸಲ್ಲಿಸಿದ ತನಿಖಾ ವರದಿಯನ್ನಾಧರಿಸಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರ ಐಎಂಎ ಮೂಲಕ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುವನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳ ಹಾಗೂ ಅವುಗಳ ಸಹವರ್ತಿ ಜನರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯವಾಗಿರುತ್ತದೆ.

ಆದ್ದರಿಂದ, ಸರ್ಕಾರವು ಸಕ್ಷಮ ಪ್ರಾಧಿಕಾರದ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಮೂಲಕ ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ, ಎಂದರೆ:

**“ಆದೇಶ”**

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲೆ ನಿರೂಪಿಸಲಾದ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳಿಗೆ ಸೇರಿದೆ ಎನ್ನಲಾದ ಚರಾಸ್ತಿಗಳನ್ನು ಜಪ್ತಿ ಮಾಡುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪರ್ಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಮೆ॥ ಐ ಮಾನಿಟರಿ ಅಡ್ವೈಸರಿ (ಐಎಂಎ) ಹಾಗೂ ಅದರ ಸಮೂಹ ಸಂಸ್ಥೆಗಳು ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಆರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಚರಾಸ್ತಿಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

**ಟಿಪ್ಪಣಿ:** ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಎಲ್ಲಾ ಚರಾಸ್ತಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಸಹಿ/– (ವಿಜಯ್ ಡಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

| ಕ್ರ. ಸಂ. | ಸ್ವತ್ತಿನ ವಿವರ (ಚೆಕ್ಕುಬಂದಿ ಒಳಗೊಂಡಂತೆ) | ದಾಖಲೆಗಳ ಪ್ರಕಾರ ಸ್ವತ್ತಿನ ಮಾಲೀಕರು | ದಾಖಲಾತಿ ವಿವರ | ಮಾರುಕಟ್ಟೆ ದರ (ರೂ.ಗಳಲ್ಲಿ) | ಖರೀದಿ ದರ (ರೂ.ಗಳಲ್ಲಿ) | ಷರಾ |
|---|---|---|---|---|---|---|
| 1 | ಐ.ಎಂ.ಎ ಜ್ಯುವೆಲ್ಲರಿ ಮಾಲಿಗೆ, ಲೇಡಿ ಕರ್ಸನ್ ರಸ್ತೆ, ಶಿವಾಜಿನಗರ, 2ನೇ ಮಹಡಿಯಲ್ಲಿ ದೊರೆತಿರುವ ಬೆಳ್ಳಿಯ ಆಭರಣಗಳು ಮತ್ತು ಬೆಳ್ಳಿಯ ಸರಳುಗಳು ಒಟ್ಟು ತೂಕ 35.54 ಕೆ.ಜಿ. | ಮೊಹಮ್ಮದ್ ಮನ್ಸೂರ್ ಖಾನ್, ಐ.ಎಂ.ಎ ಸಂಸ್ಥೆ | ಕೇಂದ್ರ ತನಿಖಾ ತಂಡ, ಬೆಂಗಳೂರು ಇವರ ಪತ್ರದ ನಂ: ಆರ್.ಸಿ 14[ಎ]/2019 ಸಿ.ಬಿ.ಐ–ಎ.ಸಿ.ಬಿ. ಬಿಲಲ್.ಆರ್ ದಿನಾಂಕ: 13.01.2021 ರಂದು ನ್ಯಾಯಾಲಯದಲ್ಲಿ ಸೀಜರ್ ಮೆಮೋ ದಾಖಲಿಸಲಾಗಿರುತ್ತದೆ. | 17,50,000–00 [ಭಾರತ್ ಜೆಮ್ಸ್ ಸಂಸ್ಥೆ ರವರ ಮೌಲ್ಯಮಾಪಕರ ವರದಿಯಂತೆ] | – | ಬೆಳ್ಳಿಯ ಎಲ್ಲಾ ಆಭರಣಗಳನ್ನು ಎರಡು ದೊಡ್ಡ ಟ್ರಂಕ್ ಗಳಲ್ಲಿ ಶೇಖರಿಸಿ, ಜಿಲ್ಲಾ ಖಜಾನೆ ಭದ್ರತಾ ಕೊಠಡಿಯಲ್ಲಿ ದಿನಾಂಕ: 16.01.2021 ರಂದು ಠೇವಣಿ ಇಡಲಾಗಿದೆ. |

ಸಹಿ/– (ವಿಜಯ್ ಡಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿಶೇಷ ಕೋಶ)

ವಾಸಾಸಂಇ/ಬೆಂನ./ಜೆಎ/283/2021–22

### ಕೊಹ್ಲಿ ಬಳಗಕ್ಕೆ ರಿಷಭ್ ಪಂತ್ ನೇತೃತ್ವದ ಡೆಲ್ಲಿ ಕ್ಯಾಪಿಟಲ್ಸ್ ಸವಾಲು: ಸಮಬಲದ ಹೋರಾಟ ನಿರೀಕ್ಷೆ

# ಜಯದ ಲಯಕ್ಕೆ ಮರಳುವುದೇ ಆರ್‌ಸಿಬಿ

**ಅಹಮದಾಬಾದ್ (ಪಿಟಿಐ):** ಸತತ ನಾಲ್ಕು ಜಯದ ನಂತರ ಸೋಲಿನ ಕಹಿ ಅನುಭವಿಸಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಮತ್ತೆ ಲಯಕ್ಕೆ ಮರಳಲು ಪ್ರಯತ್ನಿಸಲಿದೆ. ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಆರ್‌ಸಿಬಿಗೆ ಡೆಲ್ಲಿ ಕ್ಯಾಪಿಟಲ್ಸ್ ಎದುರಾಳಿ.

ಚೆನ್ನೈ ಸೂಪರ್ ಕಿಂಗ್ಸ್ ಎದುರು ಭಾನುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡ 69 ರನ್‌ಗಳ ಸೋಲು ಕಂಡಿತ್ತು. ಭಾನುವಾರ ನಡೆದ ಮತ್ತೊಂದು ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಸೂಪರ್ ಓವರ್‌ನಲ್ಲಿ ಮಣಿಸಿರುವ ಡೆಲ್ಲಿ ಆತ್ಮವಿಶ್ವಾಸದಲ್ಲಿದೆ.

ಸಮಾನ ಸಾಮರ್ಥ್ಯದ ತಂಡಗಳ ನಡುವಿನ ಕದನ ಎಂದೇ ಹೇಳಬಹುದಾದ ಈ ಪಂದ್ಯದಲ್ಲಿ ಜಯ ಗಳಿಸಬೇಕಾದರೆ ಆರ್‌ಸಿಬಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್ ವೈಫಲ್ಯಕ್ಕೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಆರಂಭಿಕ ಜೋಡಿ ದೇವದತ್ತ ಪಡಿಕ್ಕಲ್ (4 ಪಂದ್ಯಗಳಲ್ಲಿ 171) ಮತ್ತು ವಿರಾಟ್ ಕೊಹ್ಲಿ (5 ಪಂದ್ಯಗಳಲ್ಲಿ 151) ಉತ್ತಮ ಫಾರ್ಮ್‌ನಲ್ಲಿದ್ದು ಅದೇ ಲಯವನ್ನು ಮುಂದುವರಿಸಿದರೆ ತಂಡದ ಇನಿಂಗ್ಸ್‌ಗೆ ಭದ್ರ ಬುನಾದಿ ಸಿಗಲಿದೆ. ಉತ್ತಮ ದಾಳಿ ಸಂಘಟಿಸಬಲ್ಲ ಬೌಲಿಂಗ್ ಪಡೆಯನ್ನು ಹೊಂದಿರುವ ಡೆಲ್ಲಿ ವಿರುದ್ಧ ಸವಾಲಿನ ಮೊತ್ತ ಕಲೆ ಹಾಕಬೇಕಾದರೆ ಮಧ್ಯಮ ಕ್ರಮಾಂಕದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ (5 ಪಂದ್ಯಗಳಲ್ಲಿ 198) ಮತ್ತು ಎಬಿ ಡಿವಿಲಿಯರ್ಸ್ (5 ಪಂದ್ಯಗಳಲ್ಲಿ 129) ಅವರ ನೈಜ ಆಟದ ಅಗತ್ಯವಿದ್ದು ಸ್ಫೋಟಕ ಬ್ಯಾಟಿಂಗ್ ಮಾಡಬಲ್ಲ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರಿಂದ ನೈಜ ಸಾಮರ್ಥ್ಯವೂ ಹೊರಹೊಮ್ಮಬೇಕಾಗಿದೆ.

ಭಾರಿ ಮೌಲ್ಯ ನೀಡಿ ತಂಡಕ್ಕೆ ಸೇರಿಸಿಕೊಂಡಿರುವ ಮ್ಯಾಕ್ಸ್‌ವೆಲ್ ಆರಂಭದ ಪಂದ್ಯಗಳಲ್ಲಿ ಉತ್ತಮ ಬ್ಯಾಟಿಂಗ್ ಮಾಡಿದ್ದರು. ಆದರೆ ನಂತರ ಅವರಿಂದ ನಿರೀಕ್ಷಿತ ಮಟ್ಟದ ರನ್‌ಗಳು ಬಂದಿಲ್ಲ.

ಹಿಂದಿನ ಪಂದ್ಯದಲ್ಲಿ ಚೆನ್ನೈ ಬ್ಯಾಟ್ಸ್‌ಮನ್‌ಗಳ ಮುಂದೆ ದುಬಾರಿಯಾದ ಬೌಲರ್‌ಗಳು ಅದನ್ನು ಮರೆತು ದಾಳಿ ನಡೆಸಬೇಕಾಗಿದೆ. ಲೀಗ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದವರ ಪಟ್ಟಿಯ ಮೊದಲ ಸ್ಥಾನದಲ್ಲಿರುವ ಹರ್ಷಲ್ ಪಟೇಲ್ ಒಂದೇ ಓವರ್‌ನಲ್ಲಿ ನೀಡಿದ 37 ರನ್ ಒಳಗೊಂಡಂತೆ ಪಂದ್ಯದಲ್ಲಿ ಒಟ್ಟು 51 ರನ್ ಬಿಟ್ಟುಕೊಟ್ಟಿದ್ದರು. ಹೀಗಾಗಿ ಅವರ ಮೇಲೆ ಮಂಗಳವಾರದ ಪಂದ್ಯದಲ್ಲಿ ಕಣ್ಣಿಡಬೇಕಾಗಿದೆ.

ವೇಗಿಗಳಾದ ಮೊಹಮ್ಮದ್ ಸಿರಾಜ್, ಕೈಲ್ ಜೆಮಿಸನ್, ಸ್ಪಿನ್ ಜೋಡಿ ಯಜುವೇಂದ್ರ ಚಾಹಲ್ ಮತ್ತು ವಾಷಿಂಗ್ಟನ್ ಸುಂದರ್ ಡೆಲ್ಲಿಯ ಬಲಿಷ್ಠ ಬ್ಯಾಟಿಂಗ್ ಬಳಗವನ್ನು ನಿಯಂತ್ರಿಸಲು ಯಾವ ತಂತ್ರಕ್ಕೆ ಮೊರೆಹೋಗುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ.

**ಶಿಖರ್–ಪೃಥ್ವಿ ಕಟ್ಟಿಹಾಕುವ ಸವಾಲು:** ಅತ್ಯುತ್ತಮ ಫಾರ್ಮ್‌ನಲ್ಲಿರುವ ಶಿಖರ್ ಧವನ್ (5 ಪಂದ್ಯ; 259 ರನ್) ಮತ್ತು ಅವರ ಆರಂಭಿಕ ಜೋಡಿ ಪೃಥ್ವಿ ಶಾ (5 ಪಂದ್ಯ; 166) ಅವರನ್ನು ಕಟ್ಟಿಹಾಕುವ ಜವಾಬ್ದಾರಿ ಆರ್‌ಸಿಬಿ ಬೌಲರ್‌ಗಳ ಮೇಲೆ ಇದೆ. ರಿಷಭ್ ಪಂತ್ (125 ರನ್), ಸ್ಟೀವ್ ಸ್ಮಿತ್, ಮಾರ್ಕಸ್ ಸ್ಟೋಯಿನಿಸ್ ಮತ್ತು ಶಿಮ್ರಾನ್ ಹೆಟ್ಮೆಯರ್ ಅವರನ್ನು ಒಳಗೊಂಡ ಮಧ್ಯಮ ಕ್ರಮಾಂಕವೂ ಬೌಲರ್‌ಗಳಿಗೆ ಸವಾಲಾಗಬಲ್ಲುದು.

ರವಿಚಂದ್ರನ್ ಅಶ್ವಿನ್ ಅವರ ಅನುಪಸ್ಥಿತಿಯಲ್ಲಿ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ಮತ್ತು ಲೆಗ್ ಸ್ಪಿನ್ನರ್ ಅಮಿತ್ ಮಿಶ್ರಾ ಅವರ ಜವಾಬ್ದಾರಿ ಹೆಚ್ಚಿದೆ. ವೇಗದ ಬೌಲಿಂಗ್ ವಿಭಾಗದಲ್ಲಿ ಆವೇಶ್ ಖಾನ್ ಮತ್ತು ಕಗಿಸೊ ರಬಾಡ ಭರವಸೆ ಮೂಡಿಸಿದ್ದಾರೆ. ಅಶ್ವಿನ್ ಬದಲಿಗೆ ಲಲಿತ್ ಯಾದವ್ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ದೇವದತ್ತ ಪಡಿಕ್ಕಲ್ –ಪಿಟಿಐ ಚಿತ್ರ




ಆರಂಭ: ರಾತ್ರಿ 7.30
ಸ್ಥಳ: ಅಹಮದಾಬಾದ್
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

### ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

| ಆಟಗಾರ | ತಂಡ | ರನ್ |
|---|---|---|
| ಶಿಖರ್ ಧವನ್ | ಡೆಲ್ಲಿ | 259 |
| ಕೆ.ಎಲ್.ರಾಹುಲ್ | ಪಂಜಾಬ್ | 240 |
| ಡುಪ್ಲೆಸಿ | ಚೆನ್ನೈ | 214 |

### ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

| ಆಟಗಾರ | ತಂಡ | ವಿಕೆಟ್ |
|---|---|---|
| ಹರ್ಷಲ್ | ಬೆಂಗಳೂರು | 15 |
| ಆವೇಶ್ ಖಾನ್ | ಡೆಲ್ಲಿ | 11 |
| ರಾಹುಲ್ ಚಾಹರ್ | ಮುಂಬೈ | 9 |

### ಪಾಯಿಂಟ್ ಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ರದ್ದು | ಟೈ | ಅಂಕ |
|---|---|---|---|---|---|---|
| ಚೆನ್ನೈ ಸೂಪರ್ ಕಿಂಗ್ಸ್ | 5 | 4 | 1 | - | - | 8 |
| ಡೆಲ್ಲಿ ಕ್ಯಾಪಿಟಲ್ಸ್ | 5 | 4 | 1 | - | - | 8 |
| ಬೆಂಗಳೂರು | 5 | 4 | 1 | - | - | 8 |
| ಮುಂಬೈ ಇಂಡಿಯನ್ಸ್ | 5 | 2 | 3 | - | - | 4 |
| ಕೋಲ್ಕತ್ತ | 6 | 2 | 4 | - | - | 4 |
| ಪಂಜಾಬ್ | 6 | 2 | 4 | - | - | 4 |
| ರಾಜಸ್ಥಾನ | 5 | 2 | 3 | - | - | 4 |
| ಹೈದರಾಬಾದ್ | 5 | 1 | 4 | - | - | 2 |

* ಸೋಮವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

### ತವರಿಗೆ ಮರಳಿದ ಬೆಂಗಳೂರು ತಂಡದ ಇಬ್ಬರು

# ಐಪಿಎಲ್‌ನಲ್ಲಿ ಕೋವಿಡ್ ಸಂಚಲನ; ಬಿಸಿಸಿಐ ಅಚಲ

**ನವದೆಹಲಿ (ಪಿಟಿಐ):** ಮೂವರು ವಿದೇಶಿ ಆಟಗಾರರು ಒಳಗೊಂಡಂತೆ ಕೋವಿಡ್ ಆತಂಕದಿಂದ ನಾಲ್ವರು ತಂಡಗಳನ್ನು ತೊರೆದಿರುವ ಹಿನ್ನೆಲೆಯಲ್ಲಿ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆತಂಕ ಸೃಷ್ಟಿಯಾಗಿದೆ. ಆದರೆ ಯಾವುದೇ ಕಾರಣಕ್ಕೂ ಟೂರ್ನಿಯನ್ನು ಅರ್ಧಕ್ಕೆ ನಿಲ್ಲಿಸುವುದಿಲ್ಲ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ತಿಳಿಸಿದೆ.

ಆರ್. ಅಶ್ವಿನ್

ಕುಟುಂಬದ ಸದಸ್ಯರಲ್ಲಿ ಕೋವಿಡ್ ಸೋಂಕು ಕಾಣಿಸಿಕೊಂಡಿರುವುದರಿಂದ ಅವರಿಗೆ ಧೈರ್ಯ ತುಂಬುವುದಕ್ಕಾಗಿ ಹೋಗುತ್ತಿದ್ದೇನೆ ಎಂದು ಹೇಳಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ರವಿಚಂದ್ರನ್ ಅಶ್ವಿನ್ ಮನೆಗೆ ಮರಳಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿದ್ದ ಆಸ್ಟ್ರೇಲಿಯಾ ಆಟಗಾರರಾದ ಆ್ಯಡಂ ಜಂಪಾ ಮತ್ತು ಕೇನ್ ರಿಚರ್ಡ್ಸನ್ 'ವೈಯಕ್ತಿಕ' ಕಾರಣ ನೀಡಿ ಸೋಮವಾರ ತವರಿಗೆ ಮರಳಿದ್ದಾರೆ. ಆದರೆ ನಿಜವಾದ ಕಾರಣ ಏನೆಂದು ಅವರು ಹೇಳಿಲ್ಲ. ಆಸ್ಟ್ರೇಲಿಯಾದ ಮತ್ತೊಬ್ಬ ಆಟಗಾರ, ರಾಜಸ್ಥಾನ್ ರಾಯಲ್ಸ್‌ನ ಆ್ಯಂಡ್ರ್ಯೂ ಟೈ ಭಾನುವಾರ ತಂಡ ತೊರೆದಿದ್ದರು. ನಂತರ ಅವರು ನೀಡಿರುವ ಹೇಳಿಕೆ ಸೋಮವಾರ ಚರ್ಚೆಗೆ ಗ್ರಾಸವಾಗಿದೆ. ಬಯೊಬಬಲ್‌ನಲ್ಲಿದ್ದಾಗ ತವರು ನಾಡಿನಿಂದ ದೂರ 'ಲಾಕ್' ಆದಂತೆ ಭಾಸವಾಗುತ್ತಿದೆ ಎಂದಿದ್ದರು. ಇದು, ಭಾರತದಲ್ಲಿ ಕೋವಿಡ್ ಪ್ರಕರಣಗಳು ನಿತ್ಯವೂ ಏರುಗತಿಯಲ್ಲಿ ಸಾಗುತ್ತಿರುವ ಕಾರಣ ಆಟಗಾರರಲ್ಲಿ ಆತಂಕ ಮೂಡಿದೆ ಎಂಬ ಸಂದೇಹ ಮೂಡಿಸಿದೆ.

'ಆಗಸ್ಟ್‌ನಿಂದ ಇಲ್ಲಿಯ ವರೆಗೆ ಕೇವಲ 11 ದಿನ ಮಾತ್ರ ಮನೆಯಲ್ಲಿದ್ದೆ. ಬಯೊಬಬಲ್‌ನಲ್ಲಿ ಕಳೆಯುವುದಕ್ಕಿಂತ ಮನೆಗೆ ವಾಪಸಾಗುವುದೇ ಒಳಿತು ಎಂದೆನಿಸಿತು' ಎಂದು ದೋಹಾದಿಂದ ಪರ್ತ್‌ಗೆ ವಿಮಾನವೇರುವ ಮುನ್ನ ಸೆನ್ ರೇಡಿಯೊಗೆ ನೀಡಿರುವ ಸಂದರ್ಶನದಲ್ಲಿ ಟೈ ಹೇಳಿದ್ದಾರೆ.

ಬೆಂಗಳೂರು ತಂಡದ ಫ್ರಾಂಚೈಸ್, ಲೆಗ್ ಸ್ಪಿನ್ನರ್ ಆ್ಯಡಂ ಜಂಪಾ ಅವರನ್ನು ₹ 1.5 ಕೋಟಿಗೆ ಖರೀದಿಸಿದ್ದರೆ ವೇಗಿ ರಿಚರ್ಡ್ಸನ್ ಅವರಿಗೆ ₹ 4 ಕೋಟಿ ವ್ಯಯಿಸಿದೆ.

### 'ಹೋಗುವವರು ಹೋಗಬಹುದು'

ಸೋಮವಾರ ಮಧ್ಯಾಹ್ನ ಹೇಳಿಕೆ ಬಿಡುಗಡೆ ಮಾಡಿರುವ ಬಿಸಿಸಿಐ 'ಸದ್ಯದ ಪರಿಸ್ಥಿತಿಯಲ್ಲಿ ಟೂರ್ನಿ ಮುಂದುವರಿಯಲಿದೆ. ಈ ನಡುವೆ ಯಾರಿಗಾದರೂ ಮನೆಗೆ ಹೋಗಬೇಕು ಎಂದೆನಿಸಿದರೆ ಹೋಗಬಹುದು. ಅದಕ್ಕೆ ಅಡ್ಡಿ ಇಲ್ಲ' ಎಂದು ಹೇಳಿದೆ.

ಈ ನಡುವೆ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪೋಷಕ, ಆಸ್ಟ್ರೇಲಿಯಾದ ಡೇವಿಡ್ ಹಸ್ಸಿ 'ಭಾರತದಲ್ಲಿ ಕೋವಿಡ್ ಹೆಚ್ಚುತ್ತಿರುವುದರಿಂದ ಆಸ್ಟ್ರೇಲಿಯಾ ಆಟಗಾರರು ವಾಪಸ್ ಹೋಗುವ ತವಕದಲ್ಲಿದ್ದಾರೆ. ತವರು ಸೇರಲು ಸಾಧ್ಯವೇ ಎಂಬ ಆತಂಕದಲ್ಲಿರುವ ಆಟಗಾರರು ಇನ್ನೂ ಇದ್ದಾರೆ' ಎಂದು ಹೇಳಿರುವುದಾಗಿ 'ಸಿಡ್ನಿ ಮಾರ್ನಿಂಗ್ ಹೆರಾಲ್ಡ್' ವರದಿ ಮಾಡಿದೆ.

ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಮತ್ತು ಆಸ್ಟ್ರೇಲಿಯಾ ಕ್ರಿಕೆಟರ್‌ಗಳ ಸಂಸ್ಥೆ ಸೋಮವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದು ಪರಿಸ್ಥಿತಿಯ ಅವಲೋಕನ ಮಾಡಲಾಗುತ್ತಿದೆ ಎಂದು ಹೇಳಿವೆ. ಐಪಿಎಲ್‌ನಲ್ಲಿ ಇಂಗ್ಲೆಂಡ್ ಮತ್ತು ನ್ಯೂಜಿಲೆಂಡ್‌ನ ಅನೇಕ ಆಟಗಾರರು ಕೂಡ ಆಡುತ್ತಿದ್ದು ಜೂನ್ ಎರಡರಿಂದ ಇಂಗ್ಲೆಂಡ್ ಎದುರು ಟೆಸ್ಟ್ ಸರಣಿ ಆರಂಭವಾಗುವುದರಿಂದ ನ್ಯೂಜಿಲೆಂಡ್ ಆಟಗಾರರು ಯಾವುದೇ ಕ್ಷಣದಲ್ಲಿ ವಾಪಸಾಗುವ ಸಾಧ್ಯತೆ ಇದೆ.

ಆಸ್ಟ್ರೇಲಿಯಾದ 14 ಮಂದಿ ಇನ್ನೂ ಐಪಿಎಲ್‌ನಲ್ಲಿ ಉಳಿದಿದ್ದಾರೆ. ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಪ್ಯಾಟ್ ಕಮಿನ್ಸ್ ಇವರಲ್ಲಿ ಪ್ರಮುಖರು. ಕೋಚ್‌ಗಳಾದ ರಿಕಿ ಪಾಂಟಿಂಗ್ (ಡೆಲ್ಲಿ) ಮತ್ತು ಸೈಮನ್ ಕ್ಯಾಟಿಚ್ (ಬೆಂಗಳೂರು) ಅವರೂ ಇದ್ದು ವೀಕ್ಷಕ ವಿವರಣೆಕಾರರ ತಂಡದಲ್ಲಿ ಮ್ಯಾಥ್ಯೂ ಹೇಡನ್, ಬ್ರೆಟ್ ಲೀ, ಮೈಕೆಲ್ ಸ್ಲೇಟರ್ ಮತ್ತು ಲಿಸಾ ಸ್ಥಳೇಕರ್ ಇದ್ದಾರೆ.

# ಹಾಕಿ: ರಾಣಿ ಸೇರಿ ಏಳು ಮಂದಿಗೆ ಕೋವಿಡ್

**ನವದೆಹಲಿ (ಪಿಟಿಐ):** ಬೆಂಗಳೂರಿನಲ್ಲಿರುವ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಕೇಂದ್ರದಲ್ಲಿ ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳಲು ಆಗಮಿಸಿರುವ ಭಾರತ ಮಹಿಳಾ ಹಾಕಿ ತಂಡದ ನಾಯಕಿ ರಾಣಿ ರಾಂಪಾಲ್ ಸೇರಿದಂತೆ ಏಳು ಮಂದಿ ಆಟಗಾರ್ತಿಯರಲ್ಲಿ ಕೋವಿಡ್ -19 ದೃಢಪಟ್ಟಿದೆ. ಇಬ್ಬರು ಇಬ್ಬರು ನೆರವು ಸಿಬ್ಬಂದಿಯೂ ಸೋಂಕಿತರಾಗಿದ್ದಾರೆ. ಆದರೆ ಯಾರಲ್ಲಿಯೂ ಸೋಂಕಿನ ಲಕ್ಷಣಗಳು ಇಲ್ಲ.

'ತವರು ರಾಜ್ಯಗಳಿಂದ ಇಲ್ಲಿಗೆ ಬಂದ ಆಟಗಾರ್ತಿಯರನ್ನು, ಕ್ವಾರಂಟೈನ್ ಮಾಡಿದ ಬಳಿಕ ಏಪ್ರಿಲ್ 24ರಂದು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗಿತ್ತು' ಎಂದು ಸಾಯ್ ತಿಳಿಸಿದೆ.

ರಾಣಿ, ಸವಿತಾ ಪುನಿಯಾ, ಶರ್ಮಿಳಾ ದೇವಿ, ರಜನಿ, ನವಜೋತ್ ಕೌರ್, ನವನೀತ್ ಕೌರ್ ಹಾಗೂ ಸುಶೀಲಾ ಅವರಿಗೆ ಕೋವಿಡ್ ಖಚಿತಪಟ್ಟಿದೆ. ವಿಡಿಯೊ ಅನಾಲಿಸ್ಟ್ ಅಮೃತ ಪ್ರಕಾಶ್ ಮತ್ತು ವೈಜ್ಞಾನಿಕ ಸಲಹೆಗಾರ ವೇಯ್ನ್ ಲೊಂಬಾರ್ಡ್ ಕೊರೊನಾ ಸೋಂಕಿತ ನೆರವು ಸಿಬ್ಬಂದಿಯಾಗಿದ್ದಾರೆ.

# ಕೋಲ್ಕತ್ತಗೆ ಮಣಿದ ಪಂಜಾಬ್

**ಅಹಮದಾಬಾದ್:** ಕನ್ನಡಿಗ ಪ್ರಸಿದ್ಧ ಕೃಷ್ಣ ನೇತೃತ್ವದ ಬೌಲರ್‌ಗಳ ದಾಳಿಯ ಎದುರಾಳಿ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿ ಹಾಕಿದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ರಾಹುಲ್ ತ್ರಿಪಾಠಿ ಮತ್ತು ನಾಯಕ ಏಯಾನ್ ಮಾರ್ಗನ್ ಅವರ ಬ್ಯಾಟಿಂಗ್ ನೆರವಿನಿಂದ ಸುಲಭ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೋಮವಾರ ರಾತ್ರಿ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ತಂಡ ಪಂಜಾಬ್ ಕಿಂಗ್ಸ್ ತಂಡವನ್ನು 5 ವಿಕೆಟ್‌ಗಳಿಂದ ಮಣಿಸಿತು. ಕೆ.ಎಲ್. ರಾಹುಲ್ ಬಳಗ ನೀಡಿದ 124 ರನ್‌ಗಳ ಗುರಿಯನ್ನು ಕೋಲ್ಕತ್ತ 16.4 ಓವರ್‌ಗಳಲ್ಲಿ ತಲುಪಿತು.

ಟಾಸ್ ಸೋತು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡದ ಇನಿಂಗ್ಸ್‌ನ ಆರಂಭವೇ ನೀರಸವಾಗಿತ್ತು. ಶಿವಂ ಮಾವಿ ಮಾಡಿದ ಮೊದಲ ಓವರ್‌ನಲ್ಲಿ ನಾಯಕ ರಾಹುಲ್ ಮತ್ತು ಮಯಂಕ್ ಅಗರವಾಲ್ ಅವರಿಗೆ ಒಂದು ರನ್ ಗಳಿಸಲಷ್ಟೇ ಸಾಧ್ಯವಾಯಿತು. ಪ್ಯಾಟ್ ಕಮಿನ್ಸ್ ಅವರ ಎರಡನೇ ಓವರ್‌ನಲ್ಲಿ ಅಗರವಾಲ್ ಸಿಕ್ಸರ್ ಮತ್ತು ರಾಹುಲ್ ಬೌಂಡರಿ ಸಿಡಿಸಿ ಭರವಸೆ ಮೂಡಿಸಿದರು. ಆರನೇ ಓವರ್‌ನಲ್ಲಿ ರಾಹುಲ್ ಔಟಾದರು. ಮುಂದಿನ ಓವರ್‌ನಲ್ಲಿ ಕ್ರಿಸ್ ಗೇಲ್ ಶೂನ್ಯಕ್ಕೆ ಮರಳಿದರು. ನಾಯಕ ಮಾರ್ಗನ್ ಪಡೆದ ಮೋಹಕ ಕ್ಯಾಚ್‌ಗೆ ದೀಪಕ್ ಹೂಡಾ ಬಲಿಯಾದರು. ಮಯಂಕ್ ಮತ್ತು ನಿಕೋಲಸ್ ಪೂರನ್ ಇನಿಂಗ್ಸ್ ಕಟ್ಟಲು ಪ್ರಯತ್ನಿಸಿದರೂ ಜೊತೆಯಾಟ ಹೆಚ್ಚು ಹೊತ್ತು ಉಳಿಯಲಿಲ್ಲ.

ಪ್ರಸಿದ್ಧ ಕೃಷ್ಣ

### ಸ್ಕೋರ್ ಕಾರ್ಡ್

**ಪಂಜಾಬ್ ಕಿಂಗ್ಸ್ 9ಕ್ಕೆ 123 (20 ಓವರ್‌ಗಳಲ್ಲಿ)**
ರಾಹುಲ್ ಸಿ ಸುನಿಲ್ ಬಿ ಕಮಿನ್ಸ್ 19 (20 ಎ, 4x2, 6x1)
ಮಯಂಕ್ ಸಿ ತ್ರಿಪಾಠಿ ಬಿ ಸುನಿಲ್ 31 (34 ಎ, 4x1, 6x2)
ಗೇಲ್ ಸಿ ಕಾರ್ತಿಕ್ ಬಿ ಮಾವಿ 0 (1 ಎ)
ದೀಪಕ್ ಸಿ ಮಾರ್ಗನ್ ಬಿ ಪ್ರಸಿದ್ಧ 1 (4 ಎ)
ಪೂರನ್ ಬಿ ವರುಣ್ 19 (19 ಎ, 4x1, 6x1)
ಮೊಯಿಸಸ್ ಬಿ ಸುನಿಲ್ 2 (3 ಎ)
ಶಾರೂಖ್ ಸಿ ಮಾರ್ಗನ್ ಬಿ ಪ್ರಸಿದ್ಧ 13 (14 ಎ, 6x1)
ಜೋರ್ಡಾನ್ ಬಿ ಪ್ರಸಿದ್ಧ 30 (18 ಎ, 4x1, 6x3)
ಬಿಷ್ಣೋಯಿ ಸಿ ಮಾರ್ಗನ್ ಬಿ ಕಮಿನ್ಸ್ 1 (4 ಎ)
ಶಮಿ ಔಟಾಗದೆ 1 (2 ಎ)
ಆರ್ಷದೀಪ್ ಔಟಾಗದೆ 1 (1 ಎ)
ಇತರೆ (ಲೆಗ್ ಬೈ 1, ವೈಡ್ 4) 5
ವಿಕೆಟ್ ಪತನ: 1-36 (ಕೆ.ಎಲ್. ರಾಹುಲ್, 5.4), 2-38 (ಕ್ರಿಸ್ ಗೇಲ್, 6.3), 3-42 (ದೀಪಕ್ ಹೂಡಾ, 7.4), 4-60 (ಮಯಂಕ್ ಅಗರವಾಲ್, 11.2), 5-75 (ಮೊಯಿಸಸ್ ಹೆನ್ರಿಕ್ಸ್, 13.1), 6-79 (ನಿಕೋಲಸ್ ಪೂರನ್, 14.2), 7-95 (ಶಾರೂಖ್ ಖಾನ್, 17.2), 8-98 (ರವಿ ಬಿಷ್ಣೋಯಿ, 18.1), 9-121 (ಕ್ರಿಸ್ ಜೋರ್ಡಾನ್, 19.4)
ಬೌಲಿಂಗ್: ಶಿವಂ ಮಾವಿ 4–0–13–1, ಪ್ಯಾಟ್ ಕಮಿನ್ಸ್ 3–0–31–2, ಸುನಿಲ್ ನಾರಾಯಣ್ 4–0–22–2, ಪ್ರಸಿದ್ಧ ಕೃಷ್ಣ 4–0–30–3, ಆ್ಯಂಡ್ರೆ ರಸೆಲ್ 1–0–2–0, ವರುಣ್ ಚಕ್ರವರ್ತಿ 4–0–24–1

**ಕೋಲ್ಕತ್ತ ನೈಟ್ ರೈಡರ್ಸ್ 5ಕ್ಕೆ 126 (16.4 ಓವರ್‌ಗಳಲ್ಲಿ)**
ಶುಭಮನ್ ಎಲ್‌ಬಿಡಬ್ಲ್ಯು ಶಮಿ 9 (8ಎ, 4X2)
ನಿತೀಶ್ ಸಿ ಶಾರೂಖ್ ಬಿ ಹೆನ್ರಿಕ್ಸ್ 0 (1ಎ)
ತ್ರಿಪಾಠಿ ಸಿ ಶಾರೂಖ್ ಬಿ ಹೂಡಾ 41 (32ಎ, 4X7)
ಸುನಿಲ್ ಸಿ ರವಿ ಬಿ ಅರ್ಷದೀಪ್ 0 (4ಎ)
ಮಾರ್ಗನ್ ಔಟಾಗದೆ 47 (40ಎ, 4X4, 6X2)
ರಸೆಲ್ ರನೌಟ್ (ಆರ್ಷದೀಪ್/ರಾಹುಲ್) 10 (9ಎ, 4X2)
ದಿನೇಶ್ ಔಟಾಗದೆ 12 (6ಎ, 4X2)
ಇತರೆ (ಲೆಗ್‌ಬೈ 6, ವೈಡ್ 1) 7
ವಿಕೆಟ್ ಪತನ: 1–5 (ನಿತೀಶ್ ರಾಣಾ, 0.4), 2–9 (ಶುಭಮನ್ ಗಿಲ್, 1.5), 3–17 (ಸುನಿಲ್ ನಾರಾಯಣ್, 2.6), 4–83 (ರಾಹುಲ್ ತ್ರಿಪಾಠಿ, 10.6), 5–98 (ಆ್ಯಂಡ್ರೆ ರಸೆಲ್, 14.1)
ಬೌಲಿಂಗ್: ಮೊಯಿಸೆಸ್ ಹೆನ್ರಿಕ್ಸ್ 1–0–5–1, ಮೊಹಮ್ಮದ್ ಶಮಿ 4–0–25–1, ಆರ್ಷದೀಪ್ ಸಿಂಗ್ 2.4–0–27–1, ರವಿ ಬಿಷ್ಣೋಯಿ 4–0–19–0, ಕ್ರಿಸ್ ಜೋರ್ಡಾನ್ 3–0–24–0, ದೀಪಕ್ ಹೂಡಾ 2–0–20–1

**ಫಲಿತಾಂಶ: ಕೋಲ್ಕತ್ತ ನೈಟ್‌ರೈಡರ್ಸ್‌ಗೆ 5 ವಿಕೆಟ್‌ಗಳ ಜಯ**

## ಸಂಕ್ಷಿಪ್ತ ಸುದ್ದಿ

### ಸೂಪರ್ ಓವರ್ ಮಾಡಲು ನಾನೇ ಮುಂದಾಗಿದ್ದೆ: ಅಕ್ಷರ್

**ಚೆನ್ನೈ (ಪಿಟಿಐ):** ಸೂಪರ್ ಓವರ್ ಮಾಡಲು ಸಿದ್ಧ ಎಂದು ನಾಯಕ ರಿಷಭ್ ಪಂತ್ ಅವರಿಗೆ ನಾನೇ ಹೇಳಿದ್ದೆ ಎಂಬುದಾಗಿ ಡೆಲ್ಲಿ ಕ್ಯಾಪಿಟಲ್ಸ್‌ನ ಎಡಗೈ ಸ್ಪಿನ್ನರ್ ಅಕ್ಷರ್ ಪಟೇಲ್ ತಿಳಿಸಿದ್ದಾರೆ. ಭಾನುವಾರ ರಾತ್ರಿ ನಡೆದ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಸೂಪರ್ ಓವರ್‌ನಲ್ಲಿ ಜಯ ಗಳಿಸಿತ್ತು.

ಮೊದಲು ಬ್ಯಾಟ್ ಮಾಡಿದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡ ಪೃಥ್ವಿ ಶಾ ಅವರ ಅಮೋಘ ಅರ್ಧಶತಕದ ನೆರವಿನಿಂದ 4ಕ್ಕೆ 159 ರನ್ ಗಳಿಸಿತ್ತು. ಉತ್ತರವಾಗಿ ಸನ್‌ರೈಸರ್ಸ್ ಏಳು ವಿಕೆಟ್ ಕಳೆದುಕೊಂಡು 159 ರನ್ ಗಳಿಸಿತ್ತು.

### ಕೋವಿಡ್ ವಿರುದ್ಧದ ಹೋರಾಟ: ₹ 37 ಲಕ್ಷ ನೀಡಿದ ಕಮಿನ್ಸ್

**ನವದೆಹಲಿ (ಪಿಟಿಐ):** ಐಪಿಎಲ್ ಫ್ರಾಂಚೈಸ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಪ್ಯಾಟ್ ಕಮಿನ್ಸ್ ಅವರು ಕೋವಿಡ್ ವಿರುದ್ಧದ ಹೋರಾಟಕ್ಕೆ ಪಿಎಂ ಕೇರ್ಸ್ ನಿಧಿಗೆ ₹ 37 ಲಕ್ಷ ದೇಣಿಗೆ ನೀಡಿದ್ದಾರೆ. ಬಿಕ್ಕಟ್ಟಿನ ದಿನಗಳಲ್ಲಿ, ಕೆಲವು ಗಂಟೆಗಳು ಮನರಂಜನೆ ಒದಗಿಸುವ ಐಪಿಎಲ್ ಟೂರ್ನಿ ಮುಂದುವರಿಯಲಿ ಎಂದೂ ಟ್ವಿಟರ್‌ನಲ್ಲಿ ಅವರು ಹೇಳಿದ್ದಾರೆ.

### 'ಐಪಿಎಲ್ ರದ್ದುಗೊಳಿಸಿ; ಆಮ್ಲಜನಕ ನೀಡಿ'

**ನವದೆಹಲಿ:** ಕೋವಿಡ್-19 ವ್ಯಾಪಕವಾಗಿ ಹಬ್ಬುತ್ತಿರುವ ಹಿನ್ನೆಲೆಯಲ್ಲಿ ಐಪಿಎಲ್ ಟೂರ್ನಿ ರದ್ದುಗೊಳಿಸಿ ಅಲ್ಲಿ ವ್ಯಯಿಸುವ ಹಣವನ್ನು ಆಮ್ಲ ಜನಕ ಸಿಲಿಂಡರ್ ಖರೀದಿಸಲು ಬಳಸುವಂತೆ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಶೋಯೆಬ್ ಅಕ್ತರ್ ವಿಡಿಯೊದಲ್ಲಿ ಮನವಿ ಮಾಡಿದ್ದಾರೆ.